ಮಹಿಳಾ ಸಬಲೀಕರಣ ಮತ್ತು ಅಧಿಕಾರ ಸಂರಚನೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್.ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ

ವೆಂಕಟರಾಮ ಜಿ.

ಮಾರ್ಗದರ್ಶಕರು

ಡಾ. ಎಚ್.ಎಸ್.ಶ್ರೀಮತಿ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ
ಭಾಷಾ ನಿಕಾಯ
ಕನ್ನಡ ವಿಶ್ವವಿದ್ಯಾಲಯ, ಹಂಪಿ
ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೩

ಮಹಿಳಾ ಸಬಲೀಕರಣ ಮತ್ತು ಅಧಿಕಾರ ಸಂರಚನೆ

(ಕನ್ನಡ ವಿಶ್ವವಿದ್ಯಾಲಯ, ಹಂಪಿ ಮಹಿಳಾ ಅಧ್ಯಯನ ವಿಭಾಗಕ್ಕೆ
ಎಂ.ಫಿಲ್.ಆಂಶಿಕ ಪದವಿಗಾಗಿ ಸಲ್ಲಿಸುತ್ತಿರುವ ನಿಬಂಧ)

ಸಂಶೋಧಕ

ವೆಂಕಟರಾಮ ಜಿ.

ಮಾರ್ಗದರ್ಶಕರು

ಡಾ. ಎಚ್.ಎಸ್.ಶ್ರೀಮತಿ

ಪ್ರಾಧ್ಯಾಪಕರು

ಮಹಿಳಾ ಅಧ್ಯಯನ ವಿಭಾಗ

ಭಾಷಾ ನಿಕಾಯ

ಕನ್ನಡ ವಿಶ್ವವಿದ್ಯಾಲಯ, ಹಂಪಿ

ವಿದ್ಯಾರಣ್ಯ ೫೮೩ ೨೭೬

ಏಪ್ರಿಲ್ ೨೦೦೩

ಪ್ರಮಾಣ ಪತ್ರ

ಮಹಿಳಾ ಸಬಲೀಕರಣ ಮತ್ತು ಅಧಿಕಾರ ಸಂರಚನೆ ಎಂಬ ಶೀರ್ಷಿಕೆಯ ನಿಬಂಧವನ್ನು ಡಾ. ಎಚ್.ಎಸ್.ಶ್ರೀಮತಿ ಅವರ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿ, ಎಂ.ಫಿಲ್ ಪದವಿಗಾಗಿ ಭಾಷಾ ನಿಕಾಯದ ಮಹಿಳಾ ಅಧ್ಯಯನ ವಿಭಾಗಕ್ಕೆ ಸಲ್ಲಿಸುತ್ತಿದ್ದೇನೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ಪ್ರಮಾಣೀಕರಿಸುತ್ತೇನೆ.

G. V. Ramy
ವೆಂಕಟರಾಮ ಜಿ.
ಎಂ.ಫಿಲ್.ವಿದ್ಯಾರ್ಥಿ
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : ೨೮-೪-೨೦೦೩

ಮಾರ್ಗದರ್ಶಕರ ಪ್ರಮಾಣಪತ್ರ

ಮಹಿಳಾ ಸಬಲೀಕರಣ ಮತ್ತು ಅಧಿಕಾರ ಸಂರಚನೆ ಎಂಬ ನಿಬಂಧವನ್ನು ಕನ್ನಡ ವಿಶ್ವವಿದ್ಯಾಲಯದ ಎಂ.ಫಿಲ್.ಪದವಿಗಾಗಿ ಶ್ರೀ ವೆಂಕಟರಾಮ ಜಿ. ಅವರು ನನ್ನ ಮಾರ್ಗದರ್ಶನದಲ್ಲಿ ಸಿದ್ಧಪಡಿಸಿದ್ದಾರೆ. ಪ್ರಸ್ತುತ ನಿಬಂಧವು ಮೂಲವಾಗಿದ್ದು, ಈ ಮೊದಲು ಯಾವುದೇ ಪದವಿಗಾಗಿ ಸಲ್ಲಿಸಿರುವುದಿಲ್ಲವೆಂದು ದೃಢೀಕರಿಸುತ್ತೇನೆ.

ಡಾ. ಎಚ್.ಎಸ್. ಶ್ರೀಮತಿ
ಮಾರ್ಗದರ್ಶಕರು ಮತ್ತು ಪ್ರಾಧ್ಯಾಪಕರು
ಮಹಿಳಾ ಅಧ್ಯಯನ ವಿಭಾಗ
ಕನ್ನಡ ವಿಶ್ವವಿದ್ಯಾಲಯ, ಹಂಪಿ

ಸ್ಥಳ : ವಿದ್ಯಾರಣ್ಯ
ದಿನಾಂಕ : 28.4.03

ಪರಿವಿಡಿ

ಅಧ್ಯಾಯ ೧

ಅಧ್ಯಯನದ ಉದ್ದೇಶ ಮತ್ತು ಮಹತ್ವ

ಪ್ರಸ್ತಾವನೆ

ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಅಧಿಕಾರ ವಲಯ ಮತ್ತು ಸೇವಾವಲಯ ಎಂದು ಎರಡು ರೀತಿಯಲ್ಲಿ ವಿಂಗಡಣೆಗೊಂಡಿವೆ. ಅಧಿಕಾರದ ವಲಯದಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಅತ್ಯಲ್ಪ ಪ್ರಮಾಣದಲ್ಲಿ ನೀಡಿ ಇನ್ನುಳಿದ ಬಹುಸಂಖ್ಯೆಯ ಸ್ಥಾನಗಳನ್ನು ಪುರುಷರೇ ಆಕ್ರಮಣಮಾಡಿಕೊಂಡು, ಮಹಿಳೆಯರ ಮೇಲೆ ಮತ್ತು ಕೆಳವರ್ಗ ಅಥವಾ ದುರ್ಬಲರೆನಿಸಿಕೊಂಡ ಕುಟುಂಬಗಳ ಮೇಲೆ ಅಧಿಕಾರವನ್ನು ಚಲಾಯಿಸುತ್ತಾ ದುರ್ಬಲರೆನಿಸಿಕೊಂಡ ಎಲ್ಲಾ ಸಮುದಾಯದ ಜನಸಾಮಾನ್ಯರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಅಂತವರನ್ನು ಕೇವಲ ಸೇವಾ ವಲಯದಲ್ಲಿಯೇ ಇರುವಂತೆ ಮಾಡಿ, ಅವರ ಮೇಲೆ ಸಮಾಜ ಹಲವಾರು ಅನಿಷ್ಠ ಪದ್ಧತಿಗಳನ್ನು ಹೇರಲಾಗಿದೆ. ಮೇಲ್ವರ್ಗ ಅಥವಾ ಪುರುಷ ಪ್ರಧಾನರು ಎಲ್ಲಾ ವಲಯಗಳಲ್ಲಿ ಆಡಳಿತ, ಅಧಿಕಾರ, ಮತ್ತು ಹಕ್ಕುಗಳನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡು ಕೇವಲ ಬಾಧ್ಯತೆಗಳನ್ನು ಮಾತ್ರ ಮಹಿಳೆಯರ ಪಾಲಿಗೆ ಕಾಯ್ದಿರಿಸುವುದರಿಂದ, ಅಥವಾ ಅವಳಿಗೆ ಮೀಸಲಾಗಿರುವುದರಿಂದ ಆರ್ಥಿಕವಾಗಿ ದುರ್ಬಲಳಾಗುತ್ತಾಳೆ. ಆರ್ಥಿಕವಾಗಿ ದುರ್ಬಲಳಾದಾಗ ಆಡಳಿತ, ಅಧಿಕಾರ, ಮತ್ತು ಹಕ್ಕುಗಳನ್ನು ಚಲಾಯಿಸಲು ಶಕ್ತಿ ಸಾಮಾರ್ಥ್ಯಗಳು ಕುಂದುವುದರಿಂದ ಪುರುಷನು ತನ್ನ ಅಧೀನದಲ್ಲಿಯೇ ಇಟ್ಟುಕೊಳ್ಳುತ್ತಾನೆ. ಆದ್ದರಿಂದ ಮಹಿಳೆಯರು ಸದಾ ಪುರುಷನ ಸೇವೆಯನ್ನು ಮಾಡಿಕೊಂಡು ಇರಬೇಕಾಗುತ್ತದೆ. ಈ ರೀತಿಯ ಅಸಮಾನ ನೆಲೆಗಳು ಮಹಿಳೆಯರ ಸ್ಥಾನಮಾನಗಳು ಬಹುಕೀಳುಮಟ್ಟಕ್ಕೆ ಇಳಿಯುತ್ತವೆ. ಸ್ತ್ರೀ-ಪುರುಷರ ನಡುವೆ ಅಸಮಾನ ನೆಲೆಗಳು ಹುಟ್ಟಿನಿಂದಲೇ ಪ್ರಾರಂಭಗೊಂಡು ಹೆಣ್ಣುಶಿಶುಗಳ ವಯಸ್ಸು ಬೆಳೆಯುತ್ತಾ ಹೋದಂತೆಲ್ಲ ಅವಳ ವಯಸ್ಸಿಗೆ ತಕ್ಕಂತೆ ಜವಬ್ದಾರಿ ಅಥವಾ ಬಾಧ್ಯತೆಗಳು ಹೆಚ್ಚುತ್ತಾ ಹೋಗುತ್ತವೆ. ಕುಟುಂಬದಲ್ಲಿಯೇ ಹುಟ್ಟಿಕೊಂಡ ಅಸಮಾನ ನೆಲೆಗಳು ಸಮಾಜದ ಉಪ ಅಂಗಗಳಾದ ವಿವಾಹ, ಕುಟುಂಬ. ಈ ಸಂಸ್ಥೆಗಳಲ್ಲಿ ಹೆಣ್ಣನ್ನು ಕೇವಲ ಭೋಗದ ವಸ್ತು, ಅವಳು ಸದಾ ಸೇವೆ ಸಲ್ಲಿಸುವಂತಹ ಯಂತ್ರವೆಂದು ಅಥವಾ ಕುಟುಂಬದ ಸೇವಕಿಯಂತೆ ತಿಳಿದು,ಹಲವಾರು ಕುಟುಂಬಗಳಲ್ಲಿ ಸೊಸೆಯಾಗಿ ಬಂದಂತಹ ಹೆಣ್ಣಿನಿಂದ ಕುಟುಂಬದ ಪ್ರತಿಯೊಬ್ಬ ಸದಸ್ಯನೂ ಆಕೆಯಿಂದ ಸೇವೆ ಬಯಸುತ್ತಾನೆಯೇ ಹೊರತು ಆಕೆಗೆ ಕುಟುಂಬದಲ್ಲಿ ಸರಿಸಮಾನವಾದ ಸ್ಥಾನಮಾನಗಳನ್ನು ನೀಡುವುದಿಲ್ಲ. ಪ್ರೀತಿ ವಾತ್ಸಲ್ಯದಿಂದ ಮಾತನಾಡಿಸುವುದಂತು ದೂರದ ಮಾತಾಗಿದೆ.

ಸಮಾಜದಲ್ಲಿ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿಸಿರುವ ಪುರುಷ ಪ್ರಧಾನರು ಮಹಿಳೆಯರು ಮಾಡಿದ ಪ್ರತಿಯೊಂದು ಕೆಲಸವು ಕನಿಷ್ಟವೆಂದು ಪರಿಗಣಿಸಿ ಕೆಲಸದ ಗುಣಮಟ್ಟವನ್ನು

ಅರಿಯದೆ ಕಣ್ಣುಮುಚ್ಚಿ ನಿರ್ಣಯಿಸುತ್ತಾರೆ. ಇದಕ್ಕೆಲ್ಲ ಮೂಲವೆಂದರೆ ಶತಶತಮಾನಗಳಿಂದ ಬೆಳೆದುಕೊಂಡು ಬಂದಂತಹ ಕೆಲವು ರೂಢಿ ಸಂಪ್ರದಾಯಗಳೆ ಕಾರಣವಾಗಿವೆ. ಉದಾ : ಹೆಣ್ಣು ಮಕ್ಕಳ ಬುದ್ಧಿ ಮೊಣಕಾಲ ಕೆಳಗೆ, ಹೆಣ್ಣು ಕನಿಷ್ಠಳೆಂಬ ಅಪನಂಬಿಕೆ. ಇನ್ನು ಹಲವಾರು ರೀತಿಯ ಮೂಢನಂಬಿಕೆಗಳನ್ನು ತಮ್ಮ ಮನಸ್ಸಿನಲ್ಲಿರಿಸಿಕೊಂಡು ಮಹಿಳೆಯರನ್ನು ಎರಡನೆಯ ದರ್ಜೆಯ ಪ್ರಜೆಯನ್ನಾಗಿಸಿದ್ದಾರೆಯೇ ಹೊರತು, ಮಹಿಳೆಯರ ನಿಜಸ್ಥಿತಿಯನ್ನು ಯಾವ ಪುರುಷನೂ ಅರಿತುಕೊಂಡಿಲ್ಲ. ಮಹಿಳೆಯರು ಯಾವುದೇ ವಲಯದಲ್ಲಿ ತಾವೇ ಸ್ವಯಂ ಆಗಿ ಕೆಲಸ ಕೈಗೆತ್ತಿಕೊಳ್ಳುವುದಾಗಲಿ, ಆಡಳಿತದ ಚುಕ್ಕಾಣಿಯನ್ನು ತಮ್ಮ ಹಿಡಿತದಲ್ಲಿ ಇಟ್ಟುಕೊಳ್ಳುವುದಾಗಲಿ ಅಥವಾ ಅಧಿಕಾರವನ್ನು ಚಲಾಯಿಸುವ ಸ್ಥಾನಗಳನ್ನು ಪುರುಷ ಪ್ರಧಾನರು ಮಹಿಳೆಯರಿಗೆ ಬಿಟ್ಟುಕೊಡದೆ, ತಾವು ಸೂಚಿಸಿದ ಕೆಲಸ ಕಾರ್ಯಗಳಲ್ಲಿ ಮಾತ್ರ ಭಾಗಿಯಾಗುವಂತೆ ಮಾಡಿ ಮಹಿಳೆಯರನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಪುರುಷರು ಕುಟುಂಬದಿಂದ ಹಿಡಿದು ರಾಜಕೀಯ ವಲಯದವರೆಗೆ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದರೆ ಮೊದಲೇ ಖಚಿತವಾದ ನಿಲುವುಗಳನ್ನು ತೆಗೆದುಕೊಂಡು ನಂತರ ಹೆಂಡತಿಯನ್ನು ಮೇಲಿನ ಮಾತಿಗೆ ಕೇಳಿ ಕೊನೆಯದಾಗಿ ತನ್ನ ನಿರ್ಣಯವನ್ನೇ ತೆಗೆದುಕೊಳ್ಳುತ್ತಾನೆ.

ಉದಾ : ವಿವಾಹದ ನಿರ್ಣಯವಾಗಲಿ, ಆಸ್ತಿಯನ್ನು ಖರೀದಿಸಬೇಕಾದರೆ, ಒಟ್ಟಾರೆಯಾಗಿ ಮಹಿಳೆಯರನ್ನು ಗೊಂಬೆಯಂತೆ ಪರಿಗಣಿಸಿದ್ದಾರೆ, ಮಹಿಳೆಯರು ತಾವೇ ಸ್ವಯಂ ಆಗಿ ನಿರ್ಧಾರಗಳನ್ನು ತೆಗೆದುಕೊಳ್ಳಲು ಆಸ್ಪದವಿಲ್ಲದಂತೆ ಮಾಡಿ ಸಮಾಜದಲ್ಲಿ ಎರಡನೆಯ ದರ್ಜೆಯ ಪ್ರಜೆಯೆಂದು ಸಾರುತ್ತಾರೆ. ಆದರೆ ಪುರುಷರು ತಿಳಿದ ಹಾಗೆ ಮಹಿಳೆಯರು ಎಂದಿಗೂ ಎರಡನೇ ದರ್ಜೆಯ ಪ್ರಜೆಯಲ್ಲ, ಮಹಿಳೆಯರಿಗೂ ಪುರುಷ ಸರಿಸಮಾನವಾದ ಅವಕಾಶಗಳು ಕಲ್ಪಿಸಿಕೊಟ್ಟರೆ, ಪ್ರತಿಯೊಂದು ರಂಗದಲ್ಲಿಯೂ ಪುರುಷರಿಗಿಂತ ಒಂದು ಹೆಜ್ಜೆ ಮುಂದಿಕ್ಕುವ ಸಾಮರ್ಥ್ಯ ಮಹಿಳೆಯರಲ್ಲಿ ಅಡಗಿದೆ. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ತಮ್ಮ ಹಿಡಿತದಲ್ಲಿಟ್ಟುಕೊಳ್ಳೂವುದಕ್ಕೋಸ್ಕರ ವಿವಾಹ ಎನ್ನುವ ಚೌಕಟ್ಟಿನಿಂದ ಮಹಿಳೆಯರ ಮೇಲೆ ಹಲವಾರು ನಿರ್ಬಂಧಗಳ ಜೊತೆ ಬಾಧ್ಯತೆಗಳನ್ನು ಹೇರಿ ಅವುಗಳಿಂದ ಹೊರಬಾರದಂತೆ ನೋಡಿಕೊಳ್ಳುತ್ತಾರೆ.

ಭಾರತೀಯ ಮಹಿಳೆಯರು ತಮ್ಮ ಬದುಕಿನಲ್ಲಿ ಎರಡನೇ ದರ್ಜೆಯ ಉದ್ಯೋಗ ಪಡೆದಿರುವುದೊಂದು ಶಾಪವಾಗಿದೆ. ಇಲ್ಲಿ ಸ್ತ್ರೀಯರಿಗೆ ವೈಯಕ್ತಿಕ ಆಯ್ಕೆಗೆ ಸ್ವಾತಂತ್ರ್ಯ ಕಡಿಮೆ. ಬಹಳಷ್ಟು ಸಲ ಮಹಿಳೆಯರು ತಮ್ಮ ಜೀವನದಲ್ಲಿ ಎಂತಹ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಬೇಕು ಎನ್ನುವ ಸ್ವಾತಂತ್ರ್ಯವಿಲ್ಲದೆ ಕುಟುಂಬದ ಸದಸ್ಯರು ಆಯ್ಕೆ ಮಾಡಿದಂತಹ ಉದ್ಯೋಗವನ್ನೇ ಮಾಡಲು ಒಪ್ಪಿಸುತ್ತಾರೆ. ಅಥವಾ ಮಹಿಳೆಯರ ಉದ್ಯೋಗವನ್ನು ಕುಟುಂಬವೇ ನಿರ್ಧರಿಸುತ್ತದೆ. ಇಂದೂ ಕೂಡ ಹಲವಾರು ಮಹಿಳೆಯರು

ಸಮಾಜದ ಸಂಘರ್ಷಕ್ಕೆ ಸೋತು ಸಮರ್ಥ ಬುದ್ಧಿಯುಳ್ಳವಳು ಉನ್ನತ ಹುದ್ದೆಯನ್ನು ಪಡೆದುಕೊಳ್ಳುವ ಬದಲಿಗೆ ಗೃಹಿಣಿಯಾಗಿಯೇ ಉಳಿಯುತ್ತಾಳೆ. ಅಥವಾ ತನ್ನ ಸಾಮರ್ಥ್ಯಕ್ಕೆ ತಕ್ಕದ್ದಲ್ಲದ ಯಾವುದೇ ಒಂದು ಉದ್ಯೋಗ ಹಿಡಿದು ತನ್ನ ಪ್ರತಿಭೆಯನ್ನು ನಾಶಪಡಿಸಿಕೊಳ್ಳುತ್ತಾಳೆ. ಪಿತೃಪ್ರಧಾನ ಕುಟುಂಬಗಳಲ್ಲಿ ಮಹಿಳೆಯರು ಯಾವುದೇ ನಿರ್ಣಯಗಳನ್ನು ತೆಗೆದುಕೊಂಡರೂ ಅದರ ಹಿಂದೆ ಪುರುಷನ ಮಾರ್ಗದರ್ಶನ ಇದ್ದೇ ಇರುತ್ತದೆ. ಉದಾ : ಯಾವ ಉದ್ಯೋಗವನ್ನು ಆಯ್ಕೆ ಮಾಡಿಕೊಳ್ಳಬೇಕು. ಅಥವಾ ವಿವಾಹದ ಸಮಯದಲ್ಲಿ ವರನ ಆಯ್ಕೆಯು ಪುರುಷರದ್ದೇ ಇರುತ್ತದೆ. ಆದರೂ ಕೂಡ ಮೇಲಿನ ಮಾತಿಗೆ ಹೆಂಗಸರನ್ನು ಕೇಳುತ್ತಾರೆ. ಅಂದರೆ ಇಲ್ಲಿ ಎಲ್ಲ ನಿರ್ಣಯಗಳು ಮಹಿಳೆಯರ ಮೇಲೆ ಇವೆ ಏನೋ ಎನ್ನುವ ರೀತಿಯಲ್ಲಿ ಪುರುಷರು ನಟನೆ ಮಾಡುತ್ತಾರೆ.

ವಿವಾಹ, ಕುಟುಂಬ, ಸಂತಾನ ಎನ್ನುವ ಸಂಕೋಲೆಗಳಿಂದ ಮಹಿಳೆಯರನ್ನು ನಾಲ್ಕು ಗೋಡೆಗಳ ಮಧ್ಯೆ ಇರಿಸಿ ಆಕೆಗೆ ಹಲವಾರು ಬಾಧ್ಯತೆಗಳನ್ನು ಹೇರುತ್ತಾರೆ. ಮಹಿಳೆಯರಿಗೆ ವಿವಾಹ ಆದ ನಂತರ ಕುಟುಂಬದಲ್ಲಿ ಯಾವುದೇ ರೀತಿಯ ಸ್ವಯಂ ನಿರ್ಧಾರ ತೆಗೆದುಕೊಳ್ಳಲು ಆಸ್ಪದವಿರುವುದಿಲ್ಲ. ಕುಟುಂಬದ ಎಲ್ಲಾ ನಿರ್ಣಯಗಳನ್ನು ತೆಗೆದುಕೊಳ್ಳುವವನು ಪುರುಷನೇ ಆಗಿರುತ್ತಾನೆ. ಆದ್ದರಿಂದ ಅಧಿಕಾರ ಚಲಾಯಿಸುವ ಸ್ಥಾನದಲ್ಲಿ ಅಥವಾ ಯಜಮಾನಿಕೆಯನ್ನು ಮಾಡುವವನು ಪುರುಷನೇ ಆಗಿರುವುದರಿಂದ ಮಹಿಳೆಯರನ್ನು ಕೇವಲ ಸೇವಾವಲಯದಲ್ಲಿರಿಸುತ್ತಾನೆ. ಇದರಿಂದ ಆಕೆಯು ಆರ್ಥಿಕವಾಗಿ ಬಹಳಷ್ಟು ದುರ್ಬಲಳಾಗುತ್ತಾಳೆ. ಆರ್ಥಿಕವಾಗಿ ದುರ್ಬಲಗೊಂಡ ಮಹಿಳೆಯರು ಸಮಾಜದ ಇತರ ವಲಯಗಳಲ್ಲಿ ಸಹ ತಮ್ಮ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಲು ಅಸಮರ್ಥರಾಗುತ್ತಾರೆ. ಮತ್ತು ಮಹಿಳೆಯರನ್ನು ಮೂಲೆ ಗುಂಪು ಮಾಡುತ್ತಾರೆ.

ಪ್ರತಿಯೊಂದು ವಲಯದಲ್ಲಿಯೂ ಮಹಿಳೆಯರಿಗೆ ಆಡಳಿತ, ಅಧಿಕಾರ, ಹಕ್ಕುಗಳನ್ನು ಕೊಡದೆ ಮಹಿಳೆಯರಿಗೆ ಕೇವಲ ಬಾಧ್ಯತೆಗಳನ್ನು ಹೋರಿಸುತ್ತಾರೆ. ಒಂದೇ ಕ್ಷೇತ್ರದಲ್ಲಿ ಕೆಲಸ ನಿರ್ವಹಿಸುವಂತಹ ಸ್ತ್ರೀ-ಪುರುಷರ ಉದ್ಯೋಗದಲ್ಲಿ ಮತ್ತು ಅವರಿಗೆ ಕೊಡುವ ಕೂಲಿದರದಲ್ಲಿಯೂ ಬಹಳಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಕುಟುಂಬದಿಂದ ಹಿಡಿದು, ಸರ್ಕಾರ, ಅರೆಸರ್ಕಾರ, ಖಾಸಗಿ ಕ್ಷೇತ್ರಗಳಲ್ಲಿಯೂ ಸಹ ಮಹಿಳೆಯರನ್ನು ಅತಿಹೆಚ್ಚಾಗಿ ಸೇವೆಸಲ್ಲಿಸುವಂತಹ ಹುದ್ದೆಯಲ್ಲಿ ಮಹಿಳೆಯರ ಸ್ಥಾನಗಳನ್ನು ಕಾಯ್ದಿರಿಸಿರುತ್ತಾರೆ. ಪುರುಷರು ಮಾತ್ರ ಎಲ್ಲಕ್ಷೇತ್ರಗಳಲ್ಲಿ ಅಧಿಕ ಮೊತ್ತದಲ್ಲಿ ಹಣಗಳಿಸುವ ಮತ್ತು ಅಧಿಕಾರವನ್ನು ಚಲಾಯಿಸುವ ಕ್ಷೇತ್ರಗಳಲ್ಲಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಂಡಿದ್ದಾರೆ. ಈ ರೀತಿಯ ಅಸಮಾನ ಹಂಚಿಕೆಯಿಂದ ಸ್ತ್ರೀ-ಪುರುಷರ ಮಧ್ಯೆ ವೈಶಮ್ಯ ಬೆಳೆಯುತ್ತವೆ. ಕುಟುಂಬದಲ್ಲಿ ಮತ್ತು ಉದ್ಯೋಗ ಮಾಡುವಂತಹ ಸ್ಥಳಗಳಲ್ಲಿ ಒಳಜಗಳಗಳು ಹುಟ್ಟಿಕೊಳ್ಳಲು ಆರಂಭವಾಗುತ್ತವೆ. ಈ

ರೀತಿಯ ಅಸಮಾನ ನೆಲೆಗಳನ್ನು ಹೋಗಲಾಡಿಸಬೇಕಾದರೆ, ಸಮಾಜದಲ್ಲಿ ಬೆಳೆದುಕೊಂಡು ಬಂದಂತಹ ಕನಿಷ್ಠ ಶ್ರೇಷ್ಠ ಎನ್ನುವ ಮನೋಭಾವ ಮತ್ತು ರೂಢಿ ಸಂಪ್ರದಾಯಗಳ ಚೌಕಟ್ಟನ್ನು ಒಡೆದು ಸ್ತ್ರೀಯರಿಗೆ ಸರಿಸಮಾನವಾದ ಅವಕಾಶಗಳು ದೊರೆಯುವಂತೆ ಮಾಡಬೇಕು. ಎಲ್ಲಾ ಕ್ಷೇತ್ರಗಳಲ್ಲಿ ಮಹಿಳೆಯರು ಪುರುಷರಿಗೆ ಸರಿಸಮಾನವಾಗಿ ಭಾಗವಹಿಸುವ ಅವಕಾಶಗಳನ್ನು ಕಲ್ಪಿಸಿಕೊಡಬೇಕು. ಕುಟುಂಬದಿಂದಲೇ ಸ್ತ್ರೀ-ಪುರುಷರಿಗೆ ಎಲ್ಲ ಕೆಲಸ ಕಾರ್ಯಗಳಲ್ಲಿ ಸಮನಾಗಿ ಭಾಗವಹಿಸುವಂತೆ ಮಾಡಿದರೆ ಮಾತ್ರ ಸ್ತ್ರೀ-ಪುರುಷರ ಮಧ್ಯೆ ಅಡಕವಾಗಿರುವ ಅಸಮಾನ ನೆಲೆಗಳು ಸ್ವಲ್ಪ ಮಟ್ಟಿಗೆ ಕಣ್ಮರೆಯಾಗುತ್ತವೆ. ಅಥವಾ ಸ್ತ್ರೀಯರ ಸ್ಥಾನಮಾನಗಳು ಕುಟುಂಬದಿಂದ ಹಿಡಿದು ಸರಕಾರ, ಅರೆಸರ್ಕಾರ ಖಾಸಗಿ ಕ್ಷೇತ್ರಗಳವರೆಗೆ ಸುಧಾರಿಸಿಕೊಳ್ಳುತ್ತವೆ.

ಸಮಾಜದ ವಿವಿಧ ಅಂಗಸಂಸ್ಥೆಗಳಾದ, ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ, ವಲಯಗಳಲ್ಲಿ ಮಹಿಳೆಯರು ಅತಿಕೆಳಮಟ್ಟದ ಸ್ಥಾನವನ್ನು ಪಡೆದುಕೊಂಡಿರುವುದರಿಂದ ಅವರ ಸ್ಥಿತಿಗತಿಗಳು ಅತಿಶೋಚನೀಯವಾಗಿವೆ. ಕುಟುಂಬದಲ್ಲಿ ಮಹಿಳೆಯರು ತಾಯಿಯಾಗಿ, ಮಗಳಾಗಿ, ಮತ್ತು ಹೆಂಡತಿಯಾಗಿ ತನ್ನ ಕರ್ತವ್ಯವನ್ನು ನಿರ್ವಹಿಸಬೇಕಾಗುತ್ತದೆ. ನಮ್ಮ ಪಿತೃಪ್ರಧಾನ ಸಮಾಜದಲ್ಲಿಯೂ ತಾಯಿಯಾದವಳಿಗೆ ಅತಿಹೆಚ್ಚಿನ ಗೌರವ ಮರ್ಯಾದೆಗಳು ದೊರೆಯುತ್ತವೆ ಏಕೆ? ವಿವಾಹವಾದ ಮಹಿಳೆಯರು ಅಥವಾ ಹೆಣ್ಣು ವಂಶವೇ ಸಮಾಜದ ಕಟ್ಟುಪಾಡುಗಳಿಗೆ, ರೂಢಿಸಂಪ್ರದಾಯಗಳಿಗೆ ಬದ್ಧಳಾಗಿ ತನ್ನ ಸೇವಾಕಾರ್ಯದ ಜೊತೆಗೆ ತನ್ನ ತಾಯಿತನವನ್ನು ಕಾಪಾಡಿಕೊಳ್ಳಬೇಕಾಗುತ್ತದೆ. ತನಗೆ ಜನಿಸಿದ ಮಕ್ಕಳ ಪೋಷಣೆಯನ್ನು ಸಮಾಜದ ನಿಯಮಾವಳಿಯಲ್ಲಿಯೇ ಬೆಳೆಸಬೇಕಾಗುತ್ತದೆ. ಸಮಾಜದ ನಿಯಮಾವಳಿಯನ್ನು ಮೀರಿ, ರೂಢಿಸಂಪ್ರದಾಯಗಳನ್ನು ತ್ಯಜಿಸಿ ತನ್ನದೇ ಆದಂತಹ ಸಿದ್ಧಾಂತಗಳನ್ನು ಕಟ್ಟಿಕೊಳ್ಳುತ್ತಾ ತನ್ನತನದ ಶ್ರೇಯಸ್ಸನ್ನು ವ್ಯಕ್ತಪಡಿಸಿದರೆ ಸಮಾಜದಲ್ಲಿ ಅಂತಹ ಮಹಿಳೆಯರಿಗೆ ಗೌರವ ದೊರೆಯಲಾರದು. ಸಮಾಜದ ನಿಯಮಾವಳಿಗಳಿಗೆ ತಲೆಬಾಗುವಂತೆಯೇ ಕೆಲವು ಹಿತವಾದ ಮಾತುಗಳನ್ನು ಆಡುತ್ತಾ ಪುರುಷ ನಿರ್ಮಿಸಿ ಕೊಟ್ಟಂತಹ ಚೌಕಟ್ಟಿನಲ್ಲಿ ನಡೆಯುವಂತೆ ಮಾಡುತ್ತಾರೆ. ಉದಾ : ಕೆಟ್ಟಮಕ್ಕಳುಂಟು ಕೆಟ್ಟ ತಾಯಿಯುಂಟೇ ಎನ್ನುವ ಔದಾರ್ಯದ ಮಾತುಗಳನ್ನು ಆಡುವ ಮೂಲಕ ಮಹಿಳೆಯರಿಗೆ ಇನ್ನಷ್ಟು ಜವಾಬ್ದಾರಿಗಳನ್ನು ಮತ್ತು ಬಾಧ್ಯತೆಗಳನ್ನು ಹೇರುತ್ತಾರೆ ಮತ್ತು ಇಂತಹ ಮೃದುವಾದ ಮಾತುಗಳನ್ನಾಡುತ್ತಾ ಮಹಿಳೆಯ ಬೆನ್ನು ತಟ್ಟಿ ಪ್ರಶಸ್ತಿಯನ್ನು ನೀಡುತ್ತಾರೆ.

ಸಮಾಜದಲ್ಲಿ ಬಂಜೆಗೆ ಆಗುವ ಅವಮಾನಗಳನ್ನು ಕಂಡ ಮಹಿಳೆಯರು ತಾಯಿತನದಲ್ಲಿ ತಮಗೆ ಎಂತಹ ಕಷ್ಟಗಳು ಬಂದರೂ ಸಹ ಅವುಗಳನ್ನು ಸ್ವೀಕರಿಸಲು ಸಿದ್ಧರಿದ್ದು, ಸಮಾಜದ ಚೌಕಟ್ಟಿನಲ್ಲಿ ಅಡಕವಾಗಿರುವಂತಹ ನಿರ್ಬಂಧನೆಗಳನ್ನು ಮನಃ ಪೂರ್ವಕವಾಗಿ ಒಪ್ಪಿಕೊಂಡು ಪುರುಷ ಪ್ರಧಾನರು

ವಿಧಿಸಿದಂತಹ ಎಲ್ಲಾ ಕೆಲಸಕಾರ್ಯಗಳನ್ನು ನೆರವೇರಿಸುತ್ತಾ ತನ್ನ ಮಕ್ಕಳನ್ನು ಸಮಾಜದ ನಿಯಮಾನುಸಾರವಾಗಿ ಬೆಳೆಸಿದರೆ ಮಾತ್ರ 'ತಾಯಿ' ಸ್ಥಾನಕ್ಕೆ ಔದಾರ್ಯದ ರೀತಿಯಲ್ಲಿ ಗೌರವ ಮರ್ಯಾದೆಗಳ ಜೊತೆಗೆ ಬೆನ್ನುತಟ್ಟಿ ಸನ್ಮಾನಿಸುತ್ತಾರೆ. ಮತ್ತು ಮಾತೃಸ್ಥಾನವನ್ನು ಗೌರವಿಸುತ್ತಾರೆಯೇ ಹೊರತು, ಹೆಂಗಸರ ಬುದ್ಧಿವಂತಿಕೆಗಾಗಲೀ, ವೈಯಕ್ತಿಕ ಸ್ಥಾನಮಾನಗಳನ್ನು ಗುರುತಿಸಿಕೊಳ್ಳುವಲ್ಲಿ ಅಥವಾ ಸ್ವಯಂ ನಿರ್ಧಾರಗಳನ್ನು ತೆಗೆದುಕೊಳ್ಳುವಲ್ಲಿ ಯಾವುದೇ ರೀತಿಯ ಸನ್ಮಾನ ಪ್ರಶಸ್ತಿ, ಗೌರವಗಳು ಎಂದೂ ದೊರೆಯಲಾರವು.

ಸಮಾಜದಲ್ಲಿ ಪುರುಷ ಮೇಲು, ಸ್ತ್ರೀ ಕೀಳು ಎನ್ನುವ ಕಲ್ಪನೆ ಬೆಳೆದುಕೊಂಡುಬಂದ ಪಿತೃಪ್ರಧಾನ ಕುಟುಂಬಗಳಲ್ಲಿ ಒಂದೇ ರಕ್ತವನ್ನು ಹಂಚಿಕೊಂಡು ಹುಟ್ಟಿದ ಹೆಣ್ಣು ಮತ್ತು ಗಂಡುಶಿಶುಗಳ ಬೆಳವಣಿಗೆಯ ಹಂತದಲ್ಲಿಯೇ ತಾರತಮ್ಯದ ಭಾವನೆಯನ್ನು ತೋರುವ ಮೂಲಕ ಮಗಳಾದವಳಿಗೆ ತಾಯಿಯ ಮಡಿಲಲ್ಲಿ ಬೆಳೆಯುವಂತೆ, ಗಂಡು ಮಗುವನ್ನು ತಂದೆಯ ಸ್ಥಾನಮಾನದಲ್ಲಿ ಬೆಳೆಯುವಂತೆ, ಈ ನಮ್ಮ ರೂಢಿ ಸಂಪ್ರದಾಯಗಳಿಗೆ ಮತ್ತು ಮೂಢನಂಬಿಕೆಗಳಿಗೆ ತಲೆಬಾಗುವಂತೆ ಮಾಡುವುದರಿಂದ ಹೆಣ್ಣಾದವಳು ತಾನೇ ಸ್ವಯಂ ಆಗಿ ಪುರುಷರ ಸೇವೆಮಾಡಲು ಒಪ್ಪಿಕೊಳ್ಳುವಂತೆ, ನಾಲ್ಕು ಗೋಡೆಗಳ ಮಧ್ಯೆ ಮಾತ್ರ ತನ್ನ ಜೀವನವನ್ನು ರೂಪಿಸಿಕೊಳ್ಳುವಂತೆ ಮಾಡಿದ್ದಾರೆ. ಮಹಿಳೆಯರು ಪುರುಷರ ಸರಿಸಮಾನವಾಗಿ ಸಮಾಜದಲ್ಲಿ ದೊರೆಯುವ ಎಲ್ಲಾ ಸ್ಥಾನಮಾನಗಳನ್ನು ಕಾನೂನಿನ ಸೌಲಭ್ಯಗಳನ್ನು, ಮತ್ತು ಅಭಿವೃದ್ಧಿಯೋಜನೆಗಳ ಉಪಯುಕ್ತತೆಯನ್ನು ಪಡೆದುಕೊಳ್ಳಬೇಕಾದರೆ ಮೂಢನಂಬಿಕೆಗಳಿಂದ ಮತ್ತು ರೂಢಿ ಸಂಪ್ರದಾಯಗಳಿಂದ ಹೊರಬಂದು ಸಂವಿಧಾನಾತ್ಮಕವಾಗಿ ದೊರೆಯುವ ಶಿಕ್ಷಣವನ್ನು ಪಡೆದುಕೊಂಡು ಪುರುಷ ನಿರ್ಮಿಸಿಕೊಟ್ಟ ಚೌಕಟ್ಟನ್ನು ಒಡೆಯುತ್ತಾ ಹಲವಾರು ಮಹಿಳಾ ಸಂಘಟನೆಗಳಲ್ಲಿ ಸೇರಿಕೊಂಡು ತಮ್ಮ ಸ್ಥಾನಮಾನಗಳನ್ನು ಮತ್ತು ಹಕ್ಕುಗಳನ್ನು ಪಡೆದುಕೊಳ್ಳುವುದರ ಮೂಲಕ ಆಡಳಿತವನ್ನು ಹಸ್ತಾಂತರ ಮಾಡಿಕೊಂಡು ಅಧಿಕಾರವನ್ನು ಚಲಾಯಿಸಲು ಪ್ರಯತ್ನಿಸಿದಾಗ ಮಾತ್ರ "ಮಗಳನ್ನು ಸಾಕುವುದು ನೆರೆ ಮನೆಯ ಗಿಡಕ್ಕೆ ನೀರೆರೆದಂತೆ" ಎನ್ನುವ ಗಾದೆಗಳನ್ನು ಸಂಪೂರ್ಣವಾಗಿ ನಾಶಮಾಡಿ ಅವುಗಳಿಗೆ ಅರ್ಥವಿಲ್ಲದಂತಾಗಿಸಿದಾಗ ಮಾತ್ರ ಸ್ತ್ರೀ-ಪುರುಷರ ನಡುವಿನ ಅಸಮಾನ ನೆಲೆಗಳನ್ನು ತೊಡೆದು ಹಾಕಬಹುದು.

ಹೆಣ್ಣು ಶಿಶು ಹುಟ್ಟುವ ಮೊದಲೇ ಅಥವಾ ಹುಟ್ಟಿದ ತಕ್ಷಣವೇ ಕೊಲ್ಲುವವರು ಕೆಲವರಾದರೆ, ಬದುಕುಳಿದ ಹೆಣ್ಣುಮಕ್ಕಳನ್ನು ಎಲ್ಲಾ ಬಗೆಯ ತಾರತಮ್ಯಗಳಿಂದ ಶೋಷಣೆ ಮಾಡುವವರು ಅನೇಕರು. ಸಮಾಜದಲ್ಲಿ ಹೆಣ್ಣಾದವಳು ತಗ್ಗಿ-ಬಗ್ಗಿ ನಡೆಯಬೇಕು. ಮಹಿಳೆಯರು ಪುರುಷರಿಗೆ ಪ್ರತಿಯಾಗಿ ಪ್ರಶ್ನೆಗಳನ್ನು ಕೇಳಬಾರದು. ತಂದೆ-ತಾಯಿ ಹೇಳಿದಂತೆ ನಡೆಯಬೇಕು. ಕುಟುಂಬದಲ್ಲಿ ಅಣ್ಣ ತಮ್ಮಂದಿರು ಗಂಡು ಮಕ್ಕಳಾದ ಕಾರಣ ಅವರ ಬೇಡಿಕೆಗಳಿಗೆ ಮೊದಲ ಆದ್ಯತೆ ನೀಡಬೇಕು. ಮಹಿಳೆಯರು ತಮ್ಮ

ಆಸೆ ಆಕಾಂಕ್ಷೆಗಳನ್ನು ಒತ್ತೆಯಿಟ್ಟು ಕುಟುಂಬದ ಸದಸ್ಯರಿಗಾಗಿ ದುಡಿಯಬೇಕು. ತಮ್ಮ ಬದುಕಿನ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳಲು ಹೆಣ್ಣು ಮಕ್ಕಳಿಗೆ ಸ್ವಾತಂತ್ರ್ಯವಿಲ್ಲ. ಈ ಎಲ್ಲ ಅಂಶಗಳನ್ನು ಪಿತೃಪ್ರಧಾನ ಕುಟುಂಬಗಳಲ್ಲಿ ಹೆಣ್ಣು ಶಿಶುವಿಗೆ ಹುಟ್ಟಿನಿಂದಲೇ ಇಂತಹ ಪ್ರವೃತ್ತಿಗಳನ್ನು ಬಿತ್ತಿಬೆಳೆಸುತ್ತಾರೆ. ಈ ಎಲ್ಲಾ ಅಂಶಗಳನ್ನು ಚಿಕ್ಕಂದಿನಿಂದಲೇ ಅಳವಡಿಸಿಕೊಂಡಂತಹ ಹೆಣ್ಣು ಶಿಶುಗಳು ತಮ್ಮ ಜೀವನ ಪರಿಯಂತ ಪೋಷಕರು ಪ್ರೀತಿಯಿಂದ ತಮಗೆ ಅರಿವಿಲ್ಲದಂತೆ ಶೋಷಣೆಗೆ ಒಳಪಡಿಸುತ್ತಾರೆ. ಮತ್ತು ಹೆಣ್ಣು ಕೀಳು - ಗಂಡು ಮೇಲು, ಎಂಬ ಮೌಲ್ಯವನ್ನು ತಾವೇ ಸ್ವಯಂ ಆಗಿ ಒಪ್ಪಿಕೊಳ್ಳುವಂತೆ ಮಾಡಿದೆ.

ಕುಟುಂಬದಲ್ಲಿ ಹೆಂಡತಿಗೆ ದೊರೆಯುವ ಸ್ಥಾನಮಾನಗಳನ್ನು ಗಂಡನಾದವನೇ ಆಕ್ರಮಣ ಮಾಡಿಕೊಂಡು ಆಕೆಯನ್ನು ಕೇವಲ ಭೋಗದ ವಸ್ತುವಿನಂತೆ, ಮಕ್ಕಳನ್ನು ಹೆರುವ ಯಂತ್ರದಂತೆ ಕಾಣುತ್ತಾ ಆಕೆಯನ್ನು ಲೈಂಗಿಕವಾಗಿ ಹತೋಟಿಯಲ್ಲಿಟ್ಟುಕೊಂಡು ಮಾನಸಿಕವಾಗಿ ಶೋಷಣೆ ಮಾಡಿದರೂ ಸಹ ಅವಳನ್ನು ಮೇಲೆತ್ತುವ ರೀತಿಯಲ್ಲಿ ಮತ್ತು ಮನಸಂತೋಷಗೊಳಿಸುವ ಹಾಗೆ ಔದಾರ್ಯ ರೀತಿಯಿಂದ ಹೆಣ್ಣಿನಿಂದಲೇ ಕುಟುಂಬದ ರಚನೆ, ಕುಟುಂಬದ ರಕ್ಷಣೆ, ಪೋಷಣೆ, ವಂಶದ ಕುಡಿಯನ್ನು ಬೆಳೆಸುವ ತಾಯಿಯಾಗಬೇಕು. ಹೆಣ್ಣಿನಿಂದಲೇ ಸಮಾಜದ ಸೃಷ್ಟಿ ಎಂದೆಲ್ಲಾ ಈ ರೀತಿಯ ಬೆನ್ನು ತಟ್ಟುವ ಮಾತುಗಳಿಂದ ಮಹಿಳೆಯರನ್ನು ಇನ್ನಷ್ಟು ಶೋಷಣೆಗೆ ಒಳಗಾಗಿಸುತ್ತಾರೆ. ಮಹಿಳೆಯರ ಶ್ರಮಕ್ಕೆ ತಕ್ಕ ಪ್ರತಿಫಲಗಳು ದೊರೆಯಲಾರವು. ಹೀಗಾಗಿ ಅವರು ಗೃಹಕೃತ್ಯಗಳಿಂದ ಹೊರಬಂದು ಸಾಮಾಜಿಕವಾಗಿ ಉತ್ಪನ್ನಕಾರಕವಾದ ದುಡಿಮೆಯಲ್ಲಿ ಪಾಲ್ಗೊಳ್ಳುವುದು ಅತ್ಯವಶ್ಯಕವಾಗಿದೆ. "ಶಾಶ್ವತ ಗುಲಾಮ ಚಾಕರಿಯಿಂದ ಮುಕ್ತರಾಗಬೇಕಾದದ್ದು ಅತ್ಯವಶ್ಯ" ಎಂಬ ಲೆನಿನ್‌ನ ಮಾತುಗಳು ಮಹಿಳೆಯ ಬದುಕಿಗೆ ಈಗಲೂ ಸನಿಹವಾಗಿವೆ. ಮಹಿಳೆಯರು ಪುರುಷರ ಸರಿಸಮಾನವಾಗಿ ಮನೆಯ ಹೊರಗಿನ ಕೆಲಸಗಳಲ್ಲಿ ದುಡಿದರೂ ಸಹ, ಮನೆಯ ಕೆಲಸ ಅವಳ ಪಾಲಿಗೆ ತೆಗೆದಿಟ್ಟ ಮುಡುಪಾಗಿರುತ್ತದೆ. ಈ ಕೆಲಸಗಳಿಗೆ ಯಾವುದೇ ರೀತಿಯ ಬೆಲೆಯಿಲ್ಲ. ಕುಟುಂಬದಲ್ಲಿ ಸ್ತ್ರೀ-ಪುರುಷರು ಹಂಚಿಕೊಂಡು ಮಾಡಬೇಕಾದ ಮನೆಕೆಲಸವನ್ನು ಮಹಿಳೆಯೊಬ್ಬಳೇ ಮಾಡುವುದರಿಂದ ಆಕೆಯ ದೈಹಿಕ ಸಾಮರ್ಥ್ಯ ಕುಗ್ಗುತ್ತದೆ. ಈ ರೀತಿ ಸತತ ದುಡಿತದಿಂದ ಅತಿ ಬೇಗನೆ ಮುಪ್ಪಾಗಿ ಶಕ್ತಿ ಹೀನಳಾಗುತ್ತಾಳೆ. ಇಂತಹ ಹಲವಾರು ಪ್ರತಿಫಲರಹಿತ ಕೆಲಸಕಾರ್ಯಗಳನ್ನು ಸ್ತ್ರಿ-ಪುರುಷರು ಸಮನಾಗಿ ಹಂಚಿಕೊಂಡು, ಉತ್ಪನ್ನಕರವಾದ ಕೆಲಸಗಳಲ್ಲಿ ಮಹಿಳೆಯರು ತೊಡಗಿಕೊಂಡರೆ, ಆರ್ಥಿಕವಾಗಿ ಸಾಮರ್ಥ್ಯವನ್ನು ಪಡೆದುಕೊಂಡಾಗ ಸಮಾಜದಲ್ಲಿ ಪ್ರಬಲಳೆನಿಸಿಕೊಳ್ಳುತ್ತಾರೆ.

ಸಾಮಾಜಿಕ ಸಂಸ್ಥೆಗಳಲ್ಲಿ ವಿವಾಹವು ಒಂದು ಅಂಗವಾಗಿದೆ. ವಿವಾಹದಿಂದ ಮಹಿಳೆಯರ ಬದುಕನ್ನು ಹತೋಟಿಯಲ್ಲಿಟ್ಟುಕೊಳ್ಳಲು ಪುರುಷರು ಉಪಯೋಗಿಸುತ್ತಿರುವ ಒಂದು ತಂತ್ರವಾಗಿದೆ. ಮಹಿಳೆಯರ ಲೈಂಗಿಕತೆಯನ್ನು ತನ್ನ ಹಿಡಿತದಲ್ಲಿಟ್ಟುಕೊಳ್ಳಲು ಪ್ರಯತ್ನಿಸಿ ಆಕೆಯನ್ನು ತನಗಾಗಿ ಮೀಸಲಿರುವಂತೆ

ಮಾಡಿಕೊಳ್ಳುತ್ತಾನೆ. ಲೈಂಗಿಕವಾಗಿ, ದೈಹಿಕವಾಗಿ ಮತ್ತು ಮಾನಸಿಕವಾಗಿ ಇತರರು ಯಾರೇ ಆಗಲಿ ಅವಳ ಮೇಲೆ ಆಕ್ರಮಣ ಮಾಡುವಂತಿಲ್ಲ. ಅಥವಾ ಆಕೆಯೇ ಇತರರೊಡನೆ ಲೈಂಗಿಕವಾಗಿ ಆಸೆ ಪಡುವಂತಿಲ್ಲ. ಏಕೆಂದರೆ ವಿವಾಹ ಎನ್ನುವ ಚೌಕಟ್ಟಿನಿಂದ ನಿರ್ಬಂಧನೆಗಳನ್ನು ಹೇರಲಾಗಿದೆ. ವಿವಾಹದಿಂದ ಕುಟುಂಬ ರಚನೆಗೊಳ್ಳುತ್ತದೆ. ನಂತರ ವಂಶಾಭಿವೃದ್ಧಿ ಹಾಗೆಯೇ ಹಲವಾರು ರೀತಿಯ ಕಟ್ಟುಪಾಡುಗಳನ್ನು ಮಹಿಳೆಯರ ಪಾಲಾಗಿಸಿ, ಆರ್ಥಿಕತೆಯಿಂದ ದೂರ ಉಳಿಯುವಂತೆ ಮಾಡುತ್ತಾ ಆಕೆಯನ್ನು ಸಬಲೀಕರಣದತ್ತ ಮುನ್ನಡೆಯದಂತೆ ಮಾಡುತ್ತಾರೆ. ಮಾರ್ಕ್ಸ್‌ವಾದಿ ಸ್ತ್ರೀವಾದಿಗಳ ಪ್ರಕಾರ ಮಹಿಳೆಯರು ಅಥವಾ ದುರ್ಬಲರೆನಿಸಿಕೊಂಡವರು ಅಥವಾ ದಲಿತರು, ಒಟ್ಟಾರೆಯಾಗಿ ಆರ್ಥಿಕವಾಗಿ ಪ್ರಬಲಗೊಂಡಾಗ ಮಾತ್ರ ಸಬಲೀಕರಣಗೊಳ್ಳಲು ಆಸ್ಪದವಾಗುತ್ತದೆ. ಇಲ್ಲವಾದಲ್ಲಿ ಮೇಲ್ವರ್ಗದವರು-ಕೆಳವರ್ಗದವರನ್ನು, ಪ್ರಬಲರು-ದುರ್ಬಲರನ್ನು, ಪುರುಷರು-ಸ್ತ್ರೀಯರನ್ನು ಹತೋಟಿಯಲ್ಲಿಟ್ಟುಕೊಂಡು ದೈಹಿಕವಾಗಿ, ಮಾನಸಿಕವಾಗಿ, ಶೋಷಣೆಗೆ ಗುರಿಪಡಿಸುತ್ತಾರೆ. ಈ ರೀತಿಯ ತುಳಿತಕ್ಕೆ ಒಳಗಾದ ಕುಟುಂಬಗಳು ಅಥವಾ ಮಹಿಳೆಯರು ಅಭಿವೃದ್ಧಿಗೊಳ್ಳಬೇಕಾದರೆ ಯೋಜನೆಗಳ ಮೂಲಕ ದೊರೆಯುವ ಸಾಲಸೌಲಭ್ಯಗಳು ಮತ್ತು ರಿಯಾಯಿತಿ ಧನಸಹಾಯ ಸಾಮಾನ್ಯ ಮಹಿಳೆಯರಿಗೂ ದೊರೆಯುವಂತೆ ಮಾಡಬೇಕಾಗುತ್ತದೆ. ಈ ರೀತಿಯ ಯೋಜನೆಗಳ ಉಪಯುಕ್ತತೆಯಿಂದ ಮಹಿಳೆಯರು ಸಬಲೀಕರಣದತ್ತ ದಾಪುಗಾಲು ಹಾಕಬಹುದಾಗಿದೆ.

ಕುಟುಂಬದಲ್ಲಿ ಪುರುಷನೇ ಆಡಳಿತ ನಿರ್ವಹಣೆ ಮಾಡುವುದರಿಂದ ವಂಶೋದ್ಧಾರಕ್ಕಾಗಿ, ಸಂತಾನದಲ್ಲಿ ಗಂಡು ಮಗುವನ್ನೇ ಬಯಸುತ್ತಾರೆ. ಇಲ್ಲಿ ಪಿತೃಪ್ರಧಾನವನ್ನು ಉಳಿಸಿಕೊಂಡು ಅಥವಾ ಕಾಪಾಡಿಕೊಂಡು ಹೋಗುವವನು ಗಂಡಸೇ ಎನ್ನುವ ಪೂರ್ವಕಲ್ಪಿತ ಮೂಢನಂಬಿಕೆಗಳಿಂದ ಹೆಣ್ಣು ಶಿಶುಗಳ ಸಂತಾನವನ್ನು ಕಡೆಗಣಿಸುವುದರಿಂದ ಮಹಿಳೆಯರ ಸಂಖ್ಯೆ ದಿನದಿಂದ ದಿನಕ್ಕೆ ಕ್ಷೀಣಿಸುತ್ತಾ ಹೋಗುತ್ತದೆ. ಒಂದು ವೇಳೆ ದಂಪತಿಗಳಿಗೆ ಮಕ್ಕಳಾಗದೇ ಹೋದಲ್ಲಿ, ದತ್ತುವಾಗಿ ಗಂಡುಮಕ್ಕಳನ್ನು ಪಡೆಯುತ್ತಾರೆಯೇ ಹೊರತು, ಹೆಣ್ಣು ಮಕ್ಕಳನ್ನು ದತ್ತುವಾಗಿ ಪಡೆದಿರುವುದು ಅಪರೂಪವಾಗಿದೆ. ಈ ರೀತಿಯಾಗಿ ಪ್ರತಿಯೊಂದು ಹಂತದಲ್ಲಿಯೂ ಅಸಮಾನತೆ ಕಂಡುಬರಲು ಕಾರಣವೇನು? ಇವುಗಳನ್ನು ಹೋಗಲಾಡಿಸುವುದು ಹೇಗೆ? ಈ ಎಲ್ಲವುಗಳನ್ನು ಸೂಕ್ಷ್ಮವಾಗಿ ಗಮನಿಸುತ್ತ ಹೋದಂತೆಲ್ಲ ಮಹಿಳೆಯರಿಗೆ ಯಾವುದೇ ವಲಯದಲ್ಲಿ ತಮ್ಮ ಪ್ರತಿಭೆಯನ್ನು ವ್ಯಕ್ತಪಡಿಸಲು, ಶಕ್ತಿಸಾಮರ್ಥ್ಯಗಳನ್ನು ತೋರ್ಪಡಿಸಲು ಅಥವಾ ಪ್ರದರ್ಶಿಸಲು ಎಲ್ಲಿಯೂ ಅವಕಾಶಗಳು ದೊರೆಯದಂತೆ ಪುರುಷರು ಕಾಯ್ದುಕೊಂಡು ಬಂದಿದ್ದಾರೆ. ಈ ಎಲ್ಲ ಸಾಮರ್ಥ್ಯಗಳನ್ನು ವ್ಯಕ್ತಪಡಿಸದಂತೆ ಮೂಲೆಗುಂಪಾಗಿಸಿ ಮಹಿಳೆಯರನ್ನು ಅಬಲೆಯರಂತೆ ಮಾಡಿ ಸದಾ ಪುರುಷನ ಸಾನಿಧ್ಯದಲ್ಲಿಯೇ ಉಳಿಯುವಂತೆ ಮಾಡಿಕೊಂಡಿದ್ದಾರೆ. ಈ ಸಂಕೋಲೆಗಳಿಂದ ಬಿಡುಗಡೆಯಾಗ ಬೇಕಾದರೆ, ಮಹಿಳೆಯರು ಪ್ರಥಮವಾಗಿ ಜಾಗೃತರಾಗಬೇಕು. ತಮಗೆ ದೊರೆಯಬೇಕಾದ ಸಮಾನ

ಅವಕಾಶಗಳನ್ನು ಮತ್ತು ಹಕ್ಕುಗಳನ್ನು ಕಾನೂನುಗಳ ಮೂಲಕ ಪಡೆದುಕೊಳ್ಳಲು ಪ್ರಯತ್ನಿಸಬೇಕು. ಮತ್ತು ಚಳವಳಿಗಳ ಮುಖಾಂತರ ಕಾನೂನುಗಳನ್ನು ತಿದ್ದುಪಡಿಮಾಡಿಸಿ ಪ್ರತಿಯೊಬ್ಬ ಸಾಮಾನ್ಯ ಮಹಿಳೆಯರಿಗೂ ಸಹ ಸಮಾನ ಅವಕಾಶಗಳು, ಹಕ್ಕುಗಳು ಮತ್ತು ಸಾಮಾಜಿಕ ಸೌಲಭ್ಯಗಳು ಸಮಾನ ರೀತಿಯಲ್ಲಿ ದೊರಕಿಸಿಕೊಳ್ಳಲು ಪ್ರಯತ್ನಿಸಬೇಕಾಗುತ್ತದೆ. ಮಹಿಳಾ ಚಳುವಳಿಗಳು ಮಹಿಳೆಯರ ಅಂತಸ್ಥನ್ನು ಕಾಯ್ದುಕೊಳ್ಳಲು ಸತತವಾಗಿ ಹೋರಾಡಬೇಕಾಗುತ್ತದೆ. ಮಹಿಳಾ ಸಂಘಗಳು, ಎನ್. ಜಿ.ಓ.ಗಳು ಮಹಿಳಾ ಸಮುದಾಯಗಳು ಮಹಿಳಾ ಅಭಿವೃದ್ಧಿಗಾಗಿ ಯೋಜನೆಗಳನ್ನು ಜಾರಿಗೊಳಿಸಬೇಕು. ಈಗಾಗಲೇ ಜಾರಿಗೊಂಡ ಯೋಜನೆಗಳಿಂದ ಬಹುಸಂಖ್ಯೆಯ ಮಹಿಳೆಯರು ಆರ್ಥಿಕವಾಗಿ ಪ್ರಬಲ ಗೊಂಡಿದ್ದಾರೆ. ಆದರೆ ಸರ್ಕಾರವು ಹಮ್ಮಿಕೊಂಡಂತಹ ಯೋಜನೆಗಳು ಪುರುಷ ರೂಪಿತವಾಗಿರುವುದರಿಂದ ಅವುಗಳ ಉಪಯುಕ್ತ ಬಹುವಾಗಿ ಪುರುಷರಿಗೆ ಆಗಿರುತ್ತದೆ. ಉದಾ : ಹೈನುಗಾರಿಕೆಯನ್ನು ನೋಡಿದಾಗ ದನಕರುಗಳ ಪೋಷಣೆ ಮತ್ತು ಹಾಲು ಉತ್ಪಾದನೆ ಹೆಂಗಸರ ಕೆಲಸವಾಗಿದ್ದರೆ, ಉತ್ಪಾದಿಸಿದ ಹಾಲನ್ನು ಮಾರುಕಟ್ಟೆಗೆ ರವಾನಿಸುವವನು ಪುರುಷನು ಆಗಿರುತ್ತಾನೆ. ಇದರಿಂದ ಬಂದ ಹಣವೆಲ್ಲ ಪುರುಷರ ಕೈಸೇರುತ್ತದೆ. ಅಂದಾಗ ಮಹಿಳೆಯರ ಶ್ರಮ ನೀರುಪಾಲಾಗುತ್ತದೆ. ಅವಳಿಗೆ ಹಣದ ಅವಶ್ಯಕತೆ ಇದ್ದಾಗಲೂ ಪುರುಷನನ್ನು ಕೇಳುವ ಅಥವಾ ಕೋರುವ ಹಂತದಲ್ಲಿಯೇ ಉಳಿಯಬೇಕಾಗುತ್ತದೆ. ಪುರುಷರು ಉಪಯೋಗಿಸುವಂತ ತಂತ್ರಗಳು ಮಹಿಳೆಯರ ಪಾಲಿಗೆ ಶಾಪವಾಗಿದ್ದರೂ ಸಹ ಅವು ತೋರಿಕೆಗೆ ವರದಾನವಾದಂತೆ ಕಾಣುತ್ತವೆ. ಇಂತಹ ಕುತಂತ್ರಗಳಿಂದ ಮಹಿಳೆಯರು ಹೊರಬಂದು ತಮ್ಮನ್ನು ಸಬಲರನ್ನಾಗಿಸಿಕೊಂಡು ತಮ್ಮದೇ ಆದ ರೀತಿಯಲ್ಲಿ ಆಡಳಿತವನ್ನು ರಚನೆಮಾಡಿಕೊಂಡಾಗ ಮಾತ್ರ ಅಧಿಕಾರದ ಚುಕ್ಕಾಣಿಯನ್ನು ಹಿಡಿಯಬಹುದು.

ಸಾಮಾಜಿಕ ನಿಯಮಗಳು ಪುರುಷರೂಪಿತವಾಗಿರುವುದರಿಂದ ಆರ್ಥಿಕ ಮತ್ತು ಅಧಿಕಾರದ ಹತೋಟಿ ಹಾಗೂ ಹಕ್ಕುಗಳನ್ನು ತನ್ನ ನಿಯಂತ್ರಣದಲ್ಲಿಟ್ಟುಕೊಂಡಿದ್ದರೂ ಸಹ ಅಧಿಕಾರ ಚಲಾಯಿಸುವಂತಹ ವಲಯಗಳಲ್ಲಿ ಕೇವಲ ಬೆರಳೆಣಿಕೆಯಷ್ಟಾದರೂ ಕಂಡುಬರುತ್ತಾರೆ. ಇಂತಹ ಪರಿಸ್ಥಿತಿಯಲ್ಲಿ ಆಯಾ ಸಂಸ್ಥೆಗಳಲ್ಲಿ ಹಮ್ಮಿಕೊಂಡಂತಹ ಆಡಳಿತ ನಿರ್ವಹಣೆ ಬದಲಾವಣೆಯ ಪ್ರಕ್ರಿಯೆಯಲ್ಲಿ, ಅಥವಾ ಕೆಲವು ತಿದ್ದುಪಡಿಗಳನ್ನು ಮಾಡುವ ಚರ್ಚಾಗೋಷ್ಠಿಯಲ್ಲಿ ಮಹಿಳೆಯರ ಧ್ವನಿಯನ್ನು ಅಥವಾ ಅವರ ನಿರ್ಣಯ ಅಥವಾ ಸಿದ್ಧಾಂತಗಳನ್ನು ಯಾರು ಲೆಕ್ಕಿಸುವುದಿಲ್ಲ. ಕಾರಣ ಮಹಿಳೆಯರ ಸಂಖ್ಯಾಬಲ ಕಡಿಮೆ ಇರುವುದೇ ಮುಖ್ಯಕಾರಣವಾಗಿದೆ. ಇಂತಹ ಮೀಟಿಂಗ್‌ಗಳಲ್ಲಿ ಪಾಸುಮಾಡಿಕೊಂಡ ನಿರ್ಣಯಗಳು ಅತಿಹೆಚ್ಚಾಗಿ ಪುರುಷರಿಗೆ ಉಪಯುಕ್ತವಾಗುವಂತೆ ಇರುತ್ತವೆ. ಈ ರೀತಿ ಅಧಿಕಾರದ ವಲಯದಲ್ಲಿ ಆಗುವಂತ ಅನ್ಯಾಯಗಳು, ಶೋಷಣೆಯ ವಿರುದ್ಧ ಪ್ರತಿರೋಧಿಸಬೇಕಾದರೆ ಮಹಿಳೆಯರು ಸಹ ಪುರುಷ ಸರಿಸಮಾನವಾಗಿ

ಅಥವಾ ಸ್ವಲ್ಪ ಮಟ್ಟಿಗಾದರೂ ಸ್ಥಾನಗಳನ್ನು ಪಡೆದುಕೊಳ್ಳಬೇಕಾಗುತ್ತದೆ. ಆಯಾ ವಲಯಗಳಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗ ಬೇಕಾದರೆ ಅಥವಾ ಅವಕಾಶಗಳು ದೊರೆಯಬೇಕಾದರೆ, ಮುಂದೆ ಮೀಸಲಾತಿ ಅತ್ಯವಶ್ಯಕವಾಗಿದೆ.

ಇಂದೂ ಕೂಡ ಮಹಿಳೆಯರು ಅಧಿಕಾರ ಚಲಾಯಿಸುವಂತಹ, ಆಡಳಿತ ನಿರ್ವಚನೆ ಮಾಡುವಂತಹ ಹುದ್ದೆಗಳಲ್ಲಿ ಹೆಚ್ಚಿನ ಸಂಖ್ಯೆಯಲ್ಲ ಕಂಡುಬರುವುದಿಲ್ಲ. ಏಕೆ? ಪೂರ್ವ ಕಲ್ಪಿತ ಭಾವನೆಗಳಾದ ಅಂಜುಬುರ್ಕಿ, ಮುನ್ನೆಡೆಯುವ ಧೈರ್ಯಕಡಿಮೆ, ಶಕ್ತಿಹೀನಳು, ಅವಳಿಗೆ ಧೈರ್ಯ ತುಂಬಲು ಅಥವಾ ಸದಾ ಒಬ್ಬ ವ್ಯಕ್ತಿ ಜೊತೆಗೆ ಬೇಕೇಬೇಕು. ಈ ರೀತಿ ಅಪನಂಬಿಕೆಗಳು ಪುರುಷರ ನರನಾಡಿಗಳಲ್ಲಿ ತುಂಬಿಕೊಂಡು ಪ್ರತಿನಿತ್ಯ ಆಡುವ ಮೂಢನಂಬಿಕೆಯ ಮಾತುಗಳನ್ನು ಹೆಣ್ಣು ಹುಟ್ಟಿನಿಂದ ಕೇಳಿ ಕೇಳಿ ನಾನು ಶಕ್ತಿಹೀನಳೇನೋ ಎನ್ನುವ ಹಾಗೆ ಅವಳು ತನ್ನಷ್ಟಕ್ಕೆ ತಾನೇ ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ನೈಸರ್ಗಿಕವಾಗಿ ಹುಟ್ಟಿನಿಂದಲೂ ಸ್ತ್ರೀ-ಪುರುಷರು ಸರಿಸಮಾನವಾದ ಶಕ್ತಿ ಸಾಮರ್ಥ್ಯಗಳನ್ನು ಹೊಂದಿರುತ್ತಾರೆ. ಆದರೆ ಈ ಪುರುಷರ ಒಳರಾಜಕೀಯದಿಂದ ಮಹಿಳೆಯರನ್ನು ಮೂಲೆಗುಂಪುಮಾಡಿ ಅವಳು ಸಮಾಜದಲ್ಲಿ ಏಕಾ ಏಕಿಯಾಗಿ ಬದುಕಲು ಅವಕಾಶಗಳನ್ನು ದೊರಕಿಸದೆ ಅಬಲೆಯಂತೆ ಮಾಡಿ ತನ್ನ ರಕ್ಷಕ ಪುರುಷ ನೇನೋ ಎನ್ನುವ ರೀತಿಯಲ್ಲಿ ಈ ಕಟ್ಟುಸಂಪ್ರದಾಯಗಳು ಮಹಿಳೆಯರನ್ನು ಕಾಡುತ್ತಿವೆ.

ಪುರುಷ ಪ್ರಧಾನರು ಕಟ್ಟಿಕೊಂಡಂತಹ ಸಮಾಜದಲ್ಲಿ ಮಹಿಳೆಯರಿಗೆ ಯಾವುದೇ ರೀತಿಯ ಪ್ರಶ್ನೆಗಳನ್ನು ಕೇಳುವ ಹಾಗೂ ಪ್ರತಿಭಟಿಸುವ ಹಕ್ಕು ಇಲ್ಲ ಎನ್ನುವ ತತ್ವವನ್ನೇ ಎಲ್ಲಾ ಧರ್ಮಗಳು ಒಂದಲ್ಲ ಒಂದು ರೀತಿಯಲ್ಲಿ ಸಾರಿ ಹೇಳುತ್ತವೆ. ವೇದಗಳ ಕಾಲದಿಂದ ಹಿಡಿದು ಇಂದಿನವರೆಗೂ ಧರ್ಮದ ಹೆಸರಿನಲ್ಲಿ ಮಹಿಳೆಯರ ಸ್ವಾತಂತ್ರ್ಯವನ್ನು ಮತ್ತು ಸಮಾನತೆಯನ್ನು ದಮನಗೊಳಿಸುವುದಕ್ಕೋಸ್ಕರ ಸಂಸ್ಕೃತಿ ಅಥವಾ ಸಂಪ್ರದಾಯವನ್ನು ಪುರುಷರು ಕಾಯ್ದುಕೊಂಡು ಬರುತ್ತಿದ್ದಾರೆ. ಮಹಿಳೆಯರು ಮೂಢನಂಬಿಕೆ, ಸಂಸ್ಕೃತಿ, ಸಂಪ್ರದಾಯಗಳಿಂದ ಹೊರಬಂದು, ಧರ್ಮ, ವೇದ, ಪುರಾಣ, ಶಾಸ್ತ್ರ ಈ ಎಲ್ಲವುಗಳನ್ನು ಕೂಲಂಕುಶವಾಗಿ ಅಭ್ಯಾಸಿಸಿ ಅವುಗಳ ಮೌಲ್ಯವನ್ನು ಅರಿತುಕೊಂಡು ಪುರುಷರ ವಿರುದ್ಧ ಪ್ರತಿಭಟಿಸಿ, ತೆಗೆದುಕೊಂಡ ನಿರ್ಣಯಗಳ ವಿರುದ್ಧ ಪ್ರಶ್ನಿಸುವುದರ ಮೂಲಕ ಮಹಿಳೆಯರು ಸ್ವಾತಂತ್ರ್ಯ ಮತ್ತು ಸಮಾನತೆಯ ಹಕ್ಕುಗಳನ್ನು ಪಡೆದುಕೊಳ್ಳಬಹುದಾಗಿದೆ.

ರಾಜಕೀಯ ವಲಯದಲ್ಲಿ ಮಹಿಳೆಯರು ಬಹುಸಂಖ್ಯೆಯಲ್ಲಿ ಪ್ರವೇಶ ಪಡೆಯಲು ಮತ್ತು ಅಧಿಕಾರ ಸಂರಚನೆ ಮಾಡಿಕೊಳ್ಳಲು ಮಹಿಳಾ ಚಳುವಳಿಗಳು ಬಹುಬೇಡಿಕೆಗಳನ್ನು ಮುಂದಿಟ್ಟುಕೊಂಡು ಪುರುಷ ಅಧಿಕಾರದ ವಿರುದ್ಧ ಚಳುವಳಿಗಳನ್ನು ಮಾಡುತ್ತಿವೆ. ಆದರೆ ಬಹುಬೇಡಿಕೆಗಳಲ್ಲಿ ಯಾವುದೋ ಒಂದು ಬೇಡಿಕೆಗೆ ಪರಿಹಾರ ತೋರುತ್ತಾರೆ. ಇಲ್ಲಿ ಪುರುಷ ಅಧಿಕಾರಿಗಳನ್ನು ಕೇಳಿಕೊಳ್ಳುವುದೆಂದರೆ ಉದಾ :

ಮನೆಯ ಮುಂದೆ ಭಿಕ್ಷುಕರು ನಿಂತು ಭಿಕ್ಷೆ ಅಥವಾ ಆಹಾರವನ್ನು ಕೇಳಿದ ಹಾಗೆ ಅಂದಾಗ ತಮಗೆ ಬೇಡದ ವಸ್ತು ಅಥವಾ ಆಹಾರವನ್ನು ಕೊಡುತ್ತಾರೆಯೇ ಹೊರತು ಭಿಕ್ಷುಕರಿಗೆ ಎಂದೂ ಬಿಸಿ ಬಿಸಿಯ ಆಹಾರ ಪದಾರ್ಥಗಳನ್ನು ನೀಡಲಾರರು, ಹಾಗೆಯೇ ಈ ಮಹಿಳಾ ಚಳುವಳಿಗಳು ಮುಂದಿಟ್ಟ ಬಹುಬೇಡಿಕೆಗಳಲ್ಲಿ ಯಾವುದೋ ಒಂದು ಬೇಡವಾದ ಅಥವಾ ಅನಗತ್ಯವಾದ ಬೇಡಿಕೆಗಳಿಗೆ ಪರಿಹಾರವನ್ನು ನೀಡುತ್ತಾರೆ. ಅವು ಕೂಡ ಮೇಲ್ವರ್ಗದ ಮಹಿಳೆಯರಿಗೆ ಮಾತ್ರ ಉಪಯುಕ್ತವಾಗುವಂತಹ ಬೇಡಿಕೆಗಳಿಗೆ ಪರಿಹಾರ ಸೂಚಿಸುತ್ತಾರೆ. ಇಂತಹ ಕೊಟ್ಟುಕೊಡದಂತೆ ಇರುವ ಪರಿಹಾರಗಳಿಂದ ಮಹಿಳೆಯರ ಸ್ಥಾನಮಾನಗಳು ಇನ್ನೂ ಕುಂಟಿತಗೊಂಡಿವೆ. ಸ್ವಾತಂತ್ರ್ಯ ಪೂರ್ವದಿಂದ ಹಿಡಿದು, ಸ್ವತಂತ್ರ್ಯ ದೊರೆತು ಐವತ್ತೈದು ವರ್ಷಗಳನ್ನು ದಾಟಿದರೂ ಸಹ ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಂಡಿರುವುದನ್ನು ಅಥವಾ ಮಂತ್ರಿ ಸ್ಥಾನಗಳನ್ನು ದಕ್ಕಿಸಿಕೊಂಡವರನ್ನು ಬೆರಳೆಣಿಕೆಯಿಂದ ಲೆಕ್ಕಹಾಕಬಹುದು. ಅವರು ಕೂಡ ಚಳುವಳಿಗಳಿಂದ ಅಥವಾ ಹೋರಾಟಗಳಿಂದ ಸ್ಥಾನಗಳನ್ನು ಪಡೆದವರಲ್ಲ, ಶ್ರೀಮಂತಿಕೆ ಮತ್ತು ಕುಟುಂಬದ ರಾಜಕೀಯ ಹಿನ್ನೆಲೆಯಿಂದ ಬಂದವರು ಮಹಿಳೆ. ರಾಜಕೀಯ ರಂಗದಲ್ಲಿ ಹಿಂದುಳಿಯಲು ಕಾರಣಗಳನ್ನು ಹುಡುಕುತ್ತಾ ಹೋದಂತೆಲ್ಲಾ ಪುರುಷರಿಂದ ದೊರೆಯುವ ಉತ್ತರವೆಂದರೆ, ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸಲು ಹಿಂಜರಿಯುತ್ತಾರೆ. ರಾಜಕೀಯದ ತಿಳುವಳಿಕೆ ಕಡಿಮೆ, ಆಡಳಿತದ ಅನುಭವದ ಕೊರತೆ, ಶಿಕ್ಷಣದ ಕೊರತೆ ಈ ಎಲ್ಲ ಕುಂಟುನೆಪಗಳನ್ನು ಸೂಚಿಸುತ್ತಾ ಹೋಗುತ್ತಾರೆ. ರಾಜಕಾರಣದ ಬಾಗಿಲನ್ನು ಹೆಂಗಸರಿಗೆ ಮುಚ್ಚಿ ಅವರಿಗೆ ಒಳಗೆ ಬರಲು ಆಸಕ್ತಿಯಿಲ್ಲ ಎನ್ನುವುದು ''ಕುದುರೆಯನ್ನು ಕರೆದುಕೊಂಡು ಹೋಗುವುದು ಸವಾರನ ಕರ್ತವ್ಯವೇ ಹೊರತು ಬಲತ್ಕಾರದಿಂದ ಅದಕ್ಕೆ ನೀರು ಕುಡಿಸುವುದು ಅವನ ಕೆಲಸವಲ್ಲ' ಅಂದರೇ ಯಾವುದೇ ಕ್ಷೇತ್ರದಲ್ಲಿ ಸಮಾನ ಅವಕಾಶಗಳನ್ನು ಕೊಡಬೇಕೆ ಹೊರತು ಇತರ ದೋಷಗಳನ್ನು ಎಣಿಸಬಾರದು.

ಹೀಗೆ ಇನ್ನು ನಾನಾರೀತಿಯ ಸುಳ್ಳು ಸೃಷ್ಟಿಗಳನ್ನು ಕಡೆಗಣಿಸಿ ಮಹಿಳೆಯರಿಗೂ ಸಹ ಸರಿಸಮಾನವಾದ ಸ್ಥಾನಗಳನ್ನು ಕಾಯ್ದಿರಿಸಿದ ನಂತರ ಅವರ ಬೌದ್ಧಿಕ, ಮಾನಸಿಕ, ಶಕ್ತಿಸಾಮರ್ಥ್ಯಗಳ ಬಗ್ಗೆ ಮತ್ತು ಪಾಲ್ಗೊಳ್ಳುವ ಕುರಿತು ನಂತರ ಚಿಂತಿಸಬೇಕಾಗುತ್ತದೆ. ಮಹಿಳೆಯರಿಗೆ ಸರಿಸಮಾನವಾದ ಸಾಮರ್ಥ್ಯಗಳನ್ನು ನೀಡಿದರೆ ತಮ್ಮ ಸ್ಥಾನಗಳು ಎಲ್ಲಿ ತಮಗೆ ದೊರಕದೆ ಹೋಗಬಹುದು, ಅಥವಾ ಅಧಿಕಾರ ಚಲಾಯಿಸುವಂತ ಸ್ಥಾನಗಳು ಕೈತಪ್ಪಿಹೋಗುತ್ತವೆ, ಹೆಂಗಸರು ನಮ್ಮ ಮೇಲೆ ಅಧಿಕಾರ ಚಲಾಯಿಸುತ್ತಾರೆನೋ ಎನ್ನುವ ಆತಂಕ ಅಥವಾ ಭಯದಿಂದ ಸರಿಸಮಾನವಾದ ಸ್ಥಾನಮಾನಗಳನ್ನು ನೀಡುವುದಿಲ್ಲ. ಒಂದು ವೇಳೆ ಮಹಿಳಾ ಚಳುವಳಿಗಳ ಮೂಲಕ ಒತ್ತಡಗಳು ತಂದಾಗ ನಿರ್ಣಯಗಳನ್ನು ತೆಗೆದುಕೊಳ್ಳಲಾರದಂತಹ ಸ್ಥಾನಗಳನ್ನು ಮೀಸಲಿರಿಸುತ್ತಾರೆ. ಉದಾ : ಪಂಚಾಯತ್ ರಾಜ್ ವ್ಯವಸ್ಥೆಯನ್ನು ವೀಕ್ಷಿಸಬಹುದಾಗಿದೆ.

ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗಾಗಿ ಸ್ಥಾನಗಳನ್ನು ಕಾಯ್ದಿರಿಸುವುದರಿಂದ ಮಹಿಳೆಯರ ಸಂಖ್ಯೆ ಹೆಚ್ಚಾಗಿ ಕಂಡುಬರುತ್ತದೆ. ಆದರೆ ರಾಜ್ಯ ಮತ್ತು ಲೋಕಸಭೆಗಳಲ್ಲಿ ಅಧಿಕ ಸಂಖ್ಯೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ. ಕಾರಣವೆಂದರೆ ರಾಜ್ಯ ಮತ್ತು ಲೋಕಸಭೆಗಳಲ್ಲಿ ಅಧಿಕಾರ ಚಲಾಯಿಸುವ ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳುವಂತಹ ಸ್ಥಾನಗಳಿರುವುದರಿಂದ ಮಹಿಳೆಯರನ್ನು ಕಾಲಿರಿಸದಂತೆ ಮಾಡಿ ಪುರುಷರು ಮಾತ್ರ ಆ ಎಲ್ಲಾ ಸ್ಥಾನಗಳನ್ನು ತಮ್ಮದಾಗಿಸಿಕೊಳ್ಳುವುದಕ್ಕೋಸ್ಕರ ಈವರೆಗೂ ಮಹಿಳಾ ಮೀಸಲಾತಿಯ ಮಸೂದೆಯನ್ನು ಪಾಸುಮಾಡದೆ, ಯಾವುದೋ ಒಂದು ಕ್ಷುಲ್ಲಕವಾದ ಕಾರಣಗಳನ್ನು ಮುಂದೂಡುತ್ತಾ ಕಾಯ್ದೆಯನ್ನು ಪಾಸುಮಾಡದೆ, ತಮ್ಮ ಸ್ಥಾನಗಳನ್ನು ಭದ್ರಗೊಳಿಸಿಕೊಳ್ಳುವುದಕ್ಕೊಸ್ಕರ ಮುಂದೂಡುತ್ತಿದ್ದಾರೆ.

ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುತ್ತಿದ್ದಾರೆ ಎನ್ನುವ ನೆಪಮಾತ್ರಕ್ಕಾಗಿ ಪಂಚಾಯತ್ ರಾಜ್ ಮಟ್ಟದಲ್ಲಿ ಸ್ಥಾನಗಳನ್ನು ಕಾಯ್ದಿರಿಸಿದ್ದಾರೆ. ಈ ಮಟ್ಟದಲ್ಲಿ ಸ್ಥಾನಗಳನ್ನು ಕಾಯ್ದಿರಿಸುವುದಕ್ಕೂ ಒಂದು ರೀತಿಯ ಉಪಯುಕ್ತತೆಯನ್ನು ಪುರುಷ ಸಮೂಹಗಳು ಪಡೆದುಕೊಳ್ಳುತ್ತವೆ. ಪಂಚಾಯತ್ ರಾಜ್ ಹುಟ್ಟಿಕೊಂಡಿರುವುದೇ ಗ್ರಾಮಗಳನ್ನು ಅಭಿವೃದ್ಧಿಗೊಳಿಸುವುದಕ್ಕಾಗಿ ಆದ್ದರಿಂದ ಪಂಚಾಯತ್ ಮಟ್ಟದಲ್ಲಿ ಮಹಿಳೆಯರಿಂದ ಶ್ರಮದಾನ ಮಾಡಿಸಬಹುದು. ಮಹಿಳೆಯರಾದರೆ ನಿಷ್ಠೆಯಿಂದ ಕೆಲಸ ಮಾಡುತ್ತಾರೆ. ಒಟ್ಟಾರೆಯಾಗಿ ಗ್ರಾಮದ ಜನತೆಗಾಗಿ ಮತ್ತು ಗ್ರಾಮದ ಜನರಿಗೆ ಉಪಯುಕ್ತವಾಗುವಂತಹ ಕಾರ್ಯಕ್ರಮಗಳಾದ, ಬಾವಿ ತೋಡಿಸುವುದು, ಅಲ್ಪ ಪ್ರಮಾಣ ಖರ್ಚಿನಲ್ಲಿ ರೋಡ್ ಹಾಕಿಸುವುದು, ದಾರಿದೀಪಗಳನ್ನು ರೀಪೇರಿ ಮಾಡಿಸುವುದು. ಹೀಗೆ ಜನರಿಗೆ ಉಪಯುಕ್ತವಾಗುವಂತಹ ಕೆಲಸ ಕಾರ್ಯಗಳನ್ನು ಮಾಡಿಸಲು ಯೋಗ್ಯಳು ಎನ್ನುವ ರೀತಿಯಲ್ಲಿ ಕಂಡುಬರುತ್ತಾಳೆ. ಮತ್ತು ಪಂಚಾಯತ್ ಮಟ್ಟದಲ್ಲಿ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವ ಹಂತಗಳು ಇರುವುದಿಲ್ಲ. ಈ ವಲಯಗಳಲ್ಲಿ ನಿರ್ಣಯವಾಗಿರುವಂತಹ ಕೆಲಸ ಕಾರ್ಯಗಳನ್ನು ರಾಜ್ಯ ಮತ್ತು ಲೋಕಸಭೆಗಳಲ್ಲಿ ಚರ್ಚಿಸಿ ನಿರ್ಣಯಗಳನ್ನು ತೆಗೆದುಕೊಂಡು ಬಿಲ್ಲುಪಾಸ್ ಆದ ನಂತರ ಅವುಗಳ ಕಾರ್ಯವು ಪಂಚಾಯತ್ ಮಟ್ಟದಿಂಧ ಪ್ರಾರಂಭ ಗೊಳ್ಳುತ್ತವೆ. ಅಂದರೆ ಪಂಚಾಯತ್ ಮಟ್ಟದಲ್ಲಿ ಯಾವುದೇ ರೀತಿಯ ನಿರ್ಣಯಗಳನ್ನು ತೆಗೆದುಕೊಳ್ಳುವುದು ಇರುವುದಿಲ್ಲ. ಆದ್ದುದರಿಂದ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗಾಗಿ ಸ್ಥಾನಗಳನ್ನು ಕಾಯ್ದಿರಿಸುತ್ತಾರೆ. ಯಾವುದೇ ಕ್ಷೇತ್ರದಲ್ಲಾಗಲಿ ಮಹಿಳೆಯರಿಂದ ಸೇವೆ ಪಡೆದುಕೊಳ್ಳಬೇಕೆನ್ನುವ ಮತ್ತು ಮಹಿಳೆಯರನ್ನು ಎಂದೂ ಅಧಿಕಾರದ ಚುಕ್ಕಾಣಿಯನ್ನು ಹಿಡಿಯದಂತೆ ಆರ್ಥಿಕವಾಗಿ ಸಬಲರಾಗದಂತೆ ಕಾಯ್ದುಕೊಳ್ಳುತ್ತಾರೆ.

ಭಾರತ ಸಂವಿಧಾನವು ಸ್ತ್ರೀ-ಪುರುಷರೆಂಬ ಭೇದವಿಲ್ಲದೆ ಭಾರತದ ಎಲ್ಲ ಪ್ರಜೆಗಳಿಗೂ-ನಾಗರೀಕರಿಗೂ ಸಮಾನ ಸ್ಥಾನಮಾನ, ಸಮಾನ ಅವಕಾಶಗಳು, ಕಾನೂನಿನ ದೃಷ್ಟಿಯಲ್ಲಿ ಸಮಾನ ರಕ್ಷಣೆ ನೀಡಿದೆ.

ಮಹಿಳೆಯರ ಶಕ್ತಿ ಸಾಮರ್ಥ್ಯ ಅಥವಾ ಆಸಕ್ತಿಯನ್ನು ಕಾಪಾಡಲು ಹಾಗೂ ಅವರ ಸ್ಥಾನಮಾನಗಳಲ್ಲಿ ಸಾಮಾಜಿಕ-ಆರ್ಥಿಕ, ಆಡಳಿತ, ಅಧಿಕಾರಗಳಲ್ಲಿ ಬದಲಾವಣೆಗಳನ್ನು ತರಲು ಅನೇಕ ಕಾನೂನುಗಳನ್ನು ರಚಿಸಿದೆ.

೧. ಸಮಾನತೆಯ ಹಕ್ಕು ೧೪, ೧೫ ಮತ್ತು ೧೬ನೇ ಅನುಚ್ಛೇದಗಳು.

೨. ಶೋಷಣೆಯ ವಿರುದ್ಧ ಹಕ್ಕು ೨೨ನೇ ಅನುಚ್ಛೇದ.

೩. ನಿರ್ದೇಶನದ ತತ್ವಗಳು, ೩೯(ಎ)(ಡಿ) ಮತ್ತು (೯) ಹಾಗೂ ೪೨ನೇ ಅನುಚ್ಛೇದಗಳು.

೪. ಮೂಲಭೂತ ಕರ್ತವ್ಯಗಳು, ೫೧ ಎ(೯) ಅನುಚ್ಛೇದ.

೫. ಚುನಾವಣೆಗಳು ೩೨೫ನೇ ಅನುಚ್ಛೇದ.

ನಮ್ಮ ಸಂವಿಧಾನ ಶಿಲ್ಪಿಗಳು ಮಹಿಳೆಯರಿಗೆ ಸ್ವಾತಂತ್ರ್ಯವನ್ನು ಹಾಗೂ ಸಮಾನತೆಯನ್ನು ನೀಡಿದರೂ, ಮಹಿಳೆಯರ ವಿರುದ್ಧ ನಡೆಯುವ ಹಿಂಸೆ ಹಾಗೂ ಅಪರಾಧಗಳ ಸಂಖ್ಯೆ ಹೆಚ್ಚುತ್ತಲೇ ಇವೆ. ಭಾರತದೇಶ ಸ್ವಾತಂತ್ರ್ಯ ಪಡೆದು ಐವತ್ತೈದು ವರ್ಷಗಳಾದರೂ, ಮಹಿಳೆಯರು ದಿನಂಪ್ರತಿ ಕ್ರಮೇಣವಾಗಿ ಅತ್ಯಾಚಾರ, ಹಿಂಸೆ, ಕ್ರೌರ್ಯ ಮತ್ತು ಜೀವಂತ ದಹನಕ್ಕೆ ಗುರಿಯಾಗುತ್ತಲೇ ಇದ್ದಾರೆ. ಸಮಾಜ ಜೀವನದ ಆರ್ಥಿಕ, ಸಾಮಾಜಿಕ, ರಾಜಕೀಯ, ಅಧಿಕಾರ, ಆಡಳಿತ, ಹಕ್ಕು ಹಾಗೂ ಕಾನೂನಿನ ವಲಯಗಳಲ್ಲಿ ತರಲಾದ ಬದಲಾವಣೆಗಳು ಮಹಿಳೆಯರ ಸ್ಥಾನಮಾನಗಳಲ್ಲಿ ಯಾವುದೇ ರೀತಿಯ ಬದಲಾವಣೆಗಳು ಕಂಡುಬಂದಿರುವುದಿಲ್ಲ ಏಕೆ? ಎಂಬುದನ್ನು ಮಹಿಳಾ ಚಳುವಳಿಗಾರರು ನಿಜಕ್ಕೂ ಯೋಚಿಸಬೇಕಾದ ಸಂಗತಿಯಾಗಿದೆ. ಕೇವಲ ಕಾನೂನುಗಳ ತಿದ್ದುಪಡಿಗಳಾಗಲಿ ಮತ್ತೂ ಕಾರ್ಯನೀತಿಗಳಾಗಲಿ ಸಮಾಜದಲ್ಲಿ ಅಂದುಕೊಂಡಷ್ಟು ಬದಲಾವಣೆಯನ್ನು ತರಲು ಸಾಧ್ಯವಿಲ್ಲ. ಮಹಿಳಾ ಸಂಘಟನೆಗಳು, ಎನ್ .ಜಿ.ಓ.ಗಳು ಮತ್ತು ಮಹಿಳಾ ಅಧ್ಯಯನಕಾರರು ಈ ಎಲ್ಲಾ ಅಂಶಗಳ ಬಗ್ಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸಬೇಕು ಹಾಗೂ ಬದಲಾವಣೆಯನ್ನು ತರಬೇಕೆಂಬ ಸಾಮಾಜಿಕ ಆಸಕ್ತಿ ಸಂಘಟನೆಗಳಿಗೆ ಇರಬೇಕಾಗುತ್ತದೆ. ಆಗ ಮಾತ್ರ ಮಹಿಳೆಯರ ಸ್ಥಿತಿಗತಿಗಳು ಸುಧಾರಿಸಿ ಕೊಳ್ಳಲು ಸಾಧ್ಯವಾಗುತ್ತದೆ.

ನಮ್ಮ ಭಾರತ ಸಂವಿಧಾನದಲ್ಲಿ ಆರು ಸ್ಥಳಗಳಲ್ಲಿ ಮಾತ್ರ 'ಸ್ತ್ರೀಯರು' ಎಂಬ ಉಲ್ಲೇಖವಿದೆ. ಉಳಿದಂತೆ ಎಲ್ಲೆಡೆಗಳಲ್ಲೂ ಪ್ರಜೆಗಳು, ವ್ಯಕ್ತಿಗಳು ಎಂದೇ ಉಲ್ಲೇಖವಾಗಿದೆ. ಈ ಪದಗಳ ಅರ್ಥವ್ಯಾಪ್ತಿಯಲ್ಲಿ ಸ್ತ್ರೀಯರೂ ಸೇರಿದ್ದಾರೆ ಎಂದು ಅರ್ಥೈಸುತ್ತದೆ. ಸಂವಿಧಾನದ ಮೂಲಕ ಮಹಿಳೆಯರಿಗೆ ನೀಡಲಾಗಿರುವ ಮೂಲಭೂತ ಹಕ್ಕುಗಳ ಪೈಕಿ ಸಮಾನತೆಯ ಹಕ್ಕು ಎಲ್ಲಕ್ಕಿಂತ ಮುಖ್ಯವಾಗಿದೆ. ಉದಾ: ಸಂವಿಧಾನದ ೩೯ನೇ ಅನುಚ್ಛೇದದಲ್ಲಿ, ತಮ್ಮ ಜೀವನೋಪಾಯಕ್ಕಾಗಿ ತಕ್ಕಷ್ಟು ಸಾಧನೆಗಳನ್ನು ಸ್ತ್ರೀ ಪುರುಷರ ಸಮಾನವಾಗಿ ಪಡೆಯಲು ಅನುಕೂಲವಾಗುವಂತೆ, ಸ್ತ್ರೀ-ಪುರುಷರಿಗೆ ಸಮಾನ ಶ್ರಮಕ್ಕೆ ಸಮಾನ

ವೇತನ ದೊರೆಯುವಂತೆ, ಹಾಗೆ ಮಹಿಳೆಯರು ಸಂವಿಧಾನಾತ್ಮಕವಾಗಿ ಪುರುಷರಿಗೆ ಸರಿಸಮಾನವಾಗಿ ಸಮಾನತೆಯನ್ನು ಪಡೆಯುವ ಹಕ್ಕಿದೆ. ಆದರೆ ಅವುಗಳನ್ನು ಪುರುಷರ ಹತೋಟಿಯಲ್ಲಿಟ್ಟುಕೊಂಡು, ಮಹಿಳೆಯರು ಬೇಡಿ/ಕೋರಿ ಪಡೆದುಕೊಳ್ಳುವಂತೆ ಹಿಡಿತದಲ್ಲಿಟ್ಟುಕೊಂಡಿದ್ದಾರೆ. ಉದಾ : ಕೊಡುವುದು ಕೊಟ್ಟರೆ ನನಗೇನು ಉಳಿಯಿತು ಎನ್ನುವ ಹಾಗೆ ಪುರುಷರು ಬುದ್ಧಿ ತೋರಿಸುತ್ತಾರೆ. ಆದ್ದರಿಂದ ಮಹಿಳೆಯರು ಕೇಳುವುದಕ್ಕಿಂತ ಪುರುಷರ ವಿರುದ್ಧ ಹೋರಾಟ ಮಾಡಿ ಕಿತ್ತುಕೊಳ್ಳುವುದೇ ಉತ್ತಮವಾದ ಪ್ರಯತ್ನವಾಗುತ್ತದೆ. ಇಲ್ಲಿ ಕೇಳುವುದು ಅಂದರೆ ದಾನ ಕೊಡಿ ಎಂದ ಹಾಗೆ ಆಗುತ್ತದೆ. ಆದ್ದರಿಂದ ಮಹಿಳೆಯರು ತಮಗೆ ದೊರೆಯಬೇಕಾದ ಸಮಾನ ಹಕ್ಕುಗಳನ್ನು ಧೈರ್ಯದಿಂದ ಕಿತ್ತುಕೊಳ್ಳಬೇಕು.

ಸ್ವಾತಂತ್ರ್ಯ ಪೂರ್ವದಿಂದಲೂ ಮಹಿಳಾ ಚಳುವಳಿಕಾರರು ಸ್ವಾತಂತ್ರ್ಯಕ್ಕಾಗಿ ಪುರುಷರ ಸರಿಸಮಾನವಾಗಿ ಹೋರಾಟಗಳಲ್ಲಿ ಭಾಗವಹಿಸಿದ್ದಾರೆ. ಮತ್ತು ರಾಜಮಹಾರಾಜರ ಚಕ್ರಾಧಿಪತ್ಯದ ಬಗ್ಗೆ ಗಮನಿಸಿದಾಗ ಅಲ್ಲಿಯೂ ಸಹ ರಾಣಿಯರು ಮತ್ತು ಸೈನಿಕರ ಪತ್ನಿಯರು ಅರಮನೆಯ ರಕ್ಷಣೆಗಾಗಿ ಮತ್ತು ಸಾಮ್ರಾಜ್ಯದ ಅಂತಸ್ತನ್ನು ಕಾಪಾಡಿಕೊಳ್ಳುವುದಕ್ಕಾಗಿ ದಾಳಿಕೋರರ ವಿರುದ್ಧ ಹೋರಾಡಿ ವೀರಮರಣ ಹೊಂದಿರುವುದನ್ನು ನಮ್ಮ ದೇಶದ ಇತಿಹಾಸವನ್ನು ಗಮನಿಸುತ್ತಾ ಬಂದಾಗ ಬಹಳಷ್ಟು ವೀರವನಿತೆಯರ ಹೆಸರುಗಳು ಕೇಳಿಬರುತ್ತಿವೆ. ಇನ್ನು ಬಹಳಷ್ಟು ವೀರ ರಮಣೀಯರ ಹೆಸರುಗಳು ಎಲ್ಲಿಯೂ ದಾಖಲು ಗೊಂಡಿರುವುದಿಲ್ಲ. ಕೇವಲ ಮೌಖಿಕವಾಗಿ ಮಾತ್ರ ಕೇಳಿಬರುತ್ತಿವೆ. ಹಾಗೆಯೇ ಸ್ವತಂತ್ರ್ಯಕ್ಕೆ ಹೋರಾಡಿದ ಬಹುಪಾಲು ಮಹಿಳೆಯರಲ್ಲಿ, ರಮಾಭಾಯಿ ರಾನಡೆ, ಆ್ಯನಿಬೇಸೆಂಟ್, ಮಾರ್ಗರೇಟೆ ಇ ಕಸಿನ್ಸ್ , ಸರೋಜಿನಿನಾಯ್ಡು, ಕಮಲಾದೇವಿ ಚಟ್ಟೋಪಾಧ್ಯಾಯ, ಮುತ್ತುಲಕ್ಷ್ಮಿರೆಡ್ಡಿ, ದುರ್ಗಾಬಾಯಿ ದೇಶ್‌ಮುಖ್, ಕೆ.ರೆ.ಲೇಡಿ ಉದಯಗೌರಿ, ರಮಣಾಬಾಯ್ ನೀಲಕಂಠ, ಲೇಡಿ ಅಬ್ದುಲ್ ಖಾದಿರ್ ರಸ್ತುವರ್ಜೆದ ಫಾರಾದೊಂಜಿ, ಮಹಾರಾಣಿ ಸೇತು ಪಾರ್ವತಿ ಬಾಯಿ, ರಾಣೀರುಕ್ಮಬಾಯಿ ರಾಜವಾಡೆ, ಬೇಗಂ ಹವಿದ್ ಅಲಿ, ರಾಮೇಶ್ವರೀ ನೆಹರು, ವಿಜಯಲಕ್ಷ್ಮಿ ಪಂಡಿತ್, ಹಂಸಮೆಹತ್, ಲೇಡಿ ರಾಮರಾವ್, ಅನಸೂರ ಬಾಯಿಕಾಳೆ, ಈ ಕೆಲವಾರು ಮಹಿಳೆಯರ ಹೆಸರುಗಳು ಮಾತ್ರ ಕೇಳಿಬರುತ್ತಿವೆ. ಇನ್ನೂ ಓಬಳಿ ಮಟ್ಟದಲ್ಲಿ ಹೋರಾಟ ಮಾಡಿದಂತ ವೀರ ಮಹಿಳೆಯರ ಹೆಸರುಗಳು ನಾಪತ್ತೆಯಾಗಿದ್ದಾವೆ.

ಬಂಗಾಳ ವಿಭಜನೆಯ ವಿರುದ್ಧ ನಡೆದ ಚಳುವಳಿ ಮತ್ತು ಸ್ವದೇಶಿ ಚಳುವಳಿಗಳು ಭಾರತದ ವಿವಿಧ ಭಾಗಗಳಿಂದ ಮಹಿಳೆಯರನ್ನು ಆಕರ್ಷಿಸಿದವು. ಇದರ ಫಲವಾಗಿ ಮಹಿಳೆಯರು ರಾಷ್ಟ್ರೀಯ ಚಳುವಳಿಯಲ್ಲಿ ಸ್ವಯಂ ಆಗಿ ಪಾಲ್ಗೊಳ್ಳಲು ಆರಂಭಿಸಿದರು. ಸತ್ಯಗ್ರಹ ಚಳುವಳಿಗಳಲ್ಲಿ ಸಾರ್ವಜನಿಕ ಸಭೆಗಳ ಮೇಲಿರುವ ನಿಷೇಧವನ್ನು ಕಡೆಗಾಣಿಸಿ ಕೈಗೊಂಡ ಮೆರವಣಿಗೆಗಳಲ್ಲಿ, ಹಾಗೂ ಮಧ್ಯದಂಗಡಿಗಳ ಮುಂದೆ ಮತ್ತು ವಿದೇಶಿ ಬಟ್ಟೆಗಳನ್ನು ಮಾರುವ ಅಂಗಡಿಗಳ ಮುಂದೆ ವಿರೋಧ ವ್ಯಕ್ತಪಡಿಸುವ ಸಭೆಗಳಲ್ಲಿ

ಭಾಗವಹಿಸಿದರು. ಗಾಂಧಿ ಸ್ವಾತಂತ್ರ್ಯವನ್ನು ಪಡೆಯುತ್ತಾರೋ ಇಲ್ಲವೋ, ಆದರೆ ಮಹಿಳೆಯರು ಗೃಹ ಬಂಧನದಿಂದ ಬಿಡಿಸಿ ರಾಷ್ಟ್ರೀಯ ಹೋರಾಟದಲ್ಲಿ ಪರಿಣಾಮಕಾರಿಯಾದ ಪಾತ್ರವಹಿಸುವಂತೆ ಮಾಡುವ ಅದ್ಭುತವನ್ನು ಸಾಧಿಸಿದ್ದಾರೆ ಎಂದ ಅಮೇರಿಕನ್ ಪತ್ರಕರ್ತನೊಬ್ಬ ಅಭಿಪ್ರಾಯ ಪಟ್ಟಿದ್ದಾನೆ. ಡಾ.ಬಿ.ಆರ್. ಅಂಬೇಡ್ಕರ್ ಅವರು ಪ್ರಾರಂಭಿಸಿದ ದಲಿತರ ಸ್ವಾತಂತ್ರ್ಯ ಹೋರಾಟದಲ್ಲಿ ಸಹ ಪಾಲ್ಗೊಂಡರು. ಸ್ವಾತಂತ್ರ್ಯ ಹೋರಾಟದಲ್ಲಿ ಮಹಿಳೆಯರು ಜೈಲು ಸೇರಿದ ಉದಾಹರಣೆಗಳು ಅನೇಕವಿವೆ. ಸ್ವಾತಂತ್ರ್ಯ ಹೋರಾಟದಲ್ಲಿ ಭಾಗಿಯಾಗಲು ಕುಟುಂಬದ ಚೌಕಟ್ಟನ್ನು ಮೀರಿ ಮುಂದೆ ಬಂದ ಮಹಿಳೇಯರನ್ನು ರಾಷ್ಟ್ರೀಯ ಹೋರಾಟದ ತರುವಾಯ ಮಹಿಳೆಯರ ಅಗತ್ಯವಿಲ್ಲವೆಂದು ಭಾವಿಸಿ ಸಾರ್ವಜನಿಕ ಕ್ಷೇತ್ರದಿಂದ ಹಿಂದಕ್ಕೆ ತಳ್ಳಿರುವ ಪ್ರಸಂಗಗಳು ಸಹ ಉಂಟು. ರಾಜಕೀಯದಲ್ಲಿ ಮಹಿಳೆಯ ಭಾಗವಹಿಸುವಿಕೆ ಬೆಳೆದು ಬಂದ ಬಗೆಯನ್ನು ಗಮನಿಸಿದರೆ ಭಾರತೀಯ ಕಾಂಗ್ರೆಸ್ಸಿನ ಮೊದಲ ಮೂರು ದಶಕಗಳ ಚರಿತ್ರೆಯಲ್ಲಿ ಮಹಿಳೆಯ ಭಾಗವಹಿಸುವಿಕೆ ತೀರಾ ಕಡಿಮೆ ಪ್ರಮಾಣವೆಂದು ಹೇಳಬಹುದು. ಸ್ವಾತಂತ್ರ್ಯ ಪೂರ್ವದಿಂದಲೂ ಹಿಡಿದು ಇಂದಿನವರೆಗೂ ಮಹಿಳೆಯರನ್ನು ಹೋರಾಟ, ಸತ್ಯಗ್ರಹ, ಚಳುವಳಿ ಮಾಡುವ ಸಂದರ್ಭಗಳಲ್ಲಿ ಸಂಘಟನೆಗೆ ಬೆಂಬಲವಿರಲು ಅಥವಾ ಶಕ್ತಿತುಂಬಲು ಮತ್ತು ಸತ್ಯಗ್ರಹಗಳಲ್ಲಿ ಆಸಕ್ತಿ, ತಾಳ್ಮೆಗಳಿಂದ ಕುಂತಲ್ಲಿಯೇ ಕೂಡಲು ಮಹಿಳೇಯರು ಉಪಯುಕ್ತವಾಗುತ್ತಾರೆ ಎನ್ನುವ ದೃಷ್ಟಿಯಿಂದ ಅತಿಹೆಚ್ಚಿನ ಸಂಖ್ಯೆಯಲ್ಲಿ ಮಹಿಳೆಯರನ್ನು ಸೇರಿಸಿಕೊಂಡಿದ್ದರೇನೋ ಎನ್ನುವ ಅರ್ಥ ಸೂಚಿಸುತ್ತವೆ. ಒಟ್ಟಾರೆಯಾಗಿ ಮಹಿಳೆಯರಿಂದ ಸೇವೆಯನ್ನು ಬಯಸುತ್ತಾರೇ ಹೊರತು, ಅವಳಿಗೆ ರಾಜಕೀಯ, ಆರ್ಥಿಕ, ಅಧಿಕಾರ ವಲಯಗಳಲ್ಲಿ ಸ್ಥಾನಮಾನಗಳನ್ನು ನೀಡಿರುವುದು ಕೇವಲ ಬೆರಳೆಣಿಕೆಯಷ್ಟು ಮಾತ್ರವಾಗಿದೆ.

ಸ್ವಾತಂತ್ರ್ಯ ಬಂದ ನಂತರ ಭಾರತ ಸಂವಿಧಾನವು ಮಹಿಳೆಯರಿಗೆ ಪುರುಷರೊಂದಿಗೆ ಸಮಾನವಾಗಿ ಹಕ್ಕುಗಳನ್ನು ನೀಡಿದ್ದರೂ ಮಹಿಳೆಯರು ಪೂರ್ಣ ಪ್ರಯೋಜನ ಪಡೆದುಕೊಂಡಿರುವುದಿಲ್ಲವೆಂಬುದನ್ನು ಲೋಕಸಭೆಯಲ್ಲಿ ಭಾಗವಹಿಸಿರುವ ಅತ್ಯಲ್ಪ ಪ್ರಮಾಣವನ್ನು ಕಂಡಾಗ ತಿಳಿದುಬರುತ್ತದೆ. ೧೯೫೨ ರಲ್ಲಿ ನಡೆದ ಚುನಾವಣೆಯಲ್ಲಿ ೪೯೯ ಸದಸ್ಯರ ಪೈಕಿ ಕೇವಲ ೨೨ ಮಹಿಳೆಯರು, ೧೯೫೭ರಲ್ಲಿ ೫೦೦ ಸದಸ್ಯರಲ್ಲಿ ಕೇವಲ ೨೭ ಮಂದಿ ಮಹಿಳೆಯರು ಇದ್ದರು. ಆ ಸಂಖ್ಯೆ ೧೯೬೨ರಲ್ಲಿ ೫೦೩ಕ್ಕೆ ಪ್ರತಿಯಾಗಿ ೩೪ ಮಹಿಳೆಯರು. ೧೯೬೭ರಲ್ಲಿ ೫೨೩ ಸದಸ್ಯರ ಪೈಕಿ ೩೧ ಮಹಿಳೆಯರು. ೧೯೭೧ರಲ್ಲಿ ೫೨೧ಕ್ಕೆ ಪ್ರತಿಯಾಗಿ ೨೨ ಮಹಿಳೆಯರು ೧೯೭೭ರಲ್ಲಿ ೫೪೪ರಲ್ಲಿ ಕೇವಲ ೧೯ ಮಹಿಳೆಯರು ಕಂಡುಬರುತ್ತಾರೆ. ಇಲ್ಲಿ ಮಹಿಳೆಯರು ಭಾಗವಹಿಸುವಿಕೆಯಲ್ಲಿ ಇನ್ನಷ್ಟು ಇಳಿತ ಕಂಡುಬರುವುದು ಶೋಚನೀಯವಾಗಿದೆ. ೧೯೮೦ರಲ್ಲಿ ಈ ಸ್ಥಿತಿಯು ಸುಧಾರಿಸಿದ್ದು ಒಟ್ಟಾರೆ ೫೪೪ ಸದಸ್ಯರಲ್ಲಿ ೨೮ ಸ್ಥಾನಗಳನ್ನು ಮಾತ್ರ

ಮಹಿಳೆಯರು ಪಡೆದುಕೊಂಡಿದ್ದಾರೆ. ೧೯೮೪ರಲ್ಲಿ ೫೪೪ ಸ್ಥಾನಗಳ ಪೈಕಿ ೪೪ ಸ್ಥಾನಗಳನ್ನು ಗೆದ್ದಿದು ಇಂದಿಗೂ ದಾಖಲೆಯಾಗಿ ಉಳಿದಿದೆ. ೧೯೮೯ರಲ್ಲಿ ೫೧೭ ಸ್ಥಾನಗಳಲ್ಲಿ ಮಹಿಳೆಯರು ೨೭ ಸ್ಥಾನಗಳನ್ನು ಮಾತ್ರ ಪಡೆದುಕೊಂಡಿದ್ದಾರೆ. ೧೯೯೧ರಲ್ಲಿ ೫೪೪ ಸ್ಥಾನಗಳ ಪೈಕಿ ೩೯ ಸ್ಥಾನಗಳನ್ನು ಪಡೆದುಕೊಂಡು ಪ್ರತಿನಿಧ್ಯವನ್ನು ಸಾಧಿಸಿದ್ದಾರೆ. ೧೯೯೬ರಲ್ಲಿ ೫೪೩ ಸ್ಥಾನಗಳಲ್ಲಿ ಕೇವಲ ೩೪ ಸ್ಥಾನಗಳನ್ನು ಮಾತ್ರ ಗೆದ್ದಿದ್ದಾರೆ. ೧೯೯೮ರಲ್ಲಿ ೫೪೩ ಸ್ಥಾನಗಳ ಪೈಕಿ ೪೩ ಸ್ಥಾನಗಳನ್ನು ಮಹಿಳೆಯರು ಗೆದ್ದಿದ್ದಾರೆ. ಹನ್ನೆರಡನೇ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರು ೧೩, ೧೪ ಮಂದಿ ಪುರುಷ ಸಂಸತ್ ಸದಸ್ಯರ ಪ್ರಮಾಣಕ್ಕೆ ಮಹಿಳಾ ಸದಸ್ಯಳು ಕೇವಲ ಒಬ್ಬ ಸದಸ್ಯೆ ಮಾತ್ರ ಇದ್ದಾಳೆ. ಇದರ ಅರ್ಥ ಮಹಿಳೆಯರಿಗೆ ಚುನಾವಣೆಯಲ್ಲಿ ಗೆಲ್ಲುವ ಸಾಮರ್ಥ್ಯವಿಲ್ಲ ಎಂದೇನಲ್ಲ. ಪುರುಷ ಪ್ರಧಾನ ರಾಜಕೀಯ ಪಕ್ಷಗಳಲ್ಲಿ ಮಹಿಳೆಯರಿಗೆ ಟಿಕೇಟ್ ನೀಡಿ ಮಹಿಳೆಯರನ್ನು ತಮ್ಮ ಪಕ್ಷದ ಅಭ್ಯರ್ಥಿಯನ್ನಾಗಿ ಆಯ್ಕೆ ಮಾಡುವುದೇ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲಿ ಶಾಶ್ವತವಾಗಿ ನೆಲೆಯೂರಿ ಸ್ವತಂತ್ರ್ಯ ಚುನಾವಣೆಗಳನ್ನು ಎದುರಿಸಲು ಕಡಿಮೆ. ಆದರೆ ಪ್ರತಿ ಚುನಾವಣೆಯಲ್ಲಿ ಸ್ಪರ್ಧಿಸಿರುವ ಮಹಿಳಾ ಅಬ್ಯಾರ್ಥಿಗಳಲ್ಲಿ ಬಹುಪಾಲು ಮಂದಿ ಗೆಲುವು ಸಾಧಸಿದ್ದಾರೆ. ೩ನೇ ಲೋಕಸಭೆಯ ಚುನಾವಣೆಯ ನಂತರ ಸ್ತ್ರೀ ಸಂಸದರು ವಹಿಸಿದ ಪಾತ್ರ ಬಹಳಷ್ಟು ಗುಣಾತ್ಮಕವಾಗಿ ಬದಲಾಗಿದೆ. ಇದಕ್ಕೆ ಕಾರಣ ಇಂದಿರಾಗಾಂಧಿ ಭಾರತದ ಮೊದಲ ಮಹಿಳಾ ಪ್ರಧಾನಿಯಾದುದು. ಇಷ್ಟೆಲ್ಲಾ ಪ್ರಯತ್ನದ ಹಾದಿಯಲ್ಲಿದ್ದರೂ ಸಂಸತ್ತಿನಲ್ಲಿ ಮಹಿಳೆಯರ ಸ್ಥಾನಗಳು ಶೇಕಡ ೧೦ನ್ನು ಮೀರಿಲ್ಲ ಆದ್ದರಿಂದಲೇ ರಾಜಕೀಯ ರಂಗದಲ್ಲಿ ಮಹಿಳೆಯರಿಗೆ ಮೀಸಲಾತಿ ಅಗತ್ಯವಿದೆ.

ಮೀಸಲಾತಿ ಎನ್ನುವುದು ಪ್ರಮುಖವಾಗಿ ಮೂರು ಅಂಶಗಳನ್ನು ಒಳಗೊಂಡಿದೆ. ಸರ್ಕಾರಿ ನೌಕರಿಯಲ್ಲಿ ಮೀಸಲಾತಿ, ಶೈಕ್ಷಣಿಕ ಕ್ಷೇತ್ರದಲ್ಲಿ ಮೀಸಲಾತಿ ಹಾಗೂ ರಾಜಕೀಯ ಅಂದರೆ ರಾಜ್ಯ ಮತ್ತು ಲೋಕಸಭಾ ಸ್ಥಾನಗಳಲ್ಲಿ ಮೀಸಲಾತಿ, ಈ ಮೂರು ಅಂಶಗಳು ಒಂದೇ ಉದ್ದೇಶದ ಬೇರೆ ಬೇರೆ ಮುಖಗಳಾಗಿದ್ದರೂ, ಉದ್ಯೋಗ ಮತ್ತು ಶೈಕ್ಷಣೀಕ ಕ್ಷೇತ್ರಗಳಲ್ಲಿನ ಮೀಸಲಾತಿಗಿಂತ ರಾಜಕೀಯ ಮೀಸಲಾಸತಿ ಅತ್ಯಂತ ಚರ್ಚಾಸ್ಪದ ವಿಷಯವಾಗಿದೆ. ಲೋಕಸಭೆ ಹಾಗೂ ವಿಧಾನಸಭೆಯ ಸ್ಥಾನಗಳಲ್ಲಿ ಮಹಿಳೆಯರು ಶೇಕಡ ೩೩ರಷ್ಟನ್ನೇ ಏಕೆ ಕೇಳುತ್ತಿದ್ದಾರೆ. ಈ ಮೀಸಲಾತಿಯ ಪ್ರಮಾಣವನ್ನು ಶೇ.೧೩ ಅಥವಾ ಶೇ.೪೩ ಸ್ಥಾನಗಳನ್ನು ಏಕೆ ಕೇಳುತ್ತಿಲ್ಲ ಎಂದು ತಲೆಹರಟೆಯ ಪ್ರಶ್ನೆಗಳಾಕುತ್ತಾರೆ. ಭಾರತದ ಒಟ್ಟು ಜನಸಂಖ್ಯೆಯಲ್ಲಿ ಮಹಿಳೆಯರು ಅರ್ಧಕ್ಕಿಂತ ಸ್ವಲ್ಪ ಕಡಿಮೆ ಇದ್ದಾರೆ ಅಷ್ಟೇ. ಹಾಗಾದರೆ ಈ ಮೀಸಲಾತಿಯ ಪ್ರಮಾಣವನ್ನು ಶೇ.೪೯ಕ್ಕೆ ಅಥವಾ ಶೇ.೪೮ಕ್ಕೆ ನಿಗಧಿಪಡಿಸಬಹುದಿತ್ತು. ಕೇವಲ ೩೩ ರಷ್ಟು ಏಕೆ ಕೇಳುತ್ತಿದ್ದಾರೆ. ಅನ್ನುವ ಪ್ರಶ್ನೆಗಳಿಗೆ ಮಹಿಳೆಯರ ಪ್ರತಿಕ್ರಿಯೇ ಈ ರೀತಿಯಾಗಿ ಬರುತ್ತವೆ. ಪ್ರಥಮವಾಗಿ

ಮಹಿಳೆಯರು ರಾಜಕೀಯದಲ್ಲಿ ಪ್ರವೇಶ ಪಡೆಯಲು ಇಂತಿಷ್ಟು ಪ್ರಮಾಣದಲ್ಲಾದರೂ ಸ್ಥಾನಗಳನ್ನು ಪಡೆಯಬೇಕು ಎನ್ನುವ ಉದ್ದೇಶದಿಂದ, ಶೇ.೩೩ರಷ್ಟಾದರೂ ಮೀಸಲಾತಿ ನೀಡಬೇಕೆಂದೂ ಒತ್ತಾಯಿಸಿದ್ದಾರೆ. ಮತ್ತು ಯಾವುದೇ ಸಭೆಯಲ್ಲಿ ನಿರ್ಣಯಗಳನ್ನು ತೆಗೆದುಕೊಳ್ಳಬೇಕಾದರೆ, ೧/೩ರಷ್ಟು ಜನಬೆಂಬಲವನ್ನು ತೋರಿಸಬೇಕಾಗುತ್ತದೆ. ಇಂತಿಷ್ಟು ಪ್ರಮಾಣದ ಬೆಂಬಲವನ್ನು ತೋರಿಸದಿದ್ದರೆ, ಅನಿರ್ಣಯಗಳನ್ನು ಪಾಸುಮಾಡಲು ಆಗುವುದಿಲ್ಲ. ಮತ್ತು ಅಂತಹ ಸಭೆಗಳನ್ನು ಮುಂದೂಡಬೇಕಾಗುತ್ತದೆ. ಒಂದು ವೇಳೆ ಮಹಿಳೆಯರು ಶೇ.೫೦ ಮೀಸಲಾತಿಯನ್ನು ಕೇಳಿದರೆಂದು ಇಟ್ಟುಕೊಳ್ಳೋಣ, ಇಲ್ಲಿ ಎಲ್ಲಾ ಮಹಿಳೆಯರು ಮಹಿಳೆಯರ ಪರವಾಗಿ ಧ್ವನಿ ಕೂಡಿಸುತ್ತಾರೆ ಎನ್ನುವುದು ನಂಬಲಾರದ ಮಾತಾಗಿದೆ. ಏಕೆಂದರೆ ಪುರುಷರ ರಾಜಕೀಯ ಮಾತುಗಳಿಗೆ ಮರುಳಾಗಿ ಅವರಿಗೆ ಬೆಂಬಲ ನೀಡುವ ಎಷ್ಟೋ ಮಹಿಳೆಯರನ್ನು ಕಾಣಬಹುದು. ಈ ರೀತಿಯ ಬೆಂಬಲದಿಂದ ಪುರುಷರು ತಮಗೆ ಅನುಕೂಲವಾಗುವಂತಹ ಯೋಜನೆಗಳನ್ನು ಹಾಗೂ ನಿರ್ಧಾರಗಳನ್ನು ಅತಿಸುಲಭವಾಗಿ ತೆಗೆದುಕೊಳ್ಳಬಹುದಾಗಿದೆ. ಇಲ್ಲಿ ೧/೩ಕ್ಕಿಂತ ಹೆಚ್ಚಾಗಿಯೇ ಬೆಂಬಲ ತೋರಿಸಿದಂತಾಗುತ್ತದೆ.

ಹೀಗೆ ಈ ಮೇಲಿನ ಎಲ್ಲಾ ಅಂಶಗಳನ್ನು ಕೂಲಂಕುಶವಾಗಿ ಅಭ್ಯಾಸಿಸಲು ಮತ್ತು ಅವುಗಳಿಂದ ಮಹಿಳೆಯರ ಮೇಲೆ ಆಗುತ್ತಿರುವ ದುಷ್ಪರಿಣಾಮಗಳೇನು ಎನ್ನುವುದನ್ನು ಅರಿತುಕೊಳ್ಳಲು ಹಾಗೂ ಅವುಗಳಿಂದ ಪರಿಹಾರ ಕಂಡುಕೊಳ್ಳುವುದು ಹೇಗೆ ಎನ್ನುವುದನ್ನು "ಮಹಿಳಾ ಸಬಲೀಕರಣ ಮತ್ತು ಅಧಿಕಾರ ಸಂರಚನೆ" ಎನ್ನುವ ಸಂಪ್ರಬಂಧದಲ್ಲಿ ಅಳವಡಿಸಿಕೊಳ್ಳಲಾಗಿದೆ.

ಅಧ್ಯಯನದ ಉದ್ದೇಶ

ಲಿಂಗ ಅಸಮಾನತೆಯ ನೆಲೆಯಿಂದ ಹುಟ್ಟಿಕೊಂಡ ಲೈಂಗಿಕ ಶೋಷಣೆ, ದೈಹಿಕ ಹಾಗೂ ಮಾನಸಿಕ ಹಿಂಸೆಯು, ಮಾನವ ಇತಿಹಾಸದಲ್ಲಿ ಕಾಣಿಸಿಕೊಳ್ಳುವ ಅತ್ಯಂತ ವಿಚಿತ್ರವಾದ ಶೋಷಣೆಗಳಾಗಿವೆ. ಮಹಿಳೆಯರು ಸ್ವಾತಂತ್ರ್ಯವನ್ನು ಸಮಾನ ಹಕ್ಕುಗಳನ್ನು ಹಾಗೂ ಅಧಿಕಾರವನ್ನು ನಿರ್ವಹಿಸಿಕೊಳ್ಳ ಬಯಸುವ ನಮ್ಮ ಮಹಿಳೆಯರು ಅಸಮಾನ ನೆಲೆಗಳನ್ನು ಮತ್ತು ಶೋಷಣೆಯ ಮೂಲಬೇರನ್ನು ಕಿತ್ತಿ ಹಾಕಬೇಕು. ಮತ್ತು ಲಿಂಗ ಅಸಮಾನತೆ, ಲೈಂಗಿಕ ಶೋಷಣೆ, ದೈಹಿಕ ಹಾಗೂ ಮಾನಸಿಕ ಹಿಂಸೆ ಇವುಗಳನ್ನು ಸಮಾಜವು ಹೇಗೆ ಗಟ್ಟಿಗೊಳಿಸುತ್ತಾ ಬರುತ್ತಿದೆ ಎಂಬುದರ ಬಗ್ಗೆ ಗಮನಹರಿಸಬೇಕು.

ಸಾಮಾಜಿಕ ಕಾರ್ಯವು ಆಡಳಿತದ ಕಲೆಯನ್ನು ಕಲಿಸಿಕೊಡುತ್ತದೆ. ಪುರುಷ ಅಥವಾ ಶ್ರೀಮಂತವರ್ಗ ದವರೇನು ಮಹಾನ್ ಬುದ್ಧಿವಂತರೇನು ಅಲ್ಲ, ಅಥವಾ ಅಸಾಧ್ಯ ಆದರ್ಶವಾದಿಗಳೇನಲ್ಲ, ಎಂದು ಮಹಿಳಾ ಅಧ್ಯಯನಕಾರರು ಮತ್ತು ಮಹಿಳಾ ಚಳುವಳಿಕಾರರು ಹೇಳುವ ಮಾತುಗಳಲ್ಲಿ ಸತ್ಯಾಂಶ

ಅಡಿಗಿಕೊಂಡಿದೆ. ನಾಲ್ಕು ಗೋಡೆಗಳ ಮಧ್ಯೆ ಜೀವಿಸುವಂತಹ ಮಹಿಳೆ, ಕುಶಲಕಾರ್ಮಿಕ ಮಹಿಳೆ ಅಥವಾ ಕೂಲಿಕಾರಳೊಬ್ಬಳು ಈ ಕೂಡಲೇ ರಾಜ್ಯ ನಿರ್ವಹಣೆಯ ಕಾರ್ಯವನ್ನು ನಿಭಾಯಿಸಲಾರರೆಂಬುದನ್ನು ನಾವು ಬಲ್ಲೆವು. ಸ್ವತಂತ್ರ್ಯ ಭಾರತದ ಸಂವಿಧಾನವು ೧೯೫೦ರ ಜನವರಿ ೨೬ರಂದಿನಿಂದ ಜಾರಿಗೊಂಡ ಮೇಲೆ ಕಾನೂನಿನಾತ್ಮಕವಾಗಿ ಸ್ತ್ರೀಯರು ಎಲ್ಲಾ ವಿಷಯಗಳಲ್ಲೂ ಪುರುಷರಿಗೆ ಸರಿಸಮಾನರೆ ಆಗಿದ್ದಾರೆ. ಸಂವಿಧಾನದ ೧೪ ಹಾಗೂ ೧೫ನೇ ವಿಧಿಗಳು ಸಮಾನತೆಯ ಹಕ್ಕನ್ನು ದೇಶದ ಎಲ್ಲಾ ಪೌರರಿಗೆ ಯಾವುದೇ ಬಗೆಯ ವರ್ಗಭೇದ, ಜಾತಿಭೇದ, ಮತಭೇದ, ಪಕ್ಷಭೇದ, ಲಿಂಗಭೇದವಿಲ್ಲದಂತೆ ಸಮಾನವಾಗಿಯೇ ನೀಡುತ್ತಿವೆ. ಆದರೆ ಪುರುಷ ಅಧಿಕಾರಿಶಾಹಿಗಳು ಮಹಿಳೆಯರನ್ನು ಅಸಮಾನ ನೆಲೆಯಿಂದ ಕಾಣುತ್ತಾರೆ. ಸಾಮಾನ್ಯ ಮತ್ತು ದಲಿತ ಮಹಿಳೆಯರು ಆಡಳಿತ ನಿರ್ವಹಣೆ ಮಾಡಲು ಅನರ್ಹಳು ಎನ್ನುವ ಅಭಿಪ್ರಾಯವನ್ನು ತೋರುತ್ತಾರೆ. ಇವರ ಮಧ್ಯ ಇರುವ ವ್ಯತ್ಯಾಸವೆಂದರೆ ಪುರುಷ ಪ್ರಧಾನರು ಅಥವಾ ಶ್ರೀಮಂತ ಕುಟುಂಬಗಳಿಂದ ಆಯ್ಕೆಯಾದ ಅಧಿಕಾರಿಗಳಷ್ಟೇ ರಾಜ್ಯ ನಿರ್ವಹಣೆ ಮಾಡಬಲ್ಲರು. ರಾಜ್ಯಾಡಳಿತದ ಸಾಮಾನ್ಯ ದಿನನಿತ್ಯದ ಕಾರ್ಯಗಳನ್ನು ನೆರವೇರಿಸಬಲ್ಲರು ಎಂಬ ಪೂರ್ವಗ್ರಹ ಮೂಢನಂಬಿಕೆಗಳನ್ನು ಬಿಟ್ಟು ಬಿಡಬೇಕು. ರಾಜ್ಯ ನಿರ್ವಹಣ ಕಾರ್ಯದ ತರಬೇತಿಯನ್ನು ಸರ್ಕಾರ ಕೂಡಲೇ ಹಮ್ಮಿಕೊಳ್ಳಬೇಕು. ಅಂದರೆ ಎಲ್ಲಾ ದುಡಿಯುವ ಮಹಿಳೆಯರನ್ನು ಮತ್ತು ಶೋಷಣೆಗೆ ಒಳಗಾದ ಮಹಿಳೆಯರಿಗೂ, ಹಾಗೂ ಪ್ರಮುಖವಾಗಿ ದಲಿತ ಹಾಗೂ ಕೆಳವರ್ಗದ ಮಹಿಳೆಯರಿಗೆ ರಾಜ್ಯನಿರ್ವಹಿಸುವ ಕಾರ್ಯಗಳಿಗಾಗಿ ತರಬೇತಿಗೊಳಿಸುವುದನ್ನು ಕೂಡಲೇ ಪ್ರಾರಂಭಿಸಿ ಸಾಮಾನ್ಯ ಮಹಿಳೆಯರಿಗೂ ಉಪಯುಕ್ತವಾಗುವಂತೆ ಮಾಡಬೇಕೆನ್ನುವುದು ಅಧ್ಯಯನದ ಉದ್ದೇಶವಾಗಿದೆ.

ಪುರುಷ ಪ್ರಧಾನ ಕುಟುಂಬಗಳು ಮಹಿಳೆಯರಿಂದ ಕಿತ್ತುಕೊಂಡ ಅಧಿಕಾರ, ಹಕ್ಕು, ಆಡಳಿತ ಈ ಎಲ್ಲವನ್ನು ಪುನಃ ಪಡೆಯಬೇಕಾದರೆ ಮಹಿಳೆಯರೇ ಸ್ವತಃ ಅಧಿಕಾರ ಅಥವಾ ಹಕ್ಕುಗಳನ್ನು ಕಿತ್ತುಕೊಂಡುವರಿಂದ ಹಕ್ಕುಗಳನ್ನು ಕಿತ್ತುಕೊಳ್ಳುವ ಪ್ರಯತ್ನವನ್ನು ಮಾಡಬೇಕಾಗುತ್ತದೆ. ಅಂದರೆ ಪುರುಷರಿಂದ ಅಧಿಕಾರ, ಹಕ್ಕುಗಳನ್ನು ಮತ್ತು ಕುಟುಂಬದ ಯಜಮಾನನಿಂದ ಯಜಮಾನಿಕೆ, ಲೈಂಗಿಕ ಹತೋಟಿ ಈ ಎಲ್ಲವನ್ನು ಕಿತ್ತುಕೊಂಡು ಸಮಾಜದಲ್ಲಿ ಮಹಿಳೆಯರು ಕೂಡ ಪುರುಷರ ಸರಿಸಮಾನವಾಗಿ ಹಕ್ಕುಗಳನ್ನು ಚಲಾಯಿಸುತ್ತಾ ಸ್ವಂತ ನಿರ್ಣಯಗಳನ್ನು ತೆಗೆದುಕೊಳ್ಳುವ ಸಾಮರ್ಥ್ಯವನ್ನು ಹೊಂದಬೇಕು.

ಭಾರತದೇಶ ಪ್ರಜಾಪ್ರಭುತ್ವ ಎನ್ನುವುದು ಮಾತಿನಲ್ಲಷ್ಟೇ ಸಮಾನತೆ ಹಾಗೂ ಸ್ವತಂತ್ರ್ಯದ ಹೇಳಿಕೆ ನೀಡುತ್ತವೆ. ಆದರೆ ಪುರುಷ ಪ್ರಧಾನ ಸಮಾಜದಲ್ಲಿ ಮಾನವ ಕುಲದ ಅರ್ಧಭಾಗದಷ್ಟಿರುವ ಮಹಿಳೆಯರಿಗೆ ಸಂವಿಧಾನದ ದೃಷ್ಟಿಯಿಂದ ಸಂಪೂರ್ಣ ಸಮಾನತೆಯನ್ನು ನೀಡಿಲ್ಲ. ಅಥವಾ ಮಹಿಳೆಯರನ್ನು ಪುರುಷನ ಅಧೀನತೆಯಿಂದ ಹಾಗೂ ದಬ್ಬಾಳಿಕೆಯಿಂದ ವಿಮೋಚನೆಗೊಳ್ಳಬೇಕಾಗಿದೆ. ಗಂಡು-ಹೆಣ್ಣು,

ಶ್ರೀಮಂತ-ಬಡವ, ಶೋಷಕ-ಶೋಷಿತರ ಮಧ್ಯೆ 'ಸಮಾನತೆ' ಇಲ್ಲ ಇರಲಾರದು ಕೂಡ. ಎಲ್ಲಿಯವರೆಗೆ ಮಹಿಳೆಯರು ಪುರುಷರು ರಚಿಸಿಕೊಟ್ಟ ಚೌಕಟ್ಟಿನಲ್ಲಿಯೇ ಇರುತ್ತಾರೋ ಅಲ್ಲಿಯವರೆಗೆ ನಿಜವಾದ ಸ್ವಾತಂತ್ರ್ಯ ಮತ್ತು ಸಮಾನತೆಯನ್ನು ಪಡೆಯಲಾರಳು. ಈ ಎಲ್ಲವುಗಳಿಂದ ವಂಚಿತರಾದ ಮಹಿಳೆಯರು ಸಂವಿಧಾನಾತ್ಮಕವಾಗಿ ದೊರೆಯುವ ಹಕ್ಕುಗಳನ್ನು ಪಡೆದುಕೊಳ್ಳಲು ಮಹಿಳಾ ಚಳುವಳಿಗಳು ಹಾಗೂ ಮಹಿಳಾ ಸಂಘಟನೆಗಳು ಅತಿ ಉಗ್ರವಾದ ಹೋರಾಟಗಳನ್ನು ಮಾಡುತ್ತಾ ಪುರುಷ ನಿರ್ಮಿಸಿದ ಚೌಕಟ್ಟನ್ನು ಒಡೆದು ತಮ್ಮದೇ ಆದ ರೀತಿಯಲ್ಲಿ ಸಾಮಾಜಿಕ ಚೌಕಟ್ಟನ್ನು ನಿರ್ಮಾಣ ಮಾಡಿಕೊಂಡಾಗ ಮಾತ್ರ ಸಮಾನತೆ ಮತ್ತು ಸ್ವತಂತ್ರತೆಯನ್ನು ಪಡೆಯಲು ಅನುವಾಗುತ್ತದೆ. ಶ್ರಮವಹಿಸಿ ದುಡಿಯುವ ವಲಯಗಳಲ್ಲಿ ಮಾತ್ರ ಪುರುಷರಿಗೆ ಸಮಾನಳನ್ನಾಗಿ ವಾಸ್ತವವಾಗಿ ನೋಡುವುದಲ್ಲ, ಕುಟುಂಬ, ವಿವಾಹ, ಹಕ್ಕು, ಅಧಿಕಾರ, ಆಡಳಿತ, ಆರ್ಥಿಕತೆ ಇನ್ನು ಮುಂತಾದ ವಲಯಗಳಲ್ಲಿಯೂ ಸರಿಸಮಾನಳನ್ನಾಗಿ ನೋಡಿಕೊಳ್ಳಬೇಕಾಗುತ್ತದೆ.

ಭಾರತದಲ್ಲಿ ಮಹಿಳೆಯರ ಸ್ಥಿತಿಗತಿಗಳನ್ನು ತಿಳಿಯಲು ಇದು ಒಂದು ಅವಕಾಶವಾಗಿದೆ ಎನ್ನಬಹುದು. ಮಹಿಳೆಯರ ಸಾಮಾಜಿಕ, ಆರ್ಥಿಕ, ರಾಜಕೀಯ, ಕೌಟುಂಬಿಕ ಜೀವನದ ಮೂಲ ಉದ್ದೇಶವನ್ನು ತಿಳಿಯಲು ಮತ್ತು ಕುಟುಂಬದಲ್ಲಿ ಮಹಿಳೆಯರು ಪ್ರತಿಯೊಂದು ವಿಷಯದಲ್ಲಿ ಗಂಡಿನಷ್ಟೇ ಸರಿಸಮಾನವಾಗಿ ದುಡಿದರೂ ಸಹ ಗಂಡು-ಹೆಣ್ಣು ಎಂಬ ತಾರತಮ್ಯದ ಭಾವನೆಯನ್ನು ಹೋಗಲಾಡಿಸಲು ಸಾಧ್ಯವಿಲ್ಲದ ಪರಿಸ್ಥಿತಿಯಲ್ಲಿ ಮಹಿಳೆಯರು ನರಳುತ್ತಿದ್ದಾರೆ. ಆದ್ದರಿಂದ ಅಧ್ಯಯನದಲ್ಲಿ ಮಹಿಳೆಯರ ಕೌಟುಂಬಿಕ ಅಸಮತೋಲನಗಳಿಂದ ಮಹಿಳೆಯರ ಅಸಮತೋಲನವನ್ನು ತಿಳಿಯಲು ಹಾಗೂ ಅವಳ ತಾರತಮ್ಯದ ಬದುಕಿನ ಜೀವನವನ್ನು ತಿಳಿಯುವುದರ ಜೊತೆಗೆ, ಯಾವ ರೀತಿಯ ಬಾಧ್ಯತೆಗಳನ್ನು ಬಿಟ್ಟಿದ್ದಾರೆ. ಮತ್ತು ಆರ್ಥಿಕ, ಅಧಿಕಾರ ಹಾಗೂ ರಾಜಕೀಯ ವಲಯಗಳಿಂದ ಹೇಗೆ ಹೊರಗೆ ನಿಲ್ಲಿಸಿದ್ದಾರೆ ಎನ್ನುವ ವಿಷಯಗಳನ್ನು ತಿಳಿಯಲು ಸಹಾಯಕವಾಗಿದೆ. ಮಹಿಳಾ ಮೀಸಲಾತಿಯ ಬಗ್ಗೆ ಚರ್ಚಿಸುವ ಸಂದರ್ಭದಲ್ಲಿ ಇಂತಹ ಬಹಳಷ್ಟು ಅಧ್ಯಯನಗಳು ರಾಜ್ಯ ಮತ್ತು ಲೋಕಸಭೆಗಳಲ್ಲಿ ಏಕೆ ಮಹಿಳೆಯರಿಗಾಗಿ ಸ್ಥಾನಗಳನ್ನು ನೀಡುತ್ತಿಲ್ಲ ಎನ್ನುವುದರ ಬಗ್ಗೆ ಚರ್ಚಿಸುತ್ತಿವೆ. ಮತ್ತುಮಹಿಳೆಯರು ಸಬಲರಾಗಬೇಕಾದರೆ ಎಂತಹ ಯೋಜನೆಗಳು ಜಾರಿಗೆ ತರಬೇಕು, ಹಾಗೂ ಯಾವ ಯಾವ ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು ಎನ್ನುವುದಕ್ಕೆ ಇಂತಹ ಅಧ್ಯಯನಗಳು ಸಹಾಯಕವಾಗ ಬಲ್ಲವು ಎನ್ನುವ ಆಶೆಯಗಳು ಈ ಅಧ್ಯಯನದ ಹಿನ್ನೆಲೆಯಾಗಿದೆ. ಮಹಿಳೆಯರು ಸಬಲರಾಗಬೇಕಾದರೆ ಮೀಸಲಾತಿ ಅತ್ಯವಶ್ಯಕವಾಗಿದೆ. ಮೀಸಲಾತಿಯಿಂದ ತಮಗೆ ದೊರೆಯುವ ಸಮಾನ ಹಕ್ಕುಗಳನ್ನು ಪಡೆದುಕೊಂಡಾಗ ಆರ್ಥಿಕವಾಗಿ, ಸಾಮಾಜಿಕವಾಗಿ ಹಾಗೂ ರಾಜಕೀಯವಾಗಿ ಸಬಲೀಕರಣಗೊಂಡಾಗ ತನ್ನದೇ ಆದ ರೀತಿಯಲ್ಲಿ ಅಧಿಕಾರವನ್ನು ಸಂರಚಿಸಿಕೊಳ್ಳುತ್ತಾಳೆ ಎನ್ನುವುದು ಈ ಅಧ್ಯಯನದ ಉದ್ದೇಶವಾಗಿದೆ.

ಅಧ್ಯಯನದ ಮಹತ್ವ

ಸಹಜವಾಗಿ ಹುಟ್ಟಿಕೊಂಡ ಸಮಾಜದ ಚೌಕಟ್ಟಿನಲ್ಲಿ ಸ್ತ್ರೀ-ಪುರುಷರು ಸರಿಸಮಾನವಾಗಿ ಬದುಕಲು ಸಮಾಜೀಕರಣ ಅತಿ ಪ್ರಮುಖವಾಗಿದೆ. ಪುರುಷ ನಿರ್ಮಿತ ಸಾಮಾಜಿಕ ಚೌಕಟ್ಟಿನಲ್ಲಿ ಸ್ತ್ರೀ-ಪುರುಷರ ಬೆಳವಣಿಗೆ ಶಿಸ್ತು ಮತ್ತು ರೂಢಿ ಸಂಪ್ರದಾಯಗಳನ್ನು ಒಳಗೊಂಡಿವೆ. ಈ ರೀತಿಯ ಚೌಕಟ್ಟಿನಲ್ಲಿ ಸ್ವಾತಂತ್ರ್ಯ ನಿರ್ಣಯ, ಅಧಿಕಾರ, ವಂಶಾಭಿವೃದ್ಧಿ, ಲೈಂಗಿಕ ಹತೋಟಿ, ದಬ್ಬಾಳಿಕೆ ಈ ಎಲ್ಲವುಗಳು ಪುರುಷ ಪಾಲಾದರೆ, ಬಾಧ್ಯತೆಗಳು, ಸದಾಸೇವೆ ಸಲ್ಲಿಸುವುದು, ತಾರತಮ್ಯ, ಅಸಮಾನತೆ, ಕುಟುಂಬದ ರಕ್ಷಣೆ, ಮಕ್ಕಳ ಪೋಷಣೆ ಈ ಎಲ್ಲವುಗಳು ಮಹಿಳೆಯರ ಪಾಲಾಗಿರುವುದರಿಂದ ಅವಳ ಆರ್ಥಿಕ ಮಟ್ಟವು ಕುಂಟಿಗೊಳ್ಳುತ್ತವೆ. ಈ ವ್ಯವಸ್ಥೆಯಿಂದ ಸಮಾಜದಲ್ಲಿ ಮೇಲು-ಕೀಳು, ಗಂಡು-ಹೆಣ್ಣು, ಶ್ರೀಮಂತ-ಬಡವ ಎಂಬುವುದು ಆಳವಾಗಿ ಬೇರೂರಿರುವುದರಿಂದ ಅಸಮಾನತೆ ಉಂಟಾಗಿ ಕನಿಷ್ಠರು ಕನಿಷ್ಟರಾಗಿಯೇ ಉಳಿಯುತ್ತರೆ. ಶ್ರೇಷ್ಠರು ಶ್ರೇಷ್ಠರಾಗುತ್ತಾ ಹೋಗುತ್ತಾರೆ. ಶ್ರೇಷ್ಠರೆಂದರೆ ಪುರುಷ ಪ್ರಧಾನರು ಸಮಾಜದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಾ ಶಕ್ತರಾಗಿ ಸ್ವತಂತ್ರ್ಯವನ್ನು ತಮ್ಮದಾಗಿಸಿಕೊಂಡು, ಎಲ್ಲಾ ಅಧಿಕಾರ, ಆಡಳಿತ, ಹಕ್ಕುಗಳನ್ನು ಹಿಡಿತದಲ್ಲಿಟ್ಟುಕೊಂಡಿರುವುದರಿಂದ ಸಮಾಜದಲ್ಲಿ ಕನಿಷ್ಠರೆನಿಸಿಕೊಂಡ ಮಹಿಳೆಯರು ಮೇಲಿನ ಎಲ್ಲಾ ಸೌಕರ್ಯಗಳಿಂದ ವಂಚಿತರಾಗಿದ್ದಾರೆ. ಈ ರೀತಿಯಾಗಿ ಸಮಾಜದಲ್ಲಿ ಸ್ತ್ರೀ-ಪುರುಷರ ಮಧ್ಯೆ ಅಸಮಾನತೆ ಉಂಟಾಗಿರುವುದನ್ನು ಕಾನೂನಿನ ಮೂಲಕ ಸಂವಿಧಾನಾತ್ಮಕವಾಗಿ ದೊರೆಯುವ ಸಮಾನ ಹಕ್ಕುಗಳನ್ನು ಸ್ತ್ರೀಯೂ ಪಡೆದುಕೊಳ್ಳುವಂತೆ ಮಾಡಲು ಪ್ರತಿಯೊಬ್ಬ ಸ್ತ್ರೀ-ಪುರುಷನು ಚಿಂತಿಸುವಂತಹ ವಿಚಾರವಾಗಿದೆ.

ಸಮಾಜದ ಇನ್ನೊಂದು ಮುಖವಾದ ಕುಟುಂಬದಲ್ಲಿ ಗಂಡು-ಹೆಣ್ಣುಗಳ ಪೋಷಣೆಯಲ್ಲಿ ಮತ್ತು ಶಿಶುಗಳಿಗೆ ಮನಮೂಡಿಸುವ ಸೂಕ್ತರೀತಿಯ ತರಬೇತಿಗಳಲ್ಲಿ ಅಥವಾ ಶಿಶುಗಳಿಗೆ ಕೆಲಸ ಹೇಳುವ ರೀತಿಯಲ್ಲಿಯೇ ಬದಲಾವಣೆಗಳು ಉಂಟಾಗಿರುತ್ತವೆ. ಶಿಶುಹಂತದಿಂದಲೇ ಅಸಮಾನತೆಯ ಅಂತರ ಬೆಳೆಯಲು ಪೋಷಕರು ನೀಡುವ ಪ್ರಥಮ ಮಾರ್ಗದರ್ಶಿಯಾಗಿದೆ. ಹಾಗೆಯೇ ಮುಂದೊರೆದಂತೆ ಶಿಕ್ಷಣ, ತರಬೇತಿ, ಉದ್ಯೋಗ, ಅಧಿಕಾರ, ರಾಜಕೀಯ ವಲಯಗಳಲ್ಲಿಯೂ ಅಸಮಾನ ನೆಲೆಗಳು ಬೃಹತ್ ಪ್ರಮಾಣದಲ್ಲಿ ಬೆಳೆದುಕೊಂಡು ಬರುತ್ತಿವೆ. ಇಂದು ಕೂಡ ಈ ಎಲ್ಲಾ ವಲಯಗಳಲ್ಲಿ ಪುರುಷರು ಮಹಿಳೆಯರನ್ನು ಕಡೆಗಣಿಸಿ ತಾರತಮ್ಯದ ಭಾವನೆಯಿಂದ ಕಾಣುತ್ತಾರೆ. ಪುರುಷ ಕಲ್ಪಿತವಾಗಿ ಬೆಳೆದುಕೊಂಡು ಬಂದಂತ ಮೂಢನಂಬಿಕೆಗಳೆಂದರೆ, ಮಹಿಳೆ ಎಂದರೆ ಶಕ್ತಿ ಹೀನಳು, ಮೃದುಸ್ವಭಾವದವಳು, ಅಂಜುಬುರ್ಕಿ ಮತ್ತು ಸದಾ ಗಂಡನ ರಕ್ಷಣೆಯನ್ನು ಬಯಸುತ್ತಾಳೆ. ಲೈಂಗಿಕತೆಗೆ ದಾಸಿಯಾಗಿದ್ದಾಳೆ. ಮತ್ತು ಮೂಢ ನಂಬಿಕೆ, ರೂಢಿ ಸಂಪ್ರದಾಯಗಳಿಗೆ ಒಳಗಾಗಿದ್ದಾಳೆ. ಎನ್ನುವ ಪುರುಷ ಕಲ್ಪನೆಯನ್ನು ಮಹಿಳೆಯರ ಮೇಲೆ

ಪದೇ ಪದೇ ಹೇರುವುದರಿಂದ ಅವಳು ಶಿಕ್ಷಣ ಕಲಿಯುವುದರಲ್ಲಿ, ಜವಬ್ದಾರಿ ತೆಗೆದುಕೊಳ್ಳುವುದರಲ್ಲಿ, ಹಕ್ಕುಗಳನ್ನು ಚಲಾಯಿಸುವಲ್ಲಿ, ಅಧಿಕಾರದ ಚುಕ್ಕಾಣಿ ಹಿಡಿಯುವಲ್ಲಿ ಮತ್ತು ಸ್ವತಂತ್ರ್ಯವಾಗಿ ಬದುಕನ್ನು ಸಾಗಿಸುವಲ್ಲಿಯೂ ಅವಕಾಶ ವಂಚಿತರನ್ನಾಗಿಸಿದ್ದಾರೆ. ಈ ರೀತಿಯ ಅವಕಾಶ ವಂಚಿತರನ್ನಾಗಿಸುವುದಕ್ಕೆ ಕಾರಣವೇನು ಎನ್ನುವುದನ್ನು ಪರಿಶೀಲಿಸಬೇಕಾಗುತ್ತದೆ. ಹಾಗೆಯೇ ಸ್ತ್ರೀ-ಪುರುಷರ ಮಧ್ಯೆ ಇರುವ ಲಿಂಗ ತಾರತಮ್ಯದಿಂದ ನವಪೀಳಿಗೆಯ ಜನಾಂಗಕ್ಕೆ ಮಾರಕವಾಗುತ್ತದೆ. ಈ ರೀತಿಯ ತಾರತಮ್ಯವನ್ನು ಕುಟುಂಬದಲ್ಲಿ ಮಕ್ಕಳಿಗೆ ನೀಡುತ್ತಿರುವ ತರಬೇತಿಯ ಕಲಿಕೆಗಳು ಬದಲಾಗಬೇಕಾಗಿದೆ. ಹಾಗೂ ಮಹಿಳೆಯರ ಪ್ರಗತಿಗೆ ಅಡ್ಡಿ ಆತಂಕವಾಗಿರುವ ಸಾಮಾಜಿಕ ಪಿಡುಗುಗಳನ್ನು ಕಾನೂನಿನ ಮೂಲಕ ತಿದ್ದುಪಡಿಯಾಗಬೇಕಾಗಿದೆ. ಸಂವಿಧಾನಬದ್ಧವಾಗಿ ದೊರೆಯಬೇಕಾದ ಹಕ್ಕುಗಳನ್ನು ಮಹಿಳೆಯರು ಪಡೆಯಬೇಕಾಗಿದೆ. ಕಾನೂನಿನ ಮೂಲಕ ಸಮಾಜದಲ್ಲಿ ದೊರೆಯಬೇಕಾದ ಎಲ್ಲ ಸೌಲಭ್ಯಗಳು ದೊರೆತಾಗ ತನ್ನಷ್ಟಕ್ಕೆ ತಾನೇ ಸಬಲಳಾಗುತ್ತಾಳೆ. ಮತ್ತು ಸಮಾಜದ ಎಲ್ಲಾ ಶಕ್ತಿ ಸಾಮರ್ಥ್ಯಗಳನ್ನು ಹಾಗೂ ಯೋಜನೆಗಳನ್ನು ತನ್ನದಾಗಿಸಿಕೊಂಡಾಗ ಸ್ವಾವಲಂಬಿಗಳಾಗುತ್ತಾರೆ. ಅಂದಾಗ ಯಾವುದೇ ವಿಷಯದ ಬಗ್ಗೆ ಚರ್ಚಿಸುವ, ಪ್ರಶ್ನಿಸುವ, ನಿರ್ಣಯ ತೆಗೆದುಕೊಳ್ಳುವ ಮಟ್ಟದಲ್ಲಿರುತ್ತಾರೆ. ಏಕೆಂದರೆ ಮಹಿಳೆಯರು ಆರ್ಥಿಕ, ಸಾಮಾಜಿಕ, ಹಾಗೂ ರಾಜಕೀಯವಾಗಿ ಸಮರ್ಥಳಾಗಿ ಸ್ಥಾನಗಳನ್ನು ಪಡೆದುಕೊಳ್ಳುತ್ತಾಳೆ. ಒಂದು ವೇಳೆ ಸರಿಸಮಾನವಾಗಿ ಸ್ಥಾನಗಳನ್ನು ಪಡೆದುಕೊಂಡರೂ ವ್ಯಕ್ತಿತ್ವದ ವಿಕಾಸನಕ್ಕೆ ಯಾವುದೇ ವಲಯದಲ್ಲಾಗಲಿ ಸೂಕ್ತರೀತಿಯ ತರಬೇತಿ ಅತ್ಯಂತ ಅವಶ್ಯಕ ಮತ್ತು ಅಗತ್ಯವಾಗಿದೆ ಎನ್ನುವುದನ್ನು ಗುರುತಿಸಲು ಈ ಅಧ್ಯಯನವು ಮಹತ್ವದ್ದಾಗಿದೆ.

ಮಹಿಳೆಯರ ರಾಜಕೀಯ ಸಬಲೀಕರಣ ಒಟ್ಟು ಮಹಿಳೆಯರ ಸಬಲೀಕರಣದ ಒಂದು ಅಗತ್ಯವಾದ ಅಥವಾ ಅನಿವಾರ್ಯವಾದ ಅಂಗವಾಗಿದೆ. ಮಹಿಳೆಯರ ಜೀವನದಲ್ಲಿ ಹಲವಾರು ಬದಲಾವಣೆ ತರುವ ಮೂಲವೆಂದರೆ, ರಾಜಕೀಯದ ಒಲವು ಅತಿಮುಖ್ಯವಾಗಿದೆ. ಮತದಾನದ ಹಕ್ಕನ್ನು, ಪಡೆಯುವ ಮೊದಲ ಹಂತದ ರಾಜಕೀಯ ಸಬಲೀಕರಣ ತಾತ್ಕಾಲಿಕವಾಗಿ ಆಗಿದೆ. ಆದರೆ ಮತದಾನದ ಹಕ್ಕು ದೊರೆತಾಕ್ಷಣ ಮಹಿಳೆಯರಿಗೆ ರಾಜಕೀಯ ಬಲ ದೊರೆಯುತ್ತದೆ ಎನ್ನುವುದು ಕನಸಿನ ಮಾತಾಗುತ್ತದೆ. ಮಹಿಳೆಯರು ರಾಜಕಾರಣದ ನಿರ್ಣಾಯಕ ಹಂತಗಳಲ್ಲಿ ಸಕ್ರಿಯವಾಗಿ ಭಾಗವಹಿಸಲು ಮತ್ತು ಯೋಜನೆಗಳನ್ನು ಪಾಸುಮಾಡುವಲ್ಲಿ, ಮೀಸಲಾತಿಯಂತಹ ಸಮಸ್ಯೆಗಳನ್ನು ಚರ್ಚೆಮಾಡುವಲ್ಲಿ ಭಾಗವಹಿಸಲು ಮಹಿಳೆಯರು ಕಾಣಬೇಕಾದರೆ ರಾಜ್ಯ ಮತ್ತು ಲೋಕಸಭೆಗಳಲ್ಲಿ ಮಹಿಳಾ ಮೀಸಲಾತಿಯಿಂದ ಸ್ಥಾನಗಳನ್ನು ಕಾಯ್ದಿರಿಸಬೇಕಾಗುವುದು ಅಗತ್ಯವಾಗಿದೆ. ಅಂದಾಗ ಮಾತ್ರ ಮಹಿಳೆಯರು ರಾಜಕೀಯವಾಗಿ ಸಬಲಾಗುತ್ತಾರೆ ಎನ್ನುವುದು ಅಧ್ಯಯನದ ಮಹತ್ವವಾಗಿದೆ.

ಅಧ್ಯಾಯ ೨

ಸಮಾಜದ ವಿವಿಧ ಅಂಗ ಸಂಸ್ಥೆಗಳ ಪರಿಶೀಲನೆ

ಪ್ರಸ್ತುತವಲ್ಲಿ ಭಾರತ ದೇಶದ ಪರಿಸ್ಥಿತಿಯನ್ನು ಅವಲೋಕಿಸಿದಾಗ ಹೊಸ ಆರ್ಥಿಕ ನೀತಿಯ ಪರಿಣಾಮವಾಗಿ ಹೆಚ್ಚುತ್ತಿರುವ ನಿರುದ್ಯೋಗ ಏರುತ್ತಿರುವ ಬೆಲೆಗಳು ಪ್ರಜ್ವಲಿಸುತ್ತಿರುವ ಸಮಸ್ಯೆಗಳು, ಇವು ಎಲ್ಲಾ ಜನರನ್ನು ಕಾಡುತ್ತಿವೆ. ಅದರಲ್ಲಿಯೂ ಆರ್ಥಿಕ ನೀತಿಯ ಹೊಡೆತ ಮಹಿಳೆಯರ ಮೇಲೆ ನೇರವಾದ ಪ್ರಭಾವ ಬೀರುತ್ತದೆ. ಹಾಗೆಯೇ ಉದಾರೀಕರಣದ ಫಲವಾಗಿ ಜಾರಿಗೆ ಬರುತ್ತಿರುವ ಖಾಸಗೀಕರಣ ಹೆಚ್ಚು ಸಂಖ್ಯೆಯಲ್ಲಿ ಮಹಿಳೆಯರನ್ನು ಅಸಂಘಟಿತ ವಲಯಕ್ಕೆ ತಳ್ಳುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಅಬಲೆಯ ಸ್ಥಾನದಿಂದ ಅಬಲೆಯ ಸ್ಥಿತಿಯಿಂದ ಹೊರಬರುವ ಅವಕಾಶಗಳು ಬಹುಕಡಿಮೆಯಾಗಿವೆ. ಮಹಿಳೆ ಸಬಲೀಕರಣಗೊಳ್ಳಬೇಕಾದರೆ ಸರ್ಕಾರ ಜಾರಿಗೆ ತರುವ ಎಲ್ಲ ಯೋಜನೆಗಳಲ್ಲಿಯೂ ಮಹಿಳೆಯರಿಗೆ ವಿಶೇಷ ಸೌಲಭ್ಯ ನೀಡಬೇಕು. ಉದಾ : ಮಹಿಳೆ ಸಬಲಳು ಎನಿಸಿಕೊಳ್ಳಬೇಕಾದರೆ ಆಕೆಗೆ ವಿಶೇಷ ಸಾಲಸೌಲಭ್ಯಗಳನ್ನು ಒದಗಿಸುವಲ್ಲಿ ಶೇ.೫೦ರಷ್ಟು ಧನಸಹಾಯವನ್ನು ಕೊಟ್ಟಾಗ ಸ್ವಲ್ಪಮಟ್ಟಿಗಾದರೂ ಸಬಲರಾಗಬಹುದು. ಅಂದರೆ ದೊರೆತ ಸಾಲಸೌಲಭ್ಯಗಳ ಧನಸಹಾಯದಿಂದ ಸಣ್ಣ ಪುಟ್ಟ ಉದ್ದಿಮೆಗಳನ್ನು ಪ್ರಾರಂಭಿಸಿಕೊಂಡು, ಆರ್ಥಿಕವಾಗಿ ಗಟ್ಟಿಕೊಳ್ಳಬಹುದಾಗಿದೆ. ಸಬಲ ಎಂದರೆ, ಬಲಿಷ್ಠಗೊಳ್ಳುವುದು ಎನ್ನುವ ಅರ್ಥದಲ್ಲಿ ಬರುತ್ತದೆ. ಮೊದಲಿಗೆ ಮಹಿಳೆಯರಿಗೆ ಸಾಲಸೌಲಭ್ಯಗಳನ್ನು ಒದಗಿಸುವಾಗ ಧನಸಹಾಯವನ್ನು ನೀಡಿದರೆ ಮಹಿಳೆ ಸಬಲಗೊಳ್ಳಬಹುದು ಎನ್ನುವ ಅರ್ಥದಲ್ಲಿ ಹುಟ್ಟಿಕೊಂಡಿದೆ. ಆರ್ಥಿಕವಾಗಿ, ಸಾಮಾಜಿಕವಾಗಿ, ಕೌಟುಂಬಿಕವಾಗಿ, ಸಬಲಗೊಂಡಾಗ ಮಾತ್ರ ಅವಳು ಸಬಲಳೆನಿಸಿಕೊಳ್ಳುತ್ತಾಳೆ ಹೊರತು, ಕೇವಲ ರಾಜಕೀಯ ಮೀಸಲಾತಿಯಿಂದ ತಾಂತ್ರಿಕವಾಗಿ ಎರಡು-ಮೂರು ಶೀಟುಗಳನ್ನು ಕೊಟ್ಟು ಗೆಲ್ಲಿಸಿದ ತಕ್ಷಣ ಸಬಲೀಕರಣಗೊಳ್ಳುದಿಲ್ಲ. ಏಕೆಂದರೆ ಆ ಸ್ಥಾನಗಳಲ್ಲಿ ಮಹಿಳೆಯರು ಕೇವಲ ಪ್ರತಿನಿಧಿಯಾಗಿ ನಿಲ್ಲುತ್ತಾರೆ. ಆಡಳಿತ ನಿರ್ವಹಣೆ ಮಾಡುವವರು ಮತ್ತು ನಿರ್ಣಯಗಳನ್ನು ತೆಗೆದುಕೊಳ್ಳುವವರು ಗಂಡಸರೇ ಆಗಿರುತ್ತಾರೆ.

ಇಂತಹ ಆಡಳಿತ ನಿದರ್ಶನವನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಾಣಬಹುದಾಗಿದೆ. ಇಲ್ಲಿ ಮುಖ್ಯವಾಗಿ ಅರಿತುಕೊಳ್ಳಬೇಕಾಗಿರುವುದೆಂದರೆ ಮಹಿಳೆಯರಿಗೆ ಎರಡು-ಮೂರು ಸ್ಥಾನಗಳನ್ನು ಕೊಟ್ಟಾಕ್ಷಣ ಸಬಲೀಕರಣ ಆಗುವುದಿಲ್ಲ. ಆಸ್ಥಾನಗಳಲ್ಲಿ ಅವಳು ತನ್ನ ಸಾಮರ್ಥ್ಯವನ್ನು ಪ್ರಯೋಗಿಸಬೇಕಾದಂತಹ ಅವಕಾಶಗಳು ದೊರೆಯಬೇಕು. ಹಾಗಾದರೆ ಇಂತಹ ಸಾಮರ್ಥ್ಯ ಹೆಂಗಸಿನೊಳಗೆ ಯಾವಾಗ ಕೂಡಿಕೊಳ್ಳುತ್ತದೆ ಎನ್ನುವುದನ್ನು ಅಧ್ಯಯನದಲ್ಲಿ ಕಂಡುಕೊಳ್ಳಲಾಗುತ್ತದೆ. ಸಮಾಜದಲ್ಲಿ ಮಹಿಳೆಯರನ್ನು ಅಬಲೆ ಎಂದು

ಕರೆಯುತ್ತಾರೆ. ಅಥವಾ ನಿರ್ಣಯಿಸಿದ್ದಾರೆ. ಈ ಅಬಲೆಯ ಸ್ಥಿತಿಯನ್ನು ಅವಳು ಕಳೆದುಕೊಂಡು, ಸಬಲೆ ಎನಿಸಿಕೊಳ್ಳಬೇಕಾದರೆ, ಸ್ವತಃ ಸಬಲೆಯ ಪ್ರಕ್ರಿಯೆಯನ್ನು ಸಾಮಾಜಿಕ ವಲಯದಿಂದ ಪ್ರಾರಂಭಿಸಬೇಕು. ಅಂದರೆ ಸಾಮಾಜಿಕ ಚಿಂತನೆಗಳಿಂದ ಹಿಡಿದು, ರೂಢಿಸಂಪ್ರದಾಯಗಳು, ಧರ್ಮ, ದೇವತೆ ಎನ್ನುವ ಮೂಢನಂಬಿಕೆಯವರೆಗೆ ಬದಲಾಗಬೇಕು. ಮಾನವ ಬದುಕಿನ ಬಹುಮುಖ್ಯ ವಲಯಗಳಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳನ್ನು ಗಮನಿಸುತ್ತಾ ಅಧ್ಯಯನ ಮಾಡುವುದರ ಮುಖಾಂತರ ಮಹಿಳೆಯರು ಅಬಲೆ ಎಂದು ಯಾಕೆ ಅನಿಸಿಕೊಳ್ಳುತ್ತಾಳೆ. ಅವುಗಳ ಹಿಂದಿನ ಕಾರಣಗಳು ಏನು? ಇಂತಹ ಬೇರೂರಿದಂತಹ ಸಾಮಾಜಿಕ ಚಿಂತನೆಗಳನ್ನು ಮಹಿಳಾ ಸಮುದಾಯಗಳು ಇಂತವುಗಳನ್ನು ಹೇಗೆ ಎದುರಿಸಬೇಕು ಎನ್ನುವುದು ಮುಖ್ಯ ಪ್ರಶ್ನೆಯಾಗಿದೆ. ಯಾತಕ್ಕಾಗಿ ಹೆಂಗಸಿಗೆ ಅಬಲೆ ಎನ್ನುವ ಪಟ್ಟವನ್ನು ಕಟ್ಟಿದ್ದಾರೆ. ಮಹಿಳೆ ಅಬಲೆ ಎನ್ನುವ ಪಟ್ಟವನ್ನು ಯಾಕೆ ಒಪ್ಪಿಕೊಳ್ಳಬೇಕಾಗುತ್ತದೆ. ಇಂತಹ ಒತ್ತಡ ಗಳಿಂದ ಹೊರ ಬರಲೇ ಬೇಕೆಂದರೆ ಮಹಿಳೆಯರು ಯಾವ ಕ್ರಮಗಳನ್ನು ಕೈಗೊಳ್ಳಬೇಕು ಎನ್ನುವ ಯೋಚನೆಗಳನ್ನು ಮತ್ತು ಚಿಂತನೆಗಳನ್ನು ಪ್ರಸ್ತಾಪಿಸಬೇಕಾಗಿದೆ. ಈ ಮೇಲಿನ ಮೂರು ವಲಯಗಳಲ್ಲಿ ಹೆಂಗಸಿನ ಬದುಕನ್ನು ಕುರಿತು ಅಧ್ಯಯನವು ಗಮನಹರಿಸಲಾಗುತ್ತದೆ. ಅಂದರೆ ಬದುಕಿನ ವಿವರಗಳನ್ನು ಗಮನಿಸಬೇಕಾಗುತ್ತದೆ. ಮಹಿಳೆಯರಿಗೆ ಅಬಲೆಯ ಸ್ಥಿತಿಗತಿ ಯಾಕೆ ಬಂತು, ಅವಳು ಅವುಗಳನ್ನು ಒಪ್ಪಿಕೊಳ್ಳಬೇಕಾದುದ್ದು ಯಾಕೆ, ಮತ್ತು ಈಗ ಅವಳು ಅವುಗಳಿಂದ ಹೊರಗಡೆ ಬರಬೇಕಾದರೆ ಏನು ಮಾಡಬೇಕು ಎನ್ನುವುದನ್ನು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಸ್ಥೂಲವಾಗಿ ವಿವರಿಸಲಾಗಿದೆ.

೨.೧. ಸಾಮಾಜಿಕ ವಲಯ

ಸಮಾಜ ಅಥವಾ ಕುಟುಂಬ ಎನ್ನುವ ಸಂಸ್ಥೆ ಹುಟ್ಟಿಕೊಳ್ಳುವುದಕ್ಕಿಂತ ಮುಂಚೆ ಸ್ತ್ರೀ-ಪುರುಷರು ಕೂಡಿಕೊಂಡೇ ಗುಡ್ಡ ಬೆಟ್ಟಗಳಲ್ಲಿ, ಪ್ರಾಣಿಗಳನ್ನು ಬೇಟೆಯಾಡುತ್ತಾ ತಮಗೆ ಬೇಕಾದ ದಿನನಿತ್ಯದ ಅಹಾರವನ್ನು ಆಯಾ ಸಮಯಕ್ಕೆ ಸಾಲುವಷ್ಟು ಅಥವಾ ಬೇಕಾದಷ್ಟು ಆಹಾರವನ್ನು ಮಾತ್ರ ಹುಡುಕಿಕೊಳ್ಳುತ್ತಿದ್ದರು. ಇಲ್ಲಿ ಯಾವುದೇ ರೀತಿಯ ಆಹಾರವನ್ನು ದಾಸ್ತಾನು ಮಾಡುವಂತ ಪದ್ಧತಿಯಾಗಲಿ ಅಥವಾ ಇಂತಹ ವಸ್ತು ನನಗೆ ದೊರೆಯಬೇಕು ಎನ್ನುವ ಆಶೆಯಾಗಲಿ, ಅವರಲ್ಲಿ ಇರಲಿಲ್ಲ. ಹಾಗೆಯೇ ಮುಂದೊರೆಯುತ್ತಾ ಮಾನವನ ಜನಾಂಗವು ಗುಂಪು ಗುಂಪಾಗಿ ನದಿಗಳ ದಡದಲ್ಲಿ ಅಂದರೆ ಶುದ್ಧವಾದ ನೀರು, ಮತ್ತು ಫಲವತ್ತಾದ ಭೂಮಿಯುಳ್ಳ ನದಿ ತೀರಗಳಲ್ಲಿ ವಾಸಿಸಿ ತಮ್ಮ ಸುತ್ತಮುತ್ತಲಿನ ಫಲವತ್ತಾದ ಭೂಮಿಯಲ್ಲಿ ಮಹಿಳೇಯರು ಕೃಷಿ ಮಾಡಿ ಆಹಾರದಾನ್ಯಗಳನ್ನು ಬೆಳೆಸಲು ಪ್ರಾರಂಭಿಸಿದರು. ಮೊದಲು ಕೃಷಿಯಲ್ಲಿ ಮಹಿಳೆಯರು ಮಾತ್ರ ತೊಡಗಿದ್ದರು. ಪುರುಷರು ಮನೆಯ ಹೊರಗೆ ಅಂದರೆ

ದಟ್ಟವಾದ ಅರಣ್ಯ ಪ್ರದೇಶದಲ್ಲಿ ಪ್ರಾಣಿಗಳನ್ನು ಬೇಟೆಯಾಡಿ, ಬೇಟೆಯನ್ನು ಮನೆಗೆ ತಂದಾಗ ಅದನ್ನು ಆಹಾರವಾಗಿ ತಯಾರು ಮಾಡುವ ಕೆಲಸ ಮಹಿಳೆಯರದಾಗಿತ್ತು. ಹೀಗೆಯೇ ಮುಂದೊರೆದು ಪುರುಷನು ಕೃಷಿಯಲ್ಲಿ ತೊಡಗಿದಾಗ "ಸ್ತ್ರೀ-ಪುರುಷರ ನಡುವೆ ಭೇದ ಕಲ್ಪನೆಯು ಮಾನವ ಕೃಷಿ ಜೀವನದಲ್ಲಿ ಬಳಕೆಯಾದಾಗ 'ನಾನು' ಎಂದು ಇದ್ದದ್ದು 'ನನ್ನದು' ಎಂದು ಪರಿವರ್ತಿತವಾಯ್ತು.[೧] ಅಲ್ಲಿಂದ ಮುಂದೆ ಕುಟುಂಬ ಹಾಗೂ ಪ್ರಭುತ್ವದ ನೆಲೆಯವರೆಗೂ 'ಅಧಿಕಾರ'ದ ಕಲ್ಪನೆ ಬೇರೂರುತ್ತಾ ಬಂತು. ತನ್ನ ಅಧಿಕಾರಕ್ಕೆ ಒಳಗಾದ ವ್ಯಕ್ತಿಯನ್ನು ತನಗಿಂತ ಕನಿಷ್ಟವೆಂದು ವಿವರಿಸಿಕೊಳ್ಳುವ ಯತ್ನವಾಗಿ ಪುರುಷತ್ವದ ಗುಣಗಳೆಂದು ಧೈರ್ಯ, ಸಾಹಸ, ವೀರತ್ವ, ದೈಹಿಕಬಲ, ಭೌದ್ಧಿಕ ವಿವೇಚನೆ, ತರ್ಕ ವ್ಯವಹಾರಿಕತೆ, ಮುಂದಾಳುತನ ಇತ್ಯಾದಿಗಳನ್ನು ವಿವರಿಸಿಕೊಳ್ಳಲಾಯಿತು. ಪಶುಗಳನ್ನು ಪಳಗಿಸಿ ಕೃಷಿಗೆ ಕಾರಣೀಭೂತಳಾದ ಮಹಿಳೆಯ ಕೈಯಲ್ಲಿಯ ಉತ್ಪಾದನಾ ಸಾಧನಗಳು ಪುರುಷನ ಕೈಗೆ ವರ್ಗಾಯಿಸಿದ್ದೆ ಅವಳ ಗುಲಾಮಿತನಕ್ಕೆ ಅಥವಾ ಅಬಲೆತನಕ್ಕೆ ಕಾರಣವಾಗಿದೆ. ಸಮಾಜದಲ್ಲಿ ಕುಟುಂಬ ವ್ಯವಸ್ಥೆಯು ಮುಖ್ಯವಾಗಿ ಎರಡು ರೀತಿಯಲ್ಲಿ ವಿಂಗಡನೆಗೊಂಡಿವೆ. ಒಂದು ಪುರುಷ ಪ್ರಧಾನ ಕುಟುಂಬ ವ್ಯವಸ್ಥೆ, ಮತ್ತೊಂದು ಮಾತೃಪ್ರಧಾನ ಕುಟುಂಬ ವ್ಯವಸ್ಥೆ ಎಂದು ವಿಂಗಡಿಸಬಹುದು. ಅಥವಾ "ಅಧಿಕಾರ ಕೇಂದ್ರವನ್ನು ಆಧಾರವನ್ನಾಗಿಟ್ಟುಕೊಂಡು ಕುಟುಂಬಗಳನ್ನು ಪಿತೃಪ್ರಧಾನ ಅಥವಾ ಮಾತೃ ಪ್ರಧಾನ ಎಂಬ ಎರಡು ಬಗೆಗಳನ್ನು ವಿಂಗಡಿಸಬಹುದು".[೨]

ಪುರುಷ ಪ್ರಧಾನ ಕುಟುಂಬಗಳಲ್ಲಿ ಕುಟುಂಬದ ಯಜಮಾನಿಕೆ ಅಥವಾ ಒಡೆತನ ಪುರುಷನ ಅಧೀನದಲ್ಲಿರುತ್ತದೆ. ಇಲ್ಲಿ ವಂಶಾವಳಿಯನ್ನು ಪುರುಷರ ಮೂಲಕ ಗುರುತಿಸಲಾಗುತ್ತದೆ. ಪಿತೃಪ್ರಧಾನ ಕುಟುಂಬಗಳಲ್ಲಿ ಹೆಣ್ಣು ವಿವಾಹದ ನಂತರ ತನ್ನ ವಾಸಸ್ಥಾನವನ್ನು ಗಂಡನ ಮನೆಯಲ್ಲಿ ಪಡೆಯುತ್ತಾಳೆ. ಇಲ್ಲಿ ಆಸ್ತಿಯ ಹಂಚಿಕೆಯು ಕೂಡ ಪುರುಷರಿಂದ ಪುರುಷರಿಗೆ ವರ್ಗಾವಣೆಯಾಗುತ್ತದೆ. ಇಲ್ಲಿ ಹೆಂಗಸಿಗೆ ಯಾವುದೇ ರೀತಿಯ ಭದ್ರವಾದ ಸ್ಥಾನಗಳು ಇರುವುದಿಲ್ಲ. ಒಟ್ಟಾರೆಯಾಗಿ ಪುರುಷ ಪ್ರಧಾನ ಕುಟುಂಗಳಲ್ಲಿ ಸ್ತ್ರೀಯು ಶೋಷಣೆಗೆ ಒಳಗಾಗುತ್ತಾಳೆ ಎಂದು ಮಹಿಳಾ ಅಧ್ಯಯನಕಾರರು ಮತ್ತು ಸ್ತ್ರೀವಾದಿಗಳು ಅಧ್ಯಯನಗಳ ಮೂಲಕ ಕಂಡುಕೊಂಡಿದ್ದಾರೆ.

ಮಾತೃಸ್ಥಾನೀಯ ಕುಟುಂಬಗಳಲ್ಲಿ ಕುಟುಂಬದ ಅಧಿಕಾರವನ್ನು ಅಥವಾ ಯಜಮಾನಿಕೆಯನ್ನು ಸ್ತ್ರೀಯು ಹೊಂದಿರುತ್ತಾಳೆ. ಇಲ್ಲಿ ಯಜಮಾನಿಕೆ ಎನ್ನುವುದು ತಾಯಿಂದ ಮಗಳಿಗೆ ಹಸ್ತಾಂತರವಾಗುತ್ತದೆ. ಅಂದರೆ ಹೆಣ್ಣಿನಿಂದ ಹೆಣ್ಣಿಗೆ ಅಧಿಕಾರ/ಯಜಮಾನಿಕೆ ದೊರೆಯುತ್ತದೆ ಹೊರೆತು ಮಗನಿಗೆ ಅಥವಾ ಗಂಡನಿಗಲ್ಲ. ಇಂತಹ ಕುಟುಂಬಗಳಲ್ಲಿ ಹೆಣ್ಣು ವಿವಾಹವಾದನಂತರ ತನ್ನ ತಾಯಿಯ ಮನೆಯಲ್ಲಿಯೇ ತನ್ನ ಜೀವನವನ್ನು/ಬದುಕನ್ನು ಸಾಗಿಸುತ್ತಾಳೆ. ಆಸ್ತಿಯ ಹಂಚಿಕೆಯು ಸಹ ತಾಯಿಯಿಂದ ಮಗಳಿಗೆ

ವರ್ಗಾವಣೆಯಾಗುತ್ತದೆ. ಹಾಗೂ "ವಂಶಾವಳಿಯನ್ನು ಮಾತೃಮೂಲದಿಂದ ಗುರುತಿಸುವುದು ಮಾತೃಪ್ರಧಾನ ಕುಟುಂಬಗಳ ಲಕ್ಷಣ."[೩] ಒಟ್ಟಾರೆಯಾಗಿ ಮಾತೃ ಪ್ರಧಾನ ಕುಟುಂಬಗಳಲ್ಲಿ ಸ್ತ್ರೀ ಶೋಷಣೆಯ ಪ್ರಮಾಣ ಬಹುಕಡಿಮೆ. ಮಾತೃ ಪ್ರಧಾನ ಕುಟುಂಬಗಳು ಹುಟ್ಟಿಕೊಂಡಿದ್ದು, "ಬುಡಕಟ್ಟಿನಲ್ಲಿ ಸ್ತ್ರೀಯರ ಸಂಖ್ಯೆಯ ಕೊರತೆಯುಂಟಾಗಿ ಇತರ ಬಣಗಳಿಂದ ಸ್ತ್ರೀಯರನ್ನು ಬಲವಂತವಾಗಿ ಅಪಹರಿಸುವ ಪದ್ಧತಿಯು ಮೊದಲಾಯಿತು. ಆದ್ದರಿಂದ ಬಹಿರ್ ವಿವಾಹ ಪದ್ಧತಿ ಇದ್ದ ಕುಲಿಗಳಲ್ಲಿ ಮೂಲವಾಗಿ ಬಹುಪತ್ನಿತ್ವ ಪದ್ಧತಿಯನ್ನು ಅನುಸರಿಸುತ್ತಿದ್ದ ಮಾತೃವಂಶೀಯ ಕುಟುಂಬವೇ ಆಗಿದ್ದಿತು ಎಂದು ತಿಳಿಯಬೇಕೆಂದು ಮ್ಯಾಕ್ ಲೇನ್ನಾನ್ ಅಭಿಪ್ರಾಯ."[೪] ಪಿತೃ ಪ್ರಧಾನ ಕುಟುಂಬಗಳಲ್ಲಿ ಮಹಿಳಯರಿಗೆ ಯಾವುದೇ ರೀತಿಯ ಅಧಿಕಾರವಾಗಲಿ ಮತ್ತು ಆರ್ಥಿಕತೆಯ ಹತೋಟಿಯಾಗಲಿ, ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಅಸಮರ್ಥಳನ್ನಾಗಿಸಿವೆ. ಮಾತೃಸ್ತಾನೀಯ ಕುಟುಂಬಗಳಲ್ಲಿ ವಂಶವನ್ನು ಗುರುತಿಸುವುದು ಸ್ತ್ರೀಯರ ಮೂಲಕ ಆದರೆ ಅಲ್ಲಿಯೂ "ರಾಜಕೀಯ ಅಧಿಕಾರ ನಿಲ್ಲುವುದು ಪುರುಷರ ಕೈಯಲ್ಲೇ, ಭೂಮಿ, ಆಸ್ತಿ, ಸಂಪತ್ತು ಅನುವಂಶಿಕವಾಗಿ ಮಹಿಳೆಯರ ಮೂಲಕವಾದರೂ ಸಹ ಅದರ ನಿರ್ವಹಣೆಯು ಪುರುಷರದ್ದು."[೫] ಈ ಮಾತೃ ಪ್ರಧಾನ ಕುಟುಂಬಗಳಲ್ಲಿಯೂ ಸಹ ಹೆಸರಿಗೆ ಮಾತ್ರ ಅಧಿಕಾರ ಅಥವಾ ಆಸ್ತಿಯ ಹಂಚಿಕೆಯು ಹೆಣ್ಣಿನಿಂದ ಹೆಣ್ಣಿಗೆ ಹೋಗುತ್ತದೆ. ಆದರೆ ಅದರ ಆಡಳಿತದ ಸೂತ್ರಧಾರಿ ಪುರುಷನೇ ಆಗಿರುತ್ತಾನೆ. ಈ ರೀತಿಯ ಹಿಡಿತದಿಂದ ಹೆಂಗಸರನ್ನು ಮಾತೃಸ್ಥಾನೀಯ ಮತ್ತು ಪಿತೃಸ್ತಾನೀಯ ಕುಟುಂಬಗಳಲ್ಲಿ ಅಬಲೆಯರನ್ನಾಗಿ ಇರಿಸಿದ್ದಾರೆ.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕೊಸ್ಕರ ವಿವಾಹ ಎನ್ನುವ ಸಮಸ್ಥೆಯನ್ನು ರೂಪಿಸಿಕೊಂಡು, ವಿವಾಹ ಆದ ಮಹಿಳೆಯರನ್ನು ಸಂಪೂರ್ಣವಾಗಿ ತಮ್ಮ ಹತೋಟಿಯಲ್ಲಿ ಇಟ್ಟುಕೊಳ್ಳುವುದಕ್ಕಾಗಿ 'ಶೀಲ' ಎನ್ನುವ ಕಲ್ಪನೆಯನ್ನು ಸೃಷ್ಟಿಸುತ್ತಾರೆ. ಈ ರೀತಿಯ ಕಲ್ಪನೆಯಿಂದ ಹೆಣ್ಣನ್ನು ಸಂಪೂರ್ಣವಾಗಿ ಅಂದರೆ ದೇಹ, ಬುದ್ಧಿ, ಮನಸ್ಸು ಒಟ್ಟಾರೆಯಾಗಿ ಅವಳ ವ್ಯಕ್ತಿತ್ವವನ್ನು ಗಂಡಸು ಅಧೀನದಲ್ಲಿಟ್ಟುಕೊಂಡು ಅವಳನ್ನು ಅಬಲೆಯನ್ನಾಗಿಸುತ್ತಾರೆ. ಶೀಲ ಅಂದರೆ ಒಂದು ಹೆಣ್ಣು ಮದುವೆಯಾಗುವುದಕ್ಕಿಂತ ಮುಂಚೆ ಲೈಂಗಿಕವಾಗಿ ಯಾವನೇ ಪುರುಷನನ್ನು ಕುರಿತು ಅಲೋಚನೆ ಮಾಡಬಾರದು. ಮತ್ತು ಮದುವೆಯಾದ ನಂತರ ತನ್ನ ಗಂಡನನ್ನು ಬಿಟ್ಟು ಬೇರೊಬ್ಬ ಗಂಡಸಿನ ಬಗ್ಗೆ ಆಲೋಚಿಸಬಾರದು. ಅಂದರೆ ಬೇರೊಬ್ಬರ ಜೊತೆ ಲೈಂಗಿಕ ಸಂಪರ್ಕ ಹೊಂದಬಾರದು. ಪತಿಯೇ ಪರದೈವ ಎಂದು ಒಪ್ಪಿಕೊಳ್ಳುವಂತೆ ಈ ನಮ್ಮ ಸಮಾಜವು ಅನೇಕ ಒತ್ತಡಗಳನ್ನು ತರುತ್ತಿವೆ. ಒಂದು ಹೆಣ್ಣು ಒಬ್ಬ ಗಂಡಿಗೆ ಮೀಸಲು ಎನ್ನುವಂತೆ ಮಾಡಿದ್ದಾರೆ. ವಿವಾಹದ ನಂತರ ಕುಟುಂಬವನ್ನು ರಚನೆ ಮಾಡಿಕೊಳ್ಳುವಂತೆ ಮಾಡಿ ನಂತರ ವಂಶದ ಕುಡಿಯನ್ನು ಬಯಸುತ್ತಾರೆ. ಇಲ್ಲಿ ಹೆಣ್ಣಿನ ದೇಹ,

ಬುದ್ಧಿ, ಮನಸ್ಸು ಇವುಗಳನ್ನು ಪುರುಷ ಅಧೀನದಲ್ಲಿ ಇರಿಸಿಕೊಂಡಿರುವುದರಿಂದ, ಸಂತಾನದ ಮೇಲೆ ಕೂಡ ತನ್ನ ಆಕ್ರಮಣ ಮಾಡಿದ್ದಾನೆ. ಸಮಾಜದ ರೂಢಿಸಂಪ್ರದಾಯಗಳನ್ನು ಮಹಿಳೆಯರ ಮೇಲೆ ಹೇರಿರುವುದರಿಂದ, ಪುರುಷರು ಹೇಳಿದ ರೀತಿಯಲ್ಲಿ ಅವಳು ತನ್ನ ಬುದ್ಧಿ ಮನಸ್ಸುಗಳನ್ನು ಉಪಯೋಗಿಸಿಕೊಳ್ಳುವ ಸ್ಥಿತಿಗೆ ತರುತ್ತಾರೆ. ಅಥವಾ ಅವಳೇ ಸ್ವಯಂ ಆಗಿ ಸಾಮಾಜಿಕ ರೂಢಿ ಸಂಪ್ರದಾಯಗಳನ್ನು ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ಸಾಮಾಜಿಕ ವಲಯಗಳಲ್ಲಿ ಮೊದಲು ಅಬಲೆ ಎನಿಸಿಕೊಳ್ಳುವುದೇ ಈ ಹಂತದಲ್ಲಿ, ವಿವಾಹ ನಿಯಮಗಳು ಸಹ ಹೆಂಗಸರನ್ನು ಅಬಲೆಯನ್ನಾಗಿಸುತ್ತವೆ. ವಿವಾಹದಿಂದಲೇ ಅಲ್ಲ ಅವಳು ಹುಟ್ಟಿನಿಂದಲೂ ಹಿಡಿದು ಸಾಯುವವರೆಗೆ ಅವಳ ಮೇಲೆ ಹಲವಾರು ನಿಯಮಗಳನ್ನು ಅಂದರೆ ಶೀಲ, ಪಾತಿವ್ರತ್ಯ, ತಾಯಿತನ ಎನ್ನುವ ಬಂಧನಗಳಿಗೆ ಒಳಗಾಗಿಸುತ್ತವೆ.

ವಿವಾಹದ ಸುತ್ತಮುತ್ತಲಿರುವ ಬಹು ಉಪಸಂಸ್ಥೆಗಳು ಹೆಂಗಸಿನ ಬದುಕಿನುದ್ದಕ್ಕೂ ಅನೇಕ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಉದಾ : ಶೀಲದ ಸಮಸ್ಯೆ, ವಂಶದ ಸಮಸ್ಯೆ, ಆಸ್ತಿಯ ಸಮಸ್ಯೆ, ಅತ್ಯಾಚಾರ, ವರದಕ್ಷಣೆ, ವಧುದಹನ ಇತ್ಯಾದಿಗಳು. "ಹೆಣ್ಣಿನ ಬಗ್ಗೆ ನಮ್ಮ ಸಮಾಜ ತಳೆದಿರುವ ಧೋರಣೆಯ ಸಲುವಾಗಿಯೇ ಪ್ರತಿವರ್ಷ ೨೦ ಲಕ್ಷ ಸ್ತ್ರೀಭ್ರೂಣ ಹತ್ಯೆ ನಡೆಯುತ್ತಿದೆ. ಈ ಭ್ರೂಣ ಹತ್ಯೆಯನ್ನು ತಡೆಯುವುದಕ್ಕಾಗಿಯೇ ಶಾಸನವನ್ನು ಮಾಡಿದ್ದರೂ ಈ ಹತ್ಯೆಗಳು ನಿರಂತರವಾಗಿ ನಡೆಯುತ್ತಿವೆ. ಪ್ರತಿ ೨೬ ನಿಮಿಷಕ್ಕೊಂದು ಮಹಿಳೇಯರ ಮಾನಭಂಗ, ಪ್ರತಿ ೩೬ ನಿಮಿಷಕ್ಕೊಂದು ಅತ್ಯಾಚಾರ ಪ್ರಕರಣ, ಪ್ರತಿ ೪೩ ನಿಮಿಷಕ್ಕೊಂದು ಅಪಹರಣ, ಪ್ರತಿ ೫೧ ನಿಮಿಷಕ್ಕೊಂದು ಚುಡಾಯಿಸುವ ಪ್ರಕರಣ, ಪ್ರತಿ ೧೦೨ ನಿಮಿಷಕ್ಕೊಂದು ವರದಕ್ಷಿಣೆಯ ಸಾವು. ಪ್ರತಿ ೩೩ ನಿಮಿಷಕ್ಕೊಂದು ಕ್ರೌರ್ಯ, ಹೀಗೆ ದಿನೇ ದಿನೇ ಈ ಸಂಖ್ಯೆ ಹೆಚ್ಚಾಗುತ್ತಿದೆಯೇ ಹೊರತು ಕಡಿಮೆಯಾಗುತ್ತಿಲ್ಲ"[೬] ಹೆಣ್ಣು ವಿವಾಹವಾದ ನಂತರ ಗಂಡ ರೋಗಿಯೇ, ನಪುಂಶಕನೇ, ಅಥವಾ ಕುಡುಕನೇ ಆಗಿರಲಿ ಅವಳು ಅವನನ್ನು ದೇವರಿಗೆ ಸರಿಸಮಾನವಾಗಿ ಕಾಣಬೇಕು ಎಂದು ಪತ್ನಿ ಪತಿಯ ನಿಷ್ಠೆಯಾಗಿರಬೇಕೆಂದು. ಸಮಾಜವು ಮೌಖಿಕವಾಗಿ ಹೇಳುತ್ತಾ ಬರುತ್ತಿದೆ. ನಂತರ ಗಂಡ ಇರಲಿ ಇರದೇ ಹೋಗಲಿ ಪತಿ ಪರಮೇಶ್ವರ ಎಂಬ ಕಲ್ಪನೆ ಮೂಡಿಸಿದ್ದಾರೆ. ಅಂದರೆ ಸತ್ತ ಗಂಡನೆ ಮುಂದಿನ ಜನ್ಮಗಳಲ್ಲೂ ತನಗೆ ದೊರಕುತ್ತಾನೆ ಎನ್ನುವ ಮೂಢನಂಬಿಕೆಗಳನ್ನು ಸ್ತ್ರೀಯು ಅಳವಡಿಸಿಕೊಳ್ಳುವಂತೆ ಮಾಡಿ ಅವಳ ಸ್ವಯಂ ತನ್ನ ಪತಿಯ ಚಿತೆಯ ಮೇಲೆ ಕುಳಿತು ಪತ್ನಿಯೂ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಾರೆ.

ಈ ರೀತಿಯ ಅನಿಷ್ಠ ಪದ್ಧತಿಗಳನ್ನು ಶಾಸನಗಳು ನಿಷೇಧಿಸುವುದರಿಂದ ವೈಧವ್ಯ ಅಂತಹ ಪದ್ಧತಿಗಳು ಹುಟ್ಟಿಕೊಂಡವು. ಈ ಪದ್ಧತಿಯಿಂದ ಹೆಣ್ಣು ಜೀವನ ಪರಿಯಂತ ದುಃಖದ ಕಣ್ಣೀರಿನಲ್ಲಿಯೇ ಮುಳಗ

ಬೇಕಾದ ಪರಿಸ್ಥಿತಿಗಳಿವೆ. ಉದಾ : ವಿಧವೆಯಾದವಳು ಸಮಾಜದಲ್ಲಿ ರೂಪವತಿಯಾಗಿ ಕಾಣಬಾರದು ಎನ್ನುವ ದೃಷ್ಟಿಯಿಂದ ಅವಳಿಗೆ ತಲೆಬೋಳಿಸುತ್ತಾರೆ, ಬಣ್ಣ ಬಣ್ಣದ ಸೀರೆಗಳಿಗೆ ವಿಧೇಯ ಹೇಳಿ ಬಿಳಿಯ ಸೀರೆಗಳನ್ನು ಧರಿಸುವಂತೆ ಮಾಡುತ್ತಾರೆ. ಕೈಯಲ್ಲಿನ ಬಳೆಗಳನ್ನು ಒಡೆದು, ಹಣೆಯ ಮೇಲಿನ ಕುಂಕುಮ ಕೆಡಸಿ, ಒಂದೊಪ್ಪತ್ತು ಉಪವಾಸ ಇರುವಂತೆ ನಿಯಮಗಳನ್ನು ಹೇರುತ್ತಾರೆ. ಮತ್ತು ವಿಧವೆಯರನ್ನು ಯಾವುದೇ ಶುಭ ಕಾರ್ಯದಲ್ಲಿ ಪಾಲ್ಗೊಳ್ಳದಂತೆ ಮಾಡುತ್ತಾರೆ. ಇಂತಹ ಹಲವಾರು ಅನಿಷ್ಟ ಪದ್ಧತಿಗಳು ಇಡೀ ಅವಳ ಬದುಕಿನ ಮೇಲೆ ನಿಯಂತ್ರಣವನ್ನು ಹೇರುವಂತಹ ನಿಯಮಗಳು ಹೆಂಗಸಿನ ಬಲವನ್ನು ಅಥವಾ ಶಕ್ತಿ ಸಾಮರ್ಥ್ಯಗಳನ್ನು ತನ್ನದಾಗಿ ಉಳಿಸಿಕೊಳ್ಳುವುದಕ್ಕೆ ಅವಳಿಗೆ ಸಾಧ್ಯವಾಗದಂತೆ ಮಾಡಿವೆ. ಹೀಗಾಗಿ ಅವಳು ಅಬಲೆಯ ಸ್ಥಿತಿಯನ್ನು ಎದುರಿಸುತ್ತಿದ್ದಾಳೆ. ಮತ್ತು ವರದಕ್ಷಿಣೆಯಂತಹ ಪಿಡುಗು ಒಂದು ಕಡೆ ವರವಾಗಿ ಕಂಡುಬರುವುದು ಉಂಟು. "ವರದಕ್ಷಿಣೆಯ ಬೆಳೆ ಬೆಳೆಯುತ್ತಾ ಹುಡುಗಿಯರ ಮದುವೆಯ ವಯಸ್ಸು ಕೂಡ ಹೆಚ್ಚುತ್ತಲೇ ಹೋಗಬೇಕಾಯಿತು. ಇದು ಕೂಡ ಹುಡುಗಿಯರ ಶಿಕ್ಷಣಾವಕಾಶಕ್ಕೆ ಕಾರಣವಾಗಿ ಒದಗಿಬಂದಿತೆಂಬುದು ಗಮನಾರ್ಹ."[೭]

ಇಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳಿಗೆ ಅಥವಾ ಒತ್ತಡಗಳಿಗೆ ಹೆಂಗಸು ಯಾಕೆ ಒಳಗಾಗುತ್ತಿದ್ದಾಳೆಂದರೆ, ಸಾಮಾಜಿಕ ಚಿಂತನೆಗಳಾದ, ಸತಿಸಹಗಮನ, ವಿಧವಾ ಪದ್ಧತಿ, ಶೀಲರಕ್ಷಣೆ, ಪಾತಿವ್ರತ್ಯ, ಇನ್ನು ಮುಂತಾದವುಗಳಲ್ಲಿ ಯಾವುದೇ ಒಂದನ್ನು ಕ್ಷಣ ಮಾತ್ರಕ್ಕೆ ನಿರಾಕರಿಸಿದಾಗಲೂ ಸಹ ಅವಳು ಸಮಾಜದಲ್ಲಿ ಅತ್ಯಂತ ಗಂಭೀರವಾದ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಅಥವಾ ಸಾಮಾಜಿಕ ಚಿಂತನೆಗಳು ಎದುರಾಗುತ್ತಿವೆ. ಮತ್ತು ಪುರುಷ ಪ್ರಧಾನರು ಅವಳ ಬದುಕನ್ನು ಅಸಹನೀಯವಾಗುವಂತೆ ಮಾಡುತ್ತಾರೆ. ಉದಾ : ಶೀಲಕಳೆದು ಕೊಂಡವಳನ್ನು ಸಮಾಜದಲ್ಲಿ ಕೀಳೂ ದೃಷ್ಟಿಯಿಂದ ಕಾಣುತ್ತಾರೆ. ಈ ಶೀಲಹರಣವಾಗಿರುವುದಕ್ಕೆ ಮೂಲ ಕಾರಣ ಕರ್ತನಾದ ಪುರುಷನು ಎಲ್ಲಿಯೂ ಬೆಳಕಿಗೆ ಬರುವುದಿಲ್ಲ. ಇಲ್ಲಿ ಹೆಂಗಸು ಮಾತ್ರ ಕಾಣಿಸಿಕೊಳ್ಳುತ್ತಾಳೆ. ಹಾಗೆಯೇ ವಿಧವಾ ನಿಯಮಗಳನ್ನು ಮೀರಿದಾಗ ಅಥವಾ ಪಾಲಿಸದೇ ಹೋದಾಗ ಹೆಂಗಸರು ಸಮಾಜದ ನೂರಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಈ ರೀತಿಯ ಪದ್ಧತಿಗಳು ಬಹಳ ಕಷ್ಟಕರವಾಗಿವೆ ನಿಜ. ಆದರೆ ನಿಯಮಗಳನ್ನು ಮೀರಿದರೆ ಇವುಗಳಿಗಿಂತಲೂ ದುರಂತಮಯವಾದಂತ, ದುರ್ಬಲವಾದಂತ ಜೀವನವನ್ನು ನಡೆಸಬೇಕಾಗುತ್ತದೆ. ಈ ರೀತಿಯ ಸಾಮಾಜಿಕ ಒತ್ತಡಗಳಿಂದ ಅವಳ ಇಷ್ಟ ಇರಲಿ ಇರದೇ ಹೋಗಲಿ ಈ ನಿಯಮಗಳನ್ನು ಪಾಲಿಸಲೇ ಬೇಕಾದಂತ ಒತ್ತಡಕ್ಕೆ ಅವಳನ್ನು ಒಳಗಾಗಿಸುತ್ತಾರೆ.

ಈ ಎಲ್ಲವುಗಳು ವಿವಾಹ ನಿಯಮಗಳಿಂದ ಅವಳ ಬದುಕಿನ ಧ್ಯೇಯದಲ್ಲಿಯೂ ಮತ್ತೆ ಅಬಲೆಯ ಸ್ಥಿತಿ ಮುಂದೊರೆಯುತ್ತಿವೆ. ಮುಖ್ಯವಾಗಿ ಕುಟುಂಬದಲ್ಲಿ ಅವಳು ಮಗಳಾಗಿ, ತಾಯಿಯಾಗಿ ಮತ್ತು

ಹೆಂಡತಿಯಾಗಿ, ಕುಟುಂಬದಲ್ಲಿ ಯಾವುದೇ ಹಂತದಲ್ಲಿ ಯಾವುದೇ ಪಾತ್ರದಲ್ಲಿ ಇದ್ದಾಗ ಸಹ ಈ ಅಬಲೆಯ ಸ್ಥಿತಿ ಹೋಗುವುದಿಲ್ಲ. "ನ ಸ್ತ್ರೀ ಸ್ವಾತಂತ್ರ್ಯಮರ್ಹತಿ" ಮಹಿಳೆ ಸ್ವಾತಂತ್ರಕ್ಕೆ ಅರ್ಹಳಲ್ಲ, ಅಂದರೆ ಅವಳು ಅಬಲೆಯ ಸ್ಥಿತಿಯಿಂದ ಯಾವತ್ತು ತಪ್ಪಿಸಿಕೊಳ್ಳುವಂತಿಲ್ಲ, ಹಾಗೆಯೇ,

"ಪಿತಾರಕ್ಷತಿ ಕೌಮರೇ ಭರ್ತಾರಕ್ಷತೆಯ ಯೌವನೇ
ರಕ್ಷಂತಿ ಸ್ಥವಿರೇ ಪುತ್ರಾಃ ನ ಸ್ತ್ರೀ ಸ್ವಾತಂತ್ರ್ಯ ಮರ್ಹತಿ||"

ಅಂದರೆ ಮಹಿಳೆಯರು ವಿವಾಹಮಾಡಿಕೊಳ್ಳಲಿ ಮಾಡಿಕೊಳ್ಳದೇ ಇರಲಿ, ಗಂಡ ಇರಲಿ ಇರದೇ ಹೋಗಲಿ, ಈ ಎಲ್ಲ ನಿಯಮಗಳನ್ನು ಅವಳು ಪಾಲಿಸಲೇ ಬೇಕಾದಂತ ಸಂದರ್ಭವನ್ನು ಸೃಷ್ಟಿಸುತ್ತಾರೆ. ಇದರಿಂದ ಅವಳು ಅಬಲೆಯ ಸ್ಥಿತಿಯಲ್ಲಿ ಇರಬೇಕಾಗುತ್ತದೆ. ಅವಳಿಗೆ ಅಬಲೆಯ ಸ್ಥಿತಿ ಎಂದರೆ, ಸಾಮಾಜಿಕವಾಗಿ ಹೇರಲಾಗಿರುವಂತಹ ಒತ್ತಾಯಗಳಿಂದ ಹೊರಬರುವುದು ಸುಲಭ ಸಾಧ್ಯವಲ್ಲ.

ಸಮಾಜದಲ್ಲಿ ಮಹಿಳೆಯರನ್ನು ಕುಟುಂಬದ ರಕ್ಷಕಿ, ಪೋಷಕಿ ಎನ್ನುವ ಔದಾರ್ಯದ ರೀತಿಯಲ್ಲಿ ಅವಳನ್ನು ಶೋಷಣೆ ಮಾಡುವುದಕ್ಕಾಗಿ "ಭಾವುಕತೆ, ಕೋಮಲತೆ, ಪರಾವಲಂಬಿಸ್ಥಿತಿ, ಭಯಭೀರುತನ ವಿಧೇಯತೆ, ತಾಯ್ತನ, ಸಂಗೋಪನೆ, ಕ್ಷಮೆ, ಸಹನೆ, ತಾಳ್ಮೆ ಕಷ್ಟ ಸಹಿಷ್ಣತೆ, ಈ ರೀತಿಯಾಗಿ ಕೇವಲ ಸೇವೆ ಸಲ್ಲಿಸುವಂತಹ ಮತ್ತು ಸಂಗೋಪನೆ ಮಾಡುವಂತಹ ಕೆಲಸ ಕಾರ್ಯಗಳಲ್ಲಿ ಮಾತ್ರ ಅವಳಿಗೆ ಸ್ಥಾನಗಳನ್ನು ನೀಡಿದ್ದಾರೆ.

ಆದರೆ ಅಧಿಕಾರ ಚಲಾಯಿಸುವಂತ ಮತ್ತು ಹಣಗಳಿಸುವಂತಹ ಅಥವಾ ಆರ್ಥಿಕ ಹತೋಟಿಯಲ್ಲಿ ಇಟ್ಟುಕೊಳ್ಳುವ ಸ್ಥಾನವನ್ನು ಯಾವ ಕುಟುಂಬದಲ್ಲಿಯೂ ನೀಡಿರುವುದಿಲ್ಲ. ಮತ್ತು ಹೆಣ್ಣೆಂದರೆ "ಚಂಚಲತೆ, ಅವೈಚಾರಿಕತೆ, ಭೋಗಲಾಲಸೆ, ಮೂರ್ಖತೆ, ಅವಿಧೇಯತೆ, ಅಪ್ರಾಮಾಣಿಕತೆ, ವಂಚನೆ, ಅಸೂಯೇ, ಸೇಡು ಇತ್ಯಾದಿ ಗುಣಗಳ ಪ್ರತಿರೂಪ ಹೆಣ್ಣು"[6] ಎಂಬ ಕಲ್ಪನೆಯು ಪುರುಷರಲ್ಲಿ ಇರುವುದರಿಂದ ಅವಳನ್ನು ಸೇವೆ ಸಲ್ಲಿಸುವಂತ, ಲೈಂಗಿಕ ತೃಷೆ ತೀರಿಸಿಕೊಳ್ಳಲು ಮತ್ತು ಮಕ್ಕಳನ್ನು ಹೇರಲು ಮಾತ್ರ ಸಮರ್ಥಳು ಎಂದು ಅರಿತುಕೊಂಡಿದ್ದಾರೆ. ಹೆಣ್ಣಿಗೆ ವಿವಾಹ ಸಂಸ್ಥೆಯು ಮೇಲುನೋಟಕ್ಕೆ ಮಾತ್ರ ಭದ್ರತೆಯನ್ನು ಒಗಿಸುತ್ತದೆಂಬಂತೆ ತೋರಿದರೂ ತನ್ನ ಮನೆಯಲ್ಲಿ ತಾನೇ ಪರಿಕೀಯಳಾಗುವ ಸ್ಥಿತಿ ಮಹಿಳೆಯರದು ಆಗಿರುತ್ತದೆ. ಅವಿಭಕ್ತ ಕುಟುಂಬವ್ಯವಸ್ಥೆಯೂ ಕೂಡ ಮಹಿಳೆಯರ ಸ್ಥಾನಮಾನಗಳಿಗೆ ಧಕ್ಕೆಯನ್ನುಂಟು ಮಾಡುವಲ್ಲಿ ಒಂದು ಪ್ರಮುಖ ಅಂಶವಾಗಿದೆ. ಸಾಂಪ್ರದಾಯಿಕ ಪುರುಷ ಪ್ರಧಾನ ಕುಟುಂಬಗಳಲ್ಲಿ ಸ್ತ್ರೀಯರ ಸ್ಥಾನಮಾನಗಳು ತುಂಬಾ ಆಧೋಗತಿಗೆ ಇಳಿದಿರುತ್ತವೆ. ಸ್ತ್ರೀಯರು ಆಸ್ತಿಯ ಹಕ್ಕಿನಿಂದ ವಂಚಿತರನ್ನಾಗಿ ಆರ್ಥಿಕವಾಗಿ ಪರಾವಲಂಬಿಯನ್ನಾಗಿಸಿದ್ದಾರೆ. ಪತಿಗೆ ವಿಧೇಯಳಾಗಿದ್ದು, ಅವನ ಸೇವೆ ಮಾಡಿಕೊಂಡಿರುವುದೇ ಆಕೆಯ ಪ್ರಮುಖ ಕರ್ತವ್ಯವಾಗಿತ್ತು. ಮತ್ತು ಅಡಿಗೆ ಮನೆಯ

ಕೆಲಸದಾಳಾಗಿ ಕಾಲ ಕಳೆಯಬೇಕಾಗಿತ್ತು.

ಪುರುಷ ಪ್ರಧಾನ ಸಮಾಜದಲ್ಲಿ ಮಹಿಳೆಯರ ಕೆಲಸವನ್ನು ಎರಡು ರೀತಿಯಾಗಿ ವಿಂಗಡಿಸಬಹುದು. ಒಂದು, ಮನೆಯ ಒಳಗಿನ ಕೆಲಸ ಮತ್ತೊಂದು ಮನೆಯ ಹೊರಗಿನ ಕೆಲಸ. ಮನೆಯ ಒಳಗಿನ ಕೆಲಸಗಳೆಲ್ಲವು ಅಪಮೌಲ್ಯವಾಗಿರುತ್ತವೆ. ಅದೃಶ್ಯವಾಗಿರುತ್ತವೆ. ಮತ್ತು ಗಳಿಕೆ ಶೂನ್ಯವಾಗಿರುತ್ತದೆ. ಈ ರೀತಿಯಾಗಿ ಅಬಲೆಯರನ್ನಾಗಿಸಿದ ಪುರುಷರು, ಮಹಿಳೆಯರು ಕಡಿಮೆ ಕೆಲಸವನ್ನು ಮಾಡುತ್ತಾರೆಂದು ಹುಸಿಕಲ್ಪನೆ ಇಟ್ಟುಕೊಂಡು ಪುರುಷರಿಗಿಂತ ಮಹಿಳೆಯರಿಗೆ ಕಡಿಮೆ ಆಹಾರದ ಅಗತ್ಯವಿದೆ ಎಂಬ ಅಪಕಲ್ಪನೆಯೂ ಬೆಳೆದುಬಂದಿದೆ. ಹಾಗೆಯೇ ಮನೆಯ ಹೊರಗಿನ ಕೆಲಸಗಳು ಸಹ ಕುಟುಂಬದ ಸ್ಥಿತಿಗತಿಗಳಲ್ಲಿಯೇ ಅಥವಾ ನಿಯಮಗಳಲ್ಲಿಯೇ ಕೆಲಸಕಾರ್ಯಗಳನ್ನು ಮಾಡಬೇಕಾಗುತ್ತದೆ. ಉದಾ : ಉದ್ಯೋಗ, ನೌಕರಿ, ಅಧಿಕಾರ, ಇವುಗಳಲ್ಲಿ ಕಾಣಬಹುದಾಗಿದೆ. ಅಂದರೆ ಕುಟುಂಬದ ನಾಯಕ ಅಥವಾ ಯಜಮಾನ ತೋರಿದಂತಹ ಕಾರ್ಯಕ್ಷೇತ್ರದಲ್ಲಿ ತೊಡಗಬೇಕಾಗಿದೆ. ಅಂದಾಗ ಯಾವ ಕ್ಷೇತ್ರದಲ್ಲಿಯೂ ಸಹ ಕುಟುಂಬದ ನಿಯಮಗಳನ್ನು ಮೀರಿ ತನ್ನನ್ನು ತಾನು ತೊಡಗಿಸಿಕೊಳ್ಳಲು ಆಗುವುದಿಲ್ಲ. ಅವಳು ಯಾವುದೇ ಅಧಿಕಾರದ ವಲಯದಲ್ಲಿದ್ದರೂ ಕೂಡ ಕುಟುಂಬದ ನಿಯಮಗಳನ್ನು ಚಾಚುತಪ್ಪದೇ ಪಾಲಿಸಬೇಕಾಗುತ್ತದೆ. ಆದ್ದರಿಂದ ಹೆಂಗಸು ಸಂಪೂರ್ಣ ಸ್ವಾತಂತ್ರ್ಯವನ್ನು ಮನೆಯ ಹೊರಗಿನ ಸಾಮಾಜಿಕ ಪರಿಸರದಲ್ಲಿಯೂ ಸಹ ಅವಳ ಶಕ್ತಿ ಸಾಮರ್ಥ್ಯವನ್ನು ಉಪಯೋಗಿಸುವುದಕ್ಕೆ ಅಗುವುದಿಲ್ಲ. ಮತ್ತು ಕುಟುಂಬದ ಚಿಂತನೆಯನ್ನೇ ಸಾಮಾಜಿಕ ವಲಯದಲ್ಲಿ ಅಂದರೆ ಮನೆಯ ಹೊರಗಿನ ಕೆಲಸಗಳಲ್ಲಿಯೂ ಅದೇ ಚಿಂತನೆ ಮುಂದೊರೆಯುವುದರಿಂದ ಅಲ್ಲಿಯೂ ಕೂಡ ಮಹಿಳೆಯರು ಸಬಲೆಯರಾಗುವುದಕ್ಕೆ ಸಾಧ್ಯವಿಲ್ಲ. ಉದಾ : ಮನೆಯ ಹೊರಗಿನ ಕೆಲಸಗಳಲ್ಲಿ ಮಹಿಳೆಯರು ದುಡಿಯುತ್ತಿದ್ದರೂ ಸಹ ಅವಳ ಶ್ರಮಕ್ಕೆ ತಕ್ಕ ಕೂಲಿ/ಸಂಬಳ ದೊರೆಯುವುದಿಲ್ಲ. ಒಂದು ವೇಳೆ ದೊರೆತರೂ ಸಹ ಆ ಹಣದ ಮೇಲೆ ತನ್ನ ಅಧಿಕಾರವಿರುವುದಿಲ್ಲ. ಅಥವಾ ತನ್ನ ಹತೋಟಿಯಲ್ಲಿ ಇರುವುದಿಲ್ಲ. ಹೀಗೆಯೇ ಸಾಮಾಜಿಕವಾಗಿ ಅಬಲೆ ಎನ್ನಿಸಿಕೊಳ್ಳುವ ಈ ಪರಿಸ್ಥಿತಿಗೆ ಆರ್ಥಿಕತೆಯೇ ಮುಖ್ಯಕಾರಣವಾಗಿದೆ.

೨.೨. ಆರ್ಥಿಕ ವಲಯ

ಮಾನವ ಜನಾಂಗವು ಅನಾಗರೀಕತೆಯಿಂದ ನಾಗರೀಕತೆಯತ್ತ ಬಂದಾಗಿನಿಂದ ಅಂದರೆ ಸ್ತ್ರೀ-ಪುರುಷರ ಮಧ್ಯೆ ಭಿನ್ನತೆ ಕಂಡುಬಂದಾಗಿನಿಂದ ಹೆಂಗಸನ್ನು ಅತಿಹೆಚ್ಚಾಗಿ ಅನುತ್ಪಾದಕ ಅಥವಾ ಮೌಲ್ಯರಹಿತ ಕೆಲಸಕಾರ್ಯಗಳಲ್ಲಿಯೇ ತನ್ನ ಬದುಕನ್ನು ಸಾಗಿಸುವಂತೆ ಪುರುಷ ಪ್ರಧಾನರು ಕಾದುಕೊಂಡು ಬಂದಿದ್ದಾರೆ. ಇಂತಹ ಅದೃಶ್ಯಮಯವಾದಂತ ಕೆಲಸಗಳಲ್ಲಿ ಮಹಿಳೆಯರು ಅತಿಹೆಚ್ಚಾಗಿ ತೊಡಗಿಸಿಕೊಂಡಿರುವುದರಿಂದ

ಮತ್ತು ಸಂಗೋಪನೆಯಲ್ಲಿ, ಶಿಶುಪೋಷಣೆ ಹಾಗೆಯೇ ನಾಲ್ಕುಗೋಡೆಗಳ ಮಧ್ಯೆ ಗೃಹಿಣಿಯಾಗಿರುವುದರಿಂದ "ಮಹಿಳೆಯರ ದುಡಿಮೆಯು ಅನೇಕ ಸಂದರ್ಭಗಳಲ್ಲಿ ಭಾವನಾತ್ಮಕವಾಗಿರುತ್ತದೆ, ಮಾನಸಿಕವಾಗಿರುತ್ತದೆ, ಸಂಗೋಪನಾವಾದಿಯಾಗಿರುತ್ತದೆ. ಮಹಿಳೆಯರ ದುಡಿಮೆಯು ಕುಟುಂಬದ ಹಿತಾಶಕ್ತಿಗಳನ್ನು ಪೂರೈಸುವಲ್ಲಿಗೆ ಸೀಮಿತಗೊಂಡಿರುತ್ತದೆ."[೧೦] ಆದ್ದರಿಂದ ಮಹಿಳೆಯರು ಮಾಡುವ ಕೆಲಸಕಾರ್ಯಗಳು ಅರ್ಥಶಾಸ್ತ್ರದಲ್ಲಿ 'ದುಡಿಮೆ' ಎನಿಸಿಕೊಳ್ಳುವುದಿಲ್ಲ. ಏಕೆಂದರೆ ಇವು ಉತ್ಪಾದಕ ಅಥವಾ ಮೌಲ್ಯವನ್ನು ಗುರುತಿಸುವಂತ ಕೆಲಸವಲ್ಲ. ಕುಟುಂಬದಲ್ಲಿ ಗಂಡನಿಗೆ, ಮಕ್ಕಳಿಗೆ, ಅತ್ತೆಮಾವಂದಿರಿಗೆ ಅಥವಾ ಕುಟುಂಬದ ಸದಸ್ಯರೆಲ್ಲರಿಗೆ ಸೇವೆ ಸಲ್ಲಿಸಿದಂತಾಗುತ್ತದೆ. ಹೀಗಾಗಿ ಮಹಿಳೆಯರ ಮನೆಯೊಳಗಿನ ಕೆಲಸಕಾರ್ಯಗಳೆಲ್ಲ ಅದೃಶ್ಯವಾಗಿ ಅಥವಾ ಶೂನ್ಯವಾಗಿ ಕಂಡುಬರುತ್ತವೆ. ಇವುಗಳಿಗೆ ಯಾವುದೇ ರೀತಿಯ ಮೌಲ್ಯ ನಿರ್ಧಾರವಾಗುವುದಿಲ್ಲ. ಈ ಎಲ್ಲಾ ಕಾರಣಗಳಿಂದ ಹೆಣ್ಣು ಆರ್ಥಿಕವಾಗಿ ಗಂಡನನ್ನೇ ಅಥವಾ ಕುಟುಂಬವನ್ನೋ ಅವಲಂಬಿಸಬೇಕಾಗುತ್ತದೆ.

ಒಬ್ಬ ಗೃಹಿಣಿ ದಿನಂಪ್ರತಿ ಬೆಳಗಿನ ಜಾವ ೪ ಘಂಟೆಯಿಂದ ರಾತ್ರಿ ಸುಮಾರು ೧೧ ಘಂಟೆಯವರೆಗೆ ಸತತವಾಗಿ ಕೆಲಸದಲ್ಲಿ ತೊಡಗಿದರೂ ಸಹ ಇನ್ನು ಅಲ್ಪಸ್ವಲ್ಪ ಕೆಲಸ ಕಾರ್ಯಗಳು ಹಾಗೆ ಉಳಿಯುತ್ತವೆ. ಅಂದರೆ ತನ್ನ ಕಾರ್ಯವು ಅಂಗಳ ಕಸಗೂಡಿಸುವುದರಿಂದ ಪ್ರಾರಂಭಗೊಂಡು ತನ್ನ ಪತಿಯ ಕಾಲಿಗೆ ಷೂ ತೊಡಿಸುವವರೆಗೆ ಒಂದಾದ ನಂತರ ಒಂದರಂತೆ ಕ್ರಮಬದ್ಧವಾಗಿ ಕೆಲಸ ಮಾಡುತ್ತಾ ಬರುತ್ತಾಳೆ. ತನ್ನ ಆರೋಗ್ಯದ ಬಗ್ಗೆ ಇಂತಿಷ್ಟು ಗಮನಹರಿಸದೆ ತನ್ನ ಗಂಡನ, ಮಕ್ಕಳ ಮತ್ತು ಕುಟುಂಬದ ಸದಸ್ಯರ ಯೋಗಕ್ಷೇಮವೆಲ್ಲ ನೋಡಿ ಕೊಳ್ಳುತ್ತಾಳೆ. ಈ ರೀತಿಯಾಗಿ ವಿಶ್ರಾಂತಿ ರಹಿತವಾಗಿ ಕೆಲಸ ಮಾಡುವ ಗೃಹಿಣಿಯ ಶ್ರಮ ಅದೃಶ್ಯವಾಗುತ್ತದೆ. ಮತ್ತು ಶ್ರಮಕ್ಕೆ ಯಾವುದೇ ರೀತಿಯ ಮೌಲ್ಯ ನಿರ್ಣಯವಾಗಿರುವುದಿಲ್ಲ. ಈ ಎಲ್ಲ ಕೆಲಸಕಾರ್ಯಗಳ ಪ್ರತಿಫಲಶೂನ್ಯವಾಗಿರುತ್ತದೆ. ಕುಟುಂಬದಲ್ಲಿ "ಮಹಿಳೆಯರ ದುಡಿಮೆಯನ್ನು ದುಡಿಮೆಯೆಂದು ಸಮಾಜವಿಜ್ಞಾನಿಗಳು ಪರಿಗಣಿಸಿಲ್ಲ. ಮಹಿಳೇಯರ ಗೃಹವಾರ್ತೆ ದುಡಿಮೆ, ಶಿಶುಪಾಲನೆ ದುಡಿಮೆ, ಸ್ವಂತ ಹೊಲ ಗದ್ದೆಗಳಲ್ಲಿನ ದುಡಿಮೆ, ಸಂಭಾವನ ರಹಿತ ದುಡಿಮೆ, ಅವರ ಕುಟುಂಬ ಸಂಬಂಧಿ ಖರ್ಚು ಉಳಿತಾಯ ದುಡಿಮೆಯೆಂದು ಪರಿಗಣಿಸಿಲ್ಲ".[೧೧] ಇದರಿಂದ ಮಹಿಳೆಯರ ದುಡಿಮೆ ಸಹಭಾಗಿತ್ವ ಕಡಿಮೆಯಾಗುತ್ತದೆ. ಅಂದರೆ ಅವಳ ದುಡಿಮೆಗೆ ಮೌಲ್ಯ ಅನ್ನುವುದು ಇಲ್ಲ. ಇಡೀ ದಿನ ಅವಳು ದುಡಿಯುತ್ತಾ ಇದ್ದರೂ ಸಹ ಅದಕ್ಕೆ ಪ್ರತಿಫಲವಾಗಿ ಸಂಪಾದನೆಯ ಮುಖವನ್ನು ನೋಡುವುದಿಲ್ಲ. ಯಾಕೆಂದರೆ ಅವಳ ಇಡೀ ದುಡಿಮೆಯನ್ನು ಸೇವಾವಲಯವೆಂದು ನಿರ್ಣಯ ಮಾಡಲಾಗಿದೆ. ಆದ್ದರಿಂದ ಅವಳನ್ನು ಪ್ರೀತಿ, ಸಹನೆ, ತ್ಯಾಗಿ, ಪೋಷಕಿ ಇತ್ಯಾದಿ ಭಾವನಾತ್ಮಕ ಗುಣವುಳ್ಳವಳು ಎಂದು ಔದಾರ್ಯವನ್ನು ತೋರಿ ಅವಳ ದುಡಿಮೆಗೆ ಮೌಲ್ಯ

ದೊರೆಯದಂತೆ ಮಾಡಿ ಎಲ್ಲಾ ಶ್ರಮವನ್ನು ಶೂನ್ಯವಾಗಿಸಿದ್ದಾರೆ. ಹೀಗಾಗಿ ಮಹಿಳೆಯರು ಎಷ್ಟೇ ದುಡಿದರೂ ಸಹ ಅವಳು ಆರ್ಥಿಕವಾಗಿ ಸ್ವಾವಲಂಬನೆಯನ್ನು ಪಡೆಯುವುದಿಲ್ಲ. ಆರ್ಥಿಕವಾಗಿ ಯಾವಗ ಸ್ವಾವಲಂಬನೆಯನ್ನು ಪಡೆಯುವುದಿಲ್ಲವೋ ಆಗ ಹೆಂಗಸು ಅಬಲೆಯಾಗುತ್ತಾಳೆ. ಅಬಲೆಯಾಗಿದ್ದ ಕಾರಣಕ್ಕಾಗಿಯೇ ಮಹಿಳೆಯರು ಕುಟುಂಬದಲ್ಲಿ ಮತ್ತು ಕುಟುಂಬದ ಹೊರಗಡೆ ಅವಳು ಸಬಲೆಯಾಗುವುದಕ್ಕೆ ಸಾಧ್ಯವಿಲ್ಲ. ಆದ್ದರಿಂದ ಅವಳು ಎಲ್ಲ ವಲಯಗಳಲ್ಲಿ ಅಬಲೆಯಾಗಿಯೇ ಉಳಿಯುತ್ತಾಳೆ.

ಹೆಂಗಸು ಮನೆಯ ಒಳಗೆ ಮಾಡುವ ಕೆಲಸವೆಲ್ಲ ಅನುತ್ಪಾದಕ ಅಥವಾ ಅಪಮೌಲ್ಯವಾದಂತಹ ಕೆಲಸಗಳಾಗಿರುತ್ತವೆ. ಅಥವಾ ಅಪಮೌಲ್ಯಗೊಳಿಸುತ್ತಾರೆ. ಏಕೆಂದರೆ ಮನೆಯ ಒಳಗಿನ ಕೆಲಸ ಉತ್ಪಾದಕ ಚಟುವಟಿಕೆಯಲ್ಲಿ ಎಂದು ಪುರುಷ ಕಲ್ಪನೆಗಳು ಕಟ್ಟಿಕೊಂಡಿವೆ. ಇದನ್ನು ಶತಶತಮಾನಗಳ ಹಿಂದಿನಿಂದಲೂ ಸೇವಾವಲಯವೆಂದು ನಿರ್ಣಯಿಸಿದ್ದಾರೆ. ನಂತರ ಮಹಿಳೆಯರು ಮನೆಯಹೊರಗಿನ ಕೆಲಸ ಅಂದರೆ ಗಂಡಸು ಯಾವು ಉತ್ಪಾದಕ ಚಟುವಟಿಕೆಯಲ್ಲಿ ತೊಡಗುತ್ತಾನೋ ಅದೇ ಉತ್ಪಾದಕ ಚಟುವಟಿಕೆಯಲ್ಲಿ ಹೆಂಗಸು ತೊಡಗುತ್ತಾಳೆ. ಆದರೆ ಉತ್ಪಾದಕ ಚಟುವಟಿಕೆಯು ಗಂಡಸಿಗೆ ಸಮನಾದಂತಹ ವೇತನವಾಗಲಿ, ಸೌಲಭ್ಯವಾಗಲಿ, ವಾತಾವರಣವಾಗಲಿ, ಸಮಯದ ಅನುಕೂಲಗಳಾಗಲಿ ಅವಳಿಗೆ ಸರಿಯಾದ ರೀತಿಯಲ್ಲಿ ದೊರೆಯುವುದಿಲ್ಲ. ಮನೆಯ ಹೊರಗಿನ ದುಡಿಮೆ ಅಂದರೆ "ಯಾವ ಉತ್ಪಾದನಾ ಚಟುವಟಿಕೆಗಳನ್ನು ಪರಿಣಾಮಾತ್ಮಕವಾಗಿ ಅಳೆಯಲು ಸಾಧ್ಯವೋ ಗಣನೆ ಮಾಡಲು ಸಾಧ್ಯವೋ, ಅವುಗಳನ್ನು ಮಾತ್ರ ಸಮಾಜ ವಿಜ್ಞಾನಗಳು ದುಡಿಮೆ ಎಂದು ಪರಿಗಣಿಸಿವೆ."[೨] ಮನೆಯ ಹೊರಗಿನ ಕೆಲಸಗಳೆಂದರೆ, ಸರ್ಕಾರಿ, ಅರೆಸರ್ಕಾರಿ, ಖಾಸಗಿ ಮತ್ತು ಅಸಂಘಟಿತ ವಲಯಗಳಲ್ಲಿ ಕಾರ್ಮಿಕರಾಗಿ ಅಥವಾ ಯಾವುದೋ ಹುದ್ದೆಯನ್ನು ಪಡೆದುಕೊಂಡ ಮಹಿಳೆಯರು ತಾಯ್ತನದ ಹೊಣೆಗಾರಿಕೆಯ ಜೊತೆಗೆ ತಮಗೆ ಕಾಯ್ದಿರಿಸಿದಂತ ಕೆಲಸವನ್ನು ಅಷ್ಟೇ ಜವಬ್ದಾರಿಯುತವಾಗಿ ನೆರವೇರಿಸಬೇಕಾಗುತ್ತದೆ. ಹೀಗಾಗಿ ಅವಳ ಚಿಕ್ಕಮಕ್ಕಳನ್ನು ನೋಡಿಕೊಳ್ಳುವುದಕ್ಕಾಗಿ ಅಂದರೆ ಮಹಿಳೆಯರು ಕೆಲಸ ಮಾಡುವಂತಹ, ಸರಕಾರಿ ಅಥವಾ ಅಸಂಘಟಿತ ವಲಯಗಳಲ್ಲಿ ತಮ್ಮ ಮಕ್ಕಳನ್ನು ಪೋಷಣೆ ಮಾಡಲು ಶಿಶು ವಿಹಾರಗಳು, ಮತ್ತು ವಿಶ್ರಾಂತಿಗಾಗಿ ವಸತಿ ನಿಲಯಗಳು ಇಲ್ಲದೇ ಇರುವುದರಿಂದ ತನ್ನ ದುಡಿಮೆಯ ಸಮಯದಲ್ಲಿ ಸಹ ಶಿಶುವಿನ ಕಡೆ ಅತಿಹೆಚ್ಚಿನ ಗಮನವಿರಬೇಕಾಗುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಹೊರಗಿನ ಕೆಲಸಕಾರ್ಯಗಳಲ್ಲಿ ತೊಡಗುವುದು ಸಹ ಕಷ್ಟಕರವಾಗಿದೆ.

ಹಾಗೆಯೇ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಲು ಅಥವಾ ಸಣ್ಣ ಪುಟ್ಟ ಉದ್ದಿಮೆಗಳನ್ನು ಅಥವಾ ವ್ಯಾಪಾರ ವ್ಯವಹಾರಗಳನ್ನು ಮಹಿಳೆಯರು ಪ್ರಾರಂಭಿಸಿಕೊಳ್ಳಲು ಆರ್ಥಿಕ ಸಹಾಯವನ್ನು ನೀಡುವ ಬ್ಯಾಂಕುಗಳು ಸಹ ಏರುಪೇರು ಮಾಡುತ್ತವೆ. ಉದಾ : ಮಹಿಳೆಯರು ಆರ್ಥಿಕ ಸ್ವಾವಲಂಬನೆಗಾಗಿ

ಅಥವಾ ಸಂಪಾದನೆಗಾಗಿ ಸಣ್ಣ ಸಣ್ಣ ಉದ್ದಿಮೆಗಳನ್ನು ಅಥವಾ ವ್ಯಾಪಾರಗಳನ್ನು ಪ್ರಾರಂಭಿಸಿಕೊಳ್ಳುವುದಕ್ಕೆ ಬೇಕಾದಂತಹ ಸಂಪನ್ಮೂಲಗಳು ಮತ್ತು ಸಾಲಸೌಲಭ್ಯಗಳು ಗಂಡಸರಿಗೆ ಅನುಕೂಲವಾದಷ್ಟು ಹೆಂಗಸರಿಗೆ ಅನುಕೂಲತೆಗಳು ಕಡಿಮೆ. ಉದಹಾರಣೆಯಾಗಿ ಬ್ಯಾಂಕುಗಳು ಸಾಲ ನೀಡುವುದನ್ನು ಗಮನಿಸಬಹುದಾಗಿದೆ. ಮಹಿಳೆಯರು ಬ್ಯಾಂಕಿಗೆ ಸಾಲ ಕೇಳಲು ಹೋದಾಗ ಅಷ್ಟು ಉದಾರಭಾವದಿಂದ ಕರೆದು ಸಾಲಕೊಡುವ ಬ್ಯಾಂಕುಗಳು ಇನ್ನೂ ಎಲ್ಲಿಯೂ ಕಂಡಬಂದಿಲ್ಲ. ಅಂದರೆ ಯಾವುದೇ ರೀತಿಯ ಸಾಲವನ್ನು ಪಡೆಯಬೇಕಾದರೆ ಹಣಕ್ಕೆ ತಕ್ಕಷ್ಟು ಮೌಲ್ಯದ ಸ್ಥಿರಾಸ್ತಿಯನ್ನು ಆಧಾರವಾಗಿ ಇಡಬೇಕು. ಅಂದರೆ ಸಾಲಪಡೆಯಬೇಕಾದರೆ ಮನೆ ಅಥವಾ ಹೊಲವನ್ನು ಸುರಿಟಿಯಾಗಿ ಇಟ್ಟಾಗ ಮಾತ್ರ ಸಾಲದೊರೆಯುತ್ತದೆ. ಅಂದಾಗ ಸಾಮಾಜಿಕ ವ್ಯವಸ್ಥೆಯಲ್ಲಿ ಆಸ್ತಿಯು ಗಂಡಸಿನ ಹೆಸರಿನಲ್ಲಿ ಇರುತ್ತದೆಯೇ ಹೊರತು, ಹೆಂಗಸಿನ ಹೆಸರಿನಲ್ಲಿರುವುದು ಅಪರೂಪ. ಮಹಿಳೆಯರು ಉದ್ದಿಮೆಯನ್ನು ಸುರುಮಾಡಬೇಕಾದರೆ ಅದಕ್ಕೆ ಬೇಕಾದಂತ ಬಂಡವಾಳ ದೊರೆಯುವುದಿಲ್ಲ. ಜೊತೆಗೆ ಇಂತಹ ಸಣ್ಣಪುಟ್ಟ ಉದ್ದಿಮೆಗಳನ್ನು ಪ್ರಾರಂಭಿಸಬೇಕಾದರೆ, ಅದರ ಬಗ್ಗೆ ಅರಿವು ಇರಬೇಕೆನ್ನುವುದು, ತರಬೇತಿ ಮತ್ತು ಉನ್ನತ ಶಿಕ್ಷಣ ಪಡೆದಿರಬೇಕು ಎಂದು ಪುರುಷ ಸಮಾಜವು ಅಡ್ಡಗಾಲು ಹಾಕುತ್ತದೆ. "ಅಷ್ಟೇನೂ ಬುದ್ಧಿವಂತನಲ್ಲದ ಮಗ, ರ್‍ಯಾಂಕ್ ಪಡೆಯುವ ಮಗಳು ಇಬ್ಬರಲ್ಲಿ ಉನ್ನತ ಶಿಕ್ಷಣ ದೊರೆಯುವುದು, ಮೊದಲು ಮಗನಿಗೆ, ಉಳಿದರೆ ಮಗಳಿಗೆ ಕೆಲವೊಮ್ಮೆ ಆರ್ಥಿಕ ಅನುಕೂಲವಿದ್ದರೂ, ಜಾಸ್ತಿ ಓದಿದರೆ ಗಂಡು ಸಿಗಲಾರನೆಂಬ ಕಾರಣ ಅವಳ ಅವಕಾಶವನ್ನು ಮೊಟಕುಮಾಡುತ್ತವೆ.[೧೩] ಹೀಗೆ ಹೆಣ್ಣು ಹುಟ್ಟಿನಿಂದಲೂ ವಂಚಿತಳನ್ನಾಗಿಸುತ್ತಾ ಬಂದ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಹೆಂಗಸಿಗೆ ದೊರೆಯಬೇಕಾದಂತ ಅವಕಾಶಗಳು ಮತ್ತು ಪ್ರೋತ್ಸಾಹಗಳು ದೊರೆತಿಲ್ಲ. ಅಂದರೆ ಮಹಿಳೆಯರು ಯಾವ ಶಿಕ್ಷಣ ಪಡೆಯಬೇಕು, ಯಾವ ನೌಕರಿಯನ್ನು ಪಡೆಯಬೇಕು, ಅಥವಾ ಉದ್ಯೋಗ ಮಾಡಬೇಕೆ, ಮಾಡಬಾರದೇ ಎನ್ನುವುದು ಮತ್ತು ಸಂಪಾದನೆ ಮಾಡಬೇಕು, ಮಾಡಬಾರದು ಅನ್ನುವುದು ಕೂಡ ಅವಳ ಸ್ವಂತ ವ್ಯಕ್ತಿತ್ವಕ್ಕೆ ಬರುವುದಿಲ್ಲ. ಈ ರೀತಿಯ ಅಸಹಾಯಕತೆಯಿಂದ ಕೂಡ ಅವಳು ಆರ್ಥಿಕವಾಗಿ ಸಂಪೂರ್ಣವಾಗಿ ಅಬಲೆಯಾಗುತ್ತಾಳೆ.

ಒಂದು ವೇಳೆ ಮಹಿಳೆಯರು ಆರ್ಥಿಕವಾಗಿ ಸಂಪಾದನೆ ಮಾಡಿಕೊಂಡು ಬಂದರು ಸಹ ಆ ಆರ್ಥಿಕತೆಯ ನಿಯಂತ್ರಣ ಅಥವಾ ಕಂಟ್ರೋಲ್ ಅನ್ನುವುದು ಅವಳ ಹಿಡಿತದಲ್ಲಿ ಇರುವುದಿಲ್ಲ. ಎಷ್ಟೋ ಕುಟುಂಬಗಳು ಅಥವಾ ಪತಿಯಂದಿರು ನಿಯಂತ್ರಣವನ್ನು ಕಸಿದುಕೊಳ್ಳುತ್ತಾರೆ. ಸಂಪಾದನೆಯನ್ನು ಕುಟುಂಬದ ಒಂದು ಸಹಾಯ, ಒಂದು ನೆರವೆಂದು ತೆಗೆದುಕೊಳ್ಳುತ್ತದೆ. ಅವಳು ಸಂಪಾದನೆ ಮಾಡಿದರೂ ಸಹ ಅದರ ಹತೋಟಿ ಅವಳಿಗೆ ಸಲ್ಲುವುದಿಲ್ಲ.

ಮಹಿಳೆಯರು ಮನೆಯ ಹೊರಗಡೆ ದುಡಿಯಲು ಹೋದರೆ ಆರ್ಥಿಕವಾಗಿ ಸಂಪಾದನೆ ಇದೆ ಎಂದು

ಮೇಲ್ನೋಟಕ್ಕೆ ಕಾಣಿಸುತ್ತದೆ. ಮತ್ತು ಆರ್ಥಿಕವಾಗಿ ಸ್ವಾವಲಂಬನೆಯಾಗಿದ್ದಾಳೆ, ಸಂಪಾದನೆ ಮಾಡುತ್ತಿದ್ದಾಳೆ ಅನ್ನಿಸಿದ್ದರೂ ಇವುಗಳ ಅಂತರಾಳವನ್ನು ನೋಡಿದಾಗ ಎಲ್ಲವು ಕಡಿಮೆಯಾಗಿ ಕಂಡುಬರುತ್ತವೆ. ಕಾರಣಗಳೆಂದರೆ ಅವಳಿಗೆ ಸೂಕ್ತವಾದಂತಹ ತರಬೇತಿ ದೊರೆತಿಲ್ಲ. ಸೂಕ್ತವಾದ ನೌಕರಿ ಅವಕಾಶಗಳು ದೊರೆತಿಲ್ಲ. ನೌಕರಿಯ ಜಾಗಗಳಲ್ಲಿ ಅವಳ ತಾಯ್ತನ ಇತ್ಯಾದಿ ಜವಾಬ್ದಾರಿಗಳಿವೆಯಲ್ಲ, ಇವುಗಳ ನಿರ್ವಹಣೆಯಲ್ಲಿ ಬಹಳ ಅಡೆತಡೆಗಳು ಉಂಟಾಗಿವೆ. ಅವಳ ಉದ್ಯೋಗ ನೌಕರಿ ಇತ್ಯಾದಿಗಳ ಮೇಲೆ ಕುಟುಂಬದ ನಿಯಂತ್ರಣಗಳು ಇರುತ್ತವೆಯೇ ಹೊರತು ಅವಳ ನಿಯಂತ್ರಣಗಳು ಇರುವುದಿಲ್ಲ. ಅಥವಾ ಉದ್ದಿಮೆಗಳನ್ನು ಪ್ರಾರಂಭಮಾಡಿ ನಾನು ಯಶಸ್ವಿಯಾಗುತ್ತೇನೆ ಎನ್ನುವ ಧೈರ್ಯ ಉಳ್ಳ ಹೆಂಗಸಿಗೆ ಬಂಡವಾಳ ಹೂಡಿಕೆಯಲ್ಲಿ ಬೇಕಾದಷ್ಟು ಸಮಸ್ಯೆಗಳಿವೆ. ಅವಳು ಧೈರ್ಯ ಸಾಹಸ ಮಾಡಿ ಹೊರಗಡೆ ಬಂದರೂ ಸಹ ಇಂತಹ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ.

ಸರಕಾರದ ಅಭಿವೃದ್ಧಿಕಾರ್ಯಕ್ರಮಗಳು ಇಂದು ಸಹ ಮಹಿಳೆಯ ಹೊಟ್ಟೆ, ಬಟ್ಟೆ, ಆಹಾರದ ಅಗತ್ಯಗಳನ್ನು ಮಾತ್ರ ಪೂರೈಸುವಲ್ಲಿ ಕ್ರಿಯಾಶೀಲವಾಗಿವೆ. ಸರ್ಕಾರದ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರಿಗೆ ಹೆಚ್ಚು ಉದ್ಯೋಗ ಒದಗಿಸುವ, ಆರೋಗ್ಯವನ್ನು ಸುಧಾರಿಸುವ, ಆಹಾರ ಭದ್ರತೆಯನ್ನು ಒದಗಿಸುವ, ಶಿಕ್ಷಣವನ್ನು ದೊರಕಿಸುವ ಇನ್ನು ಮುಂತಾದ ಸಂಗತಿಗಳನ್ನು ಗುರಿಯಾಗಿ ಇಟ್ಟುಕೊಂಡಿವೆ. ಈ ಬಗೆಯ ಉದ್ದೇಶವಿರುವ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಮಹಿಳೆಯರ ಸ್ಥಿತಿಗತಿಗಳನ್ನು ಅವರ ದೈನಂದಿನ ಬದುಕನ್ನು ಮಾತ್ರ ಸಮರ್ಥವಾಗಿ ಉತ್ತಮ ಪಡಿಸಬಲ್ಲವು. ಆದರೆ ಇದರಿಂದ ಮಹಿಳೆಯರ ದಮನ, ಅವರ ಅಧೀನ ಸ್ಥಾನಮಾನ, ಅವರ ಮೇಲಿನ ಲೈಂಗಿಕ ಹಿಂಸೆ, ಶೋಷಣೆಗಳು ಪರಿಹಾರಗೊಳ್ಳಲು ಸಾಧ್ಯವಿಲ್ಲ. ಸರ್ಕಾರದ ಯೋಜನಾ ಕಾರ್ಯಕ್ರಮಗಳು ಹೆಂಗಸಿಗೆ ಸಹ ದೊರೆಯುತ್ತವೆ. ಆದರೆ ದೊಡ್ಡ ಸಾಹಸ/ಕೆಲಸಗಳಲ್ಲಿ ತೊಡಗಲು ಸಹಾಯ ಮಾಡುವುದಿಲ್ಲ. ಏನೋ ತೀರ ಸ್ವಸಹಾಯ ಗುಂಪುಗಳಿಗೆ ಅಲ್ಪಸ್ವಲ್ಪ ರೀತಿಯಲ್ಲಿ ಸಹಾಯ ಮಾಡುತ್ತವೆ. ಸರಕಾರ ರೂಪಿಸುವಂತಹ ಯೋಜನೆಗಳು ಮಹಿಳೆಯರ ಕ್ಷೇಮಾಭಿವೃದ್ಧಿಯನ್ನು ನೋಡಿಕೊಳ್ಳುತ್ತವೆ ಹೊರತು, ಮಹಿಳೆಯರ ಸ್ವಾತಂತ್ರ್ಯಕ್ಕೆ ಬೇಕಾದಷ್ಟು ಚಿಂತನೆಗಳು ಅಲ್ಲಿಲ್ಲ. ಕಲ್ಯಾಣ ಕಾರ್ಯಕ್ರಮಗಳು ಬಡವರನ್ನು ನೋಡಿ ಅಯ್ಯೋಪಾಪ ಎಂದು ಸ್ವಲ್ಪ ಹಣ ಅಥವಾ ಆಹಾರವನ್ನು ದಾನ ಮಾಡುವಂತ ಕಾರ್ಯಕ್ರಮಗಳಾಗಿವೆ. ಇಂತಹ ಕಲ್ಯಾಣ ಕಾರ್ಯಕ್ರಮಗಳಿಂದ ಅಷ್ಟಿಷ್ಟು ಅನುಕೂಲಗಳು ಮಹಿಳೆಯರಿಗೆ ದೊರೆಯಬಹುದೇ ಹೊರತು ಅವರು ಸಂಪೂರ್ಣವಾಗಿ ಆರ್ಥಿಕವಾಗಿ ಸಬಲರಾಗುವುದಕ್ಕೆ ಅನುಕೂಲವಾಗುವುದಿಲ್ಲ. ನಮ್ಮ ಸಮಾಜಿಕ ಚಿಂತನೆಯಲ್ಲಿ ಹೆಂಗಸನ್ನು ಸಬಲೆಯಾಗುವುದಕ್ಕೆ ಬಿಡುತ್ತಿಲ್ಲ. ಮಹಿಳಾ ಅಭಿವೃದ್ಧಿ ಯೋಜನೆಗಳು ಕೇವಲ ನೆಪಮಾತ್ರಕ್ಕೆ ಇವೆ. ಉದಾ : ಕೆಳ ಜಾತಿಗಳ ಜನಾಂಗ ಉದ್ಧಾರಕ್ಕಾಗಿ ದಶಕಗಳಗಟ್ಟಲೆ ಯೋಜನೆಗಳಿದ್ದರೂ

ಅವರು ಉದ್ಧಾರವಾಗಿಲ್ಲ, ಹಾಗೆ ಮಹಿಳೆಯರು ಕೂಡ ಉದ್ಧಾರವಾಗಿಲ್ಲ, ಅಂದಾಗ ಇವು ಹೆಸರಿಗೆ ಮಾತ್ರ ಅಭಿವೃದ್ಧಿ ಯೋಜನೆಗಳಾಗಿವೆ.

ಕುಟುಂಬದ ವಲಯದಲ್ಲಾಗಲಿ, ಆರ್ಥಿಕವಲಯದಲ್ಲಾಗಲಿ ಗಟ್ಟಿಯಾಗಿ ನಿಂತು ನಾನು ಸ್ವಾತಂತ್ರಳು ಎಂದು ನಿಲ್ಲುವಂತಹ ವಾತಾವರಣವನ್ನು ಕಲ್ಪಿಸಿಕೊಳ್ಳಬೇಕು. ಸಮಾಜದಲ್ಲಿ ಹೆಂಡತಿಯನ್ನು ಪ್ರೀತಿಯಿಂದ ನೋಡಿಕೊಳ್ಳುತ್ತೇವೆ ಎಂದು ಎದೆ ಉಬ್ಬಿಸಿ ಹೇಳುತ್ತಾರೆ. ಆದರೆ ಅವರಿಗೆ ಯಾವುದೇ ಸಂಗತಿಗಳಲ್ಲಿ ಅವಳು ಸಬಲೆ, ನಾನು, ನನ್ನ ನಿರ್ಣಯ ಅಂದರೆ ಹೆಂಗಸಿನ ನಿರ್ಣಯ ಮತ್ತು ಆಸೆ ಆಕಾಂಕ್ಷೆಗಳನ್ನು ನಿವಾರಿಸಿಕೊಳ್ಳಬೇಕಾದಂತಹ ವಾತಾವರಣವನ್ನು ಸಾಮಾಜಿಕ ವಲಯದಲ್ಲಿ ಮತ್ತು ಆರ್ಥಿಕ ವಲಯ ದಲ್ಲಿಯೂ ಇಲ್ಲ. ಮನೆಯ ಒಳಗೂ ಇಲ್ಲ, ಮನೆಯ ಹೊರಗೂ ಇಲ್ಲ, ಹೀಗಾಗಿ ಸಬಲೀಕರಣ ಪ್ರಕ್ರಿಯೇ ಆಗುವುದಕ್ಕಿಂತ ಮುಂಚೆ ಅಂದರೇ ಸಹಾಯದ ಪ್ರಕ್ರಿಯೇ ಆಗಿದೆ. ಪ್ರೀತಿ, ದಯೆಯಿಂದ ನೋಡುವ ಅರ್ಥವೆಂದರೆ ದಯೆ, ಅನುಕಂಪ ತೋರಿಸುತ್ತಾನೆಯೇ ಹೊರತು ನೀನು ನನಗೆ ಸಮಾನಳು ಎಂದು ಯಾವತ್ತೂ ತೋರುತ್ತಿಲ್ಲ. ಯಾಕೆಂದರೆ ಒಟ್ಟು ಸಾಮಾಜಿಕ ಚಿಂತನೆಯೇ ಪುರುಷ ಪರವಾಗಿ ನಿಂತಿದೆ.

೨.೩. ರಾಜಕೀಯ ವಲಯ

ದೇಶದ ಚರಿತ್ರೆಯನ್ನು ನೋಡಿದಾಗ ಆಡಳಿತ ನಡೆಸಿರುವ ರಾಣಿಯರು, ಶ್ರೀಮಂತರ ಪುತ್ರಿಯರು ಅಥವಾ ಶ್ರೀಮಂತ ಪತ್ನಿಯರು ಎಂಬುದು ತಿಳಿದುಬರುತ್ತದೆ. ಮತ್ತೊಂದು ಗಮನಿಸಬೇಕಾದ ಅಂಶವೆಂದರೆ ಬಹಪಾಲು ಸ್ತ್ರೀಯರು ಯುದ್ಧದಲ್ಲಿಯೇ ಅಥವಾ ರೋಗರುಜನಗಳಿಂದಲೇ ಅವಸಾನ ಹೊಂದಿದ ರಾಜನ ವಿಧವೆಯರು ಗಂಡು ಮಕ್ಕಳು ಇಲ್ಲವಾದಾಗ ಅಥವಾ ಅಪ್ರಾಪ್ತ ವಯಸ್ಕರಿದ್ದಾಗ ಮಾತ್ರ ರಾಜಕೀಯ ಕ್ಷೇತ್ರಕ್ಕೆ ಪಾದಾರ್ಪಣೆ ಮಾಡಿ ತಮ್ಮ ಶೌರ್ಯ ಧೀಮಂತಿಕೆ ತೋರಿದವರಾಗಿದ್ದಾರೆ. ಆದರೂ ಕೂಡ ರಾಜನ ಇತಿಹಾಸ ಬರೆದಂತೆ ರಾಣಿಯರ ಇತಿಹಾಸ ಗುರುತಿಸಲ್ಪಟ್ಟಿಲ್ಲ. "ಹೆಣ್ಣಿನ ಸಂಗೀತ, ನೃತ್ಯ, ಅಭಿನಯ, ಕಲೆಯನ್ನು ವರ್ಣಿಸುವಾಗ ಇರಬಹುದಾದ ಹುರುಪು ಆಕೆಯ ಆಡಳಿತ ಕ್ರಮ, ರಾಜಕೀಯ ನೀತಿ ದಾಖಲಿಸುವುದರಲ್ಲಿ ಕಂಡುಬರುವುದಿಲ್ಲ".[೧೪] ಆಯಾ ಸಾಮ್ರಾಜ್ಯಗಳಲ್ಲಿ ರಾಜನಿಗೆ ದೊರೆಯುವ ಗೌರವ ರಾಣಿಯರಿಗೂ ದೊರೆಯುತ್ತಿತ್ತು. ಅಂದರೆ ರಾಜನಿಗಿರುವಂತೆ ರಾಣಿಯರಿಗೂ ಅವರು ಹೋಗಿ ಬರುವೆಡೆಗಳಲ್ಲೆಲ್ಲ ಊಳಿಗದ ಹೆಣ್ಣುಗಳಿಂದ ರಾಜಗೌರವ ಸಲ್ಲುತ್ತಿತ್ತು. ರಾಜ ಜೊತೆಯಲ್ಲಿಯೇ ತಮ್ಮ ರಾಣಿಯರನ್ನು ಬೇಟೆಯಾಡಲೂ, ಯುದ್ಧಕ್ಕೆ ಮತ್ತು ರಾಜಕೀಯ ಜೀವನದಲ್ಲಿ ಸಮಭಾಗ ಪಡೆದಿದ್ದಾಳೆ ಎನ್ನುವಂತೆ ರಾಣಿಯರಿಗೆ ಕೆಲವಾರು ಜವಾಬ್ದಾರಿಗಳನ್ನು ಅವರ ಪಾಲಿಗೆ ಮುಡುಪಾಗಿಟ್ಟಿದ್ದರು. ಇವರಿಗೆ

ಯಾವುದೇ ರೀತಿಯ ಅಧಿಕಾರ ಎನ್ನುವುದು ಅವಳ ಕೈಯಲ್ಲಿ ಇರುತ್ತಿರಲಿಲ್ಲ. ಇವಳು ಕೇವಲ ನಾಮಕಾಸ್ಥವಾಗಿ ಮತ್ತು ರಾಜನ ಭೋಗದ ವಸ್ತುಗಳಲ್ಲಿ ಒಂದಾಗಿ ಕಂಡುಬರುತ್ತಾಳೆ. ಅಂತವರಲ್ಲಿ ಕೆಲವರನ್ನು ಈ ರೀತಿಯಾಗಿ ಗುರುತಿಸಬಹುದಾಗಿದೆ. ''ಬಾದಾಮಿ ಚಾಲುಕ್ಯ ಮೊದಲನೆ ವಿಕ್ರಮಾದಿತ್ಯನ ಮಡದಿ ಗಂಗಮಹಾದೇವಿ ಪತಿಯೊಂದಿಗೆ ಯುದ್ಧಭೂಮಿಯಲ್ಲಿ ದಾನನೀಡಿದ, ಚಾಲುಕ್ಯ ಎರಡನೆಯ ವಿಕ್ರಮಾದಿತ್ಯನ ಮಡದಿಯರಾದ ಲೋಕಮಹಾದೇವಿ ತ್ರೈಲೋಕ ಮಹಾದೇವಿ, ರಾಷ್ಟ್ರಕೂಟ ಧ್ರುವರಾಜನ ಮಡದಿ ಶೀಲ ಮಹಾದೇವಿ, ಆರನೇಯ ವಿಕ್ರಮಾದಿತ್ಯನ ಮಡದಿಯರಾದ ಮಾಳಲದೇವಿ, ಸಾಲದೇವಿ, ಸಗ್ಗಲದೇವಿ, ಹೊಯ್ಸಳ ವಿಷ್ಣುವರ್ಧನನ ಮಡದಿ ರಾಜತಿ ಚಿಕ್ಕಶಾಂತಿಯರು''[೧೫] ಹೀಗೆ ಇನ್ನೂ ಹಲವಾರು ರಾಣಿಯರು ಸಾಮ್ರಾಜ್ಯದ ಹಿತರಕ್ಷಣೆಗಾಗಿ ರಾಜನ ಶ್ರೇಯಸ್ಸಿಗಾಗಿ ರಾಣಿಯರು ಶ್ರಮಿಸಿರುವುದನ್ನು ಭಾರತದ ಚರಿತ್ರೆಯಿಂದ ತಿಳಿಯಬಹುದು.

ನಮ್ಮ ಭಾರತ ಚರಿತ್ರೆಯಲ್ಲಿ ಮಹಿಳೆಯರು ರಾಜ್ಯಭಾರವನ್ನು ಮುಂದೊರೆಸಿಕೊಂಡು ಹೋಗಿರುವುದನ್ನು ಅಲ್ಪ ಪ್ರಮಾಣದಲ್ಲಿ ಕಾಣಬಹುದಾಗಿದೆ. ಉದಾ : ರಾಣಿಯರ ಕತೆಯನ್ನು ಅಥವಾ ಅವರ ಆಡಳಿತವನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಹೋದಂತೆಲ್ಲಾ ರಾಣಿಯರು ಆಡಳಿತ ನಿರ್ವಹಣೆ ಮಾಡಿರುವುದು, ಅಧಿಕಾರವನ್ನು ವಹಿಸಿಕೊಂಡಿರುವುದು ತನ್ನ ಪತಿಯು ಅಕಾಲಿಕ ಮರಣಕ್ಕೆ ತುತ್ತಾದಾಗ, ಅಥವಾ ವಂಶದ ಕುಡಿ ಇಲ್ಲದೆ ಇದ್ದಾಗ ಅಥವಾ ವಂಶದ ಕುಡಿ ಅಪ್ರಾಪ್ತ ವಯಸ್ಕನಾಗಿದ್ದಾಗ ಮಾತ್ರ ರಾಣಿಗೆ ರಾಜ್ಯದ ಆಡಳಿತದ ಸೂತ್ರ ಕೈಗೆ ದೊರಕಿರುತ್ತದೆ. ಯಾಕೆಂದರೆ ಆ ಮನೆತನದಿಂದ ಅಧಿಕಾರ ಆಚೆ ಹೋಗದಂತೆ ನೋಡಿಕೊಳ್ಳುವುದಕ್ಕೋಸ್ಕರ ರಾಣಿಯರಿಗೆ ತಾತ್ಕಾಲಿಕವಾಗಿ ಆಸ್ಥಾನವನ್ನು ಕಾಪಾಡಿಕೊಳ್ಳುವುದಕ್ಕಾಗಿ ಅಧಿಕಾರ ದೊರೆಯುತ್ತಿತ್ತು. ಇಲ್ಲಿ ರಾಣಿಯರು ಕೇವಲ ಪ್ರತಿನಿಧಿಯಾಗಿ ಕಾರ್ಯನಿರ್ವಹಿಸಬೇಕಾಗುತ್ತದೆ. ಅಂದರೆ, ಗಂಡನ, ಮಗನ, ಅಥವಾ ದತ್ತು ಮಗನ ಪ್ರತಿನಿಧಿಯಾಗಿ ಆಡಳಿತವನ್ನು ನೋಡಿಕೊಂಡು ಹೋಗಬೇಕಾಗಿತ್ತು. ಗಂಡನ ಅಧಿಕಾರವನ್ನು ಮತ್ತು ಆ ರಾಜ್ಯದ ಗೌರವವನ್ನು ಉಳಿಸುವುದಕ್ಕಾಗಿ ಪ್ರತಿನಿಧಿಯಾಗಿ ಅಧಿಕಾರವನ್ನು ವಹಿಸಿಕೊಂಡು ಹೋರಾಡಿದ ವೀರವನಿತೆಯರೆಂದರೆ, ಮಹಾರಾಷ್ಟ್ರ ರಾಜ್ಯದ ಝೂನ್ಸಿರಾಣಿ ಲಕ್ಷ್ಮೀಬಾಯಿ, ಕರ್ನಾಟಕ ರಾಜ್ಯದ ಕೆಳದಿ ಚೆನ್ನಮ್ಮ, ಬಿದನೂರಿನ ವೀರಮ್ಮ, ಬೆಳವಡಿ ಮಲ್ಲಮ್ಮ, ಕಿತ್ತೂರು ಚೆನ್ನಮ್ಮ, ಮತ್ತು ವರಂಗಲ್ಲಿನ ರುದ್ರದೇವ ಗೊಂಡವನದ ರಾಣಿ ದುರ್ಗಾವತಿ, ಮರಾಠದ ಶಿವಾಜಿಯ ಮಗನಾದ ರಾಜರಾಮನ ಪತ್ನಿ ರಾಣಿ ತಾರಾಬಾಯಿ, ಹೋಳ್ಕರ್ ರಾಜ್ಯದ ರಾಣಿ ಅಹಲ್ಯಾಬಾಯಿ''[೧೬] ಇನ್ನು ಮುಂತಾದ ವೀರವನಿತೆಯರು ರಾಜ್ಯವಾಳಿದ ರಾಣಿಯರಾಗಿದ್ದಾರೆ. ಮಗನ ಅಥವಾ ದತ್ತು ಮಗನ ಪ್ರತಿನಿಧಿಯಾಗಿ ಕೆಲಸ ಮಾಡುವಾಗ ಅಧಿಕಾರವನ್ನು ಉಳಿಸಿಕೊಳ್ಳಲು ಪ್ರಯತ್ನಿಸಿದಳೇ ಹೊರತು ಅಧಿಕಾರವನ್ನು ಅನುಭವಿಸಿಲ್ಲ. ಹೆಂಗಸರು ತಾತ್ಕಾಲಿಕವಾಗಿ ಅಧಿಕಾರದಲ್ಲಿದ್ದರೂ

ಸಹ ಅವರು ಗಂಡಸರಿಗಿಂತ ಅತ್ಯಂತ ತೀವ್ರವಾಗಿ ಸಮಸ್ಯೆಗಳನ್ನು ಎದುರಿಸಿದರೂ ಸಹ ಕೆಲವು ಹೆಂಗಸರ/ ರಾಣಿಯರ ಹೆಸರುಗಳು ಮಾತ್ರ ಚರಿತ್ರೆಯಲ್ಲಿ ದಾಖಲಾಗಿದೆ. ಎಷ್ಟೋ ಜನ ಮಹಿಳೆಯರು ತಮ್ಮ ಸಾಮ್ರಾಜ್ಯದ ರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಮುಡಪಾಗಿಟ್ಟ, ಹೆಂಗಸರ ಹೆಸರುಗಳು ನಾಪತ್ತೆಯಾಗಿವೆ. ಸಾಮ್ರಾಜ್ಯದ ರಕ್ಷಣೆಗಾಗಿ ಹೋರಾಡಿದ ಹೆಂಗಸರ ಸಾಹಸಮಯ ಘಟನೆಗಳನ್ನು ಒಂದೊಂದಾಗಿ ಸೂಕ್ಷ್ಮವಾಗಿ ಅಭ್ಯಾಸಿಸುತ್ತಾ ಹೋದಂತೆಲ್ಲ ಓದುಗರ ಮನಸ್ಸು ತಲ್ಲಣಗೊಳ್ಳುತ್ತದೆ.

ಸ್ವಾತಂತ್ರ್ಯ ಪೂರ್ವದಲ್ಲಿ ಮತ್ತು ಸ್ವಾತಂತ್ರ್ಯದ ನಂತರ ಕೆಲವು ದಿನಗಳವರೆಗೆ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಲು ಮತ್ತು ತಾವು ರಾಜಕೀಯದಲ್ಲಿ ತೊಡಗಿಸಿಕೊಳ್ಳಬೇಕಾದರೂ ಅಥವಾ ತಮ್ಮ ಬೇಡಿಕೆಗಳಿಗೆ ಪರಿಹಾರ ಕಂಡುಕೊಳ್ಳಬೇಕಾದರೂ ಸಹ ಪ್ರಭುತ್ವದ ಜೊತೆ ಹೋರಾಟ ಮಾಡಿರಲಿಲ್ಲ, ಪ್ರಭುತ್ವವನ್ನು ಎಂದೂ ಕೇಳಿರಲಿಲ್ಲ. ಬದಲಾಗಿ ಕುಟುಂಬದ ಯಜಮಾನನ್ನು, ಮಠಾಧಿಪತಿಯನ್ನು ಕೇಳಿಕೊಳ್ಳುವುದು. ಅಂದರೆ ರಾಜಕೀಯದ ವಲಯದಲ್ಲಿನ ಅಧಿಕಾರಸ್ಥರನ್ನು ಎಂದೂ ಕೇಳಿಕೊಂಡಿರಲಿಲ್ಲ. ಅಂದರೆ ಮಹಿಳೆಯರು ಖಾಸಗಿಯವಳಂತೆ, ತನ್ನ ಗಂಡನ ಅಥವಾ ಮಠಾದಿಪತಿಗಳ ಹತ್ತಿರ ಅಹವಾಲುಗಳ ರೂಪದಲ್ಲಿ ನಮಗೆ ಇಂತಹ ಸಮಸ್ಯೆಗಳಿವೆ ಅವುಗಳನ್ನು ಪರಿಹರಿಸಿಕೊಡಬೇಕೆಂದು ಅಂಗಲಾಚುತ್ತಿದ್ದರು. ಇಂತಹ ಪರಿಸ್ಥಿತಿಯಲ್ಲಿ ಪುರುಷ ರಾಜಕಾರಣಿಗಳು ಮಹಿಳೆಯರನ್ನು ಶೋಷಣೆ ಮಾಡುತ್ತಾ ಲಾಭ ಪಡೆದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಈ ಒಳತಾರತಮ್ಯವನ್ನು ಅರಿತ ಬ್ರಿಟಿಷರು ಭಾರತದಲ್ಲಿ ಸ್ತ್ರೀ-ಪುರುಷರ ಮಧ್ಯೆ ಭೇದ ಕಲ್ಪಿಸಲು ಸಂಚುಹೂಡಿದರು. ಇದನ್ನು ತಿಳಿದು ಎಚ್ಚೆತ್ತುಕೊಂಡ ಗಾಂಧೀಜಿ. ೧೯೧೫ ಏಪ್ರಿಲ್ ೧೬ರಂದು ಅವರು ಎಲ್ಲವರ್ಗ ಹಾಗೂ ಸಮುದಾಯಗಳ ಮಹಿಳೆಯರನ್ನು ಕೂಡಿಸಿ ಸಭೆಯನ್ನುದ್ದೇಶಿಸಿ ಮಾತನಾಡಿದರು. "ಪುರುಷರು ನಡೆಸುತ್ತಿರುವ ಸತ್ಯಗ್ರಹ ಚಳುವಳಿಯ ಪೂರ್ಣ ಸಫಲತೆಗಾಗಿ ಮಹಿಳೆಯರೆಲ್ಲರೂ ಸತ್ಯಗ್ರಹ ಚಳುವಳಿಯಲ್ಲಿ ಒಂದಾಗಬೇಕು ಎಂದು ಕರೆನೀಡಿದರು."[೧೭] ಹಿಂದೂ ಮಹಿಳೆಯರು ರಾಜಕೀಯ ಚಳುವಳಿಯನ್ನು ಸೇರಬೇಕೆಂದು ಆಗ್ರಹಪಡಿಸುವಾಗಲೆಲ್ಲ ಗಾಂಧಿಯವರು ರಾಮಾಯಣದಂತಹ ಪುರಾಣ ಕತೆಗಳನ್ನು ನೆನಪು ಮಾಡಿಕೊಳ್ಳಲು ಹೇಳುತ್ತಿದ್ದರು. ಬ್ರಿಟಿಷರ ಒಡೆದು ಆಳುವ ಪದ್ಧತಿಯನ್ನು ಅರಿತು ಗಾಂಧಿಯವರು ಮಹಿಳೆಯರನ್ನು ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಲೇ ಬೇಕು ಎಂದು ರಾಜಕೀಯ ವಲಯಕ್ಕೆ ಪ್ರವೇಶಿಸಲು ಅವಕಾಶವನ್ನು ಕೊಟ್ಟರು. ಈ ಸಮಯದಲ್ಲಿ ಗಾಂಧಿಯವರು ಮಹಿಳೆಯರಲ್ಲಿ ವಿನಂತಿಸಿಕೊಂಡಿದ್ದೆಂದರೆ ಈಗ ನಿಮ್ಮ ವೈಯಕ್ತಿಕ ಸಮಸ್ಯೆಗಳನ್ನು ಮರೆತು ಬಿಡಿ, ಈಗ ಸದ್ಯಕ್ಕೆ ರಾಷ್ಟ್ರ ರಾಜಕೀಯದಲ್ಲಿ ನೀವು ಭಾಗವಹಿಸಿ, ರಾಷ್ಟ್ರೀಯ ಚಳುವಳಿಯಲ್ಲಿ ನೀವು ಮುಂದಾಗಬೇಕು ಎಂದು ಕರೆನೀಡಿದರು. ಗಾಂಧಿ ಮಾತಿಗೆ ಮನಸೋತ ಮಹಿಳೆಯರು ತಮ್ಮ ಸಮಸ್ಯೆಗಳನ್ನು ಬದಿಗೊತ್ತಿ, ಸಂಪೂರ್ಣವಾಗಿ ರಾಷ್ಟ್ರದ ರಾಜಕಾರಣದಲ್ಲಿ

ತೊಡಗಿಕೊಂಡರು. ಇಡೀ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರು ಮಾಡಿದಂತಹ ಅನೇಕ ಕೆಲಸ ಕಾರ್ಯಗಳನ್ನು ಮತ್ತು ರಾಷ್ಟ್ರಕ್ಕೆ ಸಲ್ಲಿಸಿದ ಕೊಡುಗೆಗಳನ್ನು ಅತಿಹೆಚ್ಚಿನ ಸಂಖ್ಯೆಯಲ್ಲಿ ಚರಿತ್ರೆ ದಾಖಲಿಸಿದ್ದು ಕಂಡುಬರುವುದಿಲ್ಲ. ಮಾನವ ಜನಾಂಗದಲ್ಲಿ ಸ್ತ್ರೀ-ಪುರುಷ ಎನ್ನುವ ಭೇದವನ್ನು ಕಲ್ಪಿಸುವ ರಾಜಕೀಯ ಎಂದಿನಿಂದ ಹುಟ್ಟಿಕಂಡಿತೋ ಅಂದಿನಿಂದ ಎಲ್ಲ ವಲಯಗಳಲ್ಲಿ ಮಹಿಳೆಯರಿಂದ ಸೇವೆ ಮಾಡಿಸಿಕೊಳ್ಳಲು ಬಯಸಿದ್ದಾರೆ. ಆದರೆ ಮಹಿಳೆಯರಿಗೆ ಅಧಿಕಾರ ಕೊಡಬೇಕು ಎಂದಾಗಲೆಲ್ಲ ಅದಕ್ಕೆ ಅಡೆತಡೆಗಳನ್ನು ಒಡ್ಡುತ್ತಾರೆ.

ಗಾಂಧಿಯವರು ಮಹಿಳೆಯರನ್ನು ಹುರಿದುಂಬಿಸಲು ಮತ್ತು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಸಕ್ರೀಯವಾಗಿ ಪಾಲ್ಗೊಳ್ಳುವುದಕ್ಕೋಸ್ಕರ ಮಹಿಳೆಯರೆಂದರೆ ರಾಷ್ಟ್ರವನ್ನು, ತಮ್ಮನ್ನು ಕೂಡಿಯೇ ಕಾಪಾಡಿಕೊಂಡು ಹೋಗುವ ಸಾಮರ್ಥ್ಯವಿರುವವರು ಎಂದು ಸಾರುತ್ತಾ ಸ್ವಾತಂತ್ರ್ಯ ಸಂಗ್ರಾಮಕ್ಕೆ ಮಹಿಳೆಯರೇ ಸ್ವಯಂ ಆಗಿ ತೊಡಗಿಕೊಳ್ಳುವಂತೆ ಪ್ರೇರೆಪಿಸುತ್ತಿದ್ದರು. ಗಾಂಧಿಯವರು ಪ್ರವಾಸ ಮಾಡುತ್ತಾ ಭಾಷಣ ಮಾಡಿದಾಗಲೆಲ್ಲಾ ಮಹಿಳೆಯರಿಗೆ ವಿದೇಶಿ ವಸ್ತ್ರಗಳನ್ನು ತ್ಯಜಿಸಬೇಕೆಂದೂ, ಖಾದಿಯನ್ನು ನೂಲಬೇಕೆಂದೂ ಬ್ರಿಟಿಷ್ ಕಾನೂನುಗಳನ್ನು ಬಹಿರಂಗವಾಗಿ ಮುರಿಯಬೇಕೆಂದು ಆಗ್ರಹಪಡಿಸುತ್ತಿದ್ದರು. ಸತ್ಯವತಿ ದೇವಿ ಮಹಿಳೆಯರನ್ನುದ್ದೇಶಿಸಿ ಮಾತನಾಡುತ್ತಾ 'ರಣರಂಗಕ್ಕೆ ಇಳಿಯಿರಿ, ಈ ವಿದೇಶಿಯರ ಯಜಮಾನಿಕೆ ಅಸಹನೀಯವಾಗಿದೆ' ಎಂದು ಮಹಿಳೆಯರಿಗೆ ಕರೆನೀಡುವಾಗ ಕ್ರಾಂತಿಕಾರಿ ಗೀತೆಗಳಿಂದ ಮಹಿಳೆಯರನ್ನು ಹುರಿದುಂಬಿಸುತ್ತಿದ್ದಳು. ಉದಾಹರಣೆಗೆ

ಧುಮುಕಿರಿ ಉರಿಯುವ ಬೆಂಕಿಯಲ್ಲಿ
ಗಟ್ಟಿನಿಲ್ಲರಿ ರಣರಂಗದಲ್ಲಿ
ಯುದ್ಧದಿಂದ ಹಿನ್ನೆಡೆಯದಿರಿ
ಸೋದರಿ ಸತ್ಯವತಿ ಮಾತು ಕೇಳಿರಿ
ನಡೆಯಿರಿ ಪುರುಷರ ಸರಿಸಿ ಹಿಂದಕ್ಕೆ
ಸಾವನೆದುರಿಸಲು ಮುಂದ ಮುಂದಕೆ
ಗುಂಡಿಗೆ ಲಾಟಿಗೆ ಹೆದರದಿರಿ
ತಲೆಯನ್ನೊಡ್ಡಿರಿ ಹಿಂದೆ ಸರಿಯದೆ
ಸೋದರ ಸತ್ಯವತಿ ಮಾತುಕೇಳಿರಿ[೨೮]

ಭಾರತದ ಸ್ವಾತಂತ್ರ್ಯ ಹೋರಾಟಕ್ಕೆ ಮಹಿಳೆಯರ ಕೊಡುಗೆ ಎಂದಾಗಲೆಲ್ಲ ನಮಗೆ ನೆನಪಾಗುವುದೇ ರಾಜಕೀಯ ಮನೆತನಗಳಿಂದ ಬಂದ ಕಿತ್ತೂರು ರಾಣಿಚೆನ್ನಮ್ಮ. ಝಾನ್ಸಿರಾಣಿ ಲಕ್ಷ್ಮೀಬಾಯಿ, ಕಮಲಾದೇವಿ ಚಟ್ಟೋಪಾಧ್ಯಾಯ, ಸರೋಜಿನಿ ನಾಯ್ಡು, ಆ್ಯನಿಬೆಸೆಂಟ್, ಇನ್ನು ಕೆಲವಾರು ಮಹಿಳೆಯರ ಹೆಸರುಗಳು ಮಾತ್ರ ಕಾಣುತ್ತೇವೆ. ಗ್ರಾಮೀಣ ಮಹಿಳೆಯರು ಗಾಂಧೀಜಿ ಬರುವಿಕೆಯನ್ನು ಸ್ವಾಗತಿಸಿ 'ಜೈಹಿಂದ' ಎಂದು

ಕೂಗಿದ್ದಕ್ಕಾಗಿ ಜೈಲುವಾಸವನ್ನು ಅನುಭವಿಸಿದ ಮಹಿಳೆಯರು, ಮತ್ತು ಚಳುವಳಿಯಲ್ಲಿ ಭಾಗವಹಿಸಿದ ಮಹಿಳೆಯರ ಹೆಸರುಗಳು ನಾಪತ್ತೆಯಾಗುತ್ತಿವೆ. ಆಂಗ್ಲ ಮಹಿಳೆ ಆ್ಯನಿಬೆಸೆಂಟ್ ಭಾರತದಲ್ಲಿ ಹೋಂರೂಲ್ ಚಳುವಳಿಯ ನಾಯಕರಾದುದ್ದು, ಭಾರತೀಯ ಮಹಿಳೆ ಸರೋಜಿನಿ ನಾಯ್ಡು ಉಪ್ಪಿನ ಸತ್ಯಗ್ರಾಹದಲ್ಲಿ ಮುಂದಾಳಾಗಿ ನಿಂತಾಗ, ಕರ್ನಾಟಕದ ಮಹಿಳಾ ನಾಯಕರನ್ನು ಈ ಮುಂದಿನಂತೆ ಗುರುತಿಸಬಹುದಾಗಿದೆ. "ಕುಮಟಾದ ಗಂಗಾಬಾಯಿ, ಎಂ.ಮಿಜ್ಞಾನಕರ, ಕುಮುದ ಕಲ್ಯಾಗ, ಅಂಬಾಬಾಯಿ ಶಾನುಭಾಗ, ಉಮಾಬಾಯಿ ಕುಂದಾಪುರ, ಕೃಷ್ಣಬಾಯಿ ಪಣಬೇಕಾರರು, ರಾಷ್ಟ್ರೀಯ ಚಳುವಳಿಯಲ್ಲಿ ಭಾಗವಹಿಸಿದ್ದರು.[೧೯] "ಬಳ್ಳಾರಿ ಸಿದ್ಧಮ್ಮ, ನಾಗಮ್ಮ ಪಾಟೀಲ್, ಸುಬ್ಬಮ್ಮ ಜೋಯಿಸ್, ಟಿ.ಸುನಂದಮ್ಮ, ಯಶೋಧರಮ್ಮ ದಾಸಪ್ಪ, ನಾಗರತ್ನಮ್ಮ ಹಿರೇಮಠ್, ಪದ್ಮಾವತಿ ಬಿದಿರಿ, ಜಯದೇವಿ ತಾಯಿಲಿಗಾಡೆ, ಶಕುಂತಲಾ ಕುರ್ತಕೋಟಿ, ಸಿದ್ಧಮತಿ ಮೈಲಾರ್"[೨೦] ಇನ್ನು ಅನೇಕ ಮಹಿಳಾ ನಾಯಕಿಯರು ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ ಸೇವೆಸಲ್ಲಿಸಿದ್ದಾರೆ.

ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗಿಯಾದ ಕೆಲಮಹಿಳೆಯರನ್ನು ಬಿಟ್ಟರೆ, ಅಸಂಖ್ಯಾತ ಮಹಿಳೆಯರ ಭಾಗವಹಿಸುವಿಕೆಯ ಬಗ್ಗೆ ಸರಿಯಾದ ದಾಖಲಾತಿ ಆಗಿಲ್ಲ. ಹೀಗಾಗಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಪುರುಷ ಸಾಧನೆಯನ್ನು ಮಾತ್ರ ಗುರುತಿಸುತ್ತಾ ಮಹಿಳೆಯರ ಸಾಧನೆಯ ಬಗ್ಗೆ ಮೌನವಾಗುಳಿಯುವ ಸಂಪ್ರದಾಯವು ನಮ್ಮ ಚರಿತ್ರಕಾರರಿಗೆ ರೂಢಿಯಾಗಿ ಹೋಗಿದೆ.

ರಾಷ್ಟ್ರೀಯ ಆಂದೋಲನದಲ್ಲಿ ಮಹಿಳೆಯರು ಹೆಚ್ಚಾಗಿ ಕಂಡುಬರುವ ಕಾರ್ಯಕ್ಷೇತ್ರಗಳೆಂದರೆ, ಭೂಗತ ಚಟುವಟಿಕೆಗಳಲ್ಲಿ ಭಾಗವಹಿಸುವುದು, ಕರಪತ್ರಗಳನ್ನು ಗುಪ್ತವಾಗಿ ಹಂಚುವುದು, ಜಂಗಲ್ ಸತ್ಯಗ್ರಹ, ನಾರಿಮನ್ ಚಳುವಳಿ, ಮೆರವಣಿಗೆಗಳಲ್ಲಿ ಭಾಗವಹಿಸುವುದು. ಪ್ರಬೇತ ಪೇರಿ, ಧ್ವಜ ವಂದನೆಯಲ್ಲಿ ಭಾಗವಹಿಸುವುದು, ಹೀಗೆ ಇನ್ನು ಹಲವಾರು ಕಾರ್ಯಚಟುವಟಿಕೆಗಳಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದರು. ಹೆಂಗಸರು ಸ್ವಾತಂತ್ರ್ಯಕ್ಕಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟಿದ್ದರು./ ಈ ರೀತಿಯಾಗಿ ಶ್ರಮವಹಿಸಿದ ಮಹಿಳೆಯರನ್ನು ಸ್ವಾತಂತ್ರ್ಯ ದೊರೆತ ನಂತರ ಅಥವಾ ಸ್ವಾತಂತ್ರ್ಯ ಸಂಗ್ರಾಮ ಮುಗಿದ ಮೇಲೆ, RETURN TO HOMES ಎಂದು ಗಾಂಧೀಜಿಯವರು ಹೇಳಿದರು. ಅಂದರೆ ಸಾರ್ವಜನಿಕವಾಗಿ ನೀವು ಭಾಗವಹಿಸುವುದು ಸಾಕು, ಸಮಸ್ಯೆ ಪರಿಹಾರವಾಗಿದೆ. ಇನ್ನು ನಿಮ್ಮ ಮನೆಗಳನ್ನು ಸೀತೆಯರ ತರ ಸುರಕ್ಷಿತವಾಗಿ ನೋಡಿಕೊಳ್ಳಿ ಎಂದು ಹೇಳಿದ್ದಾರೆ. ಅಂದರೆ ಗಾಂಧೀಜಿ ಮೊದಲುಗೊಂಡು ಸಾಮಾಜಿಕ ಚಿಂತನೆಗಳು ನಮ್ಮ ಹೆಂಗಸರಿಗೆ ವಹಿಸಿದ ಕರ್ತವ್ಯ ಎಂದರೆ ಸೀತೆಯರತರ ಗಂಡನ ಸೇವೆ ಮಾಡುತ್ತ ಇರುವುದು. ಗಂಡನಿಗೆ ನಿಷ್ಠೆಯಾಗಿ ಬಾಳುವುದು. ಈ ಎಲ್ಲ ಅಂಶಗಳಿಂದ ಕುಟುಂಬದ ರಕ್ಷಣೆ ಆಗುತ್ತದೆ ಎಂದು ಪುರುಷ ಪ್ರಧಾನ ಸಮಾಜದಲ್ಲಿ ಗಾಂಧೀಜಿ ಮೊದಲುಗೊಂಡು ಈ

ಚಿಂತನೆಗಳನ್ನೇ ಅಳವಡಿಸಿಕೊಂಡಿದ್ದಾರೆ. ಮಹಿಳೆಯರು ಗಂಡಸಿನ ಎಲ್ಲಾ ದಬ್ಬಾಳಿಕೆಗೆ ಒಳಗಾದಾಗ ಕುಟುಂಬದ ರಕ್ಷಣೆ ಆಗುತ್ತದೆ. ಆದರೆ ಹೆಂಗಸಿನ ಜೀವಿತ ಬದುಕು ಸರ್ವನಾಶವಾಗುತ್ತದೆ. ಸಮಾಜ ಅಥವಾ ಕುಟುಂಬ ಮಹಿಳೆಯರನ್ನು ಅತಂತ್ರ ಸ್ಥಿತಿಯಲ್ಲಿ ಇಡುವುದರಿಂದ ಮಹಿಳೆಯರು ರಾಜಕೀಯ ವಾಗಿಯೂ ಕೂಡ ಅಬಲೆಯಾಗುತ್ತಾಳೆ. ಅವಳು ರಾಜಕೀಯದಲ್ಲಿ ಭಾಗವಹಿಸುತ್ತಿದ್ದಾಳೆ ಎಂದು ಹೇಳುತ್ತೇವಲ್ಲ, ಅದು ಒಂದು ರೀತಿಯ ಭ್ರಮೆಯಾಗಿದೆ. ಅಲ್ಲಿಯೂ ಕೂಡ ಅವಳು ಸೇವೆ ಸಲ್ಲಿಸುತ್ತಿರು ತ್ತಾಳೆ. ಏಕೆಂದರೆ ನಿಜವಾಗಿ ನಿರ್ಣಾಯಕ ಹಂತದಲ್ಲಿ ಅಧಿಕಾರ ಸಂರಚನೆಯಲ್ಲಿ ಮಹಿಳೇಯರಿಗೆ ಪಾಲು ದೊರೆಯುತ್ತಿಲ್ಲ. ಹೀಗಾಗಿ ಇಂತಹ ಸ್ಥಿತಿಯಲ್ಲಿ ಅವಳು ಸಾಮಾಜಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿ ತನ್ನ ಅಬಲೆ ಎನ್ನುವ ಸ್ಥಿತಿಯನ್ನು ಕಳೆದುಕೊಂಡು ಸಬಲೀಕರಣಗೊಳ್ಳುವುದು ಮತ್ತು ಅವಳ ವ್ಯಕ್ತಿತ್ವವನ್ನು ಅಸ್ಥಿತ್ವವನ್ನು ಉಳಿಸಿಕೊಳ್ಳುವುದು ಹೇಗೆ? ಎನ್ನುವುದನ್ನು ಮುಂದಿನ ಅಧ್ಯಯನದಲ್ಲಿ ಚಿಂತನೆ ಮಾಡಬೇಕಾಗಿದೆ.

ಅಡಿ ಟಿಪ್ಪಣಗಳು

೧. ಡಾ.ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು ಪು.೧೮೭

೨. ಡಾ.ಆರ್.ಇಂದಿರಾ, ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪು.೯

೩. ಅದೇ, ಪು.೯

೪. ಡಾ.ಪ್ರೀತಿ ಶುಭಚಂದ್ರ, ಪೂರ್ವೋಕ್ತ, ಪು.೧೭೦-೧೭೧

೫. ಕೆ.ಭೈರಪ್ಪ, ಭಾರತೀಯ ಸಮಾಜ ಪು.೧೧೩

೬. ಡಾ. ಸರಸ್ವತಿ ಚಿಮ್ಮಲಗಿ, 'ಮಹಿಳೆ ಮತ್ತು ಹೋರಾಟ', ಊರ್ಧ್ವಮುಖಿ, ಪು.೪೨

೭. ಡಾ.ಎಚ್.ಎಸ್.ಶ್ರೀಮತಿ, ''ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಿತಿಗತಿಗಳು'', ಮಹಿಳಾ ಅಧ್ಯಯನ, ಸಂ-೧, ಸಂಚಿಕೆ-೧, ಪು.೭೫

೮. ಚಕ್ರಕೋಡಿ ಈಶ್ವರ ಶಾಸ್ತ್ರೀ(ಅನು), ಮನುಸ್ಮೃತಿ, ಅಧ್ಯಾಯ-೯, ಶ್ಲೋಕ ೩

೯. ಡಾ.ಪ್ರೀತಿ ಶುಭಚಂದ್ರ, ಪೂರ್ವೋಕ್ತ, ಪು.೧೮೫

೧೦. ಟಿ.ಆರ್.ಚಂದ್ರಶೇಖರ್, ಮಹಿಳೆ : ಆರ್ಥಿಕತೆ ಮತ್ತು ಅಭಿವೃದ್ಧಿ, ಪು.೩೦

೧೧. ಅದೇ, ಪು.೧೭೪

೧೨. ಅದೇ, ಪು.೩೧

೧೩. ಡಾ.ಎಚ್.ಎಸ್.ಶ್ರೀಮತಿ, "ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಿತಿಗಳು", ಮಹಿಳಾ ಅಧ್ಯಯನ, ಸಂ-೧, ಸಂಚಿಕೆ-೧, ಉತ್ತರಾಯಣ, ಪು.೭೩

೧೪. ಬಿ.ಟಿ.ಲಲಿತಾನಾಯಕ್, "ಮಹಿಳೆ ಮತ್ತು ಆಡಳಿತ", ಊರ್ಧ್ವಮುಖಿ, ಪು.೧೬

೧೫. ಡಾ.ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಜ, ಪು.೧೮೨

೧೬. ಕೆ.ಭೈರಪ್ಪ, ಭಾರತೀಯ ಸಮಾಜ, ಪು.೫೨೧

೧೭. ಮೂಲ : ಜೆರಾಲ್ಡಿನ್ ಫೋರ್ಬ್ಸ್, ಡಾ.ಎಚ್.ಎಸ್.ಶ್ರೀಮತಿ(ಅನು), ಆಧುನಿಕ ಭಾರತದಲ್ಲಿ ಮಹಿಳೆ, ಪು.೧೮೪-೧೮೫

೧೮. ಅದೇ, ಪು.೨೧೩

೧೯. ಡಾ.ಸೂರ್ಯನಾಥ ಕಾಮತ್(ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ ೧, ಪು.೧೫೩-೧೫೪

೨೦. ಪ್ರೊ.ಬಿ.ಷೇಕ್ ಅಲಿ (ಸಂ), ಕರ್ನಾಟಕ ಚರಿತ್ರೆ, ಸಂ.೨, ಪು.೧೨೫

ಅಧ್ಯಾಯ ೩

ಜಾಗೃತ ಮಹಿಳೆಯರ ಸವಾಲುಗಳು

ಸಾಮಾಜಿಕ ಚೌಕಟ್ಟಿನ ವ್ಯವಸ್ಥೆಯಲ್ಲಿ ಬೇರೆ ಬೇರೆ ವಲಯಗಳಾದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ, ಮಹಿಳೆಯರ ಸ್ಥಾನಗಳು ಕುಂಟಿತಗೊಂಡಿರುವುದರಿಂದ ಅವರು ಅಧೀನ ಸ್ಥಿತಿಯನ್ನು ತಲುಪಿದ್ದಾರೆ. ಅಸಹಾಯಕ ಸ್ಥಿತಿಯಲ್ಲಿರುವ ಮಹಿಳೆಯರ ಮೇಲೆ ನಾನಾ ರೀತಿಯ ಶೋಷಣೆ, ಅತ್ಯಾಚಾರ, ವಧುವಹನ ಹೀಗೆ ಇನ್ನು ಮುಂತಾದ ಭೀಕರವಾದಂತಹ ದುಷ್ಪರಿಣಾಮಗಳನ್ನು ಮಹಿಳೆಯರ ಮೇಲೆ ಹೇರಲಾಗಿದೆ. ಈ ರೀತಿಯ ಶೋಷಣೆಗಳಿಂದ ಬೇಸತ್ತ ಮಹಿಳೆಯರು ಇವುಗಳಿಂದ ತಪ್ಪಿಸಿಕೊಳ್ಳಲು ಅಥವಾ ಮುಕ್ತಿಗೊಳ್ಳಲು, ಇವುಗಳನ್ನು ಮೂಲೆಗುಂಪು ಮಾಡುವುದಕ್ಕಾಗಿ ಮತ್ತು ಸಾಮಾಜದಲ್ಲಿ ವಂಶಪಾರಂಪರಿಕವಾಗಿ ಬೆಳೆದುಕೊಂಡು ಬಂದಂತಹ ಪಿತೃಪ್ರಧಾನ ಕುಟುಂಬಗಳಲ್ಲಿ ಮಹಿಳೆಯರಿಗೆ ಯಾವುದೇ ರೀತಿಯ ಆಸ್ತಿಯ ಹಕ್ಕು, ವಂಶ, ದತ್ತು ಮತ್ತು ಕುಟುಂಬದ ಯಜಮಾನಿಕೆ ಹಾಗೂ ಆರ್ಥಿಕವಾಗಿ ಕುಂಟಿತಗೊಳ್ಳುವುದಕ್ಕೆ ಮೂಲಕಾರಣವಾದ ಶ್ರಮಕ್ಕೆ ತಕ್ಕ ಪ್ರತಿಫಲವಿಲ್ಲದೆ ಇರುವುದು, ಮತ್ತು ಪುರುಷರಿಗೆ ಸರಿಸಮಾನವಾಗಿ ಉದ್ಯೋಗಾವಕಾಶಗಳು ದೊರೆಯದೆ ಇರುವುದು ಅಂದರೆ ಆರ್ಥಿಕವಾಗಿ ಸಬಲರನ್ನಾಗಿಸುವ ಎಲ್ಲ ಕೆಲಸಕಾರ್ಯಗಳನ್ನ ಪುರುಷರೇ ಆಕ್ರಮಿಸಿಕೊಂಡಿರುವುದರ ವಿರುದ್ಧ ಮತ್ತು ಪುರುಷರ ಸರಿಸಮಾನವಾಗಿ ದುಡಿಯುವ ಮಹಿಳೆಯರಿಗೆ ಸರಿಸಮಾನವಾದ ಕೂಲಿ/ ಪ್ರತಿಫಲ ಏಕೆ ದೊರೆಯುತ್ತಿಲ್ಲ, ಎನ್ನುವುದರ ಬಗ್ಗೆ ಮತ್ತು ಮಹಿಳೆಯರಿಗೆ ಶತಮಾನಗಳ ಹಿಂದಿನಿಂದಲೂ ರಾಜಕೀಯದಲ್ಲಿ ಪುರುಷರ ಸರಿಸಮಾನವಾದ ಸ್ಥಾನಗಳು ಏಕೆ ದೊರೆಯುತ್ತಿಲ್ಲ, ಎನ್ನುವ ಚಿಂತನೆಗಳನ್ನು ಕೈಗೆತ್ತಿಕೊಂಡು ಅವುಗಳ ಬಗ್ಗೆ ಚಿಂತನೆ-ಅಲೋಚನೆ ಮಾಡಿ ಅವುಗಳಿಂದ ಹೊರಬರಲು ಮಹಿಳೆಯರು ದೈರ್ಯ ಮಾಡುವಂತೆ ಮಹಿಳಾ ಚಳುವಳಿಗಾರರು ಮತ್ತು ಮಹಿಳಾ ಸಂಘಟನೆಗಳು ಮಹಿಳೆಯರನ್ನು ಹುರಿದುಂಬಿಸಲು ಪ್ರಯತ್ನಿಸಿದರು. ಅಂದರೆ ಮಹಿಳೆಯರ ಅಸಹಾಯಕ ಸ್ಥಿತಿಯಿಂದ ಮತ್ತು ಅಧೀನಸ್ಥಿತಿಯಿಂದ ಹೊರಬರಲು ಶುರುಮಾಡಿದರು.

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಮಹಿಳೆಯರು ಸಮಪಾಲು ಪಡೆದುಕೊಳ್ಳು ವುದಕ್ಕೋಸ್ಕರ ಮತ್ತು ಶೋಷಣೆಗಳ ವಿರುದ್ಧ ಪ್ರತಿಭಟಿಸಲು ಮತ್ತು ಸಾಮಾಜಿಕ ಅನಿಷ್ಟ ಪದ್ಧತಿಗಳಾದ ಸತಿಸಹಗಮನ, ಬಾಲ್ಯವಿವಾಹ, ವಧುದಹನ ಮತ್ತು ವರದಕ್ಷಿಣೆಯ ಕಿರುಕುಳ ಇನ್ನು ಮುಂತಾದ ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸುವುದಕ್ಕಾಗಿ ಹಾಗೂ ಆಸ್ತಿಯ ಹಕ್ಕು, ಮತದಾನದ ಹಕ್ಕು ಮತ್ತು ವಂಶ ಅಥವಾ ದತ್ತ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕೋಸ್ಕರ ಮಹಿಳಾ ಚಳುವಳಿಗಳು ಹಾಗೂ ಸಂಘಟನೆಗಳು ಆರಂಭಗೊಂಡವು.

ಮಹಿಳಾ ಚಳುವಳಿಗಳು ಸಾಮಾಜಿಕ ಸಂಸ್ಥೆಗಳಲ್ಲಿ ಮಹಿಳೆಯರ ಮೇಲೆ ಆಗುತ್ತಿರುವ ಶೋಷಣೆಯನ್ನು ಮತ್ತು ರೂಢಿಸಂಪ್ರದಾಯಗಳನ್ನು ಧಿಕ್ಕರಿಸುವುದಕ್ಕಾಗಿ ಅಥವಾ ಸಂಪೂರ್ಣವಾಗಿ ಒಡೆದು ಹಾಕಿ ಹೊಸದೊಂದು ವ್ಯವಸ್ಥೆಯನ್ನು ನಿರ್ಮಿಸುವ ಸಾಮೂಹಿಕ ಯತ್ನಗಳ ವಿಸ್ತಾರ ವೈವಿದ್ಯವಾಗಿದೆ. ಈ ರೀತಿಯಾಗಿ ಚಳುವಳಿಗಳನ್ನು ಹಮ್ಮಿಕೊಳ್ಳಬೇಕಾದರೆ ಒಬ್ಬ ವ್ಯಕ್ತಿಗಿಂತ ಸಮಷ್ಟಿ, ಒಂದು ಸಮಾಜ ಅಥವಾ ಹಲವಾರು ಮಹಿಳಾ ಗುಂಪುಗಳು ಸೇರಿಕೊಂಡು ಚಳುವಳಿಗಳನ್ನು ಮಾಡುತ್ತವೆ. ಯಾವುದೇ ಚಳುವಳಿಗಾರರು ಚಳುವಳಿಯನ್ನು ಮಾಡುವಾಗ ಮೂರು ಮುಖ್ಯ ಅಂಶಗಳನ್ನು ಎದುರಿಗೆ ಇಟ್ಟುಕೊಂಡು ಚಳುವಳಿಗಳನ್ನು ಹಮ್ಮಿಕೊಳ್ಳಬೇಕಾಗುತ್ತದೆ. ಅವುಗಳೆಂದರೆ ತಾತ್ವಿಕ ಚಿಂತನೆ, ನಿಶ್ಚಿತವಾದ ಗುರಿ ಅಥವಾ ವಿಧಾನ, ಖಚ್ಚಿತವಾದ ನಿಲುವು, ಬೇಡಿಕೆಯ ಬಗ್ಗೆ ನಿರ್ಧಾರಗಳನ್ನು ಮುಂದಿಟ್ಟುಕೊಂಡು ಚಳುವಳಿಗಳನ್ನು ಹಮ್ಮಿಕೊಂಡಾಗ ಮಾತ್ರ ಯಾವುದೇ ಚಳುವಳಿಯು ಪ್ರತಿಫಲವನ್ನು ಪಡೆಯುತ್ತವೆ.

೧೮೫೭ರಲ್ಲಿ ನಡೆದ ಸಿಪಾಯಿ ದಂಗೆಯು ಭಾರತೀಯರಿಗೆ ಆಂಗ್ಲರಿಂದ ಮುಕ್ತಿಪಡೆಯಲು ಅಥವಾ ಭಾರತ ಸ್ವತಂತ್ರಗೊಳ್ಳಲು ಇದೊಂದು ಪ್ರಥಮ ಸ್ವತಂತ್ರ ಸಂಗ್ರಾಮದ ಹೆಜ್ಜೆ ಎಂದು ತಿಳಿದು ಸ್ವತಂತ್ರ್ಯ ಪಡೆಯಲು ಹೋರಾಟಗಳನ್ನು ಆರಂಭಿಸಿದರು. ಹಾಗೆಯೇ ಪ್ರಪ್ರಥಮವಾಗಿ ೧೯೬೦ ರಲ್ಲಿ ಫ್ರಾನ್ಸ್‌ನಲ್ಲಿ ವಿದ್ಯಾರ್ಥಿಗಳು ತಮ್ಮ ಬೇಡಿಕೆಗಳನ್ನು ಪೂರೈಸಿಕೊಳ್ಳುವುದಕ್ಕಾಗಿ ಚಳವಳಿಗಳು ಆರಂಭಗೊಂಡವು. ಇವು ಮೊದಲಿಗೆ ಮಹಿಳಾ ಸಂಘಟನೆಗಳಂತೆ ಅಸಹಾಯಕತೆ ಮತ್ತು ಅಧೀನಸ್ಥಿತಿಯಲ್ಲಿ ಇದ್ದವು. ಇಂತಹ ಪರಿಸ್ಥಿತಿಯಲ್ಲಿ ಮಹಿಳಾ ಸಂಘಗಳು ವಿದ್ಯಾರ್ಥಿ ಚಳವಳಿಗಳಿಗೆ ಕೈಕೂಡಿಸಿ ತಮ್ಮ ಬೇಡಿಕೆಗಳನ್ನು ಪೂರೈಸಲು ಶ್ರಮಿಸಿದರು. ಹಾಗೆಯೇ ಮಹಿಳಾ ಚಳವಳಿಗೆ ವಿದ್ಯಾರ್ಥಿ ಸಂಘಗಳು ಸಹ ಬೆಂಬಲತೋರಿ ಮಹಿಳೆಯರ ಬೇಡಿಕೆಗಳನ್ನು ಪೂರೈಸಿಕೊಳ್ಳಲು ಮತ್ತು ರೂಢಿ-ಸಂಪ್ರದಾಯಗಳಿಂದ ಬೆಳೆದುಕೊಂಡು ಬಂದಂತಹ ಸಾಮಾಜಿಕ ಅನಿಷ್ಟಪದ್ಧತಿಗಳನ್ನು ಹೋಗಲಾಡಿಸಲು ಮತ್ತು ಮಹಿಳಾ ಸಮಸ್ಯೆಗಳನ್ನು ಕುರಿತು ಅಧ್ಯಯನ ಮಾಡಲು ಅಥವಾ ಶೋಷಣೆಯ ಪ್ರತಿಯೊಂದು ಎಳೆಯನ್ನು ಕೂಲಂಕುಶವಾಗಿ ಶೋಧಿಸಲು, ಅವುಗಳಿಗೆ ಪರಿಹಾರವನ್ನು ಕಂಡುಕೊಳ್ಳುವುದಕ್ಕಾಗಿ ವಿಶ್ವವಿದ್ಯಾಲಯಗಳ ಮಟ್ಟದಲ್ಲಿ ಮಹಿಳಾ ಅಧ್ಯಾಯನ ಕೇಂದ್ರಗಳನ್ನು ಸ್ಥಾಪಿಸಬೇಕೆಂದು ಉಗ್ರವಾಗಿ ಹೋರಾಟಗಳನ್ನು ಮಾಡಿದರು. ಈ ಚಳುವಳಿಗಳಿಗೆ ಪರಿಹಾರೋಪಾಯವಾಗಿ ೧೯೬೯ರಲ್ಲಿ ಅಮೇರಿಕಾದ ವಿಶ್ವವಿದ್ಯಾಲಯ ಮಟ್ಟದಲ್ಲಿ ಮಹಿಳಾ ಅಧ್ಯಯನವನ್ನು 'ಡಿಪ್ಲೊಮೋ' ಕೋರ್ಸ್‌ಗಳಾಗಿ ಆರಂಭಗೊಂಡವು. ಪ್ರಪ್ರಥಮವಾಗಿ ಮಹಿಳಾ ಚಳವಳಿಗಳು ಆರಂಭಗೊಂಡಾಗ ಮಹಿಳೆಯರನ್ನು ವಿಭಿನ್ನರೀತಿಯಲ್ಲಿ ಕಾಣುತ್ತಿದ್ದರು. ಅಂದರೆ ಮಹಿಳೆಯರ ಬಗ್ಗೆ ಪುರುಷ ಪ್ರಧಾನರು ಇಂತಿಷ್ಟು ಕಾಳಜಿ ಸಹ ವಹಿಸುತ್ತಿರಲಿಲ್ಲ. ಮನೆಬಿಟ್ಟು ದಾರಿಗಿಳಿದು ಚಳುವಳಿ ಮಾಡುವಂತಹ ಮಹಿಳೆಯರನ್ನು ಅಗೌರವದಿಂದ ಕಾಣುತ್ತಿದ್ದರು. ಒಂದೇ

ಮಾತಿನಲ್ಲಿ ಹೇಳಬೇಕಾದರೆ ಅವರ ಕಡೆ ಇಂತಿಷ್ಟು ಗಮನ ಸಹ ಹರಿಸುತ್ತಿರಲಿಲ್ಲ. ಆದರೆ ಅದೇ ಬೀದಿಯಲ್ಲಿ ಯಾವನೋ ಒಬ್ಬ ಸ್ವಾಮಿ ಅಥವಾ ಧರ್ಮಗುರುವಿನ ಹಿಂದೆ ಕೆಲವಾರು ಜನ ಗುಂಪುಕಟ್ಟಿಕೊಂಡು ಬೀದಿಯಲ್ಲಿ ನಡೆಯುತ್ತಿದ್ದರೆ ಸಮಾಜದ ದೃಷ್ಟಿಯಲ್ಲ ಆಕಡೆಯೇ ಇರುತ್ತಿತ್ತು. ಅಲ್ಲಿ ಏನು ನಡೆಯುತ್ತಿದೆ ಎನ್ನುವ ಕುತೂಹಲ ಜನರಲ್ಲಿ ಮೂಡುತ್ತಿತ್ತು ಎಂದು 'ಮೆಕಾಲ್ಡ್' ಅವರು ವಿಮರ್ಶಿಸುತ್ತಾರೆ.

ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿ ಒಂದಾದ ಅಮೇರಿಕಾ ದೇಶದಲ್ಲಿಯೂ ಸಹ ಮಹಿಳೆಯರಿಗೆ ಯಾವುದೇ ರೀತಿಯ ಉನ್ನತವಾದ ಸ್ಥಾನಮಾನಗಳು ದೊರೆತಿರಲಿಲ್ಲ. ಮತ್ತು ರಾಜಕೀಯವಾಗಿ, ಆರ್ಥಿಕವಾಗಿಯೂ ಮಹಿಳೆಯರು ಅತ್ಯಂತ ಕೆಳಮಟ್ಟದ ಸ್ಥಾನಗಳನ್ನು ಪಡೆದುಕೊಂಡು ಅತ್ಯಂತ ನಿಕೃಷ್ಟವಾದ ಜೀವನವನ್ನು ಸಾಗಿಸುವ ಸ್ಥಿತಿಯಲ್ಲಿ ಮಹಿಳೆಯರು ಉಳಿದುಕೊಂಡಿದ್ದರು. ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿಯೂ ಮಹಿಳೆಯರಿಗೆ ಪುರುಷರ ಸರಿಸಮಾನವಾದ ಸ್ಥಾನಗಳನ್ನು ನೀಡದೇ ಇರುವುದರಿಂದ ಸಾಮಾನ್ಯ ಮಹಿಳೆಯರಿಗೆ ಅಧಿಕಾರದ ಸ್ಥಾನಗಳು ದೊರೆಯುತ್ತಿರಲಿಲ್ಲ. ಕೇವಲ ಶ್ರೀಮಂತ ಮತ್ತು ಮೇಲುವರ್ಗದ ಮಹಿಳೆಯರಿಗೆ ಮಾತ್ರ ರಾಜಕೀಯದಲ್ಲಿ ಭಾಗವಹಿಸಲು ಅವಕಾಶ ಹಾಗೂ ಮತ ಚಲಾಯಿಸುವ ಹಕ್ಕನ್ನು ಪಡೆದುಕೊಂಡಿದ್ದರು. ಇವರುಗಳು ಕೆಳವರ್ಗದ ಮತ್ತು ಕಪ್ಪು ಹೆಂಗಸರನ್ನು ಗುಲಾಮರಂತೆ ಕಾಣುತ್ತಿದ್ದರು. ಅಮೇರಿಕನ್ ಬಿಳಿಯ ಮಹಿಳೆಯರು ಆಫ್ರಿಕಾ ಖಂಡದಿಂದ ವಲಸೆ ಬಂದಂತಹ ಕಪ್ಪು ಮಹಿಳೆಯರಿಂದ ಸೇವೆ ಮೂಡಿಸಿಕೊಳ್ಳುತ್ತಾ ಅವರನ್ನು ನಾಲ್ಕುಗೋಡೆಗಳ ಮಧ್ಯೆ ಇರಿಸಿ ಗುಲಾಮರಂತೆ ಅವರನ್ನು ಕಾಣುತ್ತಿದ್ದರು. ಹಾಗೆಯೇ ಕಪ್ಪು ಮಹಿಳೆಯರ ಪತಿಯಂದಿರ ಜೊತೆ ಬಿಳಿಯ ಹೆಂಗಸರು ಲೈಂಗಿಕವಾಗಿ ಅಕ್ರಮ ಸಂಬಂಧವನ್ನು ಇಟ್ಟುಕೊಂಡಿದ್ದರಿಂದ ಮತ್ತು ಈ ಮೇಲೆ ವಿವರಿಸಿದ ಸಮಾನತೆಯ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಶೋಷಿತ ಮಹಿಳೆಯರೆಲ್ಲರು ಸಂಘಟನೆಗೊಂಡು ಬೃಹತ್ ಪ್ರಮಾಣದಲ್ಲಿ ಚಳವಳಿಗಳನ್ನು ಮಾಡಿ ಅಲ್ಪಸ್ವಲ್ಪದ ಮಟ್ಟಿಗಾದರೂ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಮತ್ತು ಬಂಧನದಿಂದ ಮುಕ್ತಿಪಡೆಯಲು ಮಹಿಳಾ ಚಳುವಳಿಗಳು ಯತ್ನಿಸಿರುವುದು ಅಮೇರಿಕನ್ ಚಳುವಳಿಯಲ್ಲಿ ಕಂಡುಬರುತ್ತದೆ.

೧೯ನೆಯ ಶತಮಾನದ ಅಂತ್ಯದಲ್ಲಿ ಅಮೇರಿಕಾದಲ್ಲಿ ಉಂಟಾದ ರಾಷ್ಟ್ರೀಯ ಜಾಗೃತಿಯ ಪರಿಣಾಮವಾಗಿ ಶೋಷಿತ ಮಹಿಳೆಯರಿಂದ ಹಿಡಿದು ಉನ್ನತ ಶಿಕ್ಷಣಪಡೆದ ಮಹಿಳೆಯರವರಿಗೆ ಎಚ್ಚೆತ್ತು ಕೊಳ್ಳತೊಡಗಿದರು. ಏಕೆಂದರೆ ಕೆಳ ಮತ್ತು ಮಧ್ಯಮವರ್ಗದ ಸ್ತ್ರೀಯರಲ್ಲಿ ಶಿಕ್ಷಣದ ಬಗ್ಗೆ, ಸಮಾನತೆಯ ಹಕ್ಕುಗಳ ಬಗ್ಗೆ ಮತ್ತು ತಮ್ಮ ನಾಗರೀಕ ಹೊಣೆಯ ಬಗ್ಗೆ ಹಾಗೂ ಶೋಷಿತ ಸ್ಥಿತಿಗತಿಯ ಬಗ್ಗೆ ಅರಿವು ಮೂಡಿಸಿ ಕೊಳ್ಳಲು ಯತ್ನಿಸಿದರು. ಈ ರೀತಿಯ ಅರಿವಿನಿಂದಾಗಿ ೨೦ನೇ ಶತಮಾನದ ಆರಂಭದಲ್ಲಿ ಮಹಿಳಾ

ಸಂಘಟನೆಗಳು ಅತಿಹೆಚ್ಚಿನ ಸಂಖ್ಯೆಯಲ್ಲಿ ಆರಂಭಗೊಂಡವು. ಇದೇ ಸಮಯಕ್ಕೆ ಪಾಶ್ಚಿಮಾತ್ಯ ರಾಷ್ಟ್ರಗಳಾದ ಅಮೇರಿಕಾ, ಇಂಗ್ಲೆಂಡ್, ಫ್ರಾನ್ಸ್ ಮತ್ತು ವಾಷಿಂಗ್ಟನ್ ಮೊದಲಾದ ರಾಷ್ಟ್ರಗಳಲ್ಲಿ ಮಹಿಳಾ ಚಳವಳಿಗಳು ಆರಂಭಗೊಂಡವು.

ಹೀಗೆ ಅಭಿವೃದ್ಧಿ ಹೊಂದಿದ ರಾಷ್ಟ್ರಗಳಲ್ಲಿಯೂ ಸಹ ಮಹಿಳೆಯರನ್ನು ಅಧೀನ ಸ್ಥಿತಿಗೆ ತಳ್ಳಿದ್ದರಿಂದ ಬೇಸತ್ತ ಮಹಿಳೆಯರು ಚಳವಳಿಗಳನ್ನು ಪ್ರಾರಂಭಿಸಲು ಪ್ರೇರಣೆ ನೀಡಿದಂತಹ ಆದಿಚಿಂತಕಿಯರು ಮಹಿಳೆಯರ ಮೇಲೆ ಹೇರಿದಂತಹ ಹಲವಾರು ಕಟ್ಟುಪಾಡುಗಳನ್ನು ಮತ್ತು ರೂಢಿ-ಸಂಪ್ರದಾಯಗಳನ್ನು ಹಾಗೂ ಧರ್ಮ, ದೇವತೆ ಎಂದು ನಂಬಿಸಿ ಮೂಢನಂಬಿಕೆಗಳ ಕತ್ತಲಿಗೆ ತಳ್ಳಿದ ಪುರುಷರ ವಿರುದ್ಧ ಮತ್ತು ಸ್ತ್ರೀಯನ್ನು ಸ್ತ್ರೀಯೇ ಶೋಷಣೆ ಮಾಡುವಂತಹ ಮೇಲಿನ ವರ್ಗದ ಹೆಂಗಸರ ವಿರುದ್ಧ ಉದಾ : ಮುಂದೊರೆದ ದೇಶವಾದ ಅಮೇರಿಕಾದಲ್ಲಿ ಬಿಳಿಯ ಹೆಂಗಸರ ವಿರುದ್ಧ ಕಪ್ಪು ಹೆಂಗಸರು ಪ್ರತಿಭಟಿಸಿದರು. ಈ ಎಲ್ಲಾ ಶೋಷಣೆಯ ಅಂಶಗಳನ್ನು ಗುರುತಿಸಿಕೊಂಡು ಇವುಗಳಿಗೆ ಪರಿಹಾರ ಕಂಡುಕೊಳ್ಳಲು ಮಹಿಳಾ ಚಳುವಳಿಗಳು ಪ್ರಾರಂಭಗೊಂಡವು.

ಶತಮಾನಗಳಿಂದಲೂ ಮಹಿಳೆಯರು ಎಲ್ಲಾ ಸಮಸ್ಯೆಗಳನ್ನು ಪುರುಷ ಪ್ರಧಾನರ ಎದುರಿಗೆ ಇಟ್ಟು ಈ ಸಮಸ್ಯೆಗಳಿಗೆಲ್ಲ ಪರಿಹಾರ ಸೂಚಿಸಬೇಕು ಎಂದು ಕೇಳಿಕೊಂಡಾಗ ಅವರು ಇಂತಹವುಗಳಿಗೆ ಯಾವುದೇ ಪ್ರತಿಕ್ರಿಯೇ ತೋರುತ್ತಿರಲಿಲ್ಲ. ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವಂತಹ ಸಮಸ್ಯೆಗಳು ಅಂದರೆ ಸತಿಸಹಗಮನ, ವಧುದಹನ, ವಿಧವಾ ಆಚರಣೆ, ಅಂತವುಗಳು ಅತಿಕ್ರೂರವಾಗಿದ್ದರೂ ಸಹ ಇವು ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಳ್ಳುತ್ತವೆ. ಹಿಂದೂ ಧರ್ಮದ ಶ್ರೇಷ್ಟತೆಯನ್ನು ಸೂಚಿಸುವ ಸಂಕೇತಗಳಾಗಿವೆ. ಮತ್ತು ಇಂತಹ ಪದ್ಧತಿಗಳ ಆಚರಣೆಯಿಂದ ಸತ್ತಗಂಡನು ಸ್ವರ್ಗಕ್ಕೆ ತಲುಪುತ್ತಾನೆ. ಹಾಗೂ ಇವೆಲ್ಲವು ಕುಟುಂಬಕ್ಕೆ ಗೌರವನ್ನು ಸಲ್ಲಿಸುತ್ತವೆ ಎಂದು ಹೇಳಿ ಮಹಿಳೆಯರನ್ನು ಅಜ್ಞಾನದ ಅಂದಾಕಾರಕ್ಕೆ ತಳ್ಳುತ್ತಿದ್ದರು. ಎಲ್ಲ ಸಂಪ್ರದಾಯಗಳನ್ನು ಮಹಿಳೆಯರೆ ಸ್ವಯಂ ಆಗಿ ಒಪ್ಪಿಕೊಳ್ಳುವಂತೆ ಮಾಡುತ್ತಿದ್ದರು. ಹೀಗೆಯೇ ಮಹಿಳೆಯರನ್ನು ಎಷ್ಟೋ ಶತಮಾನಗಳ ಕಾಲ ಅವಳನ್ನು ಮೂಢನಂಬಿಕೆಗಳಿಗೆ ಮಾರುಹೋಗುವಂತೆ ಮಾಡಿದ್ದರಿಂದ ಅವಳು ಅಧೀನಸ್ಥಿತಿಗೆ ಗುರಿಯಾಗಿದ್ದಳು. ಈ ಒಂದು ಅಧೀನ ಸ್ಥಿತಿಗೆ ಇಳಿಯಲು ಸಮಾಜ ವ್ಯವಸ್ಥೆಯ ಕಾರಣದಿಂದಾಗಿಯೇ ಈ ಪರಿಸ್ಥಿತಿ ಒದಗಿಬಂದಿರುವುದು ಅನ್ನುವುದು ಕೂಡ ಅವಳ ಅರಿವಿಗೆ ಬಾರದಂತೆ ಪುರುಷರು ಕಾಯ್ದುಕೊಳ್ಳುತ್ತಿದ್ದರು.

ಈ ರೀತಿಯಾಗಿ ಅಂಧಕಾರಕ್ಕೆ ತಳ್ಳಿ ಸಮಾಜದ ಬಗ್ಗೆ ಅವಳಿಗೆ ಪ್ರಜ್ಞೆ ಇಲ್ಲದಂತೆ ಮಾಡಿದ್ದರಿಂದ ಆ ಎಲ್ಲಾ ಅಂಶಗಳ ಬಗ್ಗೆ ಅವಳು ಏನು ತಿಳಿಯುತ್ತಿದ್ದಾಳೆಂದರೆ ದೇವರು ನಮಗೆ ಜನ್ಮಕೊಟ್ಟಿರುವುದು ಪುರುಷರ ಸೇವೆ ಮಾಡಲಿಕ್ಕೆ, ಎಲ್ಲಾ ಕಟ್ಟುಸಂಪ್ರದಾಯಗಳನ್ನು ಪಾಲಿಸಿಕೊಂಡು ಹೋಗುವುದಕ್ಕೆ ಮತ್ತು

ಸಮಾಜದ ಎಲ್ಲಾ ಸಮಸ್ಯೆಗಳು ನಮ್ಮ ಪಾಲಿಗಿವೆ. ಅಥವಾ ಇವೆಲ್ಲವುಗಳನ್ನು ಅನುಸರಿಸಿಕೊಂಡು ಹೋಗುವುದೇ ಹೆಣ್ಣಿನ ಕರ್ತವ್ಯ ಎಂದು ಅವಳೂ ಕೂಡ ಒಪ್ಪಿಕೊಳ್ಳವಂತೆ ಮಾಡಿದ್ದರು. ಮಹಿಳೆಯರೇ ಸ್ವಯಂ ಆಗಿ ನಂಬಿದ್ದರು ಅಥವಾ ನಂಬುವಂತೆ ಮಾಡಿದ್ದರು.

ಆದುದರಿಂದ ಈ ಎಲ್ಲಾ ಅಂಶಗಳ ವಿರುದ್ಧ ಬೇರೆ ಬೇರೆ ಮಹಿಳಾ ಚಿಂತಕೀಯರು ಮಹಿಳೆಯರಿಗೆ ಇವುಗಳ ಬಗ್ಗೆ ಜಾಗ್ರತೆ ಮೂಡಿಸಲು ಶ್ರಮಿಸಿದರು. ಮಹಿಳೆಯರು ಅಂಧಕಾರದಲ್ಲಿ ಮುಳಿಗಿರಲು ಕಾರಣಗಳನ್ನು ಕೂಲಂಕುಶವಾಗಿ ಪರಿಶೀಲಿಸಿದಾಗ ಕೆಲವು ಕಾರಣಗಳು ಕಂಡುಬರುತ್ತವೆ. ಉದಾ: ಮಹಿಳೆಯರಿಗೆ ಮೊದಲಿನಿಂದಲೂ ಶಿಕ್ಷಣದ ಅವಕಾಶಗಳು ದೊರೆತಿಲ್ಲ, ಮತ್ತು ಮನೆಯಿಂದ ಆಚೆ ವ್ಯವಹರಿಸುವಂತಹ ಅವಕಾಶಗಳು ಕನಸಾಗಿದ್ದವು. ಈ ಸಮಸ್ಯೆಗಳು ಅಭಿವೃದ್ಧಿ ಹೊಂದಿದ ಅಭಿವೃದ್ಧಿಹೊಂದುತ್ತಿರುವ ಮತ್ತು ಅಭಿವೃದ್ಧಿ ಹೊಂದದೆ ಇರುವು ರಾಷ್ಟ್ರಗಳಲ್ಲಿಯೂ ಸಹ ಮಹಿಳೆಯರನ್ನು ಕಟ್ಟುಸಂಪ್ರದಾಯಗಳಿಂದ ಹೊರಗೆ ಬಿಡುತ್ತಿರಲಿಲ್ಲ. ಈ ಎಲ್ಲವುಗಳನ್ನು ಒಡೆದು ಮನೆಯಿಂದ ಹೊರಬರಬೇಕಾದ ಪ್ರಸಂಗವೆಂದರೆ, ಆಧುನಿಕ ಪ್ರಕ್ರಿಯೆಯಿಂದಲೇ ಹೆಂಗಸು ಮನೆಯಿಂದ ಹೊರಬರಬೇಕಾದಂತಹ ಅನಿವಾರ್ಯತೆಯನ್ನು ಸೃಷ್ಟಿಸಿತು. ಹೇಗೆಂದರೆ ಕುಟುಂಬದ ಚೌಕಟ್ಟಿನಲ್ಲಿ ನಾಲ್ಕು ಗೋಡೆಗಳ ಮಧ್ಯೆ ಜೀವನವನ್ನು ಸಾಗಿಸುವುದರ ಜೊತೆಗೆ ಮನೆಯಲ್ಲಿಯೇ, ಸಣ್ಣಪುಟ್ಟ ಉದ್ದಿಮೆಗಳನ್ನು ಅತಿಹೆಚ್ಚಿನ ಸಂಖ್ಯೆಯಲ್ಲಿ ಪ್ರಾರಂಭಿಸಿಕೊಂಡಿದ್ದರು. ಈ ಎಲ್ಲವುಗಳು ತಾಂತ್ರಿಕತೆ ಉನ್ನತ ಮಟ್ಟಕ್ಕೆ ಬೆಳೆದಂತೆಲ್ಲಾ ಸಣ್ಣ, ಉದ್ದಿಮೆಗಳು ಕಾರ್ಖಾನೆಗಳಿಗೆ ವರ್ಗಾವಣೆಗೊಂಡವು. ಆದುದರಿಂದ ಇಲ್ಲಿ ಹೆಂಗಸರಿಗೆ ಮನೆಯಲ್ಲಿಯೇ ಹಣಗಳಿಸುವ ಕೆಲಸವಿಲ್ಲದಂತೆ ಆಯಿತು. ವರ್ಗಾವಣೆಯಿಂದ ಏನಾಯಿತೆಂದರೆ ಗಂಡಸರು ಸಾಂಪ್ರದಾಯಿಕವಾಗಿ ಮಾಡುತ್ತಾ ಬಂದಂತಹ ಕೆಲಸಕಾರ್ಯಗಳನ್ನು ಬಿಟ್ಟು, ಹೊಸ ಆಧುನಿಕತೆಗೆ ವರ್ಗಾವಣೆಯಾಗುತ್ತಾರೆ. ಇಲ್ಲಿ ಖಾಲಿಯಾದ ಜಾಗವನ್ನು ಅಥವಾ ಕೆಲಸದ ಸ್ಥಳಗಳನ್ನು ತುಂಬಲು ಜನಸಂಖ್ಯೆ ಅವಶ್ಯಕತೆ ಅನಿವಾರ್ಯವಾಯಿತು ಆದ್ದರಿಂದ ಮಹಿಳೆಯರನ್ನು ಮನೆಯಿಂದ ಹೊರಬರುವಂತೆ ಮಾಡಿ ಈ ಕೆಲಸಕಾರ್ಯಗಳಲ್ಲಿ ಪಾಲ್ಗೊಳ್ಳುವಂತೆ ಮಾಡಿದರು. ಈ ಒಂದು ಭಾಗವಹಿಸುವಿಕೆಯಲ್ಲಿ ತಾರತಮ್ಯ ಇದ್ದರೂ ಸಹ ಮನೆಯಿಂದ ಹೊರಬಂದು ಉದ್ಯೋಗವನ್ನು ಪಡೆದುಕೊಂಡು, ಹೊರಪ್ರಪಂಚವನ್ನು ನೋಡುವ ಅವಕಾಶ ಸಿಕ್ಕಿತಲ್ಲ ಎಂದು ಸಂತೋಷ ಪಡುತ್ತಾಳೆ. ದೊರೆತ ಅವಕಾಶದಿಂದ ಸಮಾಜವ್ಯವಸ್ಥೆಯೇ ಮಹಿಳೆಯ ಶೋಷಣೆಗೆ ಮೂಲ ಕಾರಣ ಎಂದು ತಿಳಿದು ಅವುಗಳ ಬಗ್ಗೆ ಜಾಗೃತಾಳಾಗುತ್ತಾಳೆ.

ಜಾಗೃತಳಾದಂತಹ ಮಹಿಳೆಯರ ಮುಂದೆ ಸಾಮಾಜಿಕವಾಗಿ ಪ್ರಶ್ನೆಗಳಾಗಿ ಮತ್ತು ಸವಾಲುಗಳಾಗಿ ಜಾಗ್ರತ ಮಹಿಳೆಯರಿಗೆ ಅಥವಾ ಮಹಿಳಾ ಚಳುವಳಿಗಾರರಿಗೆ ಕಾಡುತ್ತಿರುವ ಅಂಶಗಳೆಂದರೆ ಅಥವಾ

ಎದುರಿಸಬೇಕಾದ ಸವಾಲುಗಳೆಂದರೆ ಹೆಂಡತಿಯನ್ನು ಮೀತಿಮೀರಿ, ಹೊಡೆಯುವುದರಿಂದ ಹಿಡಿದು, ಹೆಂಗಸರಿಗೆ ಕಿರುಕುಳ ಕೊಡುವುದು, ಕ್ರೌರ್ಯ ಪ್ರದರ್ಶನ ಮಾಡುವುದು, ಲೈಂಗಿಕ ಅತ್ಯಾಚಾರವೆಸಗುವುದು ಇನ್ನು ಮುಂತಾದವುಗಳಾಗಿವೆ. ಹಾಗೆಯೇ ಮಹಿಳೆಯರ ಮೇಲಿನ ದೌರ್ಜನ್ಯಗಳು ಇಂದಿಗೂ ನಿಂತಿಲ್ಲ. ಹೆಂಗಸು ಆರ್ಥಿಕವಾಗಿ ದುರ್ಬಲಗೊಂಡಿರುವುದರಿಂದ ಆಕೆಯನ್ನು ಶೋಷಿಸುವುದು, ವಿಪರೀತವಾಗಿ ದುಡಿಸಿಕೊಳ್ಳುವುದು, ಶ್ರಮಕ್ಕೆ ತಕ್ಕ ಪ್ರತಿಫಲ ನೀಡದೇ ಇರುವುದು, ಜೊತೆಗೆ ಕೆಲಸದ ಸ್ಥಳಗಳಲ್ಲಿ ಹೆಂಗಸರನ್ನು ಕೀಳಾಗಿ ಕಾಣುವುದು, ಇಂತಹ ಸವಾಲುಗಳು ಇಂದಿಗೂ ಜೀವಂತವಾಗಿವೆ.

ಶತಶತಮಾನಗಳಿಂದ ಅನಕ್ಷರತೆಗೆ ಮತ್ತು ಮೌಢ್ಯತೆಗೆ ಒಳಗಾದ ಮಹಿಳೆಯರಿಗೆ, ದೇವದಾಸಿ ಪದ್ಧತಿ, ಬೆತ್ತಲೆಸೇವೆ, ದಲಿತಸ್ತ್ರೀಯರ ಅನಾದಾರ ಮತ್ತು ಅವಹೇಳನ ಮೂಢನಂಬಿಕೆ, ಮಾಟ-ಮಂತ್ರಗಳಿಗೆ ಸಾಮಾನ್ಯ ಮಹಿಳೆಯರು ಬಲಿಪಶುಗಳಾಗುತ್ತಿದ್ದಾರೆ. ಇಂತಹ ಸಮಸ್ಯೆಗಳನ್ನು ಮಹಿಳಾ ಸಂಘಟನಗಳು, ಮಹಿಳಾ ಚಳವಳಿಗೂ ಅತಿ ಜಾಗ್ರತದಿಂದ ಎದುರಿಸಬೇಕಾಗಿದೆ. ಆಧುನಿಕ ಅಭಿಶಾಪವಾಗಿ ಬೆಳೆದಿರುವ ಅಶ್ಲೀಲ ಸಾಹಿತ್ಯ ಹಾಗೂ ಭಿತ್ತಿಪತ್ರಗಳ ಪ್ರಸಾರ, ಸಭ್ಯತೆಯನ್ನು ಮೀರಿ ನಡೆಯುವ ಕ್ಯಾಬರೆ ಮತ್ತು ಡಿಸ್ಕೋ ಹಾಗೂ ಬ್ರೆಕ್ ಡ್ಯಾನ್ಸಗಳು ಮತ್ತು ಪೊಲೀಸ್ ವಶವಾಗಿರುವ ಮಹಿಳಾ ಖೈದಿಗಳ ಮೇಲೆ ಲೈಂಗಿಕ ಅತ್ಯಾಚಾರ ಹಾಗೂ ಕಾಡುಗಳ ವಿನಾಶದಿಂದ ರೈತಾಪಿ ಹಾಗೂ ಆಧಿವಾಸಿ ಸ್ತ್ರೀಯರ ಮೇಲಾಗುವ ದುಷ್ಪರಿಣಾಮ[6] ಮುಂತಾದವುಗಳ ವಿರುದ್ಧ ಸ್ತ್ರೀಯರಲ್ಲಿ, ಜಾಗೃತಿ ಮೂಡಿಸುವ ಅವಶ್ಯಕತೆಯನ್ನು ಅದಿ ಚಿಂತಕಿಯರು ಕಂಡುಕೊಂಡಿದ್ದಾರೆ.

ಮಹಿಳಾ ಸ್ವಾತಂತ್ರ್ಯ ಚಳವಳಿಯಲ್ಲಿ ಅಮೇರಿಕಾದ ಸ್ತ್ರೀವಾದಿಗಳಿಗೆ ತಮ್ಮನ್ನು ಆಕರ್ಷಿಸಿದ ಸ್ತ್ರೀಪುರುಷ ಸಮಾನತೆಯ ಕಲ್ಪನೆಗೂ, ತಾವು ನಿಜದಲ್ಲಿ ತಮ್ಮನ್ನು ಗುರುತಿಸಿಕೊಳ್ಳುತ್ತಿರುವ ರೀತಿಗೂ ಅಂತರವಿದೆ ಎಂಬುದು ಅವರಿಗೆ ಅರಿವಿಗೆ ಬಂದಾಗ ಸಾಹಿತ್ಯ ಅಧ್ಯಯನ, ಬೋಧನೆಗಳಲ್ಲಿ ನಾಯಕಿಯರಿಗೆ, ಮಹಿಳಾ ಬರಹಗಾರರಿಗೆ, ವಿದುಷಿಯರಿಗೆ ಸಿಕ್ಕಿರುವ ಸ್ಥಾನ ಎರಡನೆಯ ದರ್ಜೆಯದು ಎಂದು ಅಮೇರಿಕನ್ ಸ್ತ್ರೀವಾದಿಗಳು ಗುರುತಿಸಿದರು.[7] ಇದರಿಂದ ಲೇಖಕಿಯರ ಬದುಕಿನ ಹಾಗೂ ಸಾಹಿತ್ಯದ ಅನುಭವಗಳ ಬಗ್ಗೆ ಹೊಸ ಜ್ಞಾನೋದಯ, ತುರ್ತು, ತೀವ್ರತೆಗಳು ಹುಟ್ಟಿಕೊಂಡವು. ಈ ವಿಮರ್ಶೆಗಳಿಗೆ ಪ್ರೇರಣೆ ಎಂದರೆ ಅಮೇರಿಕಾ ವಿಶ್ವವಿದ್ಯಾಲಯಗಳಲ್ಲಿರುವ ಸಾಹಿತ್ಯ ಮತ್ತು ಮಹಿಳಾ ಅಧ್ಯಯನ ಕೇಂದ್ರಗಳು ಪ್ರೇರಣೆ ನೀಡುತ್ತಿವೆ.

ಸಮಾಜದಲ್ಲಿ ಪುರುಷನಲ್ಲದ ಅಂಶಗಳನ್ನೆಲ್ಲ ಹೆಣ್ಣಿನದು ಎಂದು ಸೇರಿಸಿಡುವ ಮೂಲಕ ಪುರುಷನು ತಾನೇ ಅಧಿಕಾರದ ಕೇಂದ್ರದಲ್ಲಿ ಉಳಿದಿರಲು ಅಧಿಕಾರದ ಹಕ್ಕು ತನ್ನದೇ ಆಗಿರುವಂತೆ ಕಾಯ್ದುಕೊಳ್ಳಲು ಹವಣಿಸಿದ್ದಾನೆ ಎಂದು ಫ್ರೆಂಚ್ ಸ್ತ್ರೀವಾದವು ಹೇಳುತ್ತದೆ. ಫ್ರೆಂಚ್ ಸ್ತ್ರೀವಾದಿ ವಿಮರ್ಶೆಯಲ್ಲಿ ಸ್ತ್ರೀತ್ವ,

ಸ್ತ್ರೀಯಾತ್ಮಕಗಳಿಗೆ ಸಂಬಂಧಿಸಿದಂತೆ "ಆಕೆ ತನ್ನೊಳಗೆ ಅನಿರ್ದಿಷ್ಟವಾಗಿ 'ಇತರ'ಳಾಗಿ ಇರುವವಳು. ಆದ್ದರಿಂದಲೇ ಆಕೆಯನ್ನು ಚಂಚಲ ಪ್ರಕೃತಿಯವಳು, ಅಗ್ರಾಹ್ಯಳು, ಪ್ರಕ್ಷುಬ್ಧಳು, ಇಷ್ಟಬಂದಂತೆ ನಡೆಯುವವಳು ಮುಂತಾದವುಗಳಿಂದ ಕರೆಯಲಾಗಿದೆ. ಈ ಎಲ್ಲಾ ವಿಚಾರಗಳನ್ನು ಫೆಮಿನಿನ್ ಎಂಬ ಶಬ್ದದಿಂದಲೇ ಸೂಚಿಸುವ ರೂಢಿಯಿದೆ. ತತ್ವಶಾಸ್ತ್ರ, ಮನೋವಿಶ್ಲೇಷಣಾಶಾಸ್ತ್ರ ಮತ್ತು ಸಾಂಕೇತಿಕ ವ್ಯವಸ್ಥೆಯ ಎಲ್ಲ ರೂಪಗಳಲ್ಲಿ ಮಹಿಳೆಯರನ್ನು ಹೊರಗೆ ಇರಿಸಲಾಗಿದೆ"[೩] ಎನ್ನುವ ಫ್ರೆಂಚ್ ಸ್ತ್ರೀವಾದಿ ವಿಮರ್ಶೆಗೆ ಮುಖ್ಯ ತಳಹದಿಯಾಗಿದೆ.

ವರ್ಗ ಅಸಮಾನತೆಯಿಂದ ಕೂಡಿದ ಸಾಮಾಜಿಕ ವ್ಯವಸ್ಥೆಯಲ್ಲಿ ಎಲ್ಲರೂ ಅದರಲ್ಲಿಯೂ ವಿಶೇಷವಾಗಿ ಸ್ತ್ರೀಯರು ಸಮಾನತೆಯನ್ನು ಗಳಿಸುವುದು ಸಾಧ್ಯವೆ ಇಲ್ಲವೆಂಬುದು ಮಾರ್ಕ್ಸ್‌ವಾದಿಗಳ ಅಭಿಪ್ರಾಯವಾಗಿದೆ. ಏಕೆಂದರೆ ಬಂಡವಾಳ ಶಾಂತಿ ವ್ಯವಸ್ಥೆಯಲ್ಲಿ ಪುರುಷರನ್ನು ಉತ್ಪಾದಕರೆಂದು ಪರಿಗಣಿಸಿದ್ದಾರೆ. ಸ್ತ್ರೀಯರನ್ನು 'ಬಳಕೆದಾರ'ರೆಂದು ಪರಿಗಣಿಸಲಾಗಿದೆ. ಆದ್ದರಿಂದ ಪುರುಷರು ತಮ್ಮ ದುಡಿಮೆಯ ಫಲದಿಂದ ಗಳಿಸಿದ ವೇತನವನ್ನು ಸ್ತ್ರೀಯರು ಖರ್ಚುಮಾಡುತ್ತಾರೆ ಎಂಬ ಅರ್ಥಹೀನ ಪುರುಷಕಲ್ಪನೆಯನ್ನು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಕಟುವಾಗಿ ಟೀಕಿಸುತ್ತಾರೆ. ಓರ್ವ ಸ್ತ್ರೀ ಮನೆಯಲ್ಲಿ ತಯಾರಿಸಿದಂತಹ ಆಹಾರವನ್ನು ಹಣಕ್ಕಾಗಿ ಮಾರದಿರಬಹುದು. ಆದರೆ ಆಹಾರವನ್ನು ಸೇವಿಸುವವರು ಆಕೆಯು ತಯಾರಿಸಿದಂತಹ ಆಹಾರವನ್ನು ಬಳಕೆ ಮಾಡುತ್ತಾರಲ್ಲ ಎಂದು ಅಪಹಾಸ್ಯ ಮಾಡುತ್ತಾರೆ. ಅಂದರೆ ಆಹಾರವನ್ನು ತಯಾರಿಸಲು ಅಥವಾ ಮನೆಕೆಲಸಕ್ಕಾಗಿ ಅಥವಾ ಮಕ್ಕಳನ್ನು ಪೋಷಣೆ ಮಾಡಲು ಒಂದು ಆಳನ್ನು ನೇಮಕ ಮಾಡಿದರೆ ಅವಳ ಸೇವೆಗೆ ಪ್ರತಿಫಲವಾಗಿ ಹಣವನ್ನು ಕೊಡಬೇಕಲ್ಲ ಎನ್ನುವ ರೀತಿಯಲ್ಲಿ ಟೀಕಿಸುತ್ತಾರೆ. ಒಬ್ಬ ಗೃಹಿಣಿ ಮಾಡುವಂತಹ ಕೆಲಸಗಳಿಗೆ ಯಾವುದೇ ರೀತಿಯ ವೇತನ ದೊರೆಯುತ್ತಿಲ್ಲ ಎಂಬ ಮಾತ್ರಕ್ಕೆ ಅದನ್ನು ಅನಾವಶ್ಯವೆಂದು ಪರಿಗಣಿಸಬೇಕು? ಎಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳೂ ಕಂಡಿಸುತ್ತಾರೆ. "ಸ್ತ್ರೀಯು ಸ್ವತಂತ್ರಳಾಗಬೇಕಾದರೆ ಉದ್ಯೋಗಸ್ಥಳಾಗಬೇಕು ಎನ್ನುವ ಬುವಾಳ ದೃಷ್ಟಿಯಲ್ಲಿ ಸ್ತ್ರೀ ಉದ್ಯೋಗ ಸ್ಥಳಾದಾಗ ಆಕೆಗೆ ಜೀವನದಲ್ಲಿ ಹೊಸ ಹೊಸ ಅವಕಾಶಗಳು ಮೂಡಿಬರುತ್ತವಷ್ಟೇ ಅಲ್ಲ ತನ್ನ ಭವಿಷ್ಯವನ್ನು ತಾನೇ ರೂಪಿಸಿಕೊಳ್ಳುವ ಸ್ವಾತಂತ್ರ್ಯವು ದೊರೆಯುತ್ತದೆ"[೪] ಎಂದು ಬುವಾಳು ಅಭಿಪ್ರಾಯ ಪಡುತ್ತಾಳೆ.

ಎಲ್ಲಾ ಸ್ತ್ರೀವಾದಿಗಳು ಹೇಳುವ ಅಂಶಗಳೆಂದರೆ ಮಹಿಳೆಯರು ಇರುವ ಅಧೀನ ಪರಿಸ್ಥಿತಿಗೆ ಮೂಲಕಾರಣ ಏನು ಮತ್ತು ಅದರಿಂದ ಹೊರಗಡೆ ಬರುವುದು ಹೇಗೆ ಎನ್ನುವುದನ್ನು ಸ್ತ್ರೀವಾದಿ ಚಿಂತನೆಗಳು ಮಹಿಳೆಯರ ಬದುಕಿನಲ್ಲಿ ಎದುರಾದಂತಹ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಯೋಚನೆಗಳನ್ನು ಮಾಡಿ ಅಲ್ಪಪ್ರಮಾಣದಲ್ಲಿ ಚಳುವಳಿಗಳನ್ನು ಮಾಡುತ್ತಾರೆ. ಆದರೂ ಸಹ ಆಯಾ

ಸಮಾಜದಲ್ಲಿ ಅಂದರೆ ಫ್ರಾನ್ಸ್, ಅಮೇರಿಕಾ, ಬ್ರಿಟನ್, ಇಂಗ್ಲೆಂಡ್ ಇನ್ನು ಇತರೆ ಸಮಾಜಗಳಿರಬಹುದು. ಇಲ್ಲಿಯೂ ಸಹ ಮಹಿಳೆಯರು ಜಾಗೃತ ಸ್ಥಿತಿಗೆ ಬರಕೂಡದು ಎನ್ನುವ ದುರಾಲೋಚನೆಯಿಂದ ಮಹಿಳೆಯರನ್ನು ಹಿಮ್ಮೆಟ್ಟಿಸಲು ಪುರುಷ ರಾಜಕಾರಣಿಗಳು ಅನೇಕ ಪ್ರಯತ್ನಗಳನ್ನು ಮಾಡುತ್ತಾರೆ.

ಉದಾ : ಶಿಕ್ಷಣವನ್ನು ದೊರಕಿಸಿಕೊಡುವಲ್ಲಿ ಮತ್ತು ನೌಕರಿ ಹಾಗೂ ಮನೆಯ ಹೊರಗಿನ ಕೆಲಸಕಾರ್ಯಗಳೆಂದರೆ ಅಧಿಕಾರ ಚಲಾಯಿಸುವಂತಹ ಸ್ಥಳಗಳಲ್ಲಿಯೂ ಸಹ ಮಹಿಳೆಯರಿಗೆ ನಿರ್ಬಂಧನೆಯನ್ನು ಹೇರಿದ್ದಾರೆ. ಇವುಗಳನ್ನು ಹೋಗಲಾಡಿಸಿ ಮಹಿಳೆ ಜಾಗೃತಗೊಂಡಾಗ ಈ ಜಾಗೃತ ಸ್ಥಿತಿ ಪೂರ್ವಗಳು ಹೋಗಿ ಈಗ ಬೇರೆ ಕಷ್ಟಗಳು ಪರಿಣಾಮಿಸಿವೆ. ಈ ಸ್ತ್ರೀವಾದಿ ಚಿಂತನೆಗಳು ಮೊದಲಿಗೆ ತಪ್ಪಾಗಿಗ್ರಹಿಸಿದ್ದು, ಏಕೆಂದರೆ ಮಹಿಳೇಯರ ಎಲ್ಲಾ ಕಷ್ಟಗಳಿಗೆ ಪುರುಷನೇ ಕಾರಣ ಎನ್ನುವುದರಿಂದ ಮೊದಲಿಗೆ ಪುರುಷ ದ್ವೇಷ ಶುರುವಾಗುತ್ತದೆ. ಹೀಗೆ ಮುಂದೊರೆದ ಸ್ತ್ರೀವಾದಿ ಚಿಂತಕಿಯರು ನಿಧಾನವಾಗಿ ಎಲ್ಲಾ ಸಮಸ್ಯೆಗಳನ್ನು ಅರಿತುಕೊಂಡು, ಇಲ್ಲಿ ಕೇವಲ ಪುರುಷರನ್ನು ದ್ವೇಶಿಸುವುದು ಸರಿಯಲ್ಲ ಎಂದು ತಿಳಿದು ಪುರುಷರ ಜೊತೆ ವ್ಯವಹಾರಿಕ ಸಂಪರ್ಕ ಬೆಳೆಸಿಕೊಂಡು ಸಮಾಜದಲ್ಲಿ ಎದುರಾದ ಸಮಸ್ಯೆಗಳಿಗೆ ಇಬ್ಬರೂ ಕೂಡಿಯೇ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸಿದರು. ಇಲ್ಲಿ ಸ್ತ್ರೀವಾದಿಗಳೆಂದರೆ ಪುರುಷರನ್ನು ದೂಷಿಸುವುದು ಎಂದಲ್ಲ ಮತ್ತು ಪುರುಷ ದ್ವೇಷಿ ಎಂದು ಅರ್ಥಮಾಡಿಕೊಳ್ಳಕೂಡದು ಎಂದು ಸ್ತ್ರೀವಾದಿಗಳು ಮತ್ತು ಆದಿಚಿಂತಕೀಯರು ಒತ್ತಿ ಕೇಳುತ್ತಾರೆ.

ಸಿಮೋನ್ ದ ಬುವಾ : ಸ್ತ್ರೀವಾದಿ ಆದಿ ಚಿಂತಕಿಯರಲ್ಲಿ ಮುಖ್ಯವಾಗಿ ಗಮನಿಸಲೇ ಬೇಕಾದ ಚಿಂತಕಿ ಎಂಧರೆ ಸಿಮೋನ್ ದ ಬುವಾ, ಇವರು ರಚಿಸಿದ THE SECOND SEX ಕೃತಿಯಲ್ಲಿ ಸ್ತ್ರೀವಾದಿ ವಿಶ್ಲೇಷಣೆಯಲ್ಲಿಯೂ ಗಮನಾರ್ಹವಾದುದು. ಈ ಕೃತಿಯಲ್ಲಿ ಬುವಾ ಪ್ರತಿಪಾದಿಸಿದ ಅನೇಕ ವಿಚಾರಗಳು ಮುಂದಿನ ಅನೇಕ ಸ್ತ್ರೀವಾದಿ ವಿಚಾರಗಳ ಹುಟ್ಟಿಗೆ ಪ್ರೇರಣೆ ನೀಡಿದೆ. "ಪುರುಷರು ಒಂದು ವೈಜ್ಞಾನಿಕ ತತ್ವದ ಶೋಧನೆಯಿಂದ ಅಥವಾ ಒಂದು ಸಲಕರಣೆಯನ್ನು ಹೊಸ ನಿರ್ಣಯದಿಂದ ಪಡೆಯುವಂಥ ತೃಪ್ತಿಯನ್ನು ಮಹಿಳೆ ಮಕ್ಕಳನ್ನು ಹೆರುವ ಮೂಲಕ ಪಡೆಯಬಲ್ಲಳು"[೫] ಎಂಬ ಕೆಲವರ ವಾದಕ್ಕೆ ಪ್ರತಿಯಾಗಿ ವಾದಿಸುತ್ತಾಳೆ. ಉದಾ: ಮಗುವನ್ನು ಹೆರುವುದು ಮತ್ತು ಅದಕ್ಕೆ ಮೊಲೆಯುಣಿಸುವುದು, ಪೋಷಣೆ ಮಾಡುವುದು, ಇವು ಸಾಮಾಜಿಕ ಚಟುವಟಿಕೆಗಳಲ್ಲ, ಬದಲಿಗೆ ಅವು ನಿಸರ್ಗ ಸಹಜ ವಿಧ್ಯಮಾನಗಳಾಗಿವೆ. ಮಹಿಳೆಯ ಅಧಃಪತನ ಮತ್ತು ಖಾಸಗಿ ಆಸ್ತಿಯ ಉಗಮ ಇವುಗಳ ನಡುವೆ ಅತ್ಯಂತ ನಿಕಟವಾದ ಸಂಬಂಧ ಇರುವುದನ್ನು ಸ್ಪಷ್ಟ ಪಡಿಸುತ್ತಾಳೆ. ಮಹಿಳೆಯರನ್ನು ಸಾಮಾಜಿಕ ಉತ್ಪಾದನೆಯಿಂದ ಪ್ರತ್ಯೇಕಿಸಿದ್ದೇ ಅವಳ ಪತನಕ್ಕೆ ಮುಖ್ಯ ಕಾರಣವೆಂದು ತೀರ್ಮಾನಿಸುತ್ತಾಳೆ. ಮತ್ತು ಪುರುಷರು ಆಸ್ತಿಯ ಒಡೆಯನಾಗಿ ಮಹಿಳೆ ಮೇಲೆ ದಬ್ಬಾಳಿಕೆ ನಡೆಸಲು ಅವನಿಗೆ ಚಾಲನೆ ಕೊಟ್ಟು

ಪ್ರೇರಣೆ ಕಂಡು ಕೊಳ್ಳಬೇಕಾದರೆ, ಚಾರಿತ್ರಕ ಭೌತವಾದವನ್ನು ಮೀರಿ ಮುಂದುವರಿಯಬೇಕೆಂದು ಪ್ರತಿಪಾದಿಸುತ್ತಾಳೆ.

"ಸ್ತ್ರೀಯ ಅಸ್ತಿತ್ವವೇ ಅವಳ ಶೋಷಣೆಗೆ ಮೂಲಕಾರಣ"[೬] ಎನ್ನುವ ಬುವಾ ಸ್ತ್ರೀ ಈ ಪರಿಸ್ಥಿತಿಯಿಂದ ಹೊರಬರಲು ಸಾಧ್ಯ ಎನ್ನುತ್ತಾಳೆ ಉದಾ : ಸ್ತ್ರೀಯು ತನ್ನ ಮೇಲೆ ಪುರುಷ ಪ್ರಧಾನರು ಹೇರಲ್ಪಟ್ಟಿರುವ ಕೃತಕ ಬಂಧನಗಳನ್ನು ಕಿತ್ತೊಗೆದು ಪುರುಷರ ಸರಿಸಮಾನವಾಗಿ ಸ್ಥಾನಗಳನ್ನು ಪಡೆದುಕೊಂಡಾಗ ಮಾತ್ರ ಸಮಾಜದಲ್ಲಿ ತನ್ನದೇ ಆದ ಅಸ್ಥಿತ್ವವನ್ನು ಕಂಡುಕೊಳ್ಳಬಹುದು ಎನ್ನುತ್ತಾರೆ. ಇದುವರಿಗೆ ಹತ್ತಿಕ್ಕಲಾದ ಮಹಿಳೆಯರ ಪ್ರತಿಭೆಯನ್ನು ಕ್ರಿಯಾತ್ಮಕವಾದ ದಿಕ್ಕಿನಲ್ಲಿ ಬದಲಾಯಿಸಿದಾಗ ಮಾತ್ರ ಸ್ತ್ರೀ ಕುಲಕ್ಕಷ್ಟೇ ಅಲ್ಲ ಇಡೀ ಸಮಾಜಕ್ಕೆ ಒಳಿತಾಗುತ್ತದೆ. ಇವುಗಳ ಪರಿಣಾಮವಾಗಿ ಎರಡನೇ ದರ್ಜೆಯ ಸಾಲಿನಲಿದ್ದ ಮಹಿಳೆಯರು ಎಲ್ಲಾ ಅನಾನುಕೂಲಗಳ ಎದುರು ಮೆಟ್ಟಿನಿಂತು ಪುರುಷರಂತಯೇ ಸ್ವತಂತ್ರ್ಯ ಜೀವನವನ್ನು ನಡೆಸುವಂತಾಗಬೇಕು ಎನ್ನುವ ಚಿಂತನೆ ಬುವಾಳ ಕುತೂಹಲವಾದ ಅಂಶವಾಗಿತ್ತು. ಮಹಿಳೆಯರು ಸ್ವತಂತ್ರ ವ್ಯಕ್ತಿತ್ವವನ್ನು ರೂಪಿಸಿಕೊಳ್ಳಬೇಕಾದರೆ ಆರ್ಥಿಕ ಸ್ವಾತಂತ್ರ್ಯದ ಅವಶ್ಯಕತೆಯೂ ಬಹಳಷ್ಟಿದೆ ಎನ್ನುವುದನ್ನು ಬುವಾ ಮನಗಂಡಿದ್ದಳು. ಸ್ತ್ರೀ-ಪುರುಷರ ಅಸಮಾನತೆಯ ಮೂಲ ಕೇವಲ ಜೈವಿಕ ಅಂಶಗಳಲ್ಲಿ ಅಡಗಿದೆ ಎನ್ನುವ ತತ್ವವನ್ನು ನಿರಾಕರಿಸುವ ಬುವಾ ಪುರುಷರಿಗೆ ಈ ಸಮಾಜದಲ್ಲಿ ದೊರೆಯುತ್ತಿರುವ ಮೌಲ್ಯ ಆತನ ಜೈವಿಕ ರಚನೆಯ ಕಾರಣದಿಂದಾಗಿ ಎಂಬ ಫ್ರಾಯ್ಡ್‌ನ ವಾದವನ್ನು ಅಲ್ಲಗಳೆಯುತ್ತಾಳೆ.

ಮೇರಿವುಲ್‌ಸ್ಟನ್ ಕ್ರಾಫ್ಟ್ : ಹದಿನೆಂಟನೆಯ ಶತಮಾನದ ಕೊನೆಯಲ್ಲಿ ಸಾಮಾಜಿಕ ಚಿಂತನೆಯಲ್ಲಿ ಭಾಗಿಯಾಗಿ ಸ್ತ್ರೀಪರ ಒಂದು ಪ್ರಭಾವಶಾಲಿ ಧ್ವನಿ ಮೇರಿವುಲ್‌ಸ್ಟನ್ ಕ್ರಾಫ್ಟ್‌ನಿಂದ ಕೇಳಿಬರುತ್ತದೆ. ಪುರುಷ ದಬ್ಬಾಳಿಕೆಯ ಸಮಾಜದಲ್ಲಿ ಮಹಿಳೆಯರು ಎದುರಿಸುತ್ತಿರುವ ಸಮಸ್ಯೆಗಳನ್ನು ಕುರಿತು ಗಂಭೀರವಾಗಿ ಚಿಂತಿಸಿದ ಮತ್ತು ಮಹಿಳಾ ಪ್ರಶ್ನೆಗಳನ್ನು ಸಮಸ್ಯಾತ್ಮಕವಾಗಿ ಎತ್ತಿ ತೋರಲು ಮತ್ತು ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಶ್ರಮಿಸಿದವರಲ್ಲಿ ಮೇರಿವುಲ್‌ಸ್ಟನ್ ಕ್ರಾಫ್ಟ್ ಮೊದಲಿಗರಾಗಿದ್ದಾರೆ. ಸಮಾಜದಲ್ಲಿ ಮಾನವರೆಲ್ಲರೂ ರಾಜಕೀಯ ಸ್ವತಂತ್ರ್ಯದ ಹಕ್ಕುಳ್ಳವರು. ಕಾನೂನಿನೆದರು ಎಲ್ಲರೂ ಸಮಾನರು, ಜೀವರಾಶಿಗಳಲ್ಲೆ ಪ್ರತ್ಯೇಕವಾಗಿ ಕಾಣಿಸಿಕೊಳ್ಳುವ, ಮತ್ತು ಬುದ್ಧಿವಂತಿಕೆಯಿಂದ ಜೀವನವನ್ನು ಸಾಗಿಸುವಂತಹ ಮಾನವ ಜನಾಂಗದಲ್ಲಿ ಮಹಿಳೆಯು ಕೂಡ ಸೇರ್ಪಡೆಯಾಗಿದ್ದಾಳೆ. ಆದ್ದುದರಿಂದ ಪುರುಷರಿಗೆ ಸರಿಸಮಾನವಾಗಿ ಸ್ತ್ರೀಯರಿಗೂ ಸಹ "ರಾಜಕೀಯ ಸ್ವಾತಂತ್ರ್ಯ, ಕಾನೂನಿನ ಹಕ್ಕು, ಶಿಕ್ಷಣದ ಮೂಲಕ ಪ್ರತಿಭಾ ವಿಕಾಸದ ಅವಕಾಶ"[೭] ಇನ್ನೂ ಮುಂತಾದವುಗಳಲ್ಲಿ ಸಮಾನಹಕ್ಕು ಮಹಿಳೆಯರಿಗೆ ದೊರೆಯಲೇ ಬೇಕು ಎಂದು ಪುರುಷ ಸಮಾಜದ ಎದುರಿಗೆ ವಾದಿಸುತ್ತಾಳೆ.

ಸಮಾಜದಲ್ಲಿ ಪುರುಷನಿಗೆ ಸಮಸ್ಯೆಯೆನಿಸಿದ್ದು ಹೇಗೆ ಇಡೀ ಸಮಾಜದ ಸಮಸ್ಯೆ ಎನಿಸಿಕೊಳ್ಳುತ್ತದೆ ಎನ್ನುವ ಪುರುಷ ಪ್ರಧಾನರು, ಅದೇ ಹೆಣ್ಣಿನ ಸಮಸ್ಯೆಗಳು ಕೇವಲ ವೈಯಕ್ತಿಕ ಅಥವಾ ಒಬ್ಬಳಿಗೆ ಜವಾಬ್ದಾರಿಯಾದಂತ ಸಮಸ್ಯೆಯಾಗಿ ಕಂಡುಬರುತ್ತದೆ. ಈ ರೀತಿಯ ಅಸಮಾನತೆಯ ವಿರುದ್ಧ ಮಹಿಳಾ ಆದಿಚಿಂತಕಿಯರು ಪ್ರತಿಭಟಿಸಿದ್ದಾರೆ. ಈ ಜಗತ್ತಿನಲ್ಲಿ ಒಳ್ಳೆಯದು ಮತ್ತು ಕೆಟ್ಟದನ್ನು ನಿರ್ಧರಿಸುವವರು ಗಂಡಸರೇ ಆಗಿದ್ದಾರೆ ಏಕೆ? ಪುರುಷರಿಗೆ ಮಾತ್ರ ನ್ಯಾಯಾಧಿಪತಿಗಳ ಪಟ್ಟಕೊಟ್ಟವರಾರು? ಈ ಎಲ್ಲಾ ದಬ್ಬಾಳಿಕೆಗಳನ್ನು ಮಾಡುವ ಪುರುಷರು ಸಮಾಜದಲ್ಲಿ ಹೆಂಗಸರಿಗೆ ಯಾವುದು ಒಳ್ಳೆಯದು ಎಂಬುದನ್ನು ನಿರ್ಧಾರ ಮಾಡುವವರು ಪುರುಷನೇ ಆಗಿರುತ್ತಾನೆ. ಈ ಅಧಿಕಾರ ಪುರುಷರಿಗೆ ಹೇಗೆ ಬಂತು? ಎಂಬ ಅಂಶಗಳನ್ನು ಕೂಲಂಕುಶವಾಗಿ ಅಧ್ಯಯನ ಮಾಡಿ ಕಂಡುಕೊಂಡಿರುವುದೆಂದರೆ ಇದಕೆಲ್ಲ ಮೂಲಕಾರಣ, ಪುರುಷರ ದಬ್ಬಾಳಿಕೆ ಮತ್ತು ಅಧಿಕಾರ. ಅಂದರೆ ಮಹಿಳೆಯರು ಯಾವ ರಂಗದಲ್ಲಿ ಕ್ಷೇತ್ರದಲ್ಲಿ ಧ್ವನಿ ಎತ್ತದಂತಹ ಸ್ಥಿತಿಗೆ ಹೆಣ್ಣನ್ನು ತಳ್ಳಿರುವುದು ಪ್ರಮುಖವಾಗಿ ಕಂಡುಬರುತ್ತದೆ. ''ಸಮಾಜದಲ್ಲಿ ಹೆಂಗಸಿನ ವಿದ್ಯಾಭ್ಯಾಸ ಯಾವಾಗಲೂ ಪುರುಷರ ಹಿತದೃಷ್ಟಿಯಿಂದಲೇ ನಿರೂಪಿತವಾಗಿವೆ.'' ಏಕೆಂದರೆ ಪುರುಷರನ್ನು ಖುಷಿಪಡಿಸಲು ಹೆಣ್ಣಿನ ಶಿಕ್ಷಣವೆಲ್ಲವು ಪುರುಷರಿಗೆ ಪ್ರಯೋಜನವಾಗಲು ಮತ್ತು ತಮ್ಮನ್ನು ಪ್ರೀತಿಸಿ, ಆಧರಿಸಲು ಅನುಕೂಲವಾಗುವಂತಹ ವಿದ್ಯಾಭ್ಯಾಸ ಹೆಂಗಸಿಗೆ ದೊರೆಯುವಂತೆ ಮಾಡುತ್ತಾರೆ. ಏಕೆಂದರೆ ಎಳೆಯ ವಯಸ್ಸಿನಲ್ಲಿ ಮಕ್ಕಳೀಗೆ ಪಾಠಕಲಿಸಲು, ಬೆಳೆದವರಿಗೆ ಆರೈಕೆ ಮಾಡಲು, ಅವರೇ ದೊಡ್ಡವರಾದಾಗ ಬುದ್ಧಿವಾದ ಕೇಳಲು, ಸಂತೈಸಲು ಮತ್ತು ಗಂಡಸಿನ ಬಾಳನ್ನು ಹಸನುಮಾಡಲು ಹೆಂಗಸಿಗೆ ವಿದ್ಯೆಬೇಕು ಎನ್ನುತ್ತಾನೆ. ಹಾಗೆಯೇ ಇವೆಲ್ಲವೂ ಹೆಂಗಸಿನ ಕರ್ತವ್ಯಗಳು ಆಗಿವೆ, ಎನ್ನುವ ಪುರುಷ ಚಿಂತಕರನ್ನು ಮೇರಿವುಲ್‌ಸ್ಟನ್ ಕ್ರಾಫ್ಟ್ ಕಂಡಿಸುತ್ತಾಳೆ.

ಮೇರಿ ಎಲ್‌ಮನ್ : ಮೇರಿ ಎಲ್‌ಮನ್‌ಳ Thinking about women(೧೯೬೮) ಕೃತಿಯು ಕೇಟ್ ಮಿಲೇಟಳ sexual politics ಕೃತಿಗಿಂತ ಮುಂಚಿತವಾಗಿ ರಚನೆಗೊಂಡ ಕೃತಿ. ಸ್ತ್ರೀಪುರುಷರ ಮಧ್ಯೆ ಇರುವ ಮೂಲಭೂತವಾದ ವ್ಯತ್ಯಾಸಗಳನ್ನು ಅರ್ಥಮಾಡಿಕೊಳ್ಳಬೇಕಾದರೆ 'ಲೈಂಗಿಕ ಸಾದೃಶ್ಯ ಆಧಾರಿತ ಚಿಂತನೆ ಇದೆ ಎಂದು ಎಲ್‌ಮನ್ ಹೇಳುತ್ತಾಳೆ. ಈ ಚಿಂತನೆಯು ಮಹಿಳೆಯರ ಎಲ್ಲಾ ಅನುಭವಗಳನ್ನು ಲೈಂಗಿಕ ಸಾದೃಶ್ಯದ ಮೇಲೆ ವರ್ಗೀಕರಿಸುತ್ತದೆ. ಅಂದರೆ ಶತಶತಮಾನಗಳ ಹಿಂದಿನಿಂದಲೂ ಮಹಿಳೇಯರು ಲೈಂಗಿಕತೆಗೆ ದಾಸಿಯಾಗಿದ್ದಾಳೆ ಎನ್ನುವ ಪುರುಷರ ಭ್ರಮೆಯು ಮಹಿಳೆಯರ ಮೌಲ್ಯಗಳನ್ನೇ ಕುಂಟಿತಗೊಳಿಸುತ್ತಿದ್ದವು. ಇಂತಹ ಒಂದು ಮೂಢ ಕಲ್ಪನೆಯನ್ನು ಭಗ್ನಗೊಳಿಸುವುದೇ ಎಲ್‌ಮನ್‌ಳ ಮುಖ್ಯಗುರಿಯಾಗಿತ್ತು.

ಭಾರತೀಯ ಸ್ತ್ರೀವಾದಿಗಳು ಸಹ ಮಹಿಳೆಯರಿಗೆ ಆಗುತ್ತಿರುವ ಅನ್ಯಾಯಗಳ ವಿರುದ್ಧ ಹೋರಾಡಿ ಬ್ರಿಟಿಷರ ಆಳ್ವಿಕೆಯಲ್ಲಿ ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಳ್ಳಲು ಶ್ರಮಿಸಿದರು. ಅವರಲ್ಲಿ ಮುಖ್ಯವಾಗಿ

ಸ್ವರ್ಣಕುಮಾರಿ ದೇವಿ, ರಮಾಬಾಯಿ ರಾನಡೆ, ಆನಂದಿಬಾಯಿ ಜೋಶಿ ಇನ್ನೂ ಬಹುಸಂಖ್ಯೆಯ ಭಾರತೀಯ ಸ್ತ್ರೀವಾದಿಗಳು ಮಹಿಳೆಯರ ಸಮಸ್ಯೆಗಳ ಬಗ್ಗೆ ಮತ್ತು ಭಾರತೀಯ ಸಮಾಜದ ಅನಿಷ್ಟಪದ್ಧತಿಗಳನ್ನು ಹೋಗಲಾಡಿಸಲು ಬೃಹತ್ ಪ್ರಮಾಣದಲ್ಲಿ ಚಳುವಳಿಗಳನ್ನು ಮಾಡಿದರು. ಹಾಗೆಯೇ ಸಮಾಜ ಸುಧಾರಣಾವಾದಿಗಳುಸಹ ಮಹಿಳೆಯರ ಹಿತವನ್ನು ಬಯಸಿದವರಲ್ಲಿ ಪ್ರಮುಖರಾದ, ರಾಜಾರಾಮ್ ಮೋಹನ್ ರಾಯ್, ಈಶ್ವರಚಂದ್ರವಿದ್ಯಾಸಾಗರ್, ಆಂಧ್ರ ಪ್ರದೇಶದ ವೀರೇಶಲಿಂಗಂ ಪಂತುಲು, ಜೋತಿಭಾಪುಲೆ ಇವರು ಮಹಿಳಾ ಶಿಕ್ಷಣಕ್ಕೆ ಪ್ರೋತ್ಸಾಹ ನೀಡುವುದರ ಜೊತೆಗೆ, ಮಹಿಳೆಯರ ಮೇಲೆ ಹೇರಿರುವ ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಡಿ ಅವುಗಳನ್ನು ಹೋಗಲಾಡಿಸಲು ಸತತವಾಗಿ ಪ್ರಯತ್ನಿಸಿದರು.

ಸ್ವರ್ಣ ಕುಮಾರಿದೇವಿ : ಮಹಿಳೆಯರ ಉನ್ನತಿಗಾಗಿ ಶ್ರಮಿಸಿದವರಲ್ಲಿ ಸ್ವರ್ಣಕುಮಾರಿ ದೇವಿಯರ ಸಾಧನೆ ಅತ್ಯಂತ ಮುಖ್ಯವಾದುದು. ೧೮೮೬ರಲ್ಲಿ ಒಂದು ಮಹಿಳಾ ಸಂಸ್ಥೆಯನ್ನು ಸ್ಥಾಪಿಸಿದರು. ಮಹಿಳೆಯರ ಕಲ್ಯಾಣಕ್ಕಾಗಿ ಶ್ರಮಿಸಿದರು. ಮಹಿಳೆಯರಲ್ಲಿ ಮನೋಭಾವನೆಯನ್ನು ಮೂಡಿಸುವುದು ಪ್ರವೃತ್ತಿಯನ್ನು ಕೈಗೊಂಡಿದ್ದರು ಮತ್ತು ಬಡಬಾಲಕಿಯರಿಗೆ ಶಿಕ್ಷಣ ನೀಡುವುದಕ್ಕಾಗಿ ಆಶ್ರಯದಾಮಗಳನ್ನು ಸಹ ಪ್ರಾರಂಭಿಸಿದ್ದರು.

ರಮಾಬಾಯಿ ರಾನಡೆ : ೧೯೦೯ರಲ್ಲಿ ರಮಾಬಾಯಿ 'ರಾನಡೆ ಸೇವಾ' ಸದನವನ್ನು ಸ್ಥಾಪಿಸಿದರು. ಅದು ಮಹಿಳೆಯರಿಗೆ ಶಿಕ್ಷಣ ನೀಡುವ ಆಶ್ರಮಧಾಮಗಳು. ಅವರನ್ನು ಸಾಮಾಜಿಕ ಕಾರ್ಯಕ್ಕೆ ಸಜ್ಜುಗೊಳಿಸುವ ಕೇಂದ್ರವಾಗಿತ್ತು ಮತ್ತು ವಯಸ್ಕ ಮಹಿಳೆಯರಿಗೆ ತರಬೇತಿಗಳನ್ನು ನೀಡುವ ವಿದ್ಯೆಸಂಸ್ಥೆಯಾಗಿತ್ತು. ಮಹಿಳೆಯರು ಪುರುಷರ ಸರಿಸಮಾನವಾಗಿ ಮುನ್ನಡೆಯುವ ಆತ್ಮವಿಶ್ವಾಸವನ್ನು ಬೆಳೆಸುವುದೇ 'ರಾನಡೆ ಸೇವಾ' ಸಂಸ್ಥೆಯ ಮುಖ್ಯ ಉದ್ದೇಶವಾಗಿತ್ತು.

ರಾಜಾರಾಮ್ ಮೋಹನ್ ರಾಯ್ : ಮಹಾನ್ ಸಮಾಜ ಸುಧಾರಕರಲ್ಲಿ ಒಬ್ಬರಾದ ರಾಜಾರಾಮ್ ಮೋಹನ್ ರಾಯರು ತಮ್ಮ ಬ್ರಹ್ಮಸಮಾಜದ ವತಿಯಿಂದ ಹಿಂದೂ ಸಮಾಜದಲ್ಲಿ ಶತಶತಮಾನಗಳಿಂದ ಅಂಟಿಕೊಂಡು ಬಂದಿರುವಂತಹ ಅನಿಷ್ಟಪದ್ಧತಿಗಳಾದ ಸತಿಪದ್ಧತಿ ಅಥವಾ ಸಹಗಮನ ಪದ್ಧತಿ, ಕನ್ಯಾವಿಕ್ರಯ, ಬಹುಪತ್ನಿತ್ವ, ವಿಧವಾಪುನರ್ ವಿವಾಹ ನಿಷೇಧ ಮತ್ತು ಮಹಿಳೆಯರಿಗೆ ಉನ್ನತ ಶಿಕ್ಷಣದ ನಿರಾಕರಣೆ ಮುಂತಾದವುಗಳ ವಿರುದ್ಧ ನಿರಂತರ ಹೋರಾಟ ನಡೆಸಿದರು. ಹಾಗೂ ಜನರಲ್ಲಿ ಜಾಗೃತಿ ಮೂಡಿಸುವುದಕ್ಕಾಗಿ ಸಭೆ, ಸಮಾರಂಭಗಳ ಮೂಲಕ ಪ್ರಚಾರಕಾರ್ಯ ನಡೆಸಿದರು. ಸಂಪ್ರದಾಯಿವಾದಿಗಳು ಪ್ರಬಲ ಪುರುಷ ವಿರೋಧದ ನಡುವೆಯೂ ತಮ್ಮ ಪ್ರಯತ್ನ ಮಾಡಿ ಸಾಕಷ್ಟು ಯಶಸ್ಸು ಪಡೆದರು. ಮತ್ತು ಸತಿಪದ್ಧತಿ ನಿಷೇಧ ಶಾಸನವನ್ನು ೧೮೨೯ರಲ್ಲಿ ಜಾರಿಗೆ ಬರುವಂತೆ ಮಾಡಿದರು. ಆಗ ಬ್ರಿಟಿಷ

ವೈಸರಾಯಿ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಕ್ ರಾಜಾರಾಮ್ ಮೋಹನ್ ರಾಯರಿಗೆ ಪೂರ್ಣ ಸಹಕರ ನೀಡಿದನು. ``ಬಹುಪತ್ನಿತ್ವ, ಕುಲೀನತೆ, ಮದುವೆ, ಮಾರುಕಟ್ಟೆಗಳಲ್ಲಿ ಹೆಣ್ಣುಗಳ ಮಾರಾಟ' ಇವುಗಳನ್ನು ರಾಜಾರಾಮ್ ಮೋಹನ್ ರಾಯರು ಬಹುವಾಗಿ ಖಂಡಿಸಿದರು. ಮತ್ತು ಮಹಿಳೆಯರ ಹಕ್ಕು ಹಾಗೂ ಅಂತಸ್ತುಗಳಿಗಾಗಿ ಹೋರಾಟಗಳನ್ನು ನಡೆಸಿದರು. ಅವರು ೧೮೨೨ರಲ್ಲಿ 'ಸ್ತ್ರೀಯರ ಪುರಾತನ ಸೊತ್ತುಗಳ ಮೇಲೆ ಆಧುನಿಕ ಅತಿಕ್ರಮಣ' ಮತ್ತು ೧೮೨೮ರಲ್ಲ 'ಪಿತ್ರಾರ್ಜಿತ ಸೊತ್ತುಗಳೀಗೆ ಹಿಂದೂಗಳಿಗಿರುವ ಹಕ್ಕುಗಳು' ಎಂಬ ಪ್ರಬಂಧಗಳನ್ನು ಪ್ರಕಟಿಸಿದರು. 'ಆಧುನಿಕ ಇಂಡಿಯಾದ ಪಿತಾಮಹನೆಂದೂ, ಮಹಿಳೆಯರ ಹಕ್ಕುಗಳ ನೇತಾರನೆಂದೂ, ಸ್ತ್ರೀವಾದಿಯೆಂದೂ ಕರೆಸಿಕೊಂಡಿದ್ದ ರಾಜಾರಾಮ್ ಮೋಹನ್‌ರಾಯರು ``ತನ್ನ ತಾಯಿಯ ಶಕ್ತಿ ಮತ್ತು ಸ್ವಾತಂತ್ರ್ಯ ಮನೋಭಾವವನ್ನು ಮೆಚ್ಚಿದ್ದರು. ಆದರೂ ಸಾರ್ವಜನಿಕವಾಗಿ ಆಕೆಯನ್ನು ಅವಮಾನಿಸುವುದನ್ನೇನೂ ಬಿಡಲಿಲ್ಲ.''[೧೦] ಈ ಸಂದರ್ಭವನ್ನು ನೋಡಿದರೆ ಮಹಿಳೆಯರ ಪರವಾಗಿ ಮತ್ತು ಮಹಿಳಾ ಹಕ್ಕುಗಳಿಗಾಗಿ ಹೋರಾಡಿದ ಆದರ್ಶನಾಯಕನೆಂದು ಒಪ್ಪುವುದು ಕಷ್ಟವಾಗುತ್ತದೆ.

ಈಶ್ವರ ಚಂದ್ರವಿದ್ಯಾಸಾಗರ್ : ಸ್ತ್ರೀಶಿಕ್ಷಣ, ಬಹುಪತ್ನಿತ್ವ ಹಾಗೂ ವಿಧವಾ ವಿವಾಹದ ಸಮಸ್ಯೆಗಳ ಪರಿಹಾರವನ್ನು ಕಂಡುಕೊಳ್ಳಲು ವಿಶೇಷ ಕಾಳಜಿ ತೆಗೆದುಕೊಂಡು ಆ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳಲು ಮುನ್ನೆಡೆದವರಲ್ಲಿ ಈಶ್ವರಚಂದ್ರ ವಿದ್ಯಾಸಾಗರರು ಒಬ್ಬರು. ಬಂಗಾಲದ ಶ್ರೇಷ್ಟ ಶಿಕ್ಷಣ ತಜ್ಞರಾಗಿ ಪ್ರಖ್ಯಾತರಾದ ಈಶ್ವರಚಂದ್ರರು ``ಜನಸಾಮಾನ್ಯರ ಅಜ್ಞಾನವನ್ನು ಹೊಡೆದೊಡಿಸಲು ವಿದ್ಯೆ ಬಹುಮುಖ್ಯ ಅಸ್ತ್ರವೆಂಬುದನ್ನು ಮನಗಂಡಿದ್ದರು.''[೧೧] ಜಾನ್‌ಡ್ರಿಂಕ್‌ವಾಟರ್‌ಬೆಥೂನ್ ೧೮೫೯ರಲ್ಲಿ ಸ್ಥಾಪಿಸಿದ್ದ 'ಹಿಂದೂ ಬಾಲಿಕಾ ವಿದ್ಯಾಲಯದ ಮೊದಲ ಕಾರ್ಯದರ್ಶಿಗಳಾಗಿ ಕಾರ್ಯನಿರ್ವಹಿಸಿದರು. ಹಾಗೆಯೇ ೧೮೫೬ರಲ್ಲಿ ವಿದ್ಯಾಸಾಗರರು ವಿಶೇಷ ಶಿಕ್ಷಣಾಧಿಕಾರಿಯಾಗಿ ನೇಮಕವಾದಾಗ ಹಲವಾರು ಶಾಲೆಗಳನ್ನು ಹುಡುಗಿಯರಿಗಾಗಿ ಸ್ಥಾಪಿಸುವ ಶ್ರಮವಹಿಸಿದರು. ವಿದ್ಯಾಸಾಗರರು ಸ್ತ್ರೀಶಿಕ್ಷಣದ ನೇತಾರರೆನಿಸಿದರು. ಮತ್ತು ವಿಧವಾ ಮರುವಿವಾಹವನ್ನು ಕಾಯಿದೆ ಬದ್ಧಗೊಳಿಸಲು ತೀವ್ರ ಪ್ರಚಾರ ಮಾಡಿದರು. ಹಾಗೂ ಬಹುಪತ್ನಿತ್ವವನ್ನು ವಿರೋಧಿಸುವ ಕೆಲಸವನ್ನು ಅಷ್ಟೇ ಆಸಕ್ತಿಯಿಂದ ಮಾಡಿದರು. ``ಐವತ್ತು ವರ್ಷದವನೊಬ್ಬ ನೂರಾ ಏಳುಬಾರಿ ಮದುವೆಯಾಗಿದ್ದು, ಐವತ್ತೈದು ವರ್ಷದ ಭೋನಾಥ ಬಂದೋಪಾಧ್ಯನಿಗೆ ಎಂಟುಜನ ಮಡದಿಯರು, ಅರವತ್ನಾಲ್ಕು ವಯಸ್ಸಿನ ಭಗವಾನ್ ಚಟ್ಟೋಪಾಧ್ಯಾಯನಿಗೆ ಎಪ್ಪತ್ತೆರಡು ಜನಹೆಂಡತೀಯರು''[೧೨] ಹೀಗೆ ದಾಖಲೆಗಳನ್ನು ಮುಂದೊರೆಸಿರುವುದು ಕಾಣಬಹುದು. ಸುಮಾರು ಎರಡುವರೆ ಸಾವಿರ ಜನರಿಂದ ಸಹಿಮಾಡಿಸಿ/ಸಂಗ್ರಹಿಸಿ ಬಹುಪತ್ನಿತ್ವವನ್ನು ನಿಷೇಧಿಸುವ ಕಾಯ್ದೆಯನ್ನು ಜಾರಿಗೆ ತರಬೇಕೆಂದು ಸರಕಾರವನ್ನು ಕೋರಿದರು. ಹಾಗೆಯೇ ವೃದ್ಧಗುರುವು ಚಿಕ್ಕವಯಸ್ಸಿನ ಹುಡುಗಿಯನ್ನು ಮದುವೆಯಾದಾಗ ವಿದ್ಯಾಸಾಗರರು ಗುರುವಿನ ಅತಿಥ್ಯವನ್ನು ನಿರಾಕರಿಸುವುದರ ಮೂಲಕ ತಮ್ಮ ಪ್ರತಿರೋಧವನ್ನು ಅವರು ವ್ಯಕ್ತಪಡಿಸಿದರು.

ವೀರೇಶ ಲಿಂಗಂ ಪಂತುಲು : ಮಹಿಳಾ ಸುಧಾರಣೆಯ ವಿಷಯಕ್ಕೆ ಬಂದಾಗ 'ಕುಂದಕೂರಿ ವೀರೇಶಲಿಂಗಂ ಪಂತುಲು' ಅವರ ಹೆಸರು ಮತ್ತು ಸಾಹಸಗಳು ಕಣ್ಣಮುಂದೆ ಬರುತ್ತವೆ. ಅಂದರೆ ಐತಿಹಾಸಿಕವಾಗಿ ಮರೆಯಲಾಗದ ವ್ಯಕ್ತಿಯಾಗಿದ್ದಾರೆ. ಅವರ ಹೋರಾಟದ ಕ್ಷೇತ್ರಗಳು ಹಲವಾರು ರೀತಿಯವುಗಳಾಗಿದ್ದವು. ಉದಾ : ವಿಗ್ರಹಾರಾಧನೆಯ ಖಂಡನೆ, ಮೂಢನಂಬಿಕೆಗಳನ್ನು ಗೇಲಿಮಾಡುವುದು, ಸ್ತ್ರೀವಿದ್ಯಾಭ್ಯಾಸಕ್ಕಾಗಿ ಒತ್ತಾಯ, ವಿಧವಾ ಪುನರ್ ವಿವಾಹದ ಬಗ್ಗೆ ಚರ್ಚೆ, ಅಸ್ಪೃಶ್ಯರ ಸಮಸ್ಯೆಯ ನಿವಾರಣೆ, ಅಧಿಕಾರ ವಲಯಗಳಲ್ಲಿ ಲಂಚಗುಳಿತನವನ್ನು ನಿರ್ಮೂಲನೆ ಮಾಡುವಿಕೆ. ಇನ್ನೂ ಹಲವಾರು ಪಂತುಲು ಅವರ ಹೋರಾಟದ ವಿಷಯಗಳಾಗಿದ್ದವು. "ಬ್ರಹ್ಮಸಮಾಜ ಮತ್ತು ಪ್ರಾರ್ಥನಾ ಸಮಾಜಗಳ ಸದಸ್ಯರಾಗಿದ್ದ ಪಂತುಲು ಸಮಾಜ ಸುಧಾರಣೆಯ ಉದ್ದೇಶದಿಂದ 'ವಿವೇಕವರ್ಧಿನಿ'[೧೩] ಎಂಬ ಪತ್ರಿಕೆಯನ್ನು ಪ್ರಾರಂಭಿಸಿದ್ದರು.

ಸಮಾಜ ಸುಧಾರಣಾವಾದಿಗಳು ಮಹಿಳೆಯರ ಹಿತಕ್ಕಾಗಿ ಇಷ್ಟೆಲ್ಲಾ ಶ್ರಮವಹಿಸಿ ಮಹಿಳೆಯರಿಗೆ ದೊರೆಯಬೇಕಾದಂತಹ ಹಕ್ಕುಗಳ್ನು ದೊರಕಿಸಲು ಪ್ರಯತ್ನಿಸಿದರು. ಮತ್ತು ಮೂಢನಂಬಿಕೆಗಳಿಂದ ಹಾಗೂ ರೂಢಿಸಂಪ್ರದಾಯಗಳಿಂದ ಹೊರಬರುವಂತೆ ಆಲೋಚನೆ ಮಾಡಿದರೂ ಸಹ ಅವುಗಳಲ್ಲಿ ಒಂದೆರಡು ದೋಷಗಳು ಕಂಡುಬರುತ್ತವೆ. ಅವುಗಳೆಂದರೆ ಮಹಿಳೆಯರು ಉತ್ತಮ ಪತ್ನಿಯರಾಗುವಂತೆ, ಉತ್ತಮ ರೀತಿಯಲ್ಲಿ ಗೃಹಿಣಿ ಕೆಲಸಕಾರ್ಯಗಳನ್ನು ಮಾಡಿಕೊಂಡು ಹೋಗಬೇಕೆಂದು ಆಶಿಸುತ್ತಾರೆ.

ಪತಿಯೇ ಪರದೈವ, ಪತಿಸೇವೆಯೇ ದೈವದ ಸೇವೆ ಎಂದೆಲ್ಲಾ ನಂಬಿಸುತ್ತಾ ದೈವವನ್ನು ಜ್ಞಾನದ ಸಂಕೇತದಿಂದ ಅಧಿಕಾರಯುತ ಪತಿಯ ಸ್ಥಾನಕ್ಕೆ ಇಳಿಸಲಾಯಿತು. ಉದಾ: "ತನ್ನಗಂಡನಿಗೆ ಸೇವೆ ಮಾಡುವುದೆಂದರೆ, ದೇವರಿಗೆ ಸೇವೆಮಾಡಿದಂತೆ ಗಂಡನಿದ್ದಲ್ಲಿ ಎಲ್ಲಾ ಪುಣ್ಯಕ್ಷೇತ್ರಗಳು ಉಂಟು, ಅಂಥ ಪೂಜ್ಯನಿಲ್ಲದೇ ಬದುಕೇ ಅರ್ಥಹೀನ"[೧೪]

"ಚರಿತ್ರೆಕಾರ ಸುಮಿತ್ ಸರ್ಕಾರ್ ಹೇಳುವಂತೆ ಈ ಸುಧಾರಣಾ ವಾದಿಗಳು ತಮ್ಮ ತಮ್ಮ ಕುಟುಂಬ ವಲಯಗಳೊಳಗೆ ಮಹಿಳೆಯರ ಸಂಬಂಧ ಸ್ವರೂಪಗಳನ್ನು ಒಂದಿಷ್ಟು ಪರಿವರ್ತಿಸಿ ಸುಗಮಗೊಳಿಸುವ ಉದ್ದೇಶದವರಾಗಿದ್ದಾರಷ್ಟೆ, ಹೀಗಾಗಿ ಮಹಿಳಾ ಸಮುದಾಯ ಉನ್ನತಗೊಳ್ಳಬೇಕು ಎನ್ನುವಾಗಲೂ ಹದವಾದ, ಮಿತವಾದ, ನಿಯಂತ್ರಿತವಾದ ಉನ್ನತಿಯನ್ನಷ್ಟೇ ಅಪೇಕ್ಷಿಸಿದ್ದಾರೆ. ಹೊರೆತು ವಿಮುಕ್ತಿಯ ಸ್ವರೂಪದ್ದಲ್ಲ."[೧೫] ಸಮಾಜ ಸುಧಾರಣೆಗಳು, ಧಾರ್ಮಿಕ ಸುಧಾರಣೆಗಳೂ, ಜಾತಿ ಸುಧಾರಣೆಗಳು, ಮಹಿಳಾ ಸಮಸ್ಯೆಗಳನ್ನು ಪರಿಹರಿಸಲು ಕೈಗೆತ್ತಿಕೊಳ್ಳುತ್ತಿದ್ದವೇನೊ ನಿಜ, ಆದರೆ ಅವುಗಳ ಒಟ್ಟು ನಿರ್ವಹಣೆಯು ಹೀಗಾಗಬೇಕೆಂಬ ನಿರ್ಧಾರಮಾತ್ರ ಸಂಪೂರ್ಣವಾಗಿ ಪುರುಷ ನೇತಾರರದೇ ಆಗಿರುತ್ತಿತ್ತು. ಈ ಎಲ್ಲಾ ಆಲೋಚನೆಗಳು ಪುರುಷರ ಪರವಾಗಿದ್ದರೂ ಸಹ ಸ್ತ್ರೀಯರಿಗೆ ಒಂದು ಮುಕ್ತಿಯ ಅವಕಾಶ

ದೊರೆಯುವಂತೆ ಮಾಡಿದರು. ಸುಧಾರಣಾವಾದಿ ಚಿಂತನೆಗಳು ಮಹಿಳೆಯು ಮನೆಯಿಂದ ಹೊರಗಡೆ ಬರುವುದಕ್ಕೆ, ಮತ್ತು ಶಿಕ್ಷಣ, ನೌಕರಿ ಪಡೆದುಕೊಳ್ಳುವುದಕ್ಕೆ ಅವಕಾಶ ಕಲ್ಪಿಸಿದ್ದರು. ಕ್ರಮೇಣವಾಗಿ ಸ್ವತಂತ್ರವಾಗಿ ತಮ್ಮ ಅಸ್ತಿತ್ವ ಶೋಧಮಾಡುವುದು ಹೇಗೆ, ತಮ್ಮ ಸಮಸ್ಯೆಗಳಿಗೆ ನಿಜವಾದ ಕಾರಣಗಳು ಎಲ್ಲಿವೆ. ಇವುಗಳಿಂದ ಬಿಡುಗಡೆ ಹೊಂದುವುದು ಹೇಗೆ ಎನ್ನುವುದನ್ನು ಭಾರತದ ಸ್ತ್ರೀವಾದಿಗಳು ಸಹ ಯೋಚನೆ ಮಾಡಿದ್ದಾರೆ.

ಭಾರತೀಯ ಸ್ತ್ರೀವಾದಿಗಳು ಇಲ್ಲಿನ ಸಮಸ್ಯೆಗಳನ್ನು ಮತ್ತು ಸಮಸ್ಯೆಗಳು ಹುಟ್ಟಲಿಕ್ಕೆ ಮೂಲಕಾರಣಗಳು ಯಾವುವು ಎನ್ನುವುದನ್ನು ಶೋಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ೧೭ನೇ ಶತಮಾನದಿಂದ ಹಿಡಿದು ೨೧ನೇ ಶತಮಾನದವರೆಗೂ ಅಂದರೆ ಇಂದಿನವರೆಗೂ ಏನಾಗಿದೆಂದರೆ ಸುಧಾರಣಾವಾದಿ ಚಿಂತನೆಗಳು ಮತ್ತು ಸರಕಾರದ ಅಭಿವೃದ್ಧಿ ಯೋಜನೆಗಳು ಸಹ ಮಹಿಳೆಯರ ಕ್ಷೇಮಾಭಿವೃದ್ಧಿ ಮತ್ತು ಕಲ್ಯಾಣ ಕಾರ್ಯಕ್ರಮಗಳನ್ನು ಮಾಡುತ್ತೇವೆ. ಇಲ್ಲಿ ಪುರುಷರು ತೋರಿಸಿದಂತಹ ಮಾರ್ಗದರ್ಶನದಲ್ಲಿಯೇ ನಡೆಯಬೇಕಾಗುತ್ತದೆ. ಆದುದರಿಂದ ಹೆಂಗಸು ಗಂಡಸಿನ ಅಧೀನವಾಗಿಯೇ ಉಳಿಯಬೇಕಾಗುತ್ತದೆ. ಆದುದರಿಂದ ಇಲ್ಲಿ ಗಂಡಸು ಉತ್ತಮ, ಹೆಂಗಸು ಅಧೀನ ಎನ್ನುವುದು ಬೇರೂರಿರುವುದರಿಂದ ಹೆಂಗಸರನ್ನು ಅತಿ ಹೆಚ್ಚು ಕರುಣೆಯಿಂದ ನೋಡಿಕೊಳ್ಳುವುದನ್ನು ಸ್ತ್ರೀವಾದ ಮತ್ತು ಸುಧಾರಣಾವಾದಿ ಚಿಂತನೆಗಳು ಹಾಗೂ ಸರಕಾರದ ಕಾರ್ಯಕ್ರಮಗಳು ಸಹ ಇಂತಹ ಒಂದು ಚೌಕಟ್ಟನ್ನೇ ಮುಂದೊರೆಸಿಕೊಂಡು ಹೋಗುತ್ತಿವೆ.

ಇಂದಿಗೂ ಮಹಿಳೆಯರ ಅಭಿವೃದ್ಧಿ ಕಾರ್ಯಕ್ರಮಗಳು ಅವು ಕೇವಲ ಕ್ಷೇಮಾಭಿವೃದ್ಧಿಯ ತರದಲ್ಲಿಯೇ ಇದ್ದಿವೆ. ಇವು ಜಾಗೃತ ಮಹಿಳೆಯರಿಗೆ ಪ್ರಮುಖ ಸವಾಲಾಗಿ ನಿಂತುಕೊಂಡಿವೆ. ಜಾಗೃತಗೊಂಡ ಮಹಿಳೆಯರನ್ನು ಬೇರೆ ಬೇರೆ ದೇಶಗಳಲ್ಲಿ ಕಂಡಿಸಿದ್ದು ಏನೆಂದರೆ, ನೀವು ಪುರುಷ ದ್ವೇಶಿಗಳು, ಜೀವ ವಿರೋಧಿಗಳು, ನೀವು ಸ್ತ್ರೀಪರವಾದಿಗಳು ಎಂದು ಕಂಡಿಸಲಾಗಿದೆ. ಅದೇ ಚಿಂತನೆಗಳು ಭಾರತದಲ್ಲಿ ಭಿನ್ನವಾಗಿವೆ. ಉದಾ : ಸುಧಾರಣಾವಾದಿಗಳು ಮತ್ತು ಇಂದಿನ ಸರಕಾರಿ ಮಹಿಳಾ ಅಭಿವೃದ್ಧಿ ಕಾರ್ಯಕ್ರಮಗಳು ಹೆಂಗಸರ ಪರವಾಗಿ ಯೋಚನೆ ಮಾಡುತ್ತಿವೆ ಎಂದು ಕಾಣುತ್ತವೆ. ಆದರೆ ಹೆಂಗಸಿನ ಪರವಾಗಿ ಯೋಚಿಸಿದರೂ ಸಹ ಪುರುಷ ಪ್ರಧಾನ ಚಿಂತನೆಯಿಂದ ಈ ಸುಧಾರಣಾವಾದಿ ಚಿಂತನೆಗಳೂ ಹೊರಗೆ ಬಿಡುವುದಿಲ್ಲ. ಈ ಚಿಂತನೆಗಳು ಪುರುಷ ಪ್ರಧಾನ ಸಮಾಜದಲ್ಲಿ ಗಟ್ಟಿಯಾಗಿ ಹಿಡಿದುಕೊಂಡಿವೆ. ಆದ್ದರಿಂದ ಸಮಾಜದಲ್ಲಿ ಪುರುಷನು ಶ್ರೇಷ್ಠ ಮತ್ತು ಪ್ರಥಮ ಪ್ರಜೆಯಾಗಿದ್ದಾನೆ. ಹೆಂಗಸರು ಅಧೀನರು ಹಾಗೂ ಎರಡನೆಯ ದರ್ಜೆಯ ಪ್ರಜೆ ಎನಿಸಿಕೊಂಡಿದ್ದಾಳೆ. ಇವು ನಮ್ಮ ರಾಷ್ಟ್ರೀಯ ಪಾಲಿಸಿಗಳಲ್ಲಿ ಮತ್ತು ನೀತಿಗಳಲ್ಲಿ ಕೂಡ ಬದಲಾವಣೆಯಾಗಿಲ್ಲ.

ನಮ್ಮ ಸಂವಿಧಾನದಲ್ಲಿ ಮತ್ತು ಕಾನೂನಿನಲ್ಲಿಯೂ ಸಹ ಮಹಿಳೆಯರಿಗೆ ಸರಿ ಸಮಾನವಾದ ಸ್ಥಾನಗಳನ್ನು ಪ್ರಸ್ತಾಪಿಸಲಾಗಿದೆ. ಆದರೆ ಅವುಗಳನ್ನು ಪುರುಷ ಪ್ರಧಾನರು ತಮ್ಮ ಹಿಡಿತದಲ್ಲಿಟ್ಟುಕೊಂಡು ಮಹಿಳೆಯರನ್ನು ಕೀಲುಗೊಂಬೆಯಂತೆ ಆಟವಾಡಿಸುತ್ತಿದ್ದಾರೆ. ಅಂದರೆ ಮಹಳೆಯರು ಬೃಹತ್ ಪ್ರಮಾಣದಲ್ಲಿ ಸಂಘಟನೆ ಮಾಡಿಕೊಂಡು ಚಳುವಳಿಗಳನ್ನು ಕೈಗೊಂಡು ಮುಷ್ಕರ ಹೂಡಿದಾಗ ಅವರ ಸಮಸ್ಯೆಗಳಿಗೆ ಅಷ್ಟು ಇಷ್ಟೊ ದಾನದ ರೂಪದಲ್ಲಿ ಪರಿಹಾರ ಅಥವಾ ಅನುಕೂಲಗಳನ್ನು ಕಲ್ಪಿಸಿ ಅವರನ್ನು ಸುಮ್ಮನೆ ಇರಿಸಲಾಗುತ್ತಿದೆಯೇ ಹೊರತು, ಹೆಂಗಸರಿಗೆ ಸಮಾನ ನೆಲೆಗಳನ್ನು ಸಂವಿಧಾನದಲ್ಲಿ ಕೊಟ್ಟಿದ್ದರೂ, ಕಾನೂನಿನ ಮೂಲಕ ಕಲ್ಪಿಸಿದ್ದರೂ ಸಹ ಸಮಾನತೆ ಎನ್ನುವುದು ಭ್ರಮೆಯಾಗಿ ಹೋಗಿದೆ. ಇಲ್ಲಿ ಜಾಗೃತ ಮಹಿಳೆಯರಿಗೆ ತಮ್ಮ ಸಮಸ್ಯೆಗಳು ಏನು ಅನ್ನುವುದು ಅರ್ಥವಾಗುತ್ತವೆ. ಆದರೆ ಸಮಸ್ಯೆಗಳನ್ನು ಪರಿಹರಿಸಿಕೊಳ್ಳುವುದಕ್ಕೆ ಯಾವುದೇ ರೀತಿಯ ಅಹವಾಲುಗಳನ್ನು ಹೇಳಿಕೊಂಡರೂ ಸಹ ಅರ್ಥವಾಗುತ್ತಿಲ್ಲ. ಹಿಂದೆ ಸಾಮಾಜಿಕ ಸಂಘಟನೆಗಳು ಸಹ ಅಹವಾಲುಗಳನ್ನು ಹೇಳಿಕೊಂಡಿವೆ ಹಾಗೆಯೇ ಇಂದು ಚಳುವಳಿಕಾರರು ಸಹ ಪುರುಷ ರಾಜಕಾರಣಿಗಳ ಎದುರು ನಿಂತು ನಮಗೆ ಅದುಬೇಕು, ಇದುಬೇಕು ಎಂದು ಕೇಳಿಕೊಳ್ಳುತ್ತವೆ. ತಮ್ಮ ಅಹವಾಲುಗಳನ್ನು ಸಲ್ಲಿಸಿ ಬೇಡಿಕೆಗಳನ್ನು ಪರಿಹರಿಸಿಕೊಳ್ಳುತ್ತಿದ್ದರು.

ಜಾಗೃತ ಮಹಿಳೆಯರಿಗೆ ಎರಡು ರೀತಿಯ ಸವಾಲುಗಳು ಕಂಡುಬರುತ್ತವೆ. ಒಂದು ನಮ್ಮ ಸಾಮಾಜಿಕ ಚಿಂತನೆಗಳಲ್ಲಿ ಮತ್ತು ರಾಷ್ಟ್ರೀಯ ನೀತಿಗಳನ್ನು ಯಾವುದೇ ಬಗೆಯ ಬದಲಾವಣೆಗಳು ಕಂಡು ಬರದೇ ಇರುವುದು. ಮತ್ತೊಂದು, ಸ್ವತಃ ಜಾಗೃತ ಮಹಿಳೆಯರು ತಮ್ಮ ಬಿಡುಗಡೆಯನ್ನು ಸರಿಯಾಗಿ ಕಲ್ಪಿಸಬೇಕು ಎನ್ನುವುದು. ಉದಾ : ಸಮಸ್ಯೆಯನ್ನು ಪರಿಹರಿಸಕೊಳ್ಳ ಬೇಕಾದರೆ, ಕೊಡಿರಿ, ಕೊಡಿರಿ ಎಂದು ಕೇಳುವುದರ ಬದಲಾಗಿ ಮಹಿಳೆಯರಿಗೆ ಬರಬೇಕಾದಂತಹ ಸವಲತ್ತುಗಳನ್ನು ಕಿತ್ತುಕೊಳ್ಳುವ ಬದಲಾಗಿ ಬೇಡಿ ಪಡೆದುಕೊಳ್ಳುವ ಸ್ಥಿತಿಯಲ್ಲೇ ಹೆಂಗಸರು ಉಳಿದುಕೊಂಡಿದ್ದಾರೆ. ಆದ್ದರಿಂದ ಹೆಂಗಸು ಗಂಡಸಿನ ಅಧೀನದಲ್ಲಿಯೇ ಉಳಿದುಕೊಂಡಿದ್ದಾಳೆ. ಇಲ್ಲಿ ಪುರುಷರು ಸಹ ನಾವು ಹೆಂಗಸರಿಗೆ ಒಳ್ಳೆಯದನ್ನೇ ಮಾಡುತ್ತೇವೆ ಎನ್ನುವ ಅಹಂ ಕೂಡ ಅವರಲ್ಲಿ ಅಡಗಿದೆ. ಸುಧಾರಣಾವಾದಿಗಳು ಸಹ ಇವೆ ಅಂಶಗಳನ್ನು ಮುಂದೊರೆಸುತ್ತಾರೆ. ಅಂದರೆ ಅಯ್ಯೋ ಪಾಪ ಮಹಿಳೆಯರು ಕಷ್ಟದಲ್ಲಿ ಸಿಲುಕಿದ್ದಾರೆ, ಅವರಿಗೆ ಸಹಾಯ ಮಾಡಬೇಕು, ಸಮಸ್ಯೆಗಳೀಗೆ ಪರಿಹಾರ ಸೂಚಿಸಬೇಕು ಎನ್ನುವ ರೀತಿಯಲ್ಲಿ ಬೆಳೆದುಕೊಂಡುಬಂದಿದೆ.

ಪುರುಷರು ಮಹಿಳೆಯರಿಗೆ ಸೂಕ್ತವಾಗಿ ಉತ್ತೇಜ ಮತ್ತು ಮಾರ್ಗದರ್ಶನಗಳನ್ನು ನೀಡುತ್ತಾ ಮಹಿಳೆಯರಿಗಾಗಿ ಹಲವಾರು ಸಂಘಸಂಸ್ಥೆಗಳನ್ನು ಹುಟ್ಟುಹಾಕುವಲ್ಲಿ ಶ್ರಮಿಸಿದರು. ಮಹಿಳೆಯರಿಗೆ ಶಿಕ್ಷಣಾವಕಾಶಗಳನ್ನು ಕಲ್ಪಿಸಿ ಅವರು ಸಾರ್ವಜನಿಕ ಕ್ಷೇತ್ರಗಳಿಂದ ಅನುಭವಗಳಿಸುವಂತೆಯೇ ಮಾಡಿದರು. ಆದರೆ ಇದರ ಜೊತೆಗೆ ಹಲವಾರು ರೀತಿಯ ನಿರ್ಬಂಧನೆಗಳನ್ನು ಹೇರಿದರು. ಅವುಗಳೆಂದರೆ,

ಮಹಿಳೆಯರು ಎಷ್ಟೇ ಏನೇ ಸಾಧಿಸಿದರೂ ಅವಳ ಮುಖ್ಯ ಕಾರ್ಯಕ್ಷೇತ್ರ ಎಂದಿಗೂ ಮನೆಯೇ ಆಗಿರಬೇಕು ಎಂದು ಸುಧಾರಣಾವಾದಿಗಳು ಬಯಸುತ್ತಾರೆ. "ರಾಷ್ಟ್ರ ನಿರ್ಮಾಣದಲ್ಲಿ ತಮ್ಮ ಹೆಂಡತಿಯರು ಭಾಗಿಯಾಗಲು ಅವರು ಒಪ್ಪಿಗೆಯೇನೋ ಇತ್ತು, ಆದರೆ ತಮ್ಮ ಹಾಗೆಯೇ ರಾಜಕಾರಣದಲ್ಲಿಳಿದು ಕೆಲಸ ಮಾಡಬಹುದು ಎಂಬ ಅರ್ಥವಲ್ಲ."[೧೬] ಅಂದರೆ ಮಹಿಳೆಯರು ಅಧಿಕಾರ ಚಲಾಯಿಸುವಂತ ಸ್ಥಾನಗಳಿಗೆ ಎಂದೂ ಬರಕೂಡದು ಎಂದು ಪ್ರತಿಯೊಂದು ಹಂತದಲ್ಲಿ ಅಡ್ಡಗಾಲು ಹಾಕುತ್ತಿದ್ದರು.

ಸಾಮಾಜಿಕ ಪದ್ಧತಿಗಳನ್ನು ಕುರಿತಂತೆಯೂ ಬರೋಡದ ರಾಣಿ ಮಾತನಾಡುತ್ತಾ ವಿಶೇಷವಾಗಿ ಪರದಾ ಪದ್ಧತಿ ಹಾಗೂ, ಬಾಲ್ಯವಿವಾಹದಂತಹ ಸಾಮಾಜಿಕ ಅನಿಷ್ಟ ಪದ್ಧತಿಗಳು ಮಹಿಳೆಯರು ಸಾಕ್ಷರರಾಗುವುದಕ್ಕೆ ಅಡ್ಡಿಯಾಗುವ ಸಂಗತಿಗಳು ಎಂದರು. ಈಗಿನ ಮಹಿಳೆಯರು ರಾಜಕೀಯ ಕ್ಷೇತ್ರದಲ್ಲೂ ಆಸಕ್ತಿವಹಿಸುವುದನ್ನು ಮೆಚ್ಚುಗೆಯಿಂದ ಗಮನಿಸದ ರಾಣಿಯು "ಮಹಿಳೆಯರು ಜಾಗೃತರಾಗುತ್ತಿದ್ದಾರೆಂಬುದೇನೋ ಖುಷಿಯಾಗುತ್ತದೆ. ಆದರೆ ಹೆಣ್ಣಿನ ಸ್ವಭಾವಕ್ಕೆ ಹೊಂದಿಕೆಯಾಗುವಂತೆ ಆಕೆಯ ಬೆಳವಣಿಗೆ ನಡೆಯಬೇಕು"[೧೭] ಎಂದು ಸಹ ಎಚ್ಚರಿಸಿದ್ದಾರೆ. ಅಂದರೆ ಸ್ವಾತಂತ್ರ್ಯೋತ್ತರದಿಂದ ಹಿಡಿದು ಇಂದಿನವರೆಗೆ ಮಹಿಳೆಯರನ್ನು ಕೇವಲ ನಾಮಮಾತ್ರ ಅಧಿಕಾರಕ್ಕೆ ಏರಿಸಿರುವುದುದೆಂದು ಕಂಡುಬರುತ್ತದೆ. ಉದಾ : ರಾಜ ಮಹಾರಾಜರ ಕಾಲದಲ್ಲಿ ರಾಣಿಯರು, ಗಂಡನ ಅಥವಾ ಮಗನ ಪರವಾಗಿ ಅಧಿಕಾರ ಅಥವಾ ಆಡಳಿತ ಸೂತ್ರ ಹಿಡಿದಿದ್ದಾರೆ. ಈ ಪದ್ಧತಿಯು ಇಂದೂ ಕೂಡ ಜೀವಂತವಾಗಿದೆ.

ಸ್ವಾತಂತ್ರ್ಯದ ನಂತರ ಕೂಡ ಮಹಿಳೆಯರಿಗೆ ರಾಜಕೀಯವಾಗಿ ಕೇವಲ ಓಟಿನ ಅಧಿಕಾರವನ್ನು ಮಾತ್ರ ಕೊಟ್ಟಿದ್ದಾರೆಯೇ ಹೊರತು, ಸೀಟಿನ ಅಧಿಕಾರ ಕೊಟ್ಟಿಲ್ಲ. ಮಹಿಳೆಯರನ್ನು ಕೇವಲ ಓಟಿನ ಬ್ಯಾಂಕುಗಳಾಗಿ ಪರಿಗಣಿಸಿದ್ದರು. ಮಹಿಳಾ ಚಳುವಳಿಗಳು ಅಧಿಕಾರ ಮತ್ತು ಸರಿಸಮಾನವಾದ ಹಕ್ಕುಗಳನ್ನು ದಕ್ಕಿಸಿಕೊಳ್ಳುವುದಕ್ಕಾಗಿ ಬೃಹತ್ ಪ್ರಮಾಣದಲ್ಲಿ ಚಳವಳಿಗಳನ್ನು ಮಾಡಿದಾಗ ನೆಪಮಾತ್ರಕ್ಕೆ ಸಮಾನ ನೆಲೆಗಳನ್ನು ಕೊಟ್ಟಂತೆ ಮಾಡುತ್ತಾರೆ. ಆದರೆ ವಾಸ್ತವದಲ್ಲಿ ಸಮಾನ ನೆಲೆಗಳನ್ನಾಗಲಿ ಮತ್ತು ರಾಷ್ಟ್ರನೀತಿ ಗಳನ್ನಾಗಲಿ ಹಾಗೂ ಕಾನೂನಿನ ಹಿತದೃಷ್ಟಿಯಿಂದಾಗಲಿ ಸಮಾನತೆ ಕೊಟ್ಟಿಲ್ಲ. ಸ್ವಾತಂತ್ರ್ಯ ಪೂರ್ವದಿಂದ ಹಿಡಿದು ಸ್ವಾತಂತ್ರ್ಯ ಬಂದು ಐವತ್ತೈದು ವರ್ಷಗಳಾದರೂ ಸಹ ಮಹಿಳೆ ಚಳುವಳಿಗಳು ಮತ್ತು ಮಹಿಳಾ ಸಂಘಟನೆಗಳೂ ಪುರುಷ ರಾಜಕಾರಣಿಗಳ ಮುಂದೆ ಕೇವಲ ಅಹವಾಲುಗಳನ್ನು ಮಾತ್ರ ಸಲ್ಲಿಸುತ್ತಿದ್ದಾರೆ. ಉದಾ : ವಿಧವಾ ವಿವಾಹಕ್ಕೆ ಅವಕಾಶ ಕೊಡಿ, ಸತಿಸಹಗಮನವನ್ನು ನಿಷೇಧಿಸಿ, ವರದಕ್ಷಿಣೆಯ ಪಿಡುಗಳನ್ನು ನಿವಾರಿಸಿ ಎಂದು ಒಂದೊಂದೆ ಸಮಸ್ಯೆಯನ್ನು ಬಗೆಹರಿಸಲು ಕೇಳಿದಾಗ ಪರಿಹರಿಸುತ್ತಾರೆ ನಿಜ. ಆದರೆ ಅದಕ್ಕಿಂತ ಮುಖ್ಯವಾಗಿ ಎಲ್ಲಾ ನಿರ್ಣಯಗಳಲ್ಲಿ ನಿರ್ಣಯ ಮಾಡುವ ಅಧಿಕಾರಗಳಲ್ಲಿ ಹೆಂಗಸರು ಇರಬೇಕು ಎಂದು ಕೇಳುತ್ತಿಲ್ಲ. ಪ್ರಥಮವಾಗಿ ಮಹಿಳಾ ಚಳುವಳಿಗಳು ಅಧಿಕಾರವನ್ನು ಧಕ್ಕಿಸಿಕೊಳ್ಳಲು ಪ್ರಯತ್ನಿಸಿದಾಗ ಮಹಿಳೆ ಜಾಗೃತಳಾಗಲು ಸುಲಭ ಸಾಧ್ಯವಾಗುತ್ತದೆ.

ಮಹಿಳಾ ಸಂಘಟನೆಗಳು ಆಹವಾಲುಗಳನ್ನು ಕೇಳುತ್ತಾ ಬಂದಂತೆ ಅವುಗಳಿಗೆ ಪರಿಹಾರವನ್ನು ಸೂಚಿಸುತ್ತಾ ಬಂದಿವೆ. ಇವು ಪುರುಷ ಚಿಂತನೆಗಳು ಆಗಿರುವುದರಿಂದ ಪ್ರಭುತ್ವದಲ್ಲಿಯೂ ಬದಲಾವಣೆಯಾಗಿಲ್ಲ. ಇದು ನಮ್ಮ ಇಡೀ ಚಳುವಳಿಗಿರುವಂತೆ ಅತ್ಯಂತ ಪ್ರಮುಖವಾದಂತಹ ಸವಾಲಾಗಿದೆ.

ಈ ದಿಶೆಯಲ್ಲಿ ಮುಂದಿನ ಅಧ್ಯಯನದಲ್ಲಿ ಮಹಿಳಾ ಚಳವಳಿಗಳೂ ಜಾಗತೀಕ ನೆಲೆಯಲ್ಲಿ, ಮತ್ತು ಭಾರತದಲ್ಲಿ ನಡೆದು ಬಂದ ಸ್ವರೂಪದ ಗುಣಲಕ್ಷಣಗಳನ್ನು ಅಧ್ಯಯನ ಮಾಡುವ ಮುಖಾಂತರ ಅವುಗಳಲ್ಲಿ ಇರುವ ಉಪಯುಕ್ತ ಲಕ್ಷಣಗಳೆನು, ದೋಷಗಳೇನು, ಎನ್ನುವ ವಿಶ್ಲೇಷಣೆಗಳನ್ನು ಮುಂದಿನ ''ಮಹಿಳಾ ಚಳುವಳಿಗಳು'' ಅಧ್ಯಯದಲ್ಲಿ ವಾಸ್ತವ ಅಂಶಗಳನ್ನು ಕುರಿತು ಚರ್ಚೆಯನ್ನು ಬೆಳೆಸಲಾಗುತ್ತದೆ.

ಅಡಿಟಿಪ್ಪಣಿಗಳು

೧. ಚ.ನ.ಶಂಕರರಾವ್, **ಭಾರತೀಯ ಸಮಾಜ**, ಪು.೫೩೦

೨. ಡಾ.ಬಿ.ಎನ್.ಸುಮಿತ್ರಾಬಾಯಿ(ಸಂ), **ಸ್ತ್ರೀವಾದಿ ಪ್ರದೇಶಿಕೆ**, ಪು.೫೬

೩. ಅದೇ, ಪು.೮೪

೪. ಇಂದಿರಾ ಆರ್., **ಸ್ತ್ರೀವಾದಿ ದಿಕ್ಸೂಚಿ**, ಪು.೪೨

೫. ಡಾ.ಬಿ.ಎನ್.ಸುಮಿತ್ರಾಬಾಯಿ, **ಪೂರ್ವೋಕ್ತ** ಪು.೧೮

೬. ಇಂದಿರಾ ಆರ್., **ಪೂರ್ವೋಕ್ತ** ಪು.೪೨

೭. ಡಾ.ಬಿ.ಎನ್.ಸುಮಿತ್ರಾಬಾಯಿ, **ಪೂರ್ವೋಕ್ತ** ಪು.೧೫

೮. ಅದೇ, ಪು.೧೬

೯. ಎನ್.ಗಾಯತ್ರಿ, **ಮಹಿಳಾ ಚಳುವಳೀಯ ಮಜಲುಗಳು**, ಪು.೧೫

೧೦. ಮೂಲ: ಜೆರಾಲ್ಡಿನ್ ಫೋರ್ಬ್ಸ್, ಡಾ.ಎಚ್.ಎಸ್.ಶ್ರೀಮತಿ(ಅನು), **ಆಧುನಿಕ ಭಾರತದಲ್ಲಿ ಮಹಿಳೆ**, ಪು.೧೭

೧೧. ಎನ್.ಗಾಯತ್ರಿ, **ಮಹಿಳಾ ಚಳುವಳಿಯ ಮಜಲುಗಳು**, ಪು.೧೬

೧೨. ಮೂಲ: ಜೆರಾಲ್ಡಿನ್ ಫೋರ್ಬ್ಸ್, ಡಾ.ಎಚ್.ಎಸ್.ಶ್ರೀಮತಿ(ಅನು), **ಪೂರ್ವೋಕ್ತ** ಪು.೩೩

೧೩. ಅದೇ, ಪು.೩೪

೧೪. ಡಾ.ಪ್ರೀತಿಶುಭಚಂದ್ರ, **ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು**, ಪು.೨೪೭

೧೫. ಮೂಲ: ಜೆರಾಲ್ಡಿನ್ ಫೋರ್ಬ್ಸ್, ಡಾ.ಎಚ್.ಎಸ್.ಶ್ರೀಮತಿ(ಅನು), **ಪೂರ್ವೋಕ್ತ**, ಪು.೩೯

೧೬. ಅದೇ, ಪು.೧೦೦

೧೭. ಅದೇ, ಪು.೧೧೫

ಅಧ್ಯಾಯ ೪

ಮಹಿಳಾ ಚಳುವಳಿಗಳು

ಮಾನವರು ಅನಾಗರಿಕತೆಯಿಂದ ನಾಗರಿಕತೆಯತ್ತ ಸಾಗುತ್ತಾ ಬಂದು ಕುಟುಂಬಗಳನ್ನು ರಚನೆಮಾಡಿಕೊಂಡು ತಮ್ಮದೇ ಆದ ರೀತಿಯಲ್ಲಿ ಕೃಷಿ ವ್ಯವಸಾಯವನ್ನು ಪ್ರಾರಂಭಿಸಿಕೊಂಡ ಮಹಿಳೆಯರು ತಮ್ಮ ಸುತ್ತಮುತ್ತಲು ವಾಸಿಸುವ ಜನ ಸಮೂಹದೊಂದಿಗೆ ಸಂಬಂಧಗಳನ್ನು ಬೆಳೆಸಿಕೊಂಡು ತಾವು ಉತ್ಪಾದಿಸಿದಂತಹ ಆಹಾರ ಪದಾರ್ಥಗಳನ್ನು ವಿನಿಮಯ ರೀತಿಯಲ್ಲಿ ವಸ್ತುಗಳನ್ನು ಬದಲಾಯಿಸಿಕೊಂಡು ತಮ್ಮ ದಿನನಿತ್ಯದ ಜೀವನವನ್ನು ಸಾಗಿಸಿಕೊಂಡು ಬಂದರು. ಹೀಗೆ ಬೆಳೆದುಕೊಂಡು ಬಂದ ಮಾತೃಪ್ರಧಾನ ಕುಟುಂಬಗಳು ಸ್ವಲ್ಪ ಕಾಲದ ನಂತರ ಅವು ಪಿತೃಪ್ರಧಾನ ಕುಟುಂಬಗಳಾಗಿ ಪರಿವರ್ತನೆಗೊಂಡವು. ಆದುದರಿಂದ ಎಲ್ಲಾ ಅಧಿಕಾರಗಳು ಪುರುಷರ ಕೈಸೇರಿ, ಮಹಿಳೆಯರಿಗೆ ಕೇವಲ ಸೇವಾವಲಯ ಮಾತ್ರ ಮೀಸಲಾಗಿ ಉಳಿಯುವ ಪರಿಸ್ಥಿತಿ ಉಂಟಾಯಿತು. ಹೀಗಾಗಿ ಮನೆಯ ಹೊರಗಿನ ಎಲ್ಲಾ ಕೆಲಸಗಳು ಪುರುಷರ ವಶವಾದವು. ಮನೆಯ ನಾಲ್ಕು ಗೋಡೆಗಳ ಮಧ್ಯೆ ಅಂದರೆ ಅಡಿಗೆಕೋಣೆ ಮತ್ತು ಮನೆಯ ಹಿತ್ತಲಕಡೆಯ ಕೆಲಸಗಳಲ್ಲಿ ಮಹಿಳೆಯರ ಪಾಲಾಗಿ ಉಳಿದುಬಿಟ್ಟವು. ಸಮಾಜದ ಕಟ್ಟುಸಂಪ್ರದಾಯಗಳಿಗೆ ಮಹಿಳೆ ತಲೆಬಾಗುವಂತೆ ಮಾಡಿದ ಪುರುಷ ಪ್ರಧಾನ ಸಮಾಜದಲ್ಲಿ ಅವಳಿಗೆ ಕುಟುಂಬದಲ್ಲಿ ಎಷ್ಟೇ ತೊಂದರೆಗಳು, ಕಷ್ಟಗಳು, ಸಮಸ್ಯೆಗಳು, ಎದುರಾಗಿದ್ದರೂ ಸಹ ಅವರು ಮನೆಯಿಂದ ಹೊರಗೆ ಬರಲು ಯೋಚನೆಯೇ ಮಾಡಿರಲಿಲ್ಲ. ಮತ್ತು ಅಂತಹ ಪ್ರಸಂಗಗಳು ಸಹ ಸೃಷ್ಟಿಯಾಗಿರಲಿಲ್ಲ.

ಪಿತೃಪ್ರಧಾನ ಕುಟುಂಬಗಳು ಆರಂಭಗೊಂಡಂದಿನಿಂದ ಅಂದರೆ ಶತಶತಮಾನಗಳಿಂದ ಮನೆಯಲ್ಲಿಯೇ ಇದ್ದಂತಹ ಹೆಂಗಸರು ಮನೆಯಿಂದ ಹೊರಗೆ ಬಂದು ಹೊರಗಿನ ಪ್ರಪಂಚವನ್ನು ಕಾಣಲು ಸಹ ಅವಕಾಶಗಳು ದೊರೆತಿರಲಿಲ್ಲ. ಆದರೆ ಭಾರತಕ್ಕೆ ಬ್ರಿಟೀಷರ ಆಗಮನದಿಂದ ಕೈಗಾರೀಕರಣ ಮತ್ತು ಆಧುನೀಕರಣಗಳು ಪ್ರಚಲಿತಗೊಂಡಾಗ ಸಾರ್ವಜನಿಕ ಸ್ಥಳಗಳಲ್ಲಿ ಉದ್ಯೋಗದ ಅವಕಾಶಗಳು ಬೃಹತ್ ಪ್ರಮಾಣದಲ್ಲಿ ಸೃಷ್ಟಿಯಾದವು. ಈ ಸಂದರ್ಭದಲ್ಲಿ ಕೇವಲ ಗಂಡಸರು ಮಾತ್ರ ಎಲ್ಲಾ ಉದ್ಯೋಗಗಳನ್ನು ನಿಭಾಯಿಸುವುದು ಸಾಧ್ಯವಿಲ್ಲದ ಮಾತಾಗಿತ್ತು. ಆದುದರಿಂದ ಇಲ್ಲಿನ ಗಂಡಸರು ತಮಗೆ ಅಗತ್ಯವಾದಂತಹ ಅಥವಾ ಗೌರವ ಸೂಚಿಸುವಂತಹ ಉದ್ಯೋಗಗಳಲ್ಲಿ ಸೇರಿಕೊಂಡರೂ ಸಹ ಇನ್ನೂ ಬಹಳಷ್ಟು ಉದ್ಯೋಗಗಳು ಉಳಿದುಕೊಂಡಿರುವುದರಿಂದ ಅಂತಹ ಸ್ಥಳಗಳನ್ನು ಭರ್ತಿಮಾಡುವುದಕ್ಕಾಗಿ ಅತಿ ಹೆಚ್ಚಿನ ಸಂಖ್ಯೆಯಲ್ಲಿ ಜನರ ಅವಶ್ಯಕತೆ ಇದ್ದುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಉದ್ಯೋಗ ಮಾಡಲು ಮಹಿಳೆಯರಿಗೆ ಅವಕಾಶಗಳು ದೊರೆತವು. ಈ ಒಂದು ಪರಿಸ್ಥಿತಿಯಲ್ಲಿ ಮಹಿಳೆಯರನ್ನು ಮನೆಯಿಂದ ಹೊರಗೆ ಕರೆದು ಉದ್ಯೋಗ ಕ್ಷೇತ್ರಗಳಿಗೆ ಬರಮಾಡಿಕೊಂಡರು.

ಉದ್ಯೋಗ ಕ್ಷೇತ್ರದಲ್ಲಿ ಮಹಿಳೆಯರಿಗೆ ಅತಿಹೆಚ್ಚಾಗಿ ಸೇವೆಸಲ್ಲಿಸುವಂತ ಅಥವಾ ಅತಿಹೆಚ್ಚಿನ ಶ್ರಮವಹಿಸಿ ಕೆಲಸ ಮಾಡುವಂತ ಉದ್ಯೋಗಗಳು ದೊರೆತಿದ್ದವು. ಹೀಗಾಗಿ ಅವಳು ತುಂಬಾ ತೊಂದರೆಗಳನ್ನು ಹಾಗೂ ಸಮಸ್ಯೆಗಳನ್ನು ಎದುರಿಸಬೇಕಾಗುತ್ತಿತ್ತು. ಉದಾ : ಒಬ್ಬ ಗೃಹಿಣಿ ಮನೆಯಕೆಲಸವನ್ನು ನಿಭಾಯಿಸಿಕೊಂಡು ನಂತರ ಮನೆಯ ಹೊರಗಿನ ಉದ್ಯೋಗ ಕ್ಷೇತ್ರದಲ್ಲಿ ಸಹ ಅವಳಿಗೆ ಮೀಸಲಾಗಿ ಇಟ್ಟಂತಹ ಎಲ್ಲಾ ಕೆಲಸಗಳನ್ನು ನಿಭಾಯಿಸಬೇಕಾಗಿತ್ತು. ಇಲ್ಲಿ ಮಹಿಳೆಯರಿಗೆ ದುಡಿಮೆ ಎನ್ನುವುದು ಎರಡು-ಮೂರು ಪಟ್ಟು ಹೆಚ್ಚಾಗಿ ಶ್ರಮಿಸಬೇಕಾದ ಅನಿವಾರ್ಯ ಅವಳಿಗೆ ಒದಗಿಬಂದಿತ್ತು. ಇಷ್ಟೆಲ್ಲಾ ಸಮಸ್ಯೆಗಳನ್ನು ಎದುರಿಸಿದರೂ ಸಹ, ಅವಳು ತೃಪ್ತಿಪಡುವುದು ಇನ್ನೊಂದೆಡೆ ಕಾಣಬಹುದಾಗಿದೆ. ಹೇಗೆಂದರೆ ಸಾರ್ವಜನಿಕ ಕ್ಷೇತ್ರಗಳಲ್ಲಿ ಉದ್ಯೋಗ ಮಾಡಲು ಹೊರಗಡೆ ಬಂದ ಮಹಿಳೆಯರಿಗೆ ತಮ್ಮ ಸುತ್ತಮುತ್ತಲಿನ ಸಮಾಜ ಪರಿಚಯವಾಗುತ್ತದೆ. ಸಮಾಜದ ಎಲ್ಲಾ ಮಹಿಳೆಯರ ಸಮಸ್ಯೆಗಳು ಒಂದೊಂದಾಗಿ ಅರ್ಥಮಾಡಿಕೊಳ್ಳುತ್ತಾಳೆ. ನಾಲ್ಕು ಗೋಡೆಗಳ ಮಧ್ಯೆ ತಮ್ಮ ಸಾಮ್ರಾಜ್ಯವನ್ನು ಕಟ್ಟಿಕೊಂಡ ಮಹಿಳೆಯರು ಹೊರಿಗಿನ ಜಗತ್ತನ್ನು ಕಂಡು ತೃಪ್ತಳಾಗುತ್ತಾಳೆ. ಮನೆಯಿಂದ ಹೊರಗೆ ಬಂದನಂತರ ತಮ್ಮ ಬದುಕು ಇಷ್ಟು ಕಷ್ಟಮಯವಾಗಿರಲು ಯಾರು ಕಾರಣ ಎನ್ನುವುದನ್ನು ಅರಿತುಕೊಳ್ಳುತ್ತಾಳೆ.

ಸ್ತ್ರೀಯರು ಮನೆಯ ಒಳಗೆ ಇದ್ದಾಗ ಇಡೀ ಜಗತ್ತಿನ ವ್ಯಾಪ್ತಿ ಮತ್ತು ಅಕ್ಕಪಕ್ಕ ಇರುವ ಜನಸಮೂಹವೂ ಕೂಡ ಮಹಿಳೆಯರಿಗೆ ಅಪರಿಚಿತವಾಗಿತ್ತು. ಅಂದರೆ ಬಾವಿಯೊಳಗಿನ ಕಪ್ಪೆಯಂತೆ, ತನ್ನ ಜಗತ್ತು ಇಂತಿಷ್ಟೇ ಎಂದು ತಿಳಿದುಕೊಂಡು ಜೀವನ ಸಾಗಿಸುತ್ತಿದ್ದರು. ಸಾಮಾಜಿಕ ವ್ಯವಹಾರಗಳ ಬಗ್ಗೆ ಅವರಿಗೆ ಸ್ವಲ್ಪವೂ ಜ್ಞಾನವಿರಲಿಲ್ಲ, ಹಾಗೂ ಮನೆಯ ಹೊರಗಿನ ಜಗತ್ತಿನ ಪರಿಚಯವು ಕೂಡ ಅವಳಿಗೆ ಇರಲಿಲ್ಲ. ಈ ಎಲ್ಲವುಗಳು ಮನೆಯಿಂದ ಹೊರಗೆ ಬಂದಾಗ ಪರಿಚಯವಾಗುತ್ತಾ ಬಂದವು. ಕುಟುಂಬದಲ್ಲಿ ಪ್ರತಿಯೊಂದು ಸಮಸ್ಯೆಗಳು ನಮ್ಮನ್ನು ಮಾತ್ರ ಕಾಡುತ್ತಿವೆ ಎಂದು ತಿಳಿದ ಮಹಿಳೆಯರು, ಜಗತ್ತಿನ ಎಲ್ಲ ಸಮುದಾಯಗಳು ಪರಿಚಯವಾದಗ ಕೌಟುಂಬಿಕ ಸಮಸ್ಯೆಗಳು ಒಬ್ಬರಿಗೆ ಮಾತ್ರ ಸೀಮಿತವಾಗಿಲ್ಲ, ಜಗತ್ತಿನಲ್ಲಿ ಪ್ರತಿಯೊಬ್ಬ ಮಹಿಳೆಗೂ ಈ ಸಮಸ್ಯೆಯ ಬಳ್ಳಿ ಸುತ್ತಿಕೊಂಡಿದೆ ಎಂದು ತಿಳಿದುಕೊಳ್ಳುತ್ತಾಳೆ. ಈ ಸಂದರ್ಭದಲ್ಲಿ ಮನೆಯಿಂದ ಹೊರಗೆ ಬಂದ ಮಹಿಳೆಯರು ಒಗ್ಗೂಡಲು, ಸಂಘಟನೆಗೊಳ್ಳಲು ಶುರುಮಾಡುತ್ತಾರೆ. ಈ ರೀತಿಯಾಗಿ ಸಂಘಟನೆಗೊಂಡ ಮಹಿಳೆಯರು ಸಮಸ್ಯೆಗಳನ್ನು ವೀಕ್ಷಿಸುತ್ತಾ ಬಂದಾಗ ಈ ಎಲ್ಲಾ ಸಮಸ್ಯೆಗಳು ಪುರುಷ ವ್ಯವಸ್ಥೆಯಿಂದ ಹುಟ್ಟಿಕೊಳ್ಳುತ್ತವೆ ಎನ್ನುವುದನ್ನು ಅರಿತುಕೊಂಡ ಮಹಿಳೆಯರೆಲ್ಲರು ಒಟ್ಟಾಗಿ ಸಂಘಟನೆಗೊಂಡು ಹೋರಾಡಬೇಕು ಎನ್ನುವ ತಿಳುವಳಿಕೆ ಮಹಿಳೆಯರಲ್ಲಿ ಮೂಡಲು ಪ್ರಾರಂಭವಾಯಿತು. ಸ್ತ್ರೀಯರು ಮನೆಯಿಂದ ಹೊರಗಡೆ ಬಂದಾಗ ತಮ್ಮ

ಸುತ್ತಮುತ್ತಲಿನ ಪ್ರಪಂಚದ ಅರಿವಾಯಿತು. ಮತ್ತು ಮಹಿಳೆಯರ ಸಮಸ್ಯೆಗಳಿಗೆ ಕಾರಣವೇನು ಅನ್ನುವುದನ್ನು ಅರ್ಥಮಾಡಿಕೊಳ್ಳಲು ಸುಲಭವಾಯಿತು. ಹಾಗೆಯೇ ತಮ್ಮ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳಲು ಒಗ್ಗಟ್ಟಾಗಿ ಶ್ರಮಿಸಿದರು.

ಭಾರತದಲ್ಲಿ ಮಹಿಳಾ ಚಳುವಳಿಗಳು ಹುಟ್ಟಿಕೊಳ್ಳಲಿಕ್ಕೆ ಈ ಮೇಲಿನ ಎಲ್ಲಾ ಅಂಶಗಳು ಪ್ರಮುಖವಾದ ಕಾರಣಗಳಾಗಿವೆ ಹೊರತು, ಇವು ಸಂಪೂರ್ಣವಾಗಿ ಪಾಶ್ಚಿಮಾತ್ಯ ಸಂಸ್ಕೃತಿ ಮತ್ತು ಸ್ತ್ರೀವಾದದ ಅನುಕರಣೆ ಅಲ್ಲ ಎಂದು ಸಂಪೂರ್ಣವಾಗಿ ತಿರಸ್ಕರಿಸಲಾಗುವುದಿಲ್ಲ. ಏಕೆಂದರೆ ಪಾಶ್ಚಿಮಾತ್ಯ ದೇಶಗಳಲ್ಲಿ ನಮಗಿಂತ ಮುಂಚೆಯೇ ಕೈಗಾರಿಕೀರಣ ಮತ್ತು ಆಧುನೀಕರಣ ಆರಂಬಗೊಂಡಿದ್ದರಿಂದ ಮಹಿಳೆಯರು ಸಾರ್ವಜನಿಕ ಕ್ಷೇತ್ರಗಳಲ್ಲಿ ಉದ್ಯೋಗ ಪಡೆದುಕೊಂಡಿದ್ದರು. ಅಂದರೆ ಪ್ರಪ್ರಥಮವಾಗಿ ಮನೆಯಿಂದ ಹೊರಗಡೆ ಬಂದು ದುಡಿಯಲು ಪ್ರಾರಂಭಿಸಿದವರು ಪಾಶ್ಚಿಮಾತ್ಯ ಮಹಿಳೆಯರೇ ಆಗಿದ್ದರು. ಮತ್ತು ಹೆಂಗಸಿನ ಸಮಸ್ಯೆಗಳನ್ನು ಮೊದಲಿಗೆ ಅರಿತುಕೊಂಡವರೇ ಅವರಾಗಿದ್ದರು. ಆದುದರಿಂದ ಭಾರತದಲ್ಲಿ ಹುಟ್ಟಿಕೊಂಡ ಮಹಿಳಾ ಚಳುವಳಿಗಳು, ಸ್ತ್ರೀವಾದಿ ಚಿಂತನೆಗಳು, ಮಹಿಳಾ ಸಂಘಟನೆಗಳು ಪಾಶ್ಚಿಮಾತ್ಯ ಅನುಕರಣೆ ಎನ್ನುವುದು ಒಂದು ಅರ್ಥದಲ್ಲಿ ನಿಜ. ಆದರೆ ಭಾರತಕ್ಕೆ ಬ್ರಿಟೀಷರು ಬಂದ ನಂತರ ಇಲ್ಲಿಯೂ ಸಹ ಪಾಶ್ಚಿಮಾತ್ಯ ದೇಶಗಳಲ್ಲಿ ಹುಟ್ಟಿಕೊಂಡಂತಹ, ಕೈಗಾರೀಕರಣ ಮತ್ತು ಆಧುನೀಕರಣಗಳು ಮಂದಗತಿಯಲ್ಲಿ ಪ್ರಾರಂಭಗೊಂಡಾಗ ನಮ್ಮ ದೇಶದ ಹೆಂಗಸರಿಗೂ ಸಹ ಶಿಕ್ಷಣ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಉದ್ಯೋಗದ ಅವಕಾಶಗಳು ದೊರೆಯಲು ಶುರುವಾದವು. ಹಾಗೆಯೇ ಮಹಿಳೆಯರ ಸಮಸ್ಯೆಗಳನ್ನು ನಾಶಮಾಡುವುದಕ್ಕಾಗಿ ಅಥವಾ ಪರಿಹಾರ ಕಂಡುಕೊಳ್ಳುವುದಕ್ಕಾಗಿ ಅನೇಕ ಸಾಮಾಜಿಕ ಸುಧಾರಣಾ ಸಂಸ್ಥೆಗಳು ಹುಟ್ಟಿಕೊಂಡವು.

ಯೂರೋಪ್ ಖಂಡದಲ್ಲಿ ೧೯೩೯ರಲ್ಲಿ ಎರಡನೆಯ ಮಹಾಯುದ್ಧ ನಡೆದಾಗ ಆಖಂಡದ ಪುರುಷರೆಲ್ಲರೂ ಯುದ್ಧರಂಗಕ್ಕೆ ಹೋಗುವ ಅನಿವಾರ್ಯ ಉಂಟಾಗಿತ್ತು. ಅಂದರೆ ೧೮ ವರ್ಷದಿಂದ ಹಿಡಿದು ಸುಮಾರು ೬೦ ವರ್ಷದವರೆಗಿನ ಎಲ್ಲ ಯುವ ಪುರುಷರಿಗೆ ಯುದ್ಧದ ತರಬೇತಿಯನ್ನು ನೀಡಿ ಅವರನ್ನು ಎರಡನೇ ಮಹಾಯುದ್ಧದಲ್ಲಿ ಕಡ್ಡಾಯವಾಗಿ ಭಾಗವಹಿಸಲೇ ಬೇಕಾದಂತಹ ಪರಿಸ್ಥಿತಿ ಸೃಷ್ಟಿಯಾಗಿತ್ತು. ಆ ಒಂದು ಸಂದರ್ಭದಲ್ಲಿ ಯೂರೋಪ್ ಖಂಡದ ಹೆಂಗಸರೆಲ್ಲರೂ ಮನೆಯ ಹೊರಗಿನ ಕೆಲಸಗಳಲ್ಲಿ ತೊಡಗಿಕೊಳ್ಳುವ ಅನಿವಾರ್ಯ ಪರಿಸ್ಥಿತಿ ಉಂಟಾಯಿತು. ಹೀಗಾಗಿ ಮಹಿಳೆಯರು ಉತ್ಪಾದನಾ ಕ್ಷೇತ್ರಗಳಲ್ಲಿ ಕೆಲವರು, ತೊಡಗಿಕೊಂಡರು. ಹಾಗೆಯೇ ಸಾರ್ವಜನಿಕ ಸ್ಥಳಗಳಲ್ಲಿ ಅಂದರೆ ಉದ್ಯೋಗ ಕ್ಷೇತ್ರಗಳಲ್ಲಿ, ಶಿಕ್ಷಕರಾಗಿ, ಬ್ಯಾಂಕ್ ನೌಕರರಾಗಿ, ಹೋಟೆಲ್‌ಗಳ ವ್ಯವಸ್ಥಾಪಕರಾಗಿ ತಮ್ಮ ಕಾರ್ಯವನ್ನು ಮುಂದೊರೆಸುತ್ತಿದ್ದರು. ಇಂತಹ ಸಂದರ್ಭದಲ್ಲಿ ಯುದ್ಧಕ್ಕೆ ತೆರಳಿದ ಪುರುಷರು ಯುದ್ಧಮುಗಿಸಿಕೊಂಡು

ಮನೆಗಳಿಗೆ ಹಿಂತಿರುಗಿ ಬಂದಾಗ ಮಹಿಳೆಯರನ್ನು ಸಾರ್ವಜನಿಕ ಸ್ಥಳಗಳಿಂದ ಮುಕ್ತಗೊಳಿಸಿ ಪುನಃ ಮೊದಲಿನಂತೆ ಗೃಹಗಳಿಗೆ ಹಿಂತಿರುವುತ್ತಾರೆ. ಮತ್ತೆ ತಮ್ಮ ಕೆಲಸಕಾರ್ಯಗಳನ್ನು ನಾಲ್ಕು ಗೋಡೆಗಳ ಮಧ್ಯೆ ಸೀಮೀತವಾಗಿರುವಂತೆ ಒತ್ತಾಯಿಸುತ್ತಾರೆ. ಈ ರೀತಿಯಾಗಿ ಎರಡನೆಯ ಮಹಾಯುದ್ಧದ ನಂತರ ಅಲ್ಲಿನ ಸಾರ್ವಜನಿಕ ವ್ಯವಸ್ಥೆಯಲ್ಲಿ ಬದಲಾವಣೆ ಕಂಡುಬಂದಾಗ ಆ ವ್ಯವಸ್ಥೆಯ ವಿರುದ್ಧವಾಗಿ ಮಹಿಳೆಯರು ಪ್ರತಿಭಟಿಸಲು ಶುರುಮಾಡಿದರು.

ಎರಡನೆಯ ಮಹಾಯುದ್ಧದ ಸಮಯದಲ್ಲಿ ಮಹಿಳೆಯರು ಮನೆಯಿಂದ ಹೊರಗೆ ಬಂದಾಗ ತನ್ನಲ್ಲಿರುವ ಸಾಮರ್ಥ್ಯದ ಅರಿವು ಅವಳಿಗೆ ಆಗುತ್ತದೆ. ಆದರೂ ಕೂಡ ಯುದ್ಧದ ನಂತರ ಮತ್ತೆ ಮಹಿಳೆಯರು ಗೃಹಗಳಿಗೆ ಹಿಂತಿರುಗುವ ಪರಿಸ್ಥಿತಿ ಬಂದಾಗ ಸಹ ತಮ್ಮ ಶಕ್ತಿ ಸಾಮರ್ಥ್ಯಗಳನ್ನು ಪ್ರದರ್ಶಿಸಲು ಅವಕಾಶಗಳು ಇಲ್ಲದಂತೆ ಆಗಿದ್ದವು. ಈ ಹಿನ್ನೆಲೆಯಾಗಿ, ಯೂರೋಪ್, ಅಮೇರಿಕಾ, ಆಸ್ಟ್ರೇಲಿಯಾದಂತ ಪ್ರಗತಿಪರ ಬಂಡವಾಳಶಾಹಿ ದೇಶಗಳಲ್ಲಿ ೧೯೬೦ರ ಸುಮಾರಿಗೆ ಮಹಿಳೆಯರು ವಿದ್ಯಾರ್ಥಿಸಂಘಗಳ ಜೊತೆ ಸೇರಿಕೊಂಡು ಚಳುವಳಿಗಳನ್ನು ಮಾಡಲು ಪ್ರಾರಂಭಿಸಿದರು. ಏಕೆಂದರೆ ಮಹಿಳೆಯರ ಲೈಂಗಿಕತೆ ಸ್ವಾತಂತ್ರ್ಯ, ವ್ಯಕ್ತಿತ್ವ ಸ್ವಾತಂತ್ರ್ಯ, ತಾಯ್ತನದ ಹಕ್ಕು, ಇನ್ನು ಮುಂತಾದವುಗಳು ಪುರುಷನ ಆಧೀನದಲ್ಲಿ ಇದ್ದವು. ಈ ಎಲ್ಲವುಗಳನ್ನು ತಮ್ಮ ಸ್ವಂತಿಕೆ ಮಾಡಿಕೊಳ್ಳುವುದಕ್ಕಾಗಿ, ಪುರುಷ ದಬ್ಬಾಳಿಕೆಯ ವಿರುದ್ಧ ಪ್ರತಿಕ್ರಿಯಿಸಿದರು. ಅಂದರೆ ನಮ್ಮ ದೇಹದ ಮೇಲೆ ನಮ್ಮ ಅಧಿಕಾರದ ಹಕ್ಕುಬೇಕು, ತಾಯ್ತನ ಎನ್ನುವುದು ನಮ್ಮ ಸ್ವಂತಿಕೆ ಹಾಗೂ ಗಂಡುಹೆಣ್ಣುಗಳು ವಾಸಿಸುವ ಕುಟುಂಬ ವ್ಯವಸ್ಥೆಯನ್ನು ವಿರೋಧಿಸಿ ತಮ್ಮದೇ ಆದ ರೀತಿಯ ಸಲಿಂಗ ಕುಟುಂಬಗಳು ರಚನೆಮಾಡಿಕೊಳ್ಳಲು ಶ್ರಮಿಸಿದರು ಮತ್ತು ಪುರುಷ ಸಮಾಜದ ವಿರುದ್ಧ ಚಳುವಳಿಗಳನ್ನು ಮಾಡಿದರು.

ಫ್ರಾನ್ಸ್ ಮತ್ತು ಜರ್ಮನಿಯಲ್ಲಿ ಎರಡನೆಯ ಮಹಾಯುದ್ಧದ ಸಂದರ್ಭದಲ್ಲಿ ಬಹುಸಂಖ್ಯೀಯ ಜನರು ಮರಣಹೊಂದಿದ್ದರಿಂದ ಅಲ್ಲಿನ ಜನಸಾಂದ್ರತೆಯನ್ನು ಹೆಚ್ಚಿಸಿಕೊಳ್ಳುವುದಕ್ಕಾಗಿ, ಗರ್ಭಪಾತ, ಗರ್ಭನಿರೋಧಕದಂತ, ಔಷಧಿಗಳನ್ನು ಮತ್ತು ಭ್ರೂಣ ಪರಿಶೀಲನೆ ಮಾಡುವ ಯಂತ್ರಗಳನ್ನು ನಿಷೇಧಿಸಲಾಗಿತ್ತು. ಏಕೆಂದರೆ ಅಲ್ಲಿ ಜನಸಂಖ್ಯೆಯನ್ನು ಅಭಿವೃದ್ಧಿ ಮಾಡುವುದೇ ಪ್ರಮುಖ ಅಂಶವಾಗಿತ್ತು. ಹೀಗಾಗಿ ಆ ದೇಶಗಳಲ್ಲಿ ಯಾರು ಹೆಚ್ಚು ಮಕ್ಕಳನ್ನು ಪಡೆಯುತ್ತಾರೋ ಅಂತವರನ್ನು ಮಹಾಸಭೆಗಳಲ್ಲಿ ಸನ್ಮಾನಿಸುವುದು, ನೌಕರಿಯಲ್ಲಿ ಇದ್ದರೆ ಉನ್ನತ ದರ್ಜೆಗೆ ಬಡ್ತಿ ನೀಡುವುದು ಹೀಗೆ ಎಲ್ಲಾ ರೀತಿಯಲ್ಲಿ ಸ್ತ್ರೀಯನ್ನು ಶೋಷಣೆ ಮಾಡುವುದರ ಮೂಲಕ ಪುರುಷರು ಆಯಾ ಸಮಾಜದ ಸೌಲಭ್ಯಗಳನ್ನು ಪಡೆದುಕೊಳ್ಳುತ್ತಿದ್ದರು. ಆದ್ದುದರಿಂದ ಈ ಎಲ್ಲವುಗಳ ವಿರುದ್ಧವಾಗಿ ಮಹಿಳೆಯರು ಗುಪ್ತವಾಗಿ ತುಂಬಾ ಹಣಕೊಟ್ಟು ಗರ್ಭಪಾತ ಮಾಡಿಸಿಕೊಳ್ಳುತ್ತಿದ್ದರು. ಶ್ರೀಮಂತ ವರ್ಗದ ಉತ್ತಮ ಶಿಕ್ಷಣ ಪಡೆದ ಪ್ರಸಿದ್ಧ

ಸ್ತ್ರೀಯರು ಪುರುಷ ಅಧಿಕಾರಿಗಳ ವಿರುದ್ಧವಾಗಿ "ನಾವು ಗರ್ಭಪಾತ ಮಾಡಿಸಿಕೊಂಡಿದ್ದೇವೆ" ಎಂದು ಲಿಖಿತ ಪತ್ರಗಳ ಮೇಲೆ ಸಹಿ ಮಾಡಿ ಸರ್ಕಾರಕ್ಕೆ ನಿವೇದನೆಗಳನ್ನು ಕಳುಹಿಸುತ್ತಿದ್ದರು.[7]

ಕಾರ್ಮಿಕ ಚಳುವಳಿಗಳಲ್ಲಿ ಅತಿಮುಖ್ಯವಾಗಿ ಮಕ್ಕಳಿಗಾಗಿ ಶಿಶುಕೇಂದ್ರಗಳನ್ನು, ಶಿಶುವಿಹಾರಗಳನ್ನು ಮತ್ತು ಕೂಸಿನ ತಾಯಿಗೆ ಅಥವಾ ದಣಿದ ಮಹಿಳೆಯರಿಗೆ ವಿಶ್ರಾಂತಿ ಪಡೆಯಲು ವಿಶ್ರಾಂತಿ ಗೃಹಗಳು ಬೇಕೆಂದು ಸಂಘಟನೆಗಳ ಮೂಲಕ ಮಾಲೀಕರ ಮತ್ತು ಸರ್ಕಾರದ ವಿರುದ್ಧ ಪ್ರತಿಭಟನೆಗಳನ್ನು ಮಾಡುತ್ತಿದ್ದರು. ಹಾಗೆಯೇ ಯಾವುದೇ ವಲಯದಲ್ಲಾಗಲಿ ನೌಕರಿಗಳು ಲಿಂಗ ಆಧಾರಿತವಾಗಿ ಇರಕೂಡದು ಎಂಬ ಬೇಡಿಕೆಯನ್ನು ಸಹ ಮುಂದಿಟ್ಟಿದ್ದರು.

ಪಾಶ್ಚಿಮಾತ್ಯ ದೇಶಗಳಲ್ಲಿ ಎರಡನೆಯ ಮಹಾಯುದ್ಧದ ತರುವಾಯ ವಸಾಹತುವಾದವು ಹೆಚ್ಚಾಗಿ ಅಲ್ಲಿನ ಸಂಪತ್ತು ಹೆಚ್ಚಾಯಿತು. ಹಾಗೆಯೇ ಮಹಿಳೆಯರಿಗೆ ಶಿಕ್ಷಣ ದೊರಕಲು ಆರಂಭವಾಗಿತ್ತು, ಆದರೆ ಅವರಿಗೆ ಮನೆಯ ಹೊರಗಡೆ ನೌಕರಿ ಮಾಡಲು ಅವಕಾಶಗಳು ದೊರೆಯಲಿಲ್ಲ. ಆದ್ದುದರಿಂದ ಪಾಶ್ಚಿಮಾತ್ಯ ಮಹಿಳೆಯರು ಸರಿಸಮಾನವಾದ ಹಕ್ಕುಗಳನ್ನು ಪಡೆಯುವುದಕ್ಕಾಗಿ ಮಹಿಳೆಯರು ಸಂಘಟನೆಗೊಂಡು ಪುರುಷ ರಾಜಕೀಯದ ವಿರುದ್ಧ ಹೋರಾಟಗಳನ್ನು ಮತ್ತು ಚಳುವಳಿಗಳನ್ನು ಮಾಡಲು ಆರಂಭಿಸಿದರು.

ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳಾ ಚಳುವಳಿಗಳು ಆರಂಭಗೊಳ್ಳುವುದಕ್ಕೆ ಮುಂಚಿತವಾಗಿ ಸ್ತ್ರೀವಾದಿ ಚಿಂತನೆಗಳು ಆರಂಭಗೊಂಡಿದ್ದವು. ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಮಹಿಳೆಯರನ್ನು ಕೇವಲ ನಾಲ್ಕು ಗೋಡೆಗಳ ಮಧ್ಯೆ ಬಂಧಿಸಿ ಅವಳನ್ನು ಆರ್ಥಿಕವಾಗಿ ಪರಾವಲಂಬಿಯನ್ನಾಗಿಸಿ, ಲೈಂಗಿಕತೆಗೆ ದಾಸಿಯನ್ನಾಗಿಸಿದ್ದಾರೆ. ಜೈವಿಕ ಕ್ರಿಯೆಯಿಂದ ಗುರುತಿಸಲ್ಪಟ್ಟ ಗಂಡು-ಹೆಣ್ಣಿನ ಮಧ್ಯೆ ಅಸಮಾನತೆಯನ್ನು ಗುರುತಿಸಿ ಹೆಣ್ಣೆಂದರೆ ಕೋಮಲತೆ, ಮೃಧು ಸ್ವಭಾವದವಳು, ತಾಳ್ಮೆಯುಳ್ಳವಳು, ಮತ್ತು ಹೆಣ್ಣು ಶೀಲ ಅಥವಾ ಪಾತಿವ್ರತ್ಯವನ್ನು ಕಾಯ್ದುಕೊಳ್ಳಬೇಕು ಎನ್ನುವ ಅಪಕಲ್ಪನೆಯಿಂದ ಮಹಿಳೆಯರನ್ನು ಬಂಧಿಸಿ ಅವಳನ್ನು ಅಂಧಕಾರದಲ್ಲಿಯೇ ಮುಳುಗುವಂತೆ ಮಾಡಿದ್ದಾರೆ. ಈ ಅಪಕಲ್ಪನೆಗಳನ್ನು ಹೊಂದಿದ ಪುರುಷ ಸಮಾಜ ವ್ಯವಸ್ಥೆಯ ವಿರುದ್ಧ ಸ್ತ್ರೀವಾದಿಗಳು ಪ್ರತಿಕ್ರಿಯಿಸಲು ಮಹಿಳಾ ಸಂಘಟನೆಗಳನ್ನು ಕಟ್ಟಿಕೊಂಡು ಉಳಿಯುವ ಸಿಟ್ಟನ್ನು ಹೊಂದಿದ ಸ್ತ್ರೀವಾದಿಗಳು ಲೈಂಗಿಕ ಅಸಮಾನತೆಯ ವಿರುದ್ಧ ಹೋರಾಟದ ಸಂಕೇತವಾಗಿ ಮಹಿಳೆಯರು ತಮ್ಮ 'ಒಳ ಉಡುಪುಗಳನ್ನು ಸುಡುವ ಕ್ರಿಯೆಯಲ್ಲಿ ತಮ್ಮ ಪ್ರತಿಭೆಯನ್ನು ಎತ್ತಿತೋರಿದರು ಮಹಿಳೆಯರು ಆರ್ಥಿಕ ಸ್ಥಾನಮಾನಗಳನ್ನು ಗುರುತಿಸಿಕೊಳ್ಳುವುದಕ್ಕಾಗಿ 'ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಅಧಿಕಾರಶಾಹಿಗಳ ವಿರುದ್ಧ ಪ್ರತಿಭಟಿಸಿದರು. ಅಮೇರಿಕನ್ ಸ್ತ್ರೀವಾದಿಗಳು ತಮ್ಮ ಲೈಂಗಿಕ ಕ್ರಿಯೆಗೆ ನಿರ್ಬಂಧನೆ ಏಕೆ? ಎನ್ನುವ ಪ್ರಶ್ನೆಯನ್ನು ಎತ್ತಿಕೊಂಡು ಪುರುಷ ದಬ್ಬಾಳಿಕೆಯ ವಿರುದ್ಧ

ಪ್ರತಿಭಟನೆಗಳನ್ನು ಮಾಡಿದರು. ಹಾಗೆಯೇ ಕಪ್ಪು ಸ್ತ್ರೀವಾದಿಗಳು ಗುಲಾಮಗಿರಿಯ ವಿರುದ್ಧ ಪ್ರತಿಭಟಿಸಿ, ಬಿಳಿಯ ಜನರಿಂದ ಬೇರ್ಪಟ್ಟು ಸ್ವಾತಂತ್ರ್ಯ ಜೀವನವನ್ನು ನಡೆಸಲು ಮತ್ತು ತಮ್ಮ ಪತಿಗಳ ಮೇಲೆ ಆಗುತ್ತಿರುವ ಲೈಂಗಿಕ ಶೋಷಣೆಯಿಂದ ಮುಕ್ತರಾಗಲು, ಬಿಳಿಯರ ವಿರುದ್ಧ ಪ್ರತಿಭಟನೆಗಳನ್ನು ಮಾಡಿದರು. ಲೆಸ್ಬಿಯನ್ ಸ್ತ್ರೀವಾದಿಗಳು, ಸ್ತ್ರೀಯರೇ ಪ್ರತ್ಯೇಕ ಜೀವನಸಾಗಿಸಲು ಅಂದರೆ ಮಹಿಳೆಯರೆ ಪ್ರತ್ಯೇಕ ಕುಟುಂಬಗಳನ್ನು ರಚನೆ ಮಾಡಿಕೊಂಡು ತಮಗೆ ದೊರೆತ ಅಲ್ಪಸಮಯವನ್ನಾದರೂ ಪ್ರೀತಿ ವಾತ್ಸಾಲ್ಯಗಳಿಂದ ಕಳೆಯಬೇಕು ಮತ್ತು ಸಂತೋಷಕರ ಜೀವನ ಸಾಗಿಸುವುದಕ್ಕಾಗಿ ಪುರುಷ ನಿರ್ಮಿಸಿದ ಕುಟುಂಬಗಳನ್ನು ವಿರೋಧಿಸಿ ಮಹಿಳಾ ವಿಮೋಚನೆಗಾಗಿ ಚಿಂತಿಸಿದರು.

ಮಹಿಳಾ ವಿಮೋಚನೆಗಾಗಿ ಚಿಂತಿಸಿದ ಆದಿ ಚಿಂತಕೀಯರಾದ ಮೇರಿವುಲ್‌ಸ್ಟನ್ ಕ್ರಾಪ್ಟ್ , ಸಿಮೋನ್ ದ ಬುವಾ, ಬೆಟ್ಟಿಫ್ರಿಡನ್, ಕೇಟ್ ಮಿಲೇಟ್, ಇನ್ನೂ ಹಲವಾರು ಪಾಶ್ಚಿಮಾತ್ಯ ಆದಿಚಿಂತಕೀಯರು ಸಮಾಜದಲ್ಲಿ ಮಹಿಳೆಯರು ಸ್ಥಾನಮಾನಗಳನ್ನು ಪಡೆದುಕೊಳ್ಳುವುದಕ್ಕಾಗಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮತ್ತು ಕುಟುಂಬದ ವಲಯಗಳಲ್ಲಿ ತಮ್ಮ ಅಧಿಕಾರ ಚಲಾಯಿಸುವ ಸಾಮರ್ಥ್ಯವನ್ನು ಬೆಳೆಸಲು ಶ್ರಮಿಸಿದ್ದಾರೆ. ಹೀಗಾಗಿ ಮಹಿಳೆಯರು ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಅವಳು ಕೇವಲ ಪ್ರತಿನಿಧಿಯಾಗಿ ಕಾಣಿಸಿಕೊಳ್ಳುವಷ್ಟು ಮಾತ್ರಕ್ಕೆ ತೃಪ್ತಿ ಪಡದೆ, ಆಯಾ ಕ್ಷೇತ್ರಗಳಲ್ಲಿ ಮಹಿಳೆಯರೇ ನೇರವಾಗಿ ಭಾಗಿಯಾಗಬೇಕು ಎನ್ನುವ ಚಲದಿಂದ ಮಹಿಳೆಯರಿಗಾಗಿ ಪ್ರತ್ಯೇಕ ಶಿಕ್ಷಣ, ತರಬೇತಿ ಮತ್ತು ಸಂಘಟನೆಗಳನ್ನು ಕಟ್ಟುವ ಮುಖಾಂತರ ಅವರಿಗೆ ಆತ್ಮವಿಶ್ವಾಸ ಮೂಡಿಸಿ ಮನೆಯ ಹೊರಗಿನ ಪ್ರಪಂಚದ ಅರಿವು ಮೂಡಿಸಿಕೊಳ್ಳಲು ಮತ್ತು ತನ್ನ ಸುತ್ತಮುತ್ತಲಿನ ಮಹಿಳೆಯರ ಸಮಸ್ಯೆಗಳನ್ನು ಅರಿತುಕೊಂಡು ಅವುಗಳನ್ನು ಪರಿಹರಿಸಿಕೊಳ್ಳುವುದಕ್ಕಾಗಿ ಪ್ರಪ್ರಥಮವಾಗಿ ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳಾ ಚಿಂತನೆಗಳು, ಸಂಘಟನೆಗಳು, ಹೋರಾಟಗಳು, ಚಳುವಳಿಗಳು, ಹುಟ್ಟಿಕೊಳ್ಳಲಿಕ್ಕೆ ಶುರುವಾದವು. ಇಂತಹ ಹೋರಾಟಗಳಿಂದ, ಪ್ರತಿಭಟನಾ ಚಳುವಳಿಗಳಿಂದ ದಿನೇ ದಿನೇ ಮಹಿಳೆಯರ ಸಮಸ್ಯಗಳಿಗೆ ಪರಿಹಾರ ಕಂಡುಬರುತ್ತಿದ್ದವು. ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಬೇರೆ ಬೇರೆ ಚಿಂತನೆಗಳು ತಮ್ಮದೇ ಆದ ರೀತಿಯಲ್ಲಿ ಪ್ರಭುತ್ವದ ವಿರುದ್ಧ, ಪುರುಷ ರಾಜಕಾರಣೆಗಳ ವಿರುದ್ಧ, ಹೋರಾಟಗಳನ್ನು ಬಹುತೀವ್ರವಾಗಿ ಹಮ್ಮಿಕೊಂಡಿದ್ದರು, ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳಾ ಚಿಂತನೆಗಳು ಆಯಾ ದೇಶದಲ್ಲಿ ವಿಭಿನ್ನ ರೀತಿಯಲ್ಲಿ ಹುಟ್ಟಿಕೊಂಡಿದ್ದವು.

ಸಮಾಜದಲ್ಲಿ ಇರುವವರು ವರ್ಗ ಅಸಮಾನತೆ, ಲಿಂಗ ಅಸಮಾನತೆ, ಸ್ತ್ರೀಶೋಷಣೆ ಮತ್ತು ಬಂಡವಾಳ ಶಾಂತಿಗಳ ವಿರುದ್ಧ ಹೋರಾಟ ಅಂದರೆ ಜನರ ಮಧ್ಯೆ ಇರುವ ಆರ್ಥಿಕ ಅಸಮಾನತೆ ಮತ್ತು ನೈಸರ್ಗಿಕ ಸಂಪನ್ಮೂಲಗಳ ಅಸಮಾನ ಹಂಚಿಕೆಯಿಂದ ಜನರ ನಡುವೆ ತಾರತಮ್ಯಗಳು ಉಂಟಾಗುತ್ತವೆ.

ಈ ರೀತಿಯ ಆರ್ಥಿಕ ಬಲದಿಂದ ಪ್ರಬಲರು, ದುರ್ಬಲರೆನಿಸಿಕೊಂಡ ಎಲ್ಲಾ ಬಡಜನರ ಮೇಲೆ ಆಕ್ರಮಣಗಳು ನಡೆಸಲು ಶುರುಮಾಡುತ್ತಾರೆ. ಇಲ್ಲಿ ಅಬಲೆ ಎನಿಸಿಕೊಂಡ ಮಹಿಳೆಯರು ಆರ್ಥಿಕವಾಗಿ ಶೋಷಣೆಗೆ ಒಳಗಾಗುವುದರ ಜೊತೆಗೆ ಕುಟುಂಬದಲ್ಲಿ ತನ್ನ ನೆಲೆಯನ್ನು ಗುರುತಿಸಿಕೊಳ್ಳುವಲ್ಲಿ ಅಸಮರ್ಥಳಾಗುತ್ತಾಳೆ. ಆದ್ದರಿಂದ ಈ ಜಗತ್ತಿನಲ್ಲಿ ದಾಸ್ಯಕ್ಕೆ ಒಳಗಾದವಳು ಎಂದರೆ ಹೆಂಗಸು ಎಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಅಭಿಪ್ರಾಯಪಡುತ್ತಾರೆ.

ಎಂಗೆಲ್ಸ್ ರಚಿಸಿದ 'ದಿ ಅರಿಜನ್ ಆಫ್ ಫ್ಯಾಮಿಲಿ ಫ್ರವೆಟ್ ಪ್ರಾಪರ್ಟಿ ಆಂಡ್ ದಿ ಸ್ಟೇಟ್ ' ಈ ಕೃತಿಯಿಂದ ಸ್ತ್ರೀವಾದಿಗಳು ಹಾಗೂ ಸಾಮಾನ್ಯ ಪ್ರಜೆಗಳು ತಿಳಿದುಕೊಂಡಿದ್ದು ಏನೆಂದರೆ ಸ್ತ್ರೀ ಶೋಷಣೆಯು ಆರಂಭವಾದುದ್ದೇ ಖಾಸಗೀ ಸಂಪತ್ತಿನ ಗಳಿಕೆಯಿಂದ ಆರಂಭಗೊಳ್ಳುತ್ತವೆ. ನೈಸರ್ಗಿಕವಾಗಿ ದೊರೆಯುವ ಸಂಪನ್ಮೂಗಳು ಕೇವಲ ಬಂಡವಾಳಶಾಹಿಗಳಿಗೆ ಮಾತ್ರ ಸೇರುತ್ತಿದ್ದವು. ಅಂದರೆ ಭೂಮಿ, ಹಾಗೂ ಚರ ಅಥವಾ ಆಚರ ಆಸ್ತಿಗಳ ಮೇಲೆ ಒಡೆತನದ ಹಕ್ಕು ಸ್ಥಾಪಿತವಾಗಿದ್ದರಿಂದ, ಸಮಾಜದಲ್ಲಿ ವರ್ಗಭೇದಗಳು ಸೃಷ್ಟಿಯಾಗುವುದರ ಜೊತೆಗೆ ಲಿಂಗ ಅಸಮಾನತೆಯ ನೆಲೆಗಳು ಹುಟ್ಟಿಕೊಂಡು ಸ್ತ್ರೀಶೋಷಣೆಗೆ ಮೂಲವಾಗುತ್ತವೆ. ಆದ್ದರಿಂದ ಸ್ತ್ರೀವಾದಿಗಳು ನಿಸರ್ಗದ ಸಂಪತ್ತು ಎಲ್ಲರಿಗೂ ಸರಿಸಮಾನವಾಗಿ ಹಂಚಿಕೆಯಾಗಬೇಕು. ಆರ್ಥಿಕವಾಗಿ ಹಣಗಳಿಸಬೇಕಾದರೆ ಒಬ್ಬರಿಂದ ಒಬ್ಬರಿಗೆ ಅಘಾತವಾದ ಅಂತರವಿರಬಾರದು, ಶ್ರೀಮಂತರ ಮತ್ತು ಬಡವರ ನಡುವೆ ಕಂದರ ನಡೆಯಬಾರದು, ನೈಸರ್ಗಿಕವಾಗಿ ದೊರೆಯುವ ಸಂಪನ್ಮೂಲಗಳ ಒಡೆತನ ಪ್ರಭುತ್ವದಾಗಬೇಕು, ಅಂದರೆ ಯಾವುದೇ ಸಂಪನ್ಮೂಲವನ್ನು ಪಡೆದುಕೊಳ್ಳಬೇಕಾದರೆ ಅದಕ್ಕೆ ತಕ್ಕಂತೆ ಶ್ರಮಿಸಬೇಕು. ಶ್ರಮಕ್ಕೆ ತಕ್ಕ ಪ್ರತಿಫಲವನ್ನು ಪ್ರಭುತ್ವವೇ ಹಂಚಬೇಕು ಎಂದು ಒತ್ತಾಯಿಸುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ "ಪ್ರಜೆಗಳಲ್ಲಿ ಯಾರಿಗೂ ಖಾಸಗಿ ಆಸ್ತಿ ಎನ್ನುವುದು ಬೇಡ" ಯಾವುದೇ ಸಂಪತ್ತನ್ನು ಪಡೆಯಬೇಕಾದರೆ ಎಲ್ಲರೂ ಶ್ರಮಪಡಬೇಕು ಮತ್ತು ಸಮಾಜದಲ್ಲಿ ಆಯಾ ಉತ್ಪಾದನಾ ಕ್ಷೇತ್ರಗಳಲ್ಲಿ ಜನರನ್ನು ಕಡ್ಡಾಯವಾಗಿ ಭಾಗಿಯಾಗುವಂತೆ ಮಾಡಬೇಕು ಎಂದು ವಾದಿಸುತ್ತಾ ಸಮಾಜದಲ್ಲಿ ಬಂಡವಾಳವು ಶ್ರಮವನ್ನು ಕೊಂಡುಕೊಳ್ಳುವಂತೆ ಆಗಬಾರದು ಎಂದು ಪ್ರತಿರೋಧಿಸುತ್ತಾರೆ.

"ಸಂಪತ್ತು ಎನ್ನುವುದು ಸಮುದಾಯದ್ದಾಗಿರಬೇಕು" ಎಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಬಯಸುತ್ತಾರೆ. ಅಂದರೆ ಕುಟುಂಬದ ಪೋಷಣೆಯು ಸಹ ಸಮುದಾಯದ ಕರ್ತವ್ಯ ಆಗಬೇಕು. ಅಂದಾಗ ಮಾತ್ರ ಸಮಾಜದಲ್ಲಿ ದೊರೆಯುವ ಸಂಪನ್ಮೂಲಗಳು ಸಮಾನ ರೀತಿಯಲ್ಲಿ ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಹಾಗೆಯೇ ಶ್ರಮಕ್ಕೆ ತಕ್ಕ ಪ್ರತಿಫಲ ದೊರಕಿಸಿಕೊಳ್ಳಲು ಅನುವಾಗುತ್ತವೆ. ಈ ರೀತಿಯಾದಾಗ ಮಾತ್ರ ಎಲ್ಲಾ ಬಂಡವಾಳ ಮತ್ತು ಆಸ್ತಿಯು ಸಮಾನ ರೀತಿಯಲ್ಲಿ ಪಡೆದುಕೊಳ್ಳಲು

ಸಾಧ್ಯವಾಗುತ್ತವೆ. ಇಲ್ಲವಾದರೆ ಬಂಡವಾಳ ಶಾಹಿಗಳು ಹಣವನ್ನು ಬಂಡವಾಳವಾಗಿ ಹೂಡಿ ಹಣದಿಂದ ಹಣವನ್ನು ಸಂಪಾದನೆ ಮಾಡಲು ನೋಡುತ್ತಾರೆಯೇ ಹೊರತು ತಾವು ದೈಹಿಕವಾಗಿ ಎಂದೂ ಶ್ರಮಿಸುವುದಿಲ್ಲ.

ಪಿತೃ ಪ್ರಧಾನ ಕುಟುಂಬಗಳಲ್ಲಿ ಪುರುಷ ಮಾಡುವ ಒಳರಾಜಕೀಯದಿಂದ ಮಹಿಳೆಯರನ್ನು ಕೇವಲ ಅನುತ್ಪಾದಕ ಕೆಲಸಗಳಲ್ಲಿ ತೊಡಗಿಸಿ ಆಕೆಯನ್ನು ಪರಾವಲಂಬಿಯಾಗಿ ಮಾಡಿರುವುದರಿಂದ ಆಕೆಯು ಮನೆಯ ಹೊರಗಿನ ಪ್ರಪಂಚದ ಜ್ಞಾನವನ್ನು ಅರಿಯದೆ ಅಂದಾಕಾರದಲ್ಲಿ ಮುಳುಗಿದ್ದಾಳೆ. ಕುಟುಂಬದ ಎಲ್ಲಾ ಜವಬ್ದಾರಿಯನ್ನು ಅವಳ ಮೇಲೆ ಹೊರಿಸಿ ಶೋಷಣೆಗೆ ಗುರಿಮಾಡುತ್ತಾರೆ. ಸ್ತ್ರೀಯರು ಈ ಎಲ್ಲಾ ಶೋಷಣೆಗಳಿಂದ ತಪ್ಪಿಸಿಕೊಳ್ಳಬೇಕಾದರೆ, ಅವಳು ಆರ್ಥಿಕವಾಗಿ ಸಬಲಳಾಗಬೇಕಾಗುತ್ತದೆ. ಆರ್ಥಿಕವಾಗಿ ಸಬಲಳಾಗಬೇಕಾದರೆ ಅವಳು ಮನೆಯಿಂದ ಹೊರಬಂದು ಉದ್ಯೋಗದಲ್ಲಿ ತೊಡಗಿಕೊಂಡಾಗ ಮಾತ್ರ ಶೋಷಣೆಯಿಂದ ಮುಕ್ತಳಾಗಬಹುದು, ಮತ್ತು ಆರ್ಥಿಕವಾಗಿ ಪ್ರಬಲಳಾಗಬಹುದು ಎಂದು ಮಾರ್ಕ್ಸ್‌ವಾದಿ ಸ್ತ್ರೀವಾದಿಗಳು ಅಭಿಪ್ರಾಯ ವ್ಯಕ್ತಿಪಡಿಸುತ್ತಾರೆ. ಮಹಿಳೆಯರಿಗೆ ರಾಜಕೀಯದ ಹಕ್ಕು ದೊರೆಯುಬೇಕು ಅಂದರೆ ಕೇವಲ ರಾಜಕೀಯವಾಗಿ ಮಾತ್ರವಲ್ಲ, ಬದುಕುವ ಎಲ್ಲಾ ಹಕ್ಕುಗಳು ಬೇಕು ಎಂದು ಪುರುಷ ರಾಜಕಾರಣಗಳ ವಿರುದ್ಧ ಚಳುವಳಿಗಳನ್ನು ಮಾಡುತ್ತಿದ್ದರು.

ನಿಸರ್ಗ ಸಹಜವಾಗಿ ಸ್ತ್ರೀ-ಪುರುಷರ ಮಧ್ಯೆ ಭಿನ್ನ ಜೈವಿಕ ವ್ಯತ್ಯಾಸಗಳ ಕಾರಣಗಳ ಮೂಲಕ ಮಹಿಳೆಯು ಪಡೆಯುವ ಸವಲತ್ತುಗಳನ್ನು, ಕಾರ್ಯಗಳನ್ನು ಕಂಡು ತೀವ್ರಗಾಮಿ ಸ್ತ್ರೀವಾದಿಗಳು ಬಹುವಾಗಿ ಖಂಡಿಸುತ್ತಾರೆ. ಏಕೆಂದರೆ ಪುರುಷರಿಗೆ ಹಾಗೂ ಸ್ತ್ರೀಯರಿಗೆ ವಿಭಿನ್ನ ರೀತಿಯಲ್ಲಿ ದೇಹ ರಚನೆ ಇರುವುದರಿಂದ ಮತ್ತು ಮಹಿಳೆಯು ತಾಯ್ತನದ ಶಕ್ತಿಯನ್ನು ಪಡೆಯುವುದರಿಂದ ಅವಳೇ ಮಕ್ಕಳನ್ನು ಹೋರುವ, ಹೆರುವ ಮತ್ತು ಪೋಷಣೆ ಮಾಡುವ ಅಥವಾ ಬೆಳೆಸುವ ಕ್ರಿಯೆ ಕಡ್ಡಾಯವಾಗಿ ಮಹಿಳೆಯರದೇ ಎನ್ನುವ ಗೊಡ್ಡು ಸಂಪ್ರದಾಯಗಳನ್ನು ತೀವ್ರಗಾಮಿ ಸ್ತ್ರೀವಾದಿಗಳು ಸಂಪೂರ್ಣವಾಗಿ ತಿರಸ್ಕರಿಸಿ, ಸ್ತ್ರೀ-ಪುರುಷರ ಮಧ್ಯೆ ಇರುವು ಅಸಮಾನತೆಯ ಜೈವಿಕ ಸಿದ್ಧಾಂತವನ್ನು ತೀವ್ರವಾಗಿ ಖಂಡಿಸುತ್ತಾರೆ. ಮತ್ತು ದೇಹ ರಚನೆಯ ಭಿನ್ನತೆಯು ಜೈವಿಕ ಕಾರಣದಿಂದ ಆಗಿದೆ, ಆದರೆ ಈಕೆಯು ಸಾಮಾಜಿಕ ಸಂಸ್ಥೆಗಳಲ್ಲಿ ಸಮಾನ ಅವಕಾಶಗಳಿಗೆ ಸಮಾನಳು ಎಂದು ವಾದಿಸುತ್ತಾರೆ.

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯ ಜೈವಿಕ ಕ್ರಿಯೆಯನ್ನು ತಮ್ಮ ಹತೋಟಿಯಲ್ಲಿ ಇಟ್ಟುಕೊಂಡು ಹೆಂಗಸರನ್ನು ನಿಯಂತ್ರಿಸುತ್ತಿದ್ದಾರೆ. ಸ್ತ್ರೀಯು ಸಮಾಜದಲ್ಲಿ ಸಮಾನತೆಯನ್ನು ಸಾಧಿಸಬೇಕಾದರೆ, ಸ್ತ್ರೀಯ ಜೈವಿಕ ಕ್ರಿಯೆಗಳ ಮೇಲೆ ಪುರುಷರು ಹೊಂದಿರುವ ಸ್ವಾಮ್ಯವನ್ನು ಕಿತ್ತೊಗೆಯಬೇಕು. ಅಂದರೆ ತಾವು ಎಷ್ಟು ಮಕ್ಕಳನ್ನು ಪಡೆಯಬೇಕು, ಯಾವ, ಯಾವ ಸಮಯಕ್ಕೆ ಮಕ್ಕಳನ್ನು ಪಡೆಯಬೇಕು. ಹಾಗೂ

ಯಾವ ಸಮಯಕ್ಕೆ ಲೈಂಗಿಕ ಕ್ರಿಯೆಯಲ್ಲಿ ತೊಡಗಬೇಕು, ಹಾಗೆಯೇ ತನಗೆ ದೊರೆಯಬೇಕಾದ ಹಕ್ಕುಗಳು ಯಾವುವು ಮತ್ತು ರಾಜಕೀಯದಲ್ಲಿ ಪಾತ್ರವೇನು, ಕುಟುಂಬದಲ್ಲಿ ತನ್ನ ನಿಲುವುಗಳೇನು, ಎನ್ನುವ ವಿಚಾರಗಳಿಗೆ ಸಂಬಂಧಿಸಿದಂತೆ ಸ್ತ್ರೀಯು ಸ್ವತಂತ್ರ ನಿರ್ಧಾರಗಳನ್ನು ತೆಗೆದುಕೊಂಡಾಗ ಮಾತ್ರ ಸ್ತ್ರೀ ಶೋಷಣೆಯಿಂದ ಮುಕ್ತಳಾಗುತ್ತಾಳೆ. ಆಸ್ತಿಯ ಹಕ್ಕು ಎನ್ನುವುದು ಜನ್ಮಸಿದ್ಧ ಹಕ್ಕೆ ಹೊರತು ಅವು ನಿಸರ್ಗ ಸಹಜವಲ್ಲ, ಅವು ಕಾನೂನಿನ ಮೂಲಕ ಅಸ್ತಿತ್ವಕ್ಕೆ ಬಂದು ಮಹಿಳೆಯರಿಗೆ ದೊರಕಬೇಕಾದ ಹಕ್ಕುಗಳಾಗಿವೆ. ಆಸ್ತಿಯ ಹಕ್ಕನ್ನು ಹೊಂದಿ ಮಹಿಳೆಯರು ಸಂವಿಧಾನ ಬದ್ಧವಾಗಿ ದೊರೆಯುವ ಎಲ್ಲಾ ಹಕ್ಕುಗಳನ್ನು ಚಲಾಯಿಸುವ ಸಾಮರ್ಥ್ಯ ಮಹಿಳೆಯರಲ್ಲಿ ಬೆಳೆಸುವುದು ತೀವ್ರಗಾಮಿ ಸ್ತ್ರೀವಾದಿಗಳ ಮುಖ್ಯ ನಿಲುವಾಗಿದ್ದವು. "ವೈಯಕ್ತಿಕವಾಗಿ ಮಹಿಳೆಗೆ ರಾಜಕೀಯದಲ್ಲಿ ಆಸಕ್ತಿ ಇಲ್ಲದಿದ್ದರೂ ಆಕೆ ಹೊಂದಿದ ಆಸ್ತಿಯೊಂದಿಗಿನ ಹಕ್ಕು ಹಾಗೂ ಕರ್ತವ್ಯಗಳೇ ರಾಜಕೀಯ ಆಯಾಮವನ್ನು ಹೊಂದಿದೆ ಎಂದು 'ಹೆಲನ್ ಟೆಲರ್' ಸ್ಪಷ್ಟೀಕರಿಸುತ್ತಾಳೆ."[೨] ಹೀಗೆ ಮೇರೀ ವುಲ್‌ಸ್ಟನ್ ಕ್ರಾಪ್ಟ್‌ಳ ತಾತ್ವಿಕ ವೈಚಾರಿಕತೆಯು ಮಾನವ ಹಕ್ಕಿನ ಪ್ರಶ್ನೆಯನ್ನು ಎತ್ತಿಹಿಡಿದಿದ್ದಾರೆ. ಹೆಲೆನ್ ಟೇಲರಳು ಆಸ್ತಿಯ ಹಕ್ಕಿನ ಪ್ರಶ್ನೆಯನ್ನು ಮಹಿಳಾ ವಿಮೋಚನೆಗೆ ಸಂಬಂಧಿಸಿದಂತೆ ಎತ್ತಿ ಹಿಡಿಯುತ್ತಾರೆ.

ಪುರುಷ ಪ್ರಧಾನ ಸಮಾಜದಲ್ಲಿ ಸ್ತ್ರೀಯನ್ನು ಸಂತಾನೋತ್ಪತ್ತಿಯ ಒಂದು ಯಂತ್ರದಂತೆ ಕಾಣುತ್ತಿರುವುದೇ ಹೆಂಗಸಿನ ಶೋಷಣೆಯ ಪ್ರಮುಖ ಕಾರಣವಾಗಿದೆ. ಸಮಾಜದಲ್ಲಿ ಹೆಂಗಸು ಶಿಶುವಿಗೆ ಜೀವನ ನೀಡಿದರೆ ಸಾರ್ಥಕ ಎನ್ನುವ ಅಪಕಲ್ಪನೆಯಿಂದ ಸ್ತ್ರೀಯನ್ನು ಬಂಧಿಸಿರುವ ಈ ಪುರುಷ ಪ್ರಧಾನ ಸಮಾಜ ವ್ಯವಸ್ಥೆ ತಾಯ್ತನದ ಹೆಸರಿನಲ್ಲಿ ಸ್ತ್ರೀಯ ವ್ಯಕ್ತಿತ್ವವನ್ನು ನಾಶಮಾಡುತ್ತಿದ್ದಾರೆ. ಬಸಿರು, ಶಿಶುಜನನ, ತಾಯ್ತನ, ಸಂತಾನೋತ್ಪತ್ತಿ ಎನ್ನುವ ಕಲ್ಪನೆಗಳನ್ನು ಫೈರ್ ಸ್ಟೋನ್ ಧಿಕ್ಕರಿಸುತ್ತಾಳೆ.

ಪ್ರಪಂಚದಲ್ಲಿಯೇ ಮೊಟ್ಟಮೊದಲ ಭಾರಿಗೆ ವಿಜ್ಞಾನ ಕ್ಷೇತ್ರದಲ್ಲಿ ಹಾಗೂ ಮನೋವಿಜ್ಞಾನದ ಕ್ಷೇತ್ರದಲ್ಲಿ ಮನುಷ್ಯನ ಕಲ್ಪನೆಗೂ ಅತೀತವಾದ ವಿಚಾರಗಳನ್ನು ತಮ್ಮ ವಿಶ್ಲೇಷಣೆಯ ಮೂಲಕ ಮಂಡಿಸಿ ಬುದ್ಧಿಜೀವಿಗಳ ವಿಚಾರಧಾರೆಯನ್ನೇ ಬದಲಾಯಿಸಿದ ಕೀರ್ತಿ 'ಸಿಗ್ಮಂಡ್ ಫ್ರಾಯ್ಡ್'ರವರಿಗೆ ಸಲ್ಲುತ್ತದೆ. ಇದರ ಒಂದು ಮನೋವಿಶ್ಲೇಷಣೆಯು ವ್ಯಕ್ತಿಯ ಬಗೆಗಿರುವ ಮೂಲಭೂತವಾದ ತಿಳುವಳಿಕೆ ಶೀಘ್ರವಾದ ರೀತಿಯಲ್ಲಿ ಒಂದು ವೈಪರೀತ್ಯವೆಂಬಂತೆ ಬದಲಾಗಿಸಲ್ಪಟ್ಟಿತ್ತು. ಮನೋವಿಶ್ಲೇಷಣೆಯ ಪ್ರಕಾರ ಕಾಮತೃಪ್ತಿ ಮಗುವಿದ್ದಾಗಲೇ ಅನುಭವಿಸಲ್ಪಡುತ್ತದೆ. ಮಗು ಜೀವನದ ಪ್ರತಿಯೊಂದು ಹಂತದಲ್ಲಿ ವಿಭಿನ್ನವಾದ ಮಾನಸಿಕವಾಗಿ ಲೈಂಗಿಕ ತೃಪ್ತಿಯನ್ನು ಐದು ಹಂತಗಳಲ್ಲಿ ಪಡೆಯುತ್ತದೆ ಎಂದು ಪ್ರತಿಪಾದಿಸುತ್ತಾರೆ. ಇವುಗಳಲ್ಲಿ ನಾಲ್ಕನೆಯ ಹಂತವದ 'ಅವ್ಯಕ್ತಾವಧಿ'(೭ ರಿಂದ ೧೧ವರ್ಷ)ಯಲ್ಲಿ ಗಂಡು ಅಥವಾ ಹೆಣ್ಣು ಮಗು ಲಿಂಗಭೇದವನ್ನು ಸ್ಪಷ್ಟವಾಗಿ ಗುರುತಿಸಿಕೊಳ್ಳುತ್ತಾರೆ. ಈ ಹಂತದಲ್ಲಿ

ಗಂಡು ಮಗುವಿನಲ್ಲಿ ಇರುವ, ಹೆಣ್ಣು ಮಗುವಿನಲ್ಲಿ ಇರದೇ ಇರುವು ಒಂದು ಅಂಗವಾದ 'ಶಿಶ್ನ' ನನ್ನಲ್ಲಿ ಇಲ್ಲವಲ್ಲ ಎಂದು ಅಸೂಯೇ ಪಡುತ್ತಾಳೆ. ಹಾಗೆಯೇ ಹೆಣ್ಣು ಮಗುವಿನಲ್ಲಿ ನಾಚಿಕೆಯ ಸ್ವಭಾವಗಳು ಬೆಳೆಯುತ್ತವೆ ಎಂದು ಫ್ರಾಯ್ಡ್ ಪ್ರತಿಪಾದಿಸುತ್ತಾರೆ. ಈ ರೀತಿಯ ವಿಭಿನ್ನವಾದ ಲೈಂಗಿಕ ಅನುಭವಗಳಿಗೆ ಒಳಪಡುವ ಬಾಲಕ-ಬಾಲಕೀಯರು ವಿಭಿನ್ನವಾದ ಲಿಂಗಪಾತ್ರಗಳನ್ನು ಸ್ವೀಕರಿಸುತ್ತಾರೆ ಎನ್ನುವುದು ಪ್ರಾಯ್ಡ್‌ನ ವಿಶ್ಲೇಷಣೆಯಾಗಿತ್ತು. ಈ ವಿಚಾರಗಳನ್ನು ಅನೇಕ ಸ್ತ್ರೀವಾದಿಗಳು ಕಟುವಾಗಿ ಟೀಕಿಸುತ್ತಾರೆ. ಏಕೆಂದರೆ ಲೈಂಗಿಕತೆಯ ಕಲ್ಪನೆಗಳಿಗೆ ಒತ್ತುಕೊಡುವ ಪ್ರಾಯ್ಡ್‌ನ ವಿಚಾರಗಳು ಪುರುಷ ಪ್ರಧಾನತೆಯನ್ನು ಸಮರ್ಥಿಸುವಂತಾಗಿವೆ. ಫ್ರಾಯ್ಡ್‌ನ ಕಲ್ಪನೆಯು ಸಹ ಹೆಣ್ಣು ಲೈಂಗಿಕತೆಗೆ ಅಥವಾ ಕಾಮಕ್ಕೆ ದಾಸಿಯಾಗುತ್ತಾಳೆ ಎನ್ನುವ ವಿಚಾರಗಳನ್ನು ಬೆಟ್ಟಿ ಪ್ರಿಡಿನ್, ಶೂಲಮಿಥ ಫೈರ್ ಸ್ಟೋನ್ ಮತ್ತು ಕೇಟ್ ಮಿಲೇಟ್ ಅವರು ವಿರೋಧಿಸುತ್ತಾರೆ. ಹಾಗೂ ಲೈಂಗಿಕತೆಗೆ ನೀಡಿರುವ ಮಹತ್ವವೇ ಸ್ತ್ರೀಯರನ್ನು ಸಾರ್ವಜನಿಕ ಜೀವನ ಹಾಗೂ ಸಂಸ್ಥೆಗಳಿಂದ ದೂರವಿರಿಸಲು ಕಾರಣವಾಗಿವೆ. ಹಾಗೆಯೇ ಸ್ತ್ರೀಯರಲ್ಲಿ ಕೀಳಿರಿಮೆ ಭಾವನೆ ಮೂಡಲು ಆಸ್ಪದವಾಗಿದೆ ಎಂದು ಸಹ ಹೇಳಬಹುದು.

ಪಿತೃಪ್ರಧಾನ ಕುಟುಂಬಗಳಲ್ಲಿ ಶ್ರೀಮಂತ ಮನೆಯ ಮಹಿಳೆಯರು ಸಹ ಪುರುಷನ ಅಧೀನದಲ್ಲಿಯೇ ಇರಬೇಕಾಗುತ್ತದೆ. ಇಲ್ಲಿ ಯಜಮಾನಿಕೆಯು ಪುರುಷನದೇ ಆಗಿರುತ್ತದೆ. ಪಿತೃ ಪ್ರಧಾನರಲ್ಲಿ ಕನ್ಯೆಯನ್ನು ವಿವಾಹದ ಸಮಯದಲ್ಲಿ ಬೇರೊಂದು ಕುಟುಂಬಕ್ಕೆ ದಾನ ಮಾಡುತ್ತಾರೆ. ಆದರೆ ಕುಟುಂಬದ ಎಲ್ಲಾ ಹಕ್ಕುಗಳನ್ನು ಹೆಣ್ಣು ಮಕ್ಕಳಿಗೆ ರವಾನಿಸುವುದಿಲ್ಲ. ಒಂದು ವೇಳೆ ಆ ಕುಟುಂಬಗಳಲ್ಲಿ ಗಂಡು ಮಗು ಇಲ್ಲದೇ ಹೋದಲ್ಲಿ, ಗಂಡು ಮಗುವನ್ನು ದತ್ತು ತೆಗೆದುಕೊಂಡು ಆ ಮಗುವಿಗೆ ಅಧಿಕಾರವನ್ನು ಮತ್ತು ಆಸ್ತಿಯ ಹಕ್ಕನ್ನು ಅವನಿಗೆ ವರ್ಗಾಯಿಸುತ್ತಾರೆ. ಸಮಾಜದಲ್ಲಿ ಹೆಣ್ಣು ಮಗುವನ್ನು ಒಂದು ಅಂಗಳದಿಂದ ಮತ್ತೊಂದು ಅಂಗಳಕ್ಕೆ ಸ್ಥಳಾಂತರಿಸಿ ತಮ್ಮ ಭಾರವನ್ನು ಕಡಿಮೆಮಾಡಿಕೊಳ್ಳುತ್ತಾರೆ. ಅಂದರೆ 'ನಮ್ಮ ಮನೆಯ ಅಂಗಳದಲ್ಲಿ ಬೆಳೆದ ಹೂವನ್ನು ನಿಮ್ಮ ಅಂಗಳದಲ್ಲಿ ತಂದಿರುಸುವೆನು' ಎನ್ನುವ ರೀತಿಯಲ್ಲಿ ಮಹಿಳೆಯರನ್ನು ಕಾಣುತ್ತಾರೆ.

ವಿವಾಹ ಎನ್ನುವ ಸಂಸ್ಥೆಯ ಮೂಲಕ ಸ್ತ್ರಿ ಪುರುಷರ ಸ್ಥಾನಮಾನಗಳನ್ನು ಕಾಯಂಗೊಳಿಸುತ್ತಾರೆ. ಸಂಬಂಧಗಳ ಸ್ಥಾನಮಾನವನ್ನು ನಿರ್ಧರಿಸುವುದು, ವಿವಾಹ ಸಂಬಂಧಿ, ವೇಶ್ಯ, ಬಂಜೆ, ವೈಧವ್ಯ, ವಿಧವೆ, ವರದಕ್ಷಿಣೆ, ವಧುದಹನ, ಅವಿವಾಹಿತ ಸಮಸ್ಯೆ ಈ ಮೇಲಿನ ಕೆಲವು ಅಂಶಗಳಲ್ಲಿ ಮಹಿಳೆಯರು ಸ್ಥಾನಗಳನ್ನು ಕಳೆದುಕೊಂಡರೂ, ಬಂಜೆ ಎನ್ನುವ ಸಂಸ್ಥೆಯಿಂದ ತಪ್ಪಿಸಿಕೊಳ್ಳಬೇಕಾದರೆ ಗಂಡು ಮಗುವನ್ನು ಹೇರಲೇ ಬೇಕಾಗುತ್ತದೆ. ಸಮಾಜದಲ್ಲಿ ಮಹಿಳೆಗೆ ಬಂಜೆ ಎನ್ನುವ ಪಟ್ಟವನ್ನು ಕಟ್ಟಿ ಗಂಡಸು ಇನ್ನೊಬ್ಬ ಹೆಂಗಸನ್ನು ವಿವಾಹವಾಗಲು ಬಯಸುತ್ತಾನೆ. ಈ ಎಲ್ಲವುಗಳು ಮಹಿಳೆಯರನ್ನು ವಿವಾಹ

ಸಂಸ್ಥೆಗಳಿಂದ ನಿರ್ಬಂಧನೆಗಳಿಗೆ ಒಳಗಾಗುವಂತೆ ಮಾಡುತ್ತವೆ. ವಿವಾಹದ ನಿಯಮಗಳನ್ನು ಬದಲಾಯಿಸುವುದರ ಜೊತೆಗೆ ಮಹಿಳೆಯರ ಆಸ್ತಿಯ ಹಕ್ಕು, ವಂಶದ ಹಕ್ಕು, ವರನ ಆಯ್ಕೆ, ಮತ್ತು ಕಾನೂನಿನ ಮೂಲಕ ಹಕ್ಕುಗಳನ್ನು ಪಡೆದುಕೊಳ್ಳಲು ಸಮಾಜವಾದಿ ಸ್ತ್ರೀವಾದಿಗಳು ಚಳುವಳಿಗಳನ್ನು ಮಾಡುವ ಪರಿಸ್ಥಿತಿಗಳು ಉಂಟಾಗಿದ್ದವು.

ಕಪ್ಪು ಮಹಿಳೆಯರು ಕೂಡ ಸಾಕಷ್ಟು ಶಿಕ್ಷಣವನ್ನು ಪಡೆದ ಮಹಿಳಾ ಸಮುದಾಯಗಳಾಗಿದ್ದವು. ಆದರೆ ಇಪ್ಪತ್ತನೆಯ ಶತಮಾನದಲ್ಲಿ ಅಮೇರಿಕಾದ ಕರಿಯ ಮಹಿಳಾ ಸಾಹಿತ್ಯವನ್ನು ಮತ್ತು ವಲಸೆ ಬಂದ ಆಫ್ರೀಕಾದ ಕರಿಯ ಮಹಿಳೆಯರು ರಚಿಸಿದ ಸಾಹಿತ್ಯವನ್ನು ಬಿಳಿಯ ಮಹಿಳಾ ಸಾಹಿತಿಗಳು ಪರಿಗಣಿಸುತ್ತಿರಲಿಲ್ಲ. ಕಪ್ಪು ಸ್ತ್ರೀಯರನ್ನು ಗುಲಾಮರಂತೆ ನೋಡಿ, ಅವರನ್ನು ಕೇವಲ ಸೇವಾವಲಯಕ್ಕೆ ಮೀಸಲಾಗಿರಿಸಿ, ಅತಿನಿಕೃಷ್ಟವಾದಂತಹ ಕೆಲಸ ಕಾರ್ಯಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಹಾಗೆಯೇ ಕಪ್ಪು ಸ್ತ್ರೀಯರ ಗಂಡಸರಿಂದ ಬಿಳಿಯ ಹೆಂಗಸರು ಲೈಂಗಿಕ ತೃಪ್ತಿ ಪಡೆದುಕೊಳ್ಳುವುದಕ್ಕಾಗಿ ಅವರ ಗಂಡಂದಿರನ್ನು ಸಹ ಶೋಷಣೆ ಮಾಡುತ್ತಿದ್ದರು. ಪ್ರಪಂಚದ ಎಲ್ಲ ಮಹಿಳೆಯರ ಸಂಕಷ್ಟಗಳಿಗೆ ಪುರುಷರ ಚಿಂತನೆಯೇ ಪ್ರಮುಖ ಕಾರಣವಾಗಿವೆ. ಆದ್ದುದರಿಂದ ಪ್ರಪಂಚದ ಎಲ್ಲಾ ಮಹಿಳೆಯರು ಒಂದು ಸಮುದಾಯವಾಗಿ ಕೂಡಿ ಅವುಗಳ ಪರಿಹಾರಕ್ಕೆ ಒಂದೇ ಚಿಂತನೆ ಮಾಡಬೇಕು ಎಂದಾಗ ಇದಕ್ಕೆ ಕಪ್ಪು ಮಹಿಳೆಯರು ಒಪ್ಪದೆ ಬಿಳಿಯರ ವಿರೋಧವಾಗಿ ನಿಲ್ಲುತ್ತಾರೆ. ಹೀಗಾಗಿ ಅಮೇರಿಕಾದಲ್ಲಿ ಬಿಳಿ ಮತ್ತು ಕಪ್ಪು ಜನರ ನಡುವೆ ಸಂಘರ್ಷಗಳು ನಡೆಯಲು ಪ್ರಾರಂಭಗೊಂಡವು. ಅಲ್ಲಿ ಸಲಿಂಗದವರ ಮಧ್ಯೆಯೇ ತಾರತಮ್ಯದ ಭಾವನೆ ಇರುವುದರಿಂದ, ಕಪ್ಪು ಮತ್ತು ಬಿಳಿಯ ಮಹಿಳೆಯರಿಗೆ ದೊರೆಯುವ ಸೌಕರ್ಯಗಳೇ ಭಿನ್ನವಾಗಿದ್ದವು. ಆದುದರಿಂದ ಕಪ್ಪು ಮತ್ತು ಬಿಳಿಯ ಜನರ ಮಧ್ಯೆ ಒಳ ಜಗಳಗಳು ಪ್ರಾರಂಬಗೊಂಡಿದ್ದವು. ಶ್ರೀಮಂತ ಬಿಳಿಯ ಮಹಿಳೆಯರು ಬಡವರ್ಗದ ಕಪ್ಪು ಪುರುಷರಿಂದ ಸೇವೆಯನ್ನು ಮಾಡಿಸಿಕೊಳ್ಳುತ್ತಿದ್ದರು. ಈ ಪರಿಸ್ಥಿತಿಯಲ್ಲಿ ಕಪ್ಪು ಸ್ತ್ರೀಯರ ಜೊತೆಗೆ ಅವರ ಗಂಡಂದಿರು ಸಹ ಶೋಷಣೆಗೆ ಒಳಗಾಗುತ್ತಿದ್ದರು. ಹತ್ತೊಂಬತ್ತನೆಯ ಶತಮಾನದ ಉದ್ದಕ್ಕೂ 'ಪ್ರೆಡ್ರಿಕ್ ಡಗ್ಲಸ್ 'ನಂಥ ಕರಿಯ ನಾಯಕರು ಮಹಿಳೆಯರ ಸ್ಥಾನ ಮಾನಗಳ ಬಗ್ಗೆ ಮತ್ತು ಸಮಾನತೆಯನ್ನು ಪಡೆದುಕೊಳ್ಳುವುದಕ್ಕಾಗಿ ಹೋರಾಟಗಳನ್ನು ಮಾಡುತ್ತಿದ್ದರು.

ಪಾಶ್ಚಿಮಾತ್ಯ ದೇಶಗಳಲ್ಲಿ ಕೈಗಾರೀಕರಣ ಮತ್ತು ಆಧುನೀಕರಣಗಳು ಆರಂಭಗೊಂಡಾಗ ಮಹಿಳೆಯರು ಶಿಕ್ಷಣ ಪಡೆಯಲು ಅವಕಾಶಗಳು ದೊರೆತವು. ಹಾಗೆಯೇ ಸಾರ್ವಜನಿಕ ಕ್ಷೇತ್ರಗಳಲ್ಲಿ ಉದ್ಯೋಗಗಳು ದೊರೆತಾಗ, ಮಹಿಳೆಯರು ಆರ್ಥಿಕವಾಗಿ ಪ್ರಬಲರಾಗುತ್ತಾ ಬಂದರೂ ಸಹ, ಪಿತೃ ಪ್ರಧಾನ ಕುಟುಂಬ ವ್ಯವಸ್ಥೆಯು ಆಕೆಯನ್ನು ಲೈಂಗಿಕವಾಗಿ ನಿಯಂತ್ರಣದಲ್ಲಿ ಹಿಡಿದಿಟ್ಟಿದ್ದರು. ಅಂದರೇ ಕೇವಲ ಶಿಕ್ಷ

ಕೇಂದ್ರಿತ ಲೈಂಗಿಕ ಕ್ರಿಯೆ ಮಾತ್ರ 'ಸೆಕ್ಸ್' ಎಂದು ಪರಿಗಣಿಸಿದ್ದರು. ಆದರೆ ಲೆಸ್ಬಿಯನ್ ಸ್ತ್ರೀವಾದಿಗಳು ಈ ಒಂದು ಲೈಂಗಿಕ ತೃಪ್ತಿಯನ್ನು ಹೆಣ್ಣು, ಹೆಣ್ಣಿನಿಂದ ಪಡೆಯಬಹುದು ಎಂದು ವಾದಿಸುತ್ತಾ ಪುರುಷ ಪ್ರಧಾನ ಕುಟುಂಬ ವ್ಯವಸ್ಥೆಯನ್ನು ವಿರೋಧಿಸಿ ತಮ್ಮದೇ ಆದ ರೀತಿಯಲ್ಲಿ ಕುಟುಂಬಗಳನ್ನು ರಚನೆ ಮಾಡಿಕೊಂಡು ಸಲಿಂಗದವರು ಅಂದರೆ ಇಬ್ಬರು ಹೆಣ್ಣುಮಕ್ಕಳು ಸೇರಿಕೊಂಡು ಜೀವನವನ್ನು ಸಾಗಿಸುತ್ತಾ, ಪ್ರೀತಿ ವಾತ್ಸಲ್ಯಗಳನ್ನು ಹಂಚಿಕೊಂಡು ತಮ್ಮಿಬ್ಬರ ನಡುವೆ ಉತ್ತಮ ರೀತಿಯ ಸಂಬಂಧಗಳನ್ನು ಬೆಳೆಸಿಕೊಳ್ಳುತ್ತಿದ್ದರು. ಪುರುಷರ ಕಟ್ಟು ಸಂಪ್ರದಾಯಗಳನ್ನು ಮುರಿಯುತ್ತಾ ತಾವೇ ಸ್ವತಂತ್ರಳಾಗಿ ಜೀವನವನ್ನು ಸಾಗಿಸುತ್ತಿದ್ದರು. ಸ್ತ್ರೀವಾದಿಗಳು ನಮ್ಮ ದೇಹದ ಮೇಲೆ ನಮ್ಮ ಅಧಿಕಾರದ ಹಕ್ಕು ಬೇಕು, ಜೊತೆಗೆ ತಾಯ್ತನದ ಹಕ್ಕು ಹಾಗೂ ಸ್ವತಂತ್ರ್ಯವಾಗಿ ಜೀವಿಸುವ ಹಕ್ಕುಬೇಕು ಎನ್ನುವ ಅಂಶಗಳನ್ನು ಮುಂದಿಟ್ಟುಕೊಂಡು ಹೋರಾಟಗಳನ್ನು ಮಾಡಲು ಮುಂದಾದರು.

ಹೀಗೆ ವಿವಿಧ ದೇಶಗಳಲ್ಲಿ ವಿವಿಧ ರೀತಿಯಲ್ಲಿ ಹುಟ್ಟಿಕೊಂಡ ಸ್ತ್ರೀವಾದಿ ಚಿಂತನೆಗಳು ಮಹಿಳೆಯರ ವಿಮೋಚನೆಗಾಗಿ ಶ್ರಮಿಸುತ್ತಿದ್ದವು. ಮೊದಮೊದಲು ಮಹಿಳಾ ಸಂಘಗಳು ಅಲ್ಪಪ್ರಮಾಣದ ಸದಸ್ಯರನ್ನು ಒಳಗೊಂಡಿದ್ದವು. ಇವು ೧೯೬೦ರ ಸುಮಾರಿಗೆ ಅವು ರಾಷ್ಟ್ರೀಯ ಮಟ್ಟದಲ್ಲಿ ಬೆಳೆಯಲು ಶುರುವಾದ್ದರಿಂದ ಎಲ್ಲ ಮಹಿಳೆಯರು ಅಲ್ಪ ಪ್ರಮಾಣದಲ್ಲಿಯಾದರೂ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಮತ್ತು ತಮ್ಮ ಸ್ಥಾನಮಾನಗಳನ್ನು ಭದ್ರಪಡಿಸಿಕೊಳ್ಳಲು ಅನುವು ಮಾಡಿಕೊಂಡರು. ಮೊದಲು ಪಾಶ್ಚಿಮಾತ್ಯ ದೇಶಗಳಲ್ಲಿ ಮಹಿಳೆಯರು ಶಿಕ್ಷಣ ಪಡೆಯಲು ಮನೆಯಿಂದ ಹೊರಗೆ ಬಂದ ನಂತರ ಸಾರ್ವಜನಿಕ ಕ್ಷೇತ್ರಗಳಲ್ಲಿ ಉದ್ಯೋಗವನ್ನು ಗಿಟ್ಟಿಸಿಕೊಂಡರು. ನಂತರ ತಮ್ಮ ಸುತ್ತಮುತ್ತಲಿನ ಮಹಿಳೆಯರ ಸಮಸ್ಯೆಗಳನ್ನು ಅರಿತುಕೊಂಡು, ಅವುಗಳಿಗೆ ಪರಿಹಾರ ಕಂಡುಕೊಳ್ಳಲು ಮಹಿಳಾ ಚಳುವಳಿಗಳು ಮತ್ತು ಸಂಘಟನೆಗಳು ಹುಟ್ಟಿಕೊಂಡವು. ಪಾಶ್ಚಿಮಾತ್ಯ ದೇಶಗಳ ಮಹಿಳಾ ಚಳುವಳಿಗಳ ಪ್ರಭಾವ ಭಾರತ ದೇಶದಲ್ಲಿ ಸಹ ಆವರಿಸಿಕೊಂಡಿತು ಎಂದು ಹೇಳಬಹುದು.

ಭಾರತದಲ್ಲಿ ಮಹಿಳಾ ಚಳುವಳಿಗಳು ಆರಂಭಗೊಂಡಿರುವ ಕಾಲವನ್ನು ಗುರುತಿಸುವುದು ಅಷ್ಟು ಸುಲಭವಾದುದಲ್ಲ. ಏಕೆಂದರೆ ವಿವಿಧ ಮತಧರ್ಮಗಳು ಮತ್ತು ವೈವಿಧ್ಯಮಯವಾದ ಸಂಸ್ಕೃತಿಗಳ ನಾಡಾದ ಭಾರತವು ಆಂಗ್ಲರ ಆಳ್ವಿಕೆ ಆರಂಭವಾಗುವುದಕ್ಕಿಂತ ಮುಂಚೆ ಅನೇಕ ಅರಸುಮನೆತನಗಳಿಂದ ಈ ದೇಶದ ವಿವಿಧ ಭಾಗಗಳನ್ನು ತಮ್ಮದೇ ಆದ ರೀತಿಯಲ್ಲಿ ಆಳುತ್ತಿದ್ದರು. ಆದ್ದುದರಿಂದ ಯಾವುದೇ ಚಳುವಳಿಯು ಆರಂಭವಾದರೂ ಕೂಡ ಆ ಸಾಮ್ರಾಜ್ಯದ ಗಡಿಗೆ ಸೀಮಿತಾವಾಗಿದ್ದವೇ ಹೊರತು, ಅವು ಭಾರತದ ಉದ್ದಗಲಕ್ಕೂ ಆವರಿಸಿಕೊಂಡು ಏಕರೂಪತೆಯನ್ನು ಹೊಂದಲು ಅಸಾಧ್ಯವಾಗಿತ್ತು. ಹೀಗಾಗಿ ಮಹಿಳೆಯರು ತಮ್ಮ ಜೀವನದಲ್ಲಿ ಅನೇಕ ಏರು-ಪೇರುಗಳನ್ನು, ತೊಂದರೆಗಳನ್ನು ಎದುರಿಸುವ ಪರಿಸ್ಥಿತಿ

ಉಂಟಾಗಿತ್ತು, ಆದುದರಿಂದ ಮಹಿಳಾ ಚಳುವಳಿಯ ಆರಂಭದ ಕಾಲವನ್ನು ಬ್ರಿಟೀಷರ ಆಗಮನದ ನಂತರದಿಂದ ದಾಖಲು ಕಾಣಬಹುದಾಗಿದೆ.

ಬ್ರಿಟಿಷರು ಭಾರತಕ್ಕೆ ಆಗಮಿಸುವುದಕ್ಕಿಂತ ಮುಂಚೆ ಅಂದರೆ ವೇದಗಳ ಕಾಲದಿಂದ ಹಿಡಿದು ಕ್ರಿ.ಶ.೧೭ ಹಾಗೂ ೧೮ನೇ ಶತಮಾನದವರೆಗೆ ಮಹಿಳೆಯರ ಸ್ಥಾನಮಾನಗಳನ್ನು ಗಮನಿಸುತ್ತಾ ಬಂದಾಗ ಕಾಲದಿಂದ ಕಾಲಕ್ಕೆ ಏರು-ಪೇರು ಆಗಿರುವುದು ಕಂಡುಬರುತ್ತವೆ. ಉದಾ : ವೇದಗಳ ಕಾಲದಲ್ಲಿ ಮಹಿಳೆಯರಿಗೆ ಹೆಚ್ಚಿನ ಗೌರವ ದೊರೆತಿರುವುದು ಕಂಡುಬರುತ್ತವೆ. ಮತ್ತು ಸ್ತ್ರೀಪುರುಷರ ಮಧ್ಯೆ ಸಮಾನತೆಯನ್ನು ಕಾಣವುದರ ಜೊತೆಗೆ ತಂದೆಯ ಆಸ್ತಿಯಲ್ಲಿ ಸಹ ಸರಿಸಮಾನವಾದ ಹಕ್ಕುಗಳನ್ನು ಪಡೆಯುತ್ತಿದ್ದಳು. ಹಾಗೂ ಸರಿಸಮಾನವಾಗಿ ವೇದ ಉಪನಿಷತ್ತುಗಳನ್ನು ಪಠಿಸುವುದರ ಜೊತೆಗೆ ಯಜ್ಞ, ಯಾಗಾದಿಗಳಲ್ಲಿ ತಮ್ಮ ಪತಿಯರ ಸರಿಸಮಾನವಾಗಿ ತೊಡಗಿಕೊಳ್ಳುತ್ತಿದ್ದರು. ಕಾಲಕ್ರಮೇಣವಾಗಿ ಈ ಎಲ್ಲ ಸ್ಥಾನಮಾನಗಳು ಕುಗ್ಗುತ್ತಾ ಬಂದು ಕೇವಲ ಗೃಹಕೃತ್ಯಗಳನ್ನು ನೋಡಿಕೊಳ್ಳುವ ಹೊಣೆ ಹೆಂಗಸಿನದಾಗಿ ಉಳಿಯುತ್ತವೆ. ಇದರಿಂದ ಸ್ತ್ರೀಪುರುಷರ ಸ್ಥಾನಮಾನಗಳ ಅಂತರ ದಿನದಿಂದ ದಿನಕ್ಕೆ ಕುಗ್ಗುತ್ತಾ ಹೋಗುತ್ತವೆ. ಈ ವೇಳೆಗಾಗಲೇ ಪುರುಷ ಪ್ರಧಾನ ಕುಟುಂಬಗಳು ಆರಂಭವಾದ್ದರಿಂದ, ಹೆಂಗಸು ಯಾವುದೇ ವಿದ್ಯೆ ಕಲಿಯಲು ಅನರ್ಹಳೆಂದು ಮತ್ತು ಅವರ ಜೀವನದ ಉದ್ದಕ್ಕೂ ಪುರುಷರ ರಕ್ಷಣೆಯಲ್ಲೇ ಇರಬೇಕೆಂದು ಸ್ಮೃತಿಗಳು ವಿಧಿಸಿದ್ದಾರೆ. ಕ್ರಿ.ಶ.ದ ಆರಂಭದ ಹೊತ್ತಿಗೆ ಮಹಿಳೆಯರು ತಮ್ಮೆಲ್ಲ ಸ್ವಾತಂತ್ರ್ಯತೆಯನ್ನು ಕಳೆದುಕೊಂಡು ಪುರುಷನ ಅಧೀನಗಳಾಗುವ ಪರಿಸ್ಥಿತಿಯಲ್ಲಿ ಉಳಿದುಕೊಂಡಿದ್ದಳೂ. ಬ್ರಿಟೀಷರು ಭಾರತಕ್ಕೆ ಆಗಮಿಸಿದ್ದ ಕಾಲಕ್ಕೆ ಮಹಿಳೆಯರ ಸ್ಥಿತಿಗತಿಗಳು ಅತ್ಯಂತ ಶೋಚನೀಯ ಹಂತ ತಲುಪಿದ್ದವು.

ಪ್ರಾಚೀನ ಭಾರತದಲ್ಲಿ ಮಹಿಳೆಯರಿಗೆ ಗೌರವತೋರಿ, ಆಸ್ತಿಯ ಹಕ್ಕುಗಳನ್ನು ನೀಡಿ, ಸ್ತ್ರೀಯರನ್ನು ವಿನಾಕಾರಣ ಹಿಂಸಿಸುವ ಗಂಡಸರಿಗೆ ದಂಡನೆ ವಿಧಿಸಿದ ಪುರುಷರಾದ, ವೇದವ್ಯಾಸ ಹಾಗೂ ಅವರ ಶಿಷ್ಯರಾದ ಜೈನಮುನಿ ಋಷಿಗಳು, ಹಾಗೆಯೇ ಯಜ್ಞವಲ್ಕ್ಯ ಮತ್ತು ಪರಾಶರರೆಂಬ ಮುನಿಗಳು ಸಹ ಮಹಿಳೆಯರಿಗೆ ಸರಿಸಮಾನವಾದ ಸ್ಥಾನಗಳನ್ನು ಕಲ್ಪಿಸಿಕೊಡಲು ಸಹಕರಸಿದರು. ಆದರೆ ಮಧ್ಯಯುಗದಲ್ಲಿ ಸ್ತ್ರೀಯರ ಸ್ಥಾನಮಾನಗಳು ತುಂಬಾ ಹೀನಾಯ ಸ್ಥಿತಿಗೆ ತಲುಪಲು ಶುರುವಾಗಿದ್ದವು, ಅಂದರೆ ೧೭ ಹಾಗೂ ೧೮ನೇ ಶತಮಾನದಲ್ಲಿ ಪಿತೃ ಪ್ರಧಾನತೆ ತುಂಬಾ ಪ್ರಬಲಗೊಂಡಾಗ ಮಹಿಳೆಯರು ತುಂಬಾ ತೊಂದರೆಗಳಿಗೆ ತುತ್ತಾಗುವ ಪರಿಸ್ಥಿತಿ ಉಂಟಾಗಿತ್ತು, ಉದಾ : ಹೆಣ್ಣು ಶಿಶುಹತ್ಯೆ, ಬಾಲ್ಯ ವಿವಾಹ, ಸತಿ-ಸಹಗಮನ ಪದ್ಧತಿ, ದೇವದಾಸಿ ಪದ್ಧತಿ, ವಿಧವಾ ಆಚರಣೆ ವಿಧವಾ ವಿವಾಹ ನಿಷೇಧ, ಇನ್ನೂ ಮುಂತಾದ ಅನಿಷ್ಟ ಪದ್ಧತಿಗಳಿಂದ ಮಧ್ಯಯುಗದಲ್ಲಿ ಸ್ತ್ರೀಯರ ಜೀವನ ಅತಿದುರ್ಬಲವಾಗಿತ್ತು, ಇಂತಹ ಪರಿಸ್ಥಿತಿಯಲ್ಲಿ ಹುಟ್ಟಿಕೊಂಡ ಕೆಲವು ಸಮಾಜ ಸುಧಾರಕರು, ಮತ್ತು ಧಾರ್ಮಿಕ ಸುಧಾರಣಾವಾದಿಗಳು

ಮಹಿಳೆಯರ ಸ್ಥಿತಿಗತಿಗಳ ಸುಧಾರಣೆಗಾಗಿ ಶ್ರಮಿಸಿದರು. ಮಧ್ಯಕಾಲೀನ ಯುಗದಲ್ಲಿ ಇಷ್ಟೆಲ್ಲಾ ಅನಿಷ್ಟ ಪದ್ಧತಿಗಳು ಚಾಲ್ತಿಯಲ್ಲಿ ಇದ್ದರೂ ಸಹ ಬಹುಸಂಖ್ಯೆಯ ಮಹಿಳೆಯರು ತಮ್ಮ ಶಕ್ತಿಸಾಮಾರ್ಥ್ಯ, ಧೀಮಂತಿಕೆಯನ್ನು ಪ್ರದರ್ಶಿಸಿದ ಕುರುಹುಗಳು ಆಶ್ಚರ್ಯಕರವಾಗಿವೆ. ಉದಾ : ರಾಜ್ಯರಕ್ಷಣೆಗಾಗಿ ತಮ್ಮ ಪ್ರಾಣವನ್ನೇ ಮುಡುಪಾಗಿಟ್ಟ ವೀರಮಹಿಳೆಯರಾದ, ರಾಣಿ ಪದ್ಮಿನಿ, ಕಿತ್ತೂರು ಚೆನ್ನಾಮ್ಮಾಜಿ, ಝಾನ್ಸಿ ರಾಣಿ ಲಕ್ಷ್ಮೀಬಾಯಿ, ಇನ್ನು ಮೊದಲಾದ ಮಹಿಳೆಯರು ನಾಡಿನ ಪ್ರೇಮಕ್ಕಾಗಿ, ಸ್ವಾಭಿಮಾನವನ್ನು ಉಳಿಸಿಕೊಳ್ಳುವುದಕ್ಕಾಗಿ, ಹೋರಾಡಿರುವುದು ಕಂಡುಬರುತ್ತದೆ. ಹಾಗೆಯೇ ಮೀರಾಬಾಯಿ ಹಾಗೂ ಅಕ್ಕಮಹಾದೇವಿಯಂತಹ ಶಿವಶರಣೆಯರು ತಮ್ಮ ಗಂಡಂದಿರ ದಬ್ಬಾಳಿಕೆಯನ್ನು ವಿರೋಧಿಸಿ ಮನೆಯಿಂದ ಹೊರಗೆ ಬಂದ ನಿದರ್ಶನಗಳು ಮಾನವಕುಲಕ್ಕೆ ಪ್ರತಿನಿಧಿಯಾಗಿವೆ.

ಬ್ರಿಟಿಷ್ ವಸಾಹತುಶಾಹಿಗಳು ಭಾರತದಲ್ಲಿ ಆಳ್ವಿಕೆಯನ್ನು ಪ್ರಾರಂಭಿಸಿದಾಗ ಅಲ್ಲಿನ ಸಾಮಾಜಿಕ ಸ್ಥಾನಮಾನಗಳಲ್ಲಿ ಕೆಲವು ಪಲ್ಲಟಗೊಂಡವು. ಅಂದರೆ ಭಾರತದಲ್ಲಿ ಸ್ತ್ರೀಪುರುಷರ ಮಧ್ಯೆ ಇರುವ ಅಸಮಾನತೆ, ಭಿನ್ನಾಭಿಪ್ರಾಯಗಳು, ಶಿಕ್ಷಣ ಪಡೆಯುವಲ್ಲಿನ ವ್ಯತ್ಯಾಸ, ಇನ್ನೂ ಮುಂತಾದ ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ಗಮನಿಸಿದ ಪರಕೀಯರು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಇಲ್ಲಿನ ಸ್ತ್ರೀ-ಪುರುಷರ ಮಧ್ಯೆ ಬೇಧಭಾವ ಮೂಡುವಂತೆ ಮಾಡಿ ಅವರವರಲ್ಲೆ ಮನಸ್ತಾಪ, ಮೈಮನಸ್ಸು ಬೆಳೆಯುವಂತೆ ಮಾಡುವ ಮುಖಾಂತರ ಸ್ವಾತಂತ್ರ್ಯ ಸಂಗ್ರಾಮದಲ್ಲಿ ದೌರ್ಬಲ್ಯವನ್ನು ತುಂಬುವ ಯೋಚನೆ ಮಾಡಿದರು.

ಭಾರತದಲ್ಲಿ ಮಹಿಳೆಯರನ್ನು ತುಂಬಾ ಶೋಷಣೆ ಮಾಡುತ್ತಿದ್ದಾರೆ ಎಂದು ಸಾರುತ್ತಾ ಇಲ್ಲಿನ ಸ್ತ್ರೀ-ಪುರುಷರ ಮನಸ್ಸು ಬದಲಾಯಿಸುವುದಕ್ಕಾಗಿ ಸಂಪ್ರದಾಯಿಕವಾಗಿ ಬೆಳೆದುಕೊಂಡು ಬಂದಂತಹ ಅನಿಷ್ಟ ಪದ್ಧತಿಗಳಾದ ಸತಿಪದ್ಧತಿ, ಪರದಾ ಪದ್ಧತಿ, ಕೇಶಮುಂಡನೆ, ವೈಧವ್ಯ, ಬಾಲ್ಯವಿವಾಹ, ಇವೆಲ್ಲವು ವಿವಾಹದ ಸುತ್ತಮುತ್ತಲು ಆವರಿಸಿಕೊಂಡ ಅಂಶಗಳಾಗಿವೆ. ಈ ಅಂಶಗಳ ಬಗ್ಗೆ ಸ್ವಲ್ಪ ಗಮನಹರಿಸಿದ ಆಂಗ್ಲರು ಇಲ್ಲಿನ ಪುರುಷ ಪ್ರಧಾನರು ಮಹಿಳೆಯರನ್ನು ಅತಿಕೀಳು ದೃಷ್ಟಿಯಿಂದ ಕಾಣುತ್ತಿದ್ದಾರೆ. ಮತ್ತು ಆಕೆಗೆ ಸಂಬಂಧ ಪಡೆದ ಎಲ್ಲಾ ಸಾಮಾಜಿಕ ಅಂಶಗಳನ್ನು ಮಹಿಳೆಯ ಮೇಲೆ ಎಸಗುತ್ತಾರೆ. ಆದ್ದರಿಂದ ಮಹಿಳೆಯರಿಗೆ ಅನ್ಯಾಯವಾಗುತ್ತೀವೆ ಎಂದು, ಮತ್ತು ಅವರನ್ನು ಕ್ರೂರವಾಗಿ ನೋಡಿಕೊಳ್ಳುತ್ತಿದ್ದಾರೆ ಎಂದು ಇಲ್ಲಿನ ತಾರತಮ್ಯದ ಭಾವನೆಯನ್ನು ಎತ್ತಿತೋರುತ್ತಾರೆ.

ಬ್ರಿಟಿಷರು ತಮ್ಮ ಆಡಳಿತವನ್ನು ಸುಲಭರೀತಿಯಲ್ಲಿ ನಡೆಸಲು ಮತ್ತು ಅಲ್ಲಿನ ಸಾಮಾಜಿಕ ಸಮಸ್ಯೆಗಳನ್ನು ತಿಳಿದುಕೊಳ್ಳುವುದಕ್ಕಾಗಿ ತಮ್ಮ ಸುತ್ತಮುತ್ತಲಿನ ಪಂಡಿತರಿಗೆ ಮತ್ತು ಶ್ರೀಮಂತ ಮೇಲ್ವರ್ಗದ ಮಹಿಳೆಯರಿಗೆ ಸಹ ಇಂಗ್ಲೀಷ್ ಶಿಕ್ಷಣವನ್ನು ನೀಡುತ್ತಾ ಇಲ್ಲಿನ ಸಮಸ್ಯೆಗಳನ್ನು ಕೆದಕಲು

ಶುರುಮಾಡಿದರು. ಇಂಗ್ಲೀಷ್ ಶಿಕ್ಷಣಕ್ಕೆ ಮನಸೋತ ಶ್ರೀಮಂತ ವರ್ಗದ ಸ್ತ್ರೀಯರು ಮತ್ತು ಪುರೋಹಿತ ವರ್ಗದ ಗಂಡಸರು ಸಹ ವಿವಾಹ ಸುತ್ತಮುತ್ತಲಿರುವ ಅನಿಷ್ಟ ಪದ್ಧತಿಗಳು ಬಹುಕ್ರೂರವಾಗಿವೆ ಎಂದು ತಿಳಿದ ಸ್ತ್ರೀ-ಪುರುಷರು ಸುಧಾರಣಾವಾದ ಚಳುವಳಿಯನ್ನು ಹಮ್ಮಿಕೊಳ್ಳುತ್ತಾರೆ. ಇವುಗಳಿಂದ ಮಹಿಳೆಯರನ್ನು ಮುಕ್ತಿಗೊಳಿಸಬೇಕಾದರೆ, ಮಹಿಳೆಯರು ಶಿಕ್ಷಣವನ್ನು ಪಡೆಯಬೇಕು, ಉದ್ಯೋಗ ಪಡೆಯಬೇಕು ಮತ್ತು ಮನೆಯಿಂದ ಹೊರಗೆ ಬಂದು ಹೊರಗಿನ ಪ್ರಪಂಚದ ಜ್ಞಾನ ಸ್ತ್ರೀಯರಿಗೆ ದೊರೆಯಬೇಕು ಅಂದಾಗ ಮಾತ್ರ ಮಹಿಳೆ ಸ್ವತಂತ್ರಳಾಗಿ ಬದುಕಲು ಸಾಧ್ಯ.

ಕ್ರಿ.ಶ.೧೭ ಹಾಗೂ ೧೮ನೇ ಶತಮಾನದಲ್ಲಿ ಸುಧಾರಣಾವಾದಿ ಚಳುವಳಿಗಳು ಹುಟ್ಟಿಕೊಳ್ಳಲು ಪ್ರಾರಂಭವಾದವು. ಅಂದು ಮಹಿಳೆಯರ ಮೇಲೆ ಹೇರಿದ ಬಹು ಅನಿಷ್ಟ ಪದ್ಧತಿಗಳನ್ನು ಹೋಗಲಾಡಿಸಲು ಮತ್ತು ಮಹಿಳೆಯರಿಗೆ ಸರಿಸಮಾನವಾಗಿ ಹಕ್ಕುಗಳನ್ನು ದೊರಕಿಸಿಕೊಡಲು, ಶಿಕ್ಷಣದ ಅವಕಾಶಗಳನ್ನು ಕಲ್ಪಿಸಿಕೊಳ್ಳಲು ಸುಧಾರಣಾವಾಧಿ ಚಳುವಳಿಗಳಲ್ಲಿ ಮಹಿಳೆಯರು ಕೂಡಾ ಭಾಗವಹಿಸಿದ್ದರು. ಮನೆಯಿಂದ ಹೊರಗೆ ಬಂದು ಚಳುವಳಿಯಲ್ಲಿ ಭಾಗವಹಿಸಿದವರು ಕೇವಲ ಮೇಲ್ವರ್ಗದ ಮಹಿಳೆಯರು ಮಾತ್ರ ಭಾಗವಹಿಸಿದ್ದರು, ಏಕೆಂದರೆ ಕೆಳವರ್ಗದ ಮಹಿಳೆಯರಿಗೆ ಮನೆಯಿಂದ ಹೊರಗೆ ಬರುವ ಸಂದರ್ಭಗಳೇ ಸೃಷ್ಟಿಯಾಗಿರಲಿಲ್ಲ. ಅಥವಾ ಅವಕಾಶಗಳೇ ದೊರೆತಿರಲಿಲ್ಲ, ಆದುದರಿಂದ ಸುಧಾರಣಾವಾದ ಚಳುವಳಿಯನ್ನು ಸೃಷ್ಟಿಸಿದವರು ಮೇಲ್ವರ್ಗ ಮತ್ತು ಮಧ್ಯಮ ವರ್ಗದ ಶಿಕ್ಷಿತ ಮಹಿಳೆಯರೇ ಆಗಿದ್ದಾರೆ. ಇವರು ಪುರುಷ ಪ್ರಭುತ್ವದ ಎದುರುನಿಂತು, ಎಲ್ಲಾ ಹೆಂಗಸರಿಗೆ ಶಿಕ್ಷಣ ಬೇಕು ಎಂದು ಕೇಳಿದರು. ಆದರೆ ಅವರು ಉದ್ಯೋಗ ಪಡೆದುಕೊಳ್ಳುವಂತಹ ಶಿಕ್ಷಣ ಬೇಡದೆ, ಒಳ್ಳೆಯ ಗೃಹಿಣಿ, ಒಳ್ಳೆಯ ಸೇವಕಿ, ಒಳ್ಳೆಯ ತಾಯಿಂದಿರಾಗಿ ಇರುವಂತಹ ಶಿಕ್ಷಣಬೇಕೆಂದು ಕೇಳಿದರೆ ಹೊರತು, ಪುರುಷನು ತೆಗೆದುಕೊಳ್ಳುವಂತ ಶಿಕ್ಷಣದ ಬಗ್ಗೆ ಅವರಿಗೆ ಅರಿವೇ ಇರಲಿಲ್ಲ. ಅಥವಾ ಇಂತಹ ಶಿಕ್ಷಣ ಸಹ ಕೇಳಿರಲಿಲ್ಲ. ಏಕೆಂದರೆ ಸುಧಾರಣಾ ಚಳುವಳಿಗಳಲ್ಲಿ ಕಟ್ಟಿಕೊಟ್ಟಂತಹ ಚಿಂತನೆಗಳು ಪುರುಷ ಪ್ರಧಾನವಾಗಿದ್ದರಿಂದ ಸ್ತ್ರೀ ಚಿಂತನೆಗಳು ಸಹ ಪುರುಷರ ಶ್ರೇಯಸ್ಸು ಬಯಸುವಂತವುಗಳಾಗಿದ್ದವು. ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಶಿಕ್ಷಣ ಪಡೆದುಕೊಂಡು ಮತ್ತು ಸಾಕಷ್ಟು ಜನ ಬೆಂಬಲ ಇರುವ ಮಹಿಳೆಯರು ಸಂಘಟಿತರಾಗಿ ಮಹಿಳೆ ಹಕ್ಕುಗಳಿಗಾಗಿ ಹೋರಾಡಲು ಸಂಘಸಂಸ್ಥೆಗಳನ್ನು ಪ್ರಾರಂಭಿಸಿಕೊಂಡರು. ಇಲ್ಲಿ ಬ್ರಿಟಿಷ ಚಿಂತನೆಗಳು ಸಹ ಸುಧಾರಣಾವಾದ ಪುರುಷ ಚಿಂತನೆಯ ಅನುಕರಣೆ ಅಗಿರುವುದರಿಂದ, ಇಲ್ಲಿಯೂ ಸಹ ಮಹಿಳೆಯರು ಕೇಳುವ ಮತ್ತು ಕೋರುವ ಹಂತದಲ್ಲಿಯೇ ಉಳಿದುಕೊಂಡಿದ್ದರು.

ಸಮಾಜ ಸುಧಾರಣಾವಾದಿಗಳಾದ, ರಾಜರಾಮ್ ಮೋಹನ್ ರಾಯ್, ಈಶ್ವರ ಚಂದ್ರವಿದ್ಯಾಸಾಗರ್, ಮಹರ್ಷಿಕರ್ವೆ, ವಿರೇಶಲಿಂಗಂ ಪಂತುಲು, ಇವರು ಸಾಮಾಜಿಕ ಅನಿಷ್ಟ ಪದ್ಧತಿಗಳನ್ನು ನಿಷೇಧಿಸಲು,

ಅಥವಾ ಸಮಸ್ಯೆಗಳಿಗೆ ಪರಿಹಾರವನ್ನು ಕಂಡುಕೊಳ್ಳುವಾಗ ಬ್ರಿಟಿಷ್ ಪ್ರಭುತ್ವದ ಜೊತೆಗೆ ತಮ್ಮ ಅಹವಾಲುಗಳನ್ನು ಹೇಗೆ ಹೇಳಿಕೊಳ್ಳುತ್ತಿದ್ದರೋ, ಹಾಗೆಯೇ ಮಹಿಳಾ ಚಳುವಳಿಯ ನಾಯಕೀಯರು ಎನಿಸಿಕೊಂಡ ರಮಾಬಾಯಿ ರಾನಡೆ, ಸರೋಜ್ ನಳಿನಿ, ಸರೋಜಿನಿ ನಾಯ್ಡು, ಸರಳಾದೇವಿ ಚೌಧುರಾಣಿ, ರಾಜ್ ಕುಮಾರಿ ಅಮೃತಕೌರ್ ಇನ್ನು ಇತರ ಬೇರೆ ಬೇರೆ ಸಂಘಗಳನ್ನು ಕಟ್ಟಿದ ಮಹಿಳಾ ನಾಯಕೀಯರು ಸಹ ಮಹಿಳೆಯರ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದರೆ ತಮ್ಮ ಅಹವಾಲುಗಳನ್ನು ಪ್ರಭುತ್ವದ ಜೊತೆ ಪ್ರಸ್ಥಾಪಿಸುತ್ತಿದ್ದವು. ಈ ಸಂದರ್ಭದಲ್ಲಿ ಅಹವಾಲುಗಳನ್ನು ಪರಿಹರಿಸಬೇಕಾದರೆ, ಆಂಗ್ಲರು ಒಂದು ಸಮಿತಿಯನ್ನು ರಚಿಸಿಕೊಂಡು ಮಹಿಳೇಯರು ಸಲ್ಲಿಸಿದ ಅಹವಾಲುಗಳನ್ನು ಪರಿಶೀಲಿಸಿ ವರದಿ ಸಲ್ಲಿಸಿದ ನಂತರ ಅವುಗಳನ್ನು ಪರಿಗಣಿಸುತ್ತಿದ್ದರು.

ಭಾರತದಲ್ಲಿ ಮಹಿಳಾ ಚಳುವಳಿಗಳು ಆರಂಭಗೊಂಡಾಗ, ಪ್ರಥಮವಾಗಿ ಪುರುಷರ ಶೋಷಣೆಯ ವಿರುದ್ಧವಾಗಿ ಮಹಿಳೆಯರು ಹೋರಾಡಿ ತಮ್ಮ ಆತ್ಮಗೌರವವನ್ನು ಉಳಿಸಿಕೊಳ್ಳುವಲ್ಲಿ, ಜಾಗೃತಳಾಗಬೇಕಿತ್ತು. ಪುರುಷ ದಬ್ಬಾಳಿಕೆ ಎನ್ನುವುದು ಸ್ತ್ರೀಶೋಷಣೆ ವ್ಯವಸ್ಥೆಯ ಅಂಗವಾಗಿದೆ. ಈ ವ್ಯವಸ್ಥೆಯ ವಿರುದ್ಧ ಹೋರಾಟಗಳನ್ನು ಹಮ್ಮಿಕೊಂಡಿದ್ದರು. ಎಲ್ಲಾ ಮಹಿಳಾ ಚಳುವಳಿಗಳ ಸಹಕಾರದಿಂದ ಶೋಷಣೆಯ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಿ ಸಾಧಿಸಬೇಕಾಗಿತ್ತು. ಅಂದಾಗ ಮಾತ್ರ ವೈಯಕ್ತಿಕ ಮಟ್ಟದಲ್ಲಿ ಸ್ತ್ರೀಯರಿಗೆ ಸುಖದುಃಖಗಳ ಅನುಭವವಾಗುತ್ತದೆ. ಪಾಶ್ಚಾತ್ಯ ಮಹಿಳಾ ಚಳುವಳಿಯಿಂದ, ಅವರ ಲೇಖನಗಳಿಂದ ಮತ್ತು ಅವರ ಅನುಭವಗಳಿಂದ, ಭಾರತೀಯ ಮಹಿಳಾ ಚಳುವಳಿಗೆ ಇನ್ನಷ್ಟು ಹುಮ್ಮಸುಗೊಂಡು ಆತ್ಮವಿಶ್ವಾಸಗಳಿಂದ ಪ್ರಾರಂಭವಾದವು. ಪಾಶ್ಚತ್ಯ ಚಳುವಳಿಯ ವಿವಿಧತೆಯ ಪುನರಾವೃತ್ತಿಯು ಇಲ್ಲಿಯೂ ನಡೆಯುತ್ತಿದ್ದವು. ಮೊದಲಿಗೆ ವಿದ್ಯಾರ್ಥಿನಿಯರ ಚಳುವಳಿಗಳು ಆರಂಭ ಗೊಂಡವು. 'ನಕ್ಸಲವಾದಿ'ಯರಂಥ ಉಗ್ರಗಾಮಿಗಳು, ಎಡಪಂಥೀಯರ ಪ್ರವೇಶವೂ ಈ ಚಳುವಳಿಗಳಲ್ಲಿ ಆದವು. ಕಾರ್ಮಿಕರು, ರೈತರು, ವ್ಯವಸಾಯದಲ್ಲಿ ತೊಡಗಿದ ಶ್ರಮಿಕರು, ಇವರೊಡನೆ ಸಂಘಟಿತ ವಿದ್ಯಾರ್ಥಿನಿಯರ ಸಂಪರ್ಕ ಬೆಳೆಯಿತು. ಎಡಪಂಥೀಯ ಸಂಸ್ಥೆಗಳ ಅಂತರ್ಗತ ಮತ್ತು ಪುರುಷ ದಬ್ಬಾಳಿಕೆಯ ಅನುಭವವೂ ಸ್ತ್ರೀಯರಿಗೆ ಆಗಿತ್ತು. ಆದ್ದರಿಂದ ಅವರಲ್ಲಿ ಅಸ್ತಿತ್ವದ ಕಲ್ಪನೆಯೂ ಜಾಗೃತಗೊಂಡಿತ್ತು. ಹೀಗಾಗಿ ಅವರು ಎಡಪಂಥೀಯ ಅಂತರ್ಗತವಾಗಿ ಸ್ತ್ರೀಯರು ಮಹಿಳಾ ಸಂಘಟನೆಗಳನ್ನು ಸ್ಥಾಪಿಸಿ, ಚಳುವಳಿಗಳನ್ನು ಮಾಡಲು ಶುರುಮಾಡಿಕೊಂಡರು.

ಸ್ವಾತಂತ್ರ್ಯ ಹೋರಾಟದಲ್ಲಿ ಕೇವಲ ಶಿಕ್ಷಿತ ಮೇಲ್ವರ್ಗ ಮತ್ತು ಮಧ್ಯಮವರ್ಗದ ಮಹಿಳೆಯರು ಮಾತ್ರ ಭಾಗವಹಿಸಿದ್ದರು ಎನ್ನುವುದು ಸಮಂಜಸವಲ್ಲ, ಏಕೆಂದರೆ ಅಂದು ದೇಶದಲ್ಲಿ ನಡೆದ ಹಲವಾರು ಸಾಮಾಜಿಕ, ಆರ್ಥಿಕ ಹಾಗೂ ಊಳಿಗಮಾನ್ಯ ಸಂಸ್ಕೃತಿಯ ಹಲವಾರು ದಮನದ ನೆಲೆಗಳ ವಿರುದ್ಧದ

ಹೋರಾಟಗಳಲ್ಲಿ ಗ್ರಾಮೀಣ ಮಹಿಳೆಯರು ಭಾಗವಹಿಸಿರುವುದು ಕಂಡುಬರುತ್ತವೆ. ಇಂತಹ ಹೋರಾಟಗಳಲ್ಲಿ ಮಹಿಳೆಯರು ಭಾಗವಹಿಸಿರುವುದು ಕೇವಲ ತೋರಿಕೆಗಾಗಿ ಮಾತ್ರವಲ್ಲ, ಇವು ಇಂದಿನ ಮಹಿಳಾ ಚಳುವಳಿಗಳಿಗೆ ಹಲವಾರು ಪಾಠಗಳನ್ನು ಕಲಿಸುವಂತಹುಗಳಾಗಿವೆ. ಅವುಗಳೆಂದರೆ, ಔಧ್ ಚಳುವಳಿ, ಬಂಗಾಲದ ತೇಬಾಗ್ ಚಳುವಳಿ, ಕೇರಳಾದ ಪುನ್ನಪ್ಪವಯಲಾರ್ ಹೋರಾಟ, ತೆಲಂಗಾಣ ಮಹಿಳಾ ಹೋರಾಟ, ಮಹಾರಾಷ್ಟ್ರದ ವರ್ಲಿ ಆದಿವಾಸಿಗಳ ಹೋರಾಟ ಇನ್ನು ಮುಂತದವುಗಳು ಈ ಸಂದರ್ಭದಲ್ಲಿ ಕಂಡುಬರುತ್ತವೆ.

ಔಧ್ ಚಳುವಳಿ

೧೯೨೦-೨೧ ಮತ್ತು ೧೯೩೦-೩೧ರಲ್ಲಿ ಔಧ್‌ನಲ್ಲಿ ನಡೆದ ಎರಡು ಚಳುವಳಿಗಳು ಮುಖ್ಯವಾಗಿ ಅಲ್ಲಿನ 'ಯಜಮಾನ' ಪದ್ಧತಿಯ ವಿರುದ್ಧ ನಡೆದ ಹೋರಾಟಗಳಾಗಿದ್ದವು. ಈ ಪ್ರಾಂತ್ಯದ ಕೃಷಿಕರು ದುಭಾರಿ ತೆರಿಗೆ, ಒತ್ತಾಯದ ದುಡಿಮೆ ಮತ್ತು ಮಿತಿಮೀರಿದ ಬಾಡಿಗೆ ಈ ಎಲ್ಲವುಗಳನ್ನು ನಿಭಾಯಿಸಲಾರದೆ, ಬಡಜನರು ಕಂಗಲಾಗಿ ನರಳುತ್ತಿದ್ದರು. ಈ ಸಂದರ್ಭದಲ್ಲಿ ಪ್ರಾಂತ್ಯದ ನಾಯಕನಾದ, ರಾಮಚಂದ್ರ ಇವರ ಸಮ್ಮುಖದಲ್ಲಿ ಎಲ್ಲ ಶೋಷಿತ, ಕೆಳವರ್ಗದ ಸ್ತ್ರೀ ಪುರುಷರೆಲ್ಲರೂ ಸೇರಿ 'ಯಜಮಾನಿಕೆ'ಯನ್ನು ಮುಕ್ತಗೊಳಿಸಲು ಮತ್ತು ಮಿತಿಮೀರಿದ ತೆರಿಗೆ ಹಾಗೂ ಬಾಡಿಗೆಗಳನ್ನು ರದ್ದುಗೊಳಿಸಲು ಹೋರಾಟಗಳನ್ನು ಮಾಡಿದರು. ಇವುಗಳಲ್ಲಿ ಪುರುಷರಿಗಿಂತ ಸ್ತ್ರೀಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿದ್ದರು. "ಕಿಸಾನ್ ಸಭೆಗಳಲ್ಲಿ ಔಧ್‌ನ ಮಹಿಳೆಯರು ಸ್ವತಃ ಕ್ರಿಯಾಶೀಲರಾಗಿದ್ದಷ್ಟೇ ಅಲ್ಲ, ಕಿಸಾನ್‌ರು ಸಾಮಾನ್ಯ ಸಭೆಗಳಲ್ಲಿ ಕೂಡ ಭಾಗವಹಿಸುತ್ತಿದ್ದರು."[೩]

ಬಂಗಾಲದ ತೇಭಾಗ್ ಚಳುವಳಿ

ಮಾನವ ನಿರ್ಮಿತ ಸಮಾಜದಲ್ಲಿ ೧೯೪೩ರಲ್ಲಿ ನಿಸರ್ಗ ವಿಕೋಪದ ಏರುಪೇರಿನಿಂದ ಬಂಗಾಲದಲ್ಲಿ ಮಹಾಕ್ಷಾಮ ಅತಿಭೀಕರವಾಗಿ ಹರಡಿಕೊಂಡಿತ್ತು, ಮಹಾಕ್ಷಾಮದಿಂದ ಬಂಗಾಲದ ಬಡರೈತರ ಜೀವನ ತಲ್ಲಣಗೊಂಡಿತ್ತು. ಈ ಸಂದರ್ಭದಲ್ಲಿ ಜನರು ತಮ್ಮ ಉಳಿವಿಗಾಗಿ ಕೈಗೊಂಡ ಹೋರಾಟವಾಗಿದೆ. ಬಂಗಾಲದ ಬಡರೈತರು ತಾವು ಬೆಳೆದಂತ ಫಸಲಿನಲ್ಲಿ ೧/೨ರಷ್ಟು ಭಾಗವನ್ನು ಗೇಣಿರೂಪದಲ್ಲಿ ಜಮೀನುದಾರರಿಗೆ ಒಪ್ಪಿಸಬೇಕಾಗಿತ್ತು. ಮಹಾಕ್ಷಾಮದಿಂದ ತತ್ತರಿಸಿದ ರೈತಾಪಿ ವರ್ಗ ಜಮೀನುದಾರರ ವಿರುದ್ಧ ಪ್ರತಿಭಟಿಸಿ, ತಾವು ಬೆಳೆದ ಫಸಲಿನಲ್ಲಿ ೧/೩ರಷ್ಟು ಮಾತ್ರ ಭೂಮಾಲಿಕರಿಗೆ ಸೇರಬೇಕಾಗಿದ್ದು, ಇನ್ನುಳಿದ ಫಸಲು ರೈತರಿಗೆ ಸಂಬಂಧಿಸಿದ್ದು ಎನ್ನುವ ನಿರ್ಧಾರಕ್ಕೆ ಬಂದರು. ಜಮೀನುದಾರರು ಸಂಗ್ರಹಿಸಿದ ಆಹಾರದ ಧಾನ್ಯಗಳನ್ನು ಕ್ಷಾಮಕ್ಕೆ ತುತ್ತಾದ ಬಡರೈತರಿಗೆ ನೀಡದೆ ಅವುಗಳನ್ನು

ಉಗ್ರಾಣದಲ್ಲಿ ದಾಸುತ್ತಿದ್ದರು/ಸಂಗ್ರಹಿಸುತ್ತಿದ್ದರು. ಮಹಾಕ್ಷಾಮಕ್ಕೆ ತುತ್ತಾದ ಪರಿಸ್ಥಿತಿಯಲ್ಲಿ ಕೆಲಸಕ್ಕೆ ಹೋದ ಬಡಜನರಿಗೆ, ಕೂಲಿಯಾಳುಗಳಿಗೆ ಅತ್ಯಲ್ಪ ಪ್ರಮಾಣದ ಭತ್ತವನ್ನು ಕೂಲಿರೂಪದಲ್ಲಿ ಕೊಡುತ್ತಿದ್ದರು. ಹೀಗಾಗಿ ಸಾಯುವಂತ ಪರಿಸ್ಥಿತಿಗೆ ತಲುಪಿದ ರೈತಾಪಿ ವರ್ಗದ ಹೆಂಗಸರು, ಗಂಡಸರು ಹಾಗು ಮಕ್ಕಳು ಸೇರಿಕೊಂಡು ಜಮೀನ್ದಾರಿ ಪದ್ಧತಿಯ ವಿರುದ್ಧ ಹೋರಾಟವನ್ನು ಮಾಡಿದರು. ಈ ಸಮಯದಲ್ಲಿ ಬಂಗಾಲದ ಕಿಸಾನ್ ಸಭಾ ಹಾಗೂ ಕಮುನಿಷ್ಟ್ ಪಕ್ಷಗಳು ಕೂಡ ರೈತರ ಬೆಂಬಲಕ್ಕೆ ನಿಂತವು. ಭೂಮಾಲೀಕರಿಗೆ ಸಲ್ಲಬೇಕಾದ ⅔ ಫಸಲನ್ನು ವಸೂಲಿ ಮಾಡಲು ಬರುತ್ತಿದ್ದ ಪೋಲಿಸ್ ರನ್ನು ಗ್ರಾಮದ ಮಹಿಳೆಯರು ಒಂದಾಗಿ ತಮ್ಮ ಮನೆಯಲ್ಲಿದ್ದ ಕುಡಗೋಲು, ಕೊಡಲಿ, ಪೊರಕೆಗಳನ್ನು ಕೈಯಲ್ಲಿ ಹಿಡಿದು, ಹಾಗೆಯೇ ಕಾರದ ಪುಡಿಯನ್ನು ತಂದ ಮಹಿಳೆಯರು, ಪೋಲಿಸರ ಕಣ್ಣುಗಳಿಗೆ ಕಾರದ ಪುಡಿ ಎರಚಿ ಅವರ ವಿರುದ್ಧ ಪ್ರತಿಧಾಳಿಯನ್ನು ಮಾಡಿ, ಭೂಮಾಲೀಕರ ಪರವಾಗಿ ಬಂದ ಪೊಲೀಸ್ ರನ್ನು ಗ್ರಾಮದ ಒಳಗೆ ಪ್ರವೇಶಿಸದಂತೆ ಮಾಡಿದ ಸಾಹಸಮಯ ಬಂಗಾಲದ ರೈತಾಪಿ ಮಹಿಳೆಯರಲ್ಲಿ ಕಂಡುಬಂದಿತ್ತು.

ಕೇರಳದ ಪುನ್ನಪ್ಪ ವಯಲಾರ್ ಹೋರಾಟ

ಕೇರಳದ ಪ್ರಮುಖ ಉತ್ಪನ್ನವಾಗಿದ್ದ ತೆಂಗಿನ ನಾರಿನ ಉಧ್ಯಮದ ಕಾರ್ಮಿಕರು ೧೯೪೬ರ ಅಕ್ಟೋಬರ್ ೧೭ರಂದು ತಿರುವಾಂಕುರ್‌ನ ರಾಜಮನೆತನದ ವಿರುದ್ಧ ಮತ್ತು ಅಲ್ಲಿನ ದಿವಾನರಾಗಿದ್ದ, ಸಿ.ಪಿ.ರಾಮಸ್ವಾಮಿ ಅಯ್ಯರ್ ಅವರ ಅರಸೊತ್ತಿಗೆಯ ನಿರಂಕುಶತ್ವವನ್ನು ಕೊನೆಗಾಣಿಸುವುದಕ್ಕಾಗಿ ಮುಷ್ಕರವನ್ನು ಹೂಡಿದರು. ಈ ಹೋರಾಟದಲ್ಲಿ ಕೇರಳದ ಮಹಿಳೆಯರೆಲ್ಲ ಬಹುಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು. ಕಾರ್ಮಿಕರ ಮುಷ್ಕರವನ್ನು ಹತ್ತಿಕ್ಕಲು ಪೊಲೀಸ್ ಹಾಗೂ ಗುಂಡಾಗಳನ್ನು ದಿವಾನರು ಬಳಸಿಕೊಂಡಿದ್ದರು, ಆದರೂ ಕೂಡ ಸಂಘಟಿತ ಕಾರ್ಮಿಕರನ್ನು ಮೂಲೆ ಗುಂಪು ಮಾಡುವಲ್ಲಿ ವಿಫಲರಾದರು. ಕೊನೆಗೆ ಸಿ.ಪಿ.ರಾಮಸ್ವಾಮಿ ಅಯ್ಯರ್ ಅವರು ಸೈನಿಕರ ಒಂದು ದಂಡನ್ನು ಕಳುಹಿಸಿ ಮುಷ್ಕರ ಹೂಡಿದ ಕಾರ್ಮಿಕರಿಗೆ ಬೆದರಿಕೆ ಒಡ್ಡಿದಾಗ ೧೯೪೬ರ ಅಕ್ಟೋಬರ್ ೨೨ರಂದು ಕಾರ್ಮಿಕರ ಪರವಾಗಿ ಹಡಗಿನ ಕಾರ್ಮಿಕರು, ನಂತರ ರಬ್ಬರ, ತೈಲ, ಬಟ್ಟೆ, ಕೈಗಾರಿಕಾ ಕಾರ್ಮಿಕರು ಸಹ ಮುಷ್ಕರಕ್ಕೆ ಇಳಿದರು. ಅತಿರಭಸದಿಂದ ನಡೆಯುತ್ತಿದ್ದ ಕಾರ್ಮಿಕರ ಹೋರಾಟಗಳನ್ನು ಅಥವಾ ಮುಷ್ಕರಗಳನ್ನು ಅತ್ತಿಕ್ಕುವುದಕ್ಕಾಗಿ ದಿವಾನರು, ಪೊಲೀಸ್ ಸೇನೆಯನ್ನು ಬಳಸಿಕೊಂಡಾಗ, ಸೈನಿಕರು ಹಾದಿ ಬೀದಿಯಲ್ಲಿರುವ ಎಲ್ಲಾ ಜನರನ್ನು ಸದೆಬಡಿದರು. ಮನೆಗಳಿಗೆ ನುಗ್ಗಿ ಲೂಟಿಮಾಡುತ್ತಾ ಕೈಗೆ ಸಿಕ್ಕ ಹೆಂಗಸರ ಮೇಲೆ ಲೈಂಗಿಕ ಅತ್ಯಾಚಾರ ಮಾಡುವ ಪರಿಸ್ಥಿತಿ ಸಹ ಅಲ್ಲಿ ಉಂಟಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರು ಮೊದಲುಗೊಂಡು ತಮ್ಮ ಮನೆಗಳಲ್ಲಿ ಇರುವ ಗುದ್ದಲಿ, ಹಾರೆ ಇನ್ನು ಮುಂತಾದ ಸಲಕರಣೆಗಳಿಂದಲೇ ಸೈನಿಕರ ವಿರುದ್ಧ ಹೋರಾಡಿ ಜಯ ಸಾಧಿಸಿದರು.

ತೆಲಂಗಾಣ ಮಹಿಳಾ ಹೋರಾಟ

ಬ್ರಿಟಿಷ್ ಆಳ್ವಿಕೆಯ ಸಂದರ್ಭದಲ್ಲಿ ಅರಸೊತ್ತಿಗೆಯ ಸಂಸ್ಥಾನಗಳಲ್ಲಿ ಒಂದಾದ ಹೈದರಾಬಾದ್ ಸಂಸ್ಥಾನವು ಅತ್ಯಂತ ವಿಸ್ತಾರವಾಗಿತ್ತು. ಇಲ್ಲಿ ನಿಜಾಮನ ಆಡಳಿತವು ನಿರಂಕುಶತ್ವ ಹೊಂದಿದ್ದರಿಂದ ತಮ್ಮದೇ ಆದ ನ್ಯಾಯ ಹಾಗೂ ದಂಡನೆಯ ವ್ಯವಸ್ಥೆ ಹೊಂದಿದ್ದರಿಂದ, ಭೂಮಾಲಿಕ ಅಡಿಯಾಳುಗಳಾಗಿ ಶೇಕಡ ೬೦ರಷ್ಟು ಪ್ರಜೆಗಳು ಜೀವಿಸುತ್ತಿದ್ದರು. ಬಡತನಕ್ಕೆ ಸಿಲುಕಿದ ಆಳುಮಕ್ಕಳ ಮದುವೆಯಾದರೆ ಮೊದಲರಾತ್ರಿಯನ್ನು ವಧುವಿನೊಂದಿಗೆ ಕಳೆಯುವ ಹಕ್ಕನ್ನು ಭೂಮಾಲೀಕರು ಹೊಂದಿದ್ದರು. ಒಂದು ವೇಳೆ ಭೂಮಾಲೀಕನ ಮಗಳು ಮದುವೆಯಾದರೆ, ಆಕೆಯ ಜೊತೆಗೆ ಜೀತದಾಳಿನ ಮಗಳೂ ಆಕೆಯ ಗಂಡನ ಮನೆಗೆ ಹೋಗುವ ಪದ್ಧತಿ ಜಾರಿಯಲ್ಲಿತ್ತು. ನವ ವಧುವಿನ ಸೇವೆಯೊಂದಿಗೆ ವರನ ಲೈಂಗಿಕ ಅವಶ್ಯಕತೆಯನ್ನು ಆಳುಮಗಳು ಪೂರೈಸಬೇಕಾಗಿತ್ತು. ಇಲ್ಲಿ ಭೂಮಾಲೀಕರು ಇಷ್ಟ ಬಂದ ಹೆಂಗಸರನ್ನು ಉಪಪತ್ನಿಯರನ್ನಾಗಿ ಮಾಡಿಕೊಳ್ಳುತ್ತಿದ್ದರು. ಹಾಗೂ ತಮಗೆ ಇಷ್ಟಬಂದ ಹೆಂಗಸಿನಿಂದ ಲೈಂಗಿಕ ತೃಪ್ತಿಪಡೆಯಲು ಆಸೆಪಡುತ್ತಿದ್ದರು. ಹೀಗಾಗಿ ಪರದಾ ಧರಿಸಿದ ಮೇಲ್ ಮತ್ತು ಮಧ್ಯಮ ವರ್ಗದ ಹೆಂಗಸರಿಗಿಂತ ರೈತಾಪಿ ವರ್ಗದ ಹೆಂಗಸರೇ ಅತಿಹೆಚ್ಚಾಗಿ ಲೈಂಗಿಕ ಶೋಷಣೆಗೆ ಒಳಗಾಗುತ್ತಿದ್ದರು. ನಿಜಾಮನ ಸಾಮ್ರಾಜ್ಯದಲ್ಲಿ ಸಾಮಾಜಿಕ ಸುಧಾರಣೆಗಾಗಲೀ, ಸ್ತ್ರೀಶಿಕ್ಷಣದ ಪ್ರಯತ್ನಗಳಾಗಲೀ ಇರಲಿಲ್ಲ. ಆದ್ದುದರಿಂದ ಅಲ್ಲಿನ ಮಹಿಳೆಯರು ೧೯೩೦ರ ಹೊತ್ತಿನ ಮಹಿಳಾ ಸಂಘಟನೆಗಳು ಹುಟ್ಟಿಕೊಂಡು ಮಹಿಳಾ ಲೈಂಗಿಕ ಶೋಷಣೆಯ ವಿರುದ್ಧ ಪ್ರತಿರೋಧಿಸಿ, ಸ್ತ್ರೀ ಶಿಕ್ಷಣವನ್ನು ಕಡ್ಡಾಯಗೊಳಿಸುವುದಕ್ಕಾಗಿ ಹೋರಾಟಗಳನ್ನು ಮಾಡಿದರು. ಹಾಗೆಯೇ ಈ ಸಂಘಟನೆಗಳು ಮುಂದಾಗಿ ರಾಜಕೀಯ, ಸಾಮಾಜಿಕ ಹಾಗೂ ಆರ್ಥಿಕ ಹಕ್ಕುಗಳನ್ನು ಪಡೆಯಲು ಶ್ರಮಿಸಿದರು.

ಭಾರತ ಸ್ವಾತಂತ್ರ್ಯ ಪಡೆಯುವ ವೇಳೆಗೆ, ನಿಜಾಮನು ತನ್ನ ಸ್ವತಂತ್ರ್ಯ ಸಂಸ್ಥಾನವನ್ನು ಉಳಿಸಿಕೊಳ್ಳು ವುದಕ್ಕಾಗಿ ಕುತಂತ್ರಗಳನ್ನು ಹುಡುಕುತ್ತಿದ್ದನು. ಇಂತಹ ಕ್ಲಿಷ್ಟಕರ ಪರಿಸ್ಥಿತಿಯಲ್ಲಿ ಕಮ್ಯುನಿಷ್ಟ ಪಕ್ಷವು ಇತರರ ಸಂಘಟನೆಗಳೊಂದಿಗೆ ಮಹಿಳಾ ಸಂಘಟನೆಗಳನ್ನು ಸೇರಿಕೊಂಡು ನಿಜಾಮನ ಆಳ್ವಿಕೆಯ ವಿರುದ್ಧ ಹೋರಾಟಗಳನ್ನು ಹಮ್ಮಿಕೊಂಡಾಗ ತೆಲಂಗಾಣ ಮೂರು ಸಾವಿರ ಹಳ್ಳಿಗಳು ಭಾಗಿಯಾಗಿ ಹೋರಾಟವನ್ನು ಬೆಂಬಲಿಸಿದವು. ಈ ಹೋರಾಟದಲ್ಲಿ ಮಹಿಳೆಯರು ನಿರ್ಣಾಯಕ ಪಾತ್ರವಹಿಸಿದ್ದರು. ಹೈದರಾಬಾದ್ ಸಂಸ್ಥಾನದ ಅರಸನಾದ ನಿಜಾಮನ ವಿರುದ್ಧದ ಹೋರಾಟದಲ್ಲಿ, ಮಹಿಳಾ ಕಾರ್ಮಿಕರ, ಕೂಲಿ, ಕೌಟುಂಬಿಕ ಹಿಂಸೆ, ಶಿಶುಪಾಲನೆ, ಆರೋಗ್ಯ, ನೈರ್ಮಲ್ಯ, ಕೆಲಸದ ಅವಧಿಯಲ್ಲಿ ಮಕ್ಕಳಿಗೆ ಹಾಲೂಣಿಸುವ ಹಕ್ಕು, ಪೌಷ್ಠಿಕ ಆಹಾರ, ಕೆಲಸದ ಸ್ಥಳಗಳಲ್ಲಿ ಶೌಚ್ ವ್ಯವಸ್ಥೆ ಇತ್ಯಾದಿ ವಿಷಯಗಳನ್ನು ಚರ್ಚಿಸಲಾಗಿತ್ತು. ಭೂಮಿಯ ಹಂಚಿಕೆ, ಕೂಲಿಕಾರರಿಗೆ ಉತ್ತಮ ವೇತನ, ಬಲವಂತ ದುಡಿಮೆಯ

ನಿಷೇಧ, ಅತ್ಯಧಿಕ ತೆರಿಗೆ ಮತ್ತು ಅತಿಹೆಚ್ಚಿನ ಬಡ್ಡಿದರದ ಬಗೆಗೆ, ಇತ್ಯಾದಿ ವಿಷಯಗಳನ್ನು ಕೈಗೆತ್ತಿಕೊಂಡು, ಪುರುಷರ ಜೊತೆ ಸ್ತ್ರೀಯರೂ ಅಪಾರ ಸಂಖ್ಯೆಯಲ್ಲಿ ಸೇರಿಕೊಂಡು ನಿರಂಕುಶ ಆಡಳಿತದ ವಿರುದ್ಧ ಹೋರಾಡಿದರು.

ಹೀಗಾಗಿ ಮುಸ್ಲಿಂ ವಾದದಿಂದ ಪ್ರೇರಿತಗೊಂಡ ರಜಾಕರು ಹಿಂದೂ ಕುಟುಂಬಗಳನ್ನು ಜೀವಂತವಾಗಿ ಸುಟ್ಟರು. ಮತ್ತು ಮಹಿಳೆಯರ ಮೇಲೆ ಅತ್ಯಾಚಾರವನ್ನು ಎಸಗಲು ಪ್ರಾರಂಭಿಸಿದಾಗ, ಹಿಂದೂ ಕುಟುಂಗಳು ಒಂದಾಗಿ ಮುಸ್ಲಿಂರ ದಾಳಿಗೆ ಪ್ರತಿದಾಳಿಯನ್ನು ನಡೆಸಿ ಬಹುಭಾಗವನ್ನು ಹಿಂದೂ ರೈತ ಕುಟುಂಬಗಳು ವಶಪಡಿಸಿಕೊಂಡವು. ನಂತರ ವಶಪಡಿಸಿಕೊಂಡ ಆಸ್ತಿಯನ್ನು ತಮ್ಮೊಳಗೆ ಹಂಚಿಕೊಂಡು ಜೀತಪದ್ಧತಿಗೆ ನಾಂದಿಹಾಡಿದರು. "೧೯೪೮ರಲ್ಲಿ ಭಾರತ ಸರ್ಕಾರದ ವತಿಯಿಂದ ನಡೆದ ಸೈನ್ಯಾಚಾರಣೆಯಿಂದ ಹೈದರಾಬಾದ್ ರಾಜ್ಯವು ಭಾರತ ಆಡಳಿತಕ್ಕೆ ಸೇರ್ಪಡೆಯಾಯಿತು."[೪] ಹೀಗಾಗಿ ಭೂಮಾಲೀಕತ್ವದ ಅಡಿಯಲ್ಲಿ ರೈತಮಹಿಳೆಯರು ಅನುಭವಿಸುತ್ತಿದ್ದ ಜೀತ, ಆದಿವಾಸ, ಉಪಪತ್ನಿತ್ವದ ಪದ್ಧತಿಗಳ ಅವಮಾನಿಕರ ಸ್ಥಿತಿಯಿಂದ ಬಿಡುಗಡೆ ಹೊಂದಿದರು.

ಕ್ರಿ.ಶ.೧೯೧೭ಕ್ಕಿಂತ ಮುಂಚೆಯೇ ಮಹಿಳಾ ಹೋರಾಟಗಾರರು ರಾಜಕೀಯ ಮತದಾನಕ್ಕಾಗಿ ನಡೆದ ಚಳುವಳಿ ಅಂದಿನ ಮಹಿಳೆಯರ ರಾಜಕೀಯ ಜಾಗೃತಿಗೆ ಹಿಡಿದ ಕನ್ನಡಿಯಾಗಿದೆ. ಆ್ಯನಿಬೆಸೆಂಟ್, ಮಾರ್ಗರೇಟ್ ಕಸಿನ್ಸ್ ಹಾಗೂ ಐದು ಮಂದಿ ಭಾರತೀಯ ಮಹಿಳೆಯರ ನಿಯೋಗ ಸರೋಜಿನಿ ನಾಯ್ಡು ಅವರ ನೇತೃತ್ವದಲ್ಲಿ, ಪ್ರಭುತ್ವದ ಎದುರಿಗೆ ನಿಂತು ಭಾರತೀಯ ಮಹಿಳೆಯರಿಗೆ ಮತದಾನದ ಹಕ್ಕನ್ನು ನೀಡಬೇಕೆಂದು, ಅಂದಿನ ವೈಸರಾಯ್ ಆದ ಜೇಮ್ಸ್ ಪೋರ್ಡ್ ಮತ್ತು ಮಾಂಟೆಗೋ ಅವರನ್ನು ಒತ್ತಾಯಿಸಿದರು. ಹಾಗೆಯೇ ಬೇರೆ ಬೇರೆ ಭಾಗಗಳಿಂದ ಮಹಿಳಾ ಸಂಘಟಿತರು ತಮ್ಮ ಮನವಿ ಪತ್ರಗಳನ್ನು ಸಲ್ಲಿಸಿದರು. ಸ್ವತಂತ್ರ್ಯ ಪೂರ್ವದಲ್ಲಿ ಮಹಿಳಾ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಮಹಿಳಾ ಸಂಘಟನೆಗಳು ಮಾಡಿದ ಚಳುವಳಿಯಲ್ಲಿ ಇದೊಂದು ಮೈಲುಗಲ್ಲಾಗಿದೆ.

ಸ್ವಾತಂತ್ರ್ಯದ ನಂತರ ಭಾರತದಲ್ಲಿ ಹಲವಾರು ಮಹಿಳಾ ಸಂಘಟನೆಗಳು ೧೯೭೫ರ ನಂತರ ಬಹುಸಂಖ್ಯೆಯಲ್ಲಿ ಅಸ್ತಿತ್ವಕ್ಕೆ ಬಂದವು. ಸ್ವಾಯತ್ತತೆಯನ್ನು ಹೊಂದಿದ ಮಹಿಳಾ ನಾಯಕೀಯರು ಸಮಾಜದ ವಿವಿಧ ಸ್ಥರಗಳಲ್ಲಿ ಮತ್ತು ಬೇರೆ ಬೇರೆ ಕ್ಷೇತ್ರಗಳಲ್ಲಿ ಮಹಿಳೆಯರ ಮೇಲೆ ನಡೆಯುವ ದಬ್ಬಾಳಿಕೆಗಳಾದ, ವರದಕ್ಷಿಣೆ ಹಿಂಸೆ, ವಧುದಹನ, ಅತ್ಯಾಚಾರ, ಕೌಟುಂಬಿಕ ಹಿಂಸೆ, ದೇವದಾಸಿ ಪದ್ಧತಿ, ಇವುಗಳನ್ನು ನಿರ್ಮೂಲನೆ ಮಾಡಲಿಕ್ಕೆ ಹಾಗೂ ಮೂಲಭೂತ ಹಕ್ಕುಗಳಾದ ಆಸ್ತಿಯ ಹಕ್ಕು, ಮತದಾನದ ಹಕ್ಕು, ಸ್ವಾತಂತ್ರ್ಯತೆಯ ಹಕ್ಕು, ಸಮಾನತೆಯ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಪುರುಷ ಪ್ರಧಾನ ಪ್ರಭುತ್ವದ ವಿರುದ್ಧ ಹೋರಾಟಗಳನ್ನು ಮಾಡಿ ತಮಗೆ ಸಮಾಜದಲ್ಲಿ ದೊರೆಯಬೇಕಾದ ಸೌಕರ್ಯಗಳನ್ನು

ಪಡೆಯುವಲ್ಲಿ ಸ್ವಲ್ಪ ಮಟ್ಟಿಗಾದರೂ ಯಶಸ್ವಿಯಾಗುತ್ತಾ ಬರುತ್ತಿವೆ. ಉತ್ತರ ಭಾರತದಲ್ಲಿ ಹುಟ್ಟಿಕೊಂಡಂತಹ ಮಹಿಳಾ ಸಂಘಟನೆಗಳಾದ 'ನಾರಿರಕ್ಷಾ ಸಮಿತಿ', 'ಸ್ತ್ರೀ ಸಂಘರ್ಷ ಸಮಿತಿ', 'ಮಹಿಳಾ ದಕ್ಷಸಮಿತಿ', ಬೊಂಬಾಯಿಯ 'ಮಹಿಳಾ ಕೇಂದ್ರ', ಪೂಣೆಯ 'ಸ್ತ್ರೀ ಆಧಾರ್ ಕೇಂದ್ರ', ಖಾನ್ಪುರದ 'ಸಖೀಕೇಂದ್ರ' ಇತ್ಯಾದಿ ಮಹಿಳಾ ಸಂಘಟನೆಗಳು ವರದಕ್ಷಿಣೆಯ ವಿರುದ್ಧ ತಮ್ಮ ಹೋರಾಟಗಳನ್ನು ನಡೆಸುತ್ತಿವೆ.

ಹೆಣ್ಣನ್ನು ಭೋಗವಸ್ತುವೆಂದು ಪರಿಗಣಿಸಿಕೊಂಡ ಪುರುಷ ಪ್ರಧಾನ ಸಮಾಜದಲ್ಲಿ, ಕೆಲಸದ ಸ್ಥಳಗಳಲ್ಲಿ, ರಸ್ತೆಗಳಲ್ಲಿ, ನಿರ್ಜನ ಪ್ರದೇಶಗಳಲ್ಲಿ ಹಾಗೂ ಉದ್ಯೋಗ ಕ್ಷೇತ್ರಗಳಲ್ಲಿ ಸಹೋದ್ಯೋಗಿಗಳಿಂದ ಮಹಿಳೆಯರ ಮೇಲೆ ಅತ್ಯಾಚಾರಗಳು ನಡೆಯುತ್ತಿದ್ದವು. ಹಾಗೆಯೇ ಸಾರ್ವಜನಿಕ ರಕ್ಷಕರೆನಿಸಿಕೊಂಡ ಪೊಲೀಸರಿಂದಲೇ ಈ ಕೃತ್ಯಗಳು ಅತ್ಯಂತ ಭೀಕರವಾಗಿ ನಡೆಯುತ್ತಿದ್ದವು. ಉದಾ : ಮಥುರಾ, ನಯಾತ್ಯಾಗಿ, ರಾಮೀಜಾಬೀ, ಸುಮನ್ ರಾಣಿ ಮುಂತಾದರ ಮೇಲೆ ವಿರುದ್ಧ ನಡೆದ ಅತ್ಯಾಚಾರಗಳು ಪೊಲೀಸರಿಂದಲೇ ನಡೆದಿದ್ದವು. ಆದ್ದುದರಿಂದ ಮಹಿಳಾ ಸಂಘಟನೆಗಳು ಪೋಲಿಸ್‌ರ ವಿರುದ್ಧ ಹೋರಾಟಗಳನ್ನು ಮಾಡಿ ಅವರನ್ನು ನೌಕರಿಯಿಂದ ಕಡಗಣಿಸಲು ಮತ್ತು ಅವರಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸುವಂತೆ ಹಾಗೂ ಅತ್ಯಾಚಾರಕ್ಕೆ ಒಳಗಾದಂತ ಹೆಂಗಸರಿಗೆ ನ್ಯಾಯ ದೊರಕಿಸಿ ಕೊಡುವುದಕ್ಕಾಗಿ, ನ್ಯಾಯಾಲಯಕ್ಕೆ ಮೊರೆಹೋದರು, ಈ ವೇಳೆಯಲ್ಲಿ ಮಹಿಳಾ ಸಂಘಟನೆಗಳು, ಅತಿ ಉಗ್ರವಾಗಿ ಹೋರಾಟಗಳನ್ನು ಮಾಡಿ ನ್ಯಾಯಾಲಯಗಳಿಂದ ನ್ಯಾಯಪಡೆಯುವಲ್ಲಿ ಯಶಸ್ವಿಯಾದರು. ಪೋಲಿಸ್ ಸಂಶೋಧನೆ ಮತ್ತು ಅಭಿವೃದ್ಧಿ ವಿಭಾಗದ ಸಮೀಕ್ಷೆಯ ಪ್ರಕಾರ "೧೯೮೨ರಲ್ಲಿ ವರದಿಯಾದ ಅತ್ಯಾಚಾರದ ಪ್ರಕರಣಗಳು ೫,೪೨೭. ಆದರೆ ೧೯೮೩ರಲ್ಲಿ ಈ ಸಂಖ್ಯೆ ೬೦೭೯ಕ್ಕೆ ಏರಿತ್ತು."[೫] ಈ ಪ್ರಕರಣಕ್ಕೆ ೧೬ ರಿಂದ ೩೦ರ ವಯೋಮಾನದ ಮಹಿಳೆಯರು ಗುರಿಯಾಗಿರುವುದು ಕಂಡುಬರುತ್ತದೆ.

ಕುಟುಂಬವು ಮಹಿಳೆಯರಿಗೆ ಅತ್ಯಂತ ನಿಕಟವಾದ ಸಂಬಂಧ ಕಲ್ಪಿಸುವಂತಹದಾಗಿದೆ. ಆದರೆ ವಿವಾಹದ ಸಂದರ್ಭದಲ್ಲಿ ವರದಕ್ಷಿಣೆ ಕೊಡುವುದರಲ್ಲಿ ಸ್ವಲ್ಪ ಏರುಪೇರು ಆಗಿದ್ದರಿಂದಲೋ ಅಥವಾ ವಧೂ-ವರನ ನಡುವೆ ಭಿನ್ನಾಭಿಪ್ರಾಯಗಳಿಂದಲೋ, ಅತ್ತೆ ಸೊಸೆಯರ ಮಧ್ಯೆ ಅಪಾರ್ಥ, ವೈಮನಸ್ಸುಗಳಿಂದಲೋ ಕುಟುಂಬದಲ್ಲಿ ಒಳಜಗಳಗಳು ಉಂಟಾಗುತ್ತವೆ. ಈ ಪರಿಸ್ಥಿತಿಯಲ್ಲಿ ಹೊಸದಾಗಿ ಬಂದ ವಧು ಅಸಹಜ ಮರಣಕ್ಕೆ ತುತ್ತಾಗುವುದು ಕಂಡುಬರುತ್ತಿವೆ. ಶೇಕಡ ೬೨ ಯುವತಿಯರು ಸಾವು ಅಪ್ಪಿರುವುದನ್ನು ಮಹಿಳಾ ಸಂಘಟನೆಗಳು ಗುರುತಿಸುತ್ತವೆ. ಇಂತವುಗಳನ್ನು ಹೆಣ್ಣಿನ ಪತಿಗೃಹದವರು ಆತ್ಮಹತ್ಯೆ ಅಥವಾ ಆತ್ಮಹತ್ಯೆಯಾಗಿಲ್ಲದಿದ್ದರೆ ಅದನ್ನು ಅಪಘಾತದ ಮರಣವೆಂತಲೋ ಪ್ರಕಟಿಸುವುದರ ವಿರುದ್ಧ ಮಹಿಳಾ ಸಂಘಟನೆಗಳು ಅಂತಹ ಕುಟುಂಬಗಳಿಗೆ ಬುದ್ಧಿ ಕಲಿಸಲು ವಧುವಿನ ತಂದೆ ತಾಯಿಯರ ಸಹಾಯ

ಕೇಳಿದರೆ, ಸಮಾಜದ ಅಪಪ್ರಚಾರದ ಕಳಂಕದ ಭಯದ ಕಾರಣ ಅವರು ಯಾವುದೇ ರೀತಿಯಾದ ಸರಿಯದ ಮಾಹಿತಿಯನ್ನು ನೀಡಲು ಹಿಂಜರಿಯುತ್ತಾರೆ. ಆದುದರಿಂದ ಮಹಿಳಾ ಸಂಘಟನೆಗಳು ಕೌಟುಂಬಿಕ ಹಿಂಸೆಯನ್ನು ನಿರ್ಮೂಲನೆ ಮಾಡುವಲ್ಲಿ ಕುಂಟಿತವಾಗಿವೆ. ಏಕೆಂದರೆ ಇವು ಮನೆಯ ನಾಲ್ಕು ಗೋಡೆಗಳ ಮಧ್ಯೆ ನಡೆಯುವಂತಹ ಕೃತ್ಯಗಳಾಗಿವೆ.

ವರದಕ್ಷಿಣೆ ಮತ್ತು ವಧುದಹನಗಳಿಗೆ ಒಂದಕ್ಕೊಂದು ನಿಕಟವಾದ ಸಂಬಂಧವಿದೆ. ಏಕೆಂದರೆ ವಧುವಿವಾಹವನ್ನು ಖಾಯಂ ಗೊಳಿಸುವಾಗ ವಧು-ವರನ ಕುಟುಂಬದ ಹಿರಿಯರು ಕೂಡಿಕೊಂಡು, ವಧುವಿನ ಕಡೆಯವರು ಇಂತಿಷ್ಟು ವರದಕ್ಷಿಣೆ ಕೊಡಬೇಕೆಂದು ಒಪ್ಪಂದಗಳನ್ನು ಮಾಡಕೊಂಡಿರುತ್ತಾರೆ. ಇದರ ಪ್ರಕಾರವಾಗಿಯೇ ವಿವಾಹ ಬಹುವಿಜೃಂಭಣೆಯಿಂದ ನಡೆಯುತ್ತದೆ. ಯಾವುದೋ ವಿನಾಕಾರಣದಿಂದ ವರದಕ್ಷಿಣೆಯ ಒಟ್ಟುಹಣವನ್ನು ಕೊಡಲಾಗುವುದಿಲ್ಲ. ಈ ಕಾರಣದಿಂದ ಪ್ರೀತಿ ವಿಶ್ವಾಸದಿಂದ ನಲಿಯುತ್ತಿದ್ದ ನವಜೋಡಿಯಲ್ಲಿ ಒಡಕು ಕಂಡುಬರುತ್ತವೆ. ಕಾರಣ ವರನ ತಂದೆತಾಯಿಗಳು ಕುತಂತ್ರ ಹೂಡುತ್ತಾರೆ. ಇದರಿಂದ ಗಂಡ-ಹೆಂಡತಿಯ ಮಧ್ಯೆ ವೈಮನಸ್ಸು ಉಂಟಾಗಿ ಆಕೆಯನ್ನು ದಿನಂ ಪ್ರತಿ ಹೊಡೆದು ಮಾನಸಿಕವಾಗಿ ಶೋಷಣೆ/ಹಿಂಸೆ ಮಾಡುವುದಕ್ಕಾಗಿ ನಾನಾ ತರದ ಮಾತುಗಳನ್ನು ಹಾಡುತ್ತಾರೆ. ಮಾನಸಿಕವಾಗಿ ಹಾಗೂ ದೈಹಿಕವಾಗಿ ಬೇಸತ್ತ ಮಹಿಳೆಯರು ತಮ್ಮಷ್ಟಕ್ಕೆ ತಾವೇ ಆತ್ಮಹತ್ಯೆ ಮಾಡಿಕೊಳ್ಳುವಂತೆ ಮಾಡುತ್ತಾರೆ. ಅಥವಾ ಕುಟುಂಬದ ಅತ್ತೆ-ಮಾವ, ಗಂಡ ಅಥವಾ ನಾದಿನಿ ಇನ್ನಿತರ ಕುಟುಂಬದ ಸದಸ್ಯರು ಸೇರಿ ಯುವತಿಯರನ್ನು ಕೊನೆಗಾಣಿಸಿರುವ ಘಟನೆಗಳು ಬೃಹತ್ ಪ್ರಮಾಣದಲ್ಲಿವೆ. ಇಂತಹ ಕೃತ್ಯಗಳನ್ನು ದಮನಮಾಡುವುದಕ್ಕಾಗಿ ೧೯೭೦ರ ಮಧ್ಯಭಾಗದಲ್ಲಿ ಹುಟ್ಟಿಕೊಂಡ ಮಹಿಳಾ ಸಂಘಟನೆಗಳು ಇವುಗಳ ಹುಟ್ಟು ಹಡಗಿಸುವುದಕ್ಕಾಗಿ ಬೃಹತ್ ಪ್ರಮಾಣದಲ್ಲಿ ಚಳುವಳಿಗಳನ್ನು ಮಾಡುತ್ತಾ ಬರುತ್ತಿವೆ.

ಸ್ವಾತಂತ್ರ್ಯ ಪೂರ್ವದಿಂದಲೂ ಅಂದರೆ ಸಮಾಜ ಸುಧಾರಣಾವಾದಿ ಚಳುವಳಿಯಿಂದ ಹಿಡಿದು, ಸ್ವಾತಂತ್ರ್ಯದ ನಂತರ ಆಧುನಿಕ ಭಾರತದಲ್ಲಿ ಹುಟ್ಟಿಕೊಂಡ ಬಹುಸಂಖೀ ಮಹಿಳಾ ಸಂಘಟನೆಗಳು ಮತ್ತು ಮಹಿಳಾ ಚಳುವಳಿಕಾರರು ಪುರುಷ ರಾಜಕಾರಣೀಯ ವಿರುದ್ಧ ಬೃಹತ್ ಪ್ರಮಾಣದಲ್ಲಿ ಚಳುವಳಿಗಳನ್ನು ಮಾಡುತ್ತಾ ಬಂದಿವೆ. ಆದರೆ ಇವು ಏನಾಗುತ್ತವೆ ಎಂದರೆ, ಮಹಿಳಾ ಚಳುವಳಿಗಳು ತಮ್ಮ ನಿರ್ದಿಷ್ಟ ಗುರಿಗಳಲ್ಲಿ ಯಾವುವು ಹಕ್ಕು ಎಂದು ಕೇಳಿಕೊಳ್ಳುತ್ತಿವೆಯೋ, ಅವು ವಾಸ್ತವವಾಗಿ ಹಕ್ಕುಗಳಾಗಿ ಮತ್ತುಕೆಲವು ಬೇಡಿಕೆಗಳಾಗಿ ಸವಲತ್ತುಗಳಾಗುತ್ತಿವೆ. ಕ್ರಿ.ಶ.೧೯೯೦ರ ವರೆಗೆ ಮಹಿಳಾ ಸಂಘಟನೆಗಳು ಏನು ಕೇಳುತ್ತಾ ಬಂದಿವೆ ಎಂದರೆ, ಅಧಿಕಾರವಲಯದಲ್ಲಿ, ಕುಟುಂಬವಲಯದಲ್ಲಿ, ರಾಜಕೀಯವಲಯದಲ್ಲಿ, ಉದ್ಯೋಗ ಕ್ಷೇತ್ರಗಳಲ್ಲಿ, ಶಿಕ್ಷಣಕ್ಷೇತ್ರಗಳಲ್ಲಿ, ಹಾಗೂ ವಿವಾಹ ಕ್ಷೇತ್ರದಲ್ಲಿ ತಮಗೆ ಹಕ್ಕು ಕೊಡಿ

ಎಂದು ಕೇಳಿಕೊಳ್ಳುತ್ತಿವೆ. ಆದರೆ ವಿವಾಹದ ನಿಯಮ ಬದಲಾಯಿಸಿ ಎಂದಲ್ಲ, ಬದಲಾಗಿ ವರದಕ್ಷಿಣೆ ಯಂತಹ ಒತ್ತಡಗಳನ್ನು ತಡೆಗಟ್ಟಿ ಎಂದು. ಮತ್ತು ನಮ್ಮನ್ನು ಉದ್ಯೋಗ ಮತ್ತು ರಾಜಕೀಯ ಕ್ಷೇತ್ರದಲ್ಲಿ ಸೇರಿಸಿಕೊಳ್ಳಿ ಎಂದು ಕೇಳಿತ್ತಿದ್ದೇವೆ. ಅಂದರೆ ಸ್ವಾತಂತ್ರ್ಯದ ಪೂರ್ವದಿಂದ ಹಿಡಿದು ಈಚೀನ ದಿನಗಳವರೆಗೆ ಮಹಿಳಾ ಚಳುವಳಿಯ ಚರಿತ್ರೆಯನ್ನು ಸೂಕ್ಷ್ಮವಾಗಿ ಗಮನಿಸುತ್ತಾ ಬಂದಾಗ ಇವರು ತಮಗಿರುವ ಸಮಸ್ಯೆಳಿಗೆ ಪರಿಹಾರವನ್ನು ಕೇಳುತ್ತಾ ಬಂದಿವೆ. ಈ ಸಂದರ್ಭದಲ್ಲಿ ಪುರುಷ ಪ್ರಧಾನ ವ್ಯವಸ್ಥೆ ಆಯಾಕ್ಷಣಕ್ಕೆ ಕೆಲವು ಬೇಡಿಕೆಗಳನ್ನು, ಸವಲತ್ತುಗಳನ್ನು ನೆರವೇರಿಸಿ ಕೊಡುತ್ತಿವೆ. ಮಹಿಳಾ ಚಳುವಳಿಗಳು ಇದೇ ತಮಗೆ ಸಿಕ್ಕಿದಂತಹ ಪರಿಹಾರದಿಂದ ತಮ್ಮ ಜಯಸಾಧಿಸಿದ್ದೇವೇ ಎನ್ನುವ ತರದಲ್ಲಿ ಬೆಳೆದುಕೊಂಡು ಬಂದಿವೆ.

ಆದರೆ ೧೯೭೦ರ ನಂತರ ಬೃಹತ್ ಪ್ರಮಾಣದಲ್ಲಿ ಬೆಳೆದುಕೊಂಡು ಬಂದಂತಹ ಮಹಿಳಾ ಚಳುವಳಿಗಳು ತಮ್ಮ ಬೇಡಿಕೆಗಳನ್ನು ಸಲ್ಲಿಸುವ ಬದಲಾಗಿ ತಮಗೆ ಏನು ಹಕ್ಕುಗಳು ಬೇಕೋ ಅವುಗಳನ್ನು ಪಡೆದುಕೊಳ್ಳುವ ಬಗ್ಗೆ ಆಲೋಚನೆ ಮಾಡುತ್ತಿವೆ. ತಮಗೆ ದೊರೆಯಬೇಕಾದ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಗಿ ಪುರುಷ ರಾಜಕಾರಣವನ್ನು ತಲ್ಲಣಗೊಳಿಸುತ್ತಿವೆ. ಅಂದರೆ ಯಾವುದೇ ವಿಚಾರದಲ್ಲಿ ತೀರ್ಮಾನಗಳನ್ನು ನಿರ್ಣಯಗಳನ್ನು ತೆಗೆದುಕೊಳ್ಳುವ ಮತ್ತು ಜಾರಿಗೊಳಿಸುವ ಅಧಿಕಾರ ಬೇಕು. ಎಲ್ಲಾವಲಯಗಳಲ್ಲಿ ಪುರುಷರು ತೀರ್ಮಾನ ತೆಗೆದುಕೊಳ್ಳುವ, ಜಾರಿಗೊಳಿಸುವ ಅಧಿಕಾರದ ಸ್ಥಾನಗಳಿವೆಯೇ ಅಷ್ಟೆ ಪ್ರಮಾಣದಲ್ಲಿ ಮಹಿಳೆಯರು ಸಹ ಈ ಎಲ್ಲಾ ವಲಯಗಳಲ್ಲಿ ಜಾಗದೊರೆಯಬೇಕೆಂದು ಒತ್ತಾಯಿಸುತ್ತೇವೆ. ಆದರೆ ಪುರುಷ ಪ್ರಧಾನ ವ್ಯವಸ್ಥೆಯು ಮಹಿಳೆಯರನ್ನು ಹೀನಾಯಕ ಹಂತದ ಸ್ಥಳಗಳಿಂದ ಹೊರತಂದು ನಿರ್ಣಾಯಕ ಹಂತ ಅಥವಾ ತೀರ್ಮಾನ ತೆಗೆದುಕೊಳ್ಳುವಂತಹ ಅಧಿಕಾರ ಸ್ಥಾನಗಳಿವೆಯಲ್ಲ ಅವುಗಳಲ್ಲಿ ಭಾಗಿಯಾಗದಂತೆ ತಡೆಗಟ್ಟುತ್ತಾರೆ.

ಸಮಾಜದಲ್ಲಿ ಮಹಿಳೆಯರಿಗೂ ಸಹ ಮೂಲಭೂತ ಹಕ್ಕುಗಳಲ್ಲಿ ಸರಿಸಮಾನವಾದ ಪಾಲು ದೊರೆಯಬೇಕು ಅನ್ನುವುದು ಸಂವಿಧಾನದಲ್ಲಿ ಇದ್ದರೂ ಸಹ ಪುರುಷ ರಾಜಕಾರಣಿಗಳು ಅವುಗಳನ್ನು ಮಹಿಳೆಯರಿಗೆ ದಕ್ಕದ ಹಾಗೆ ತಂತ್ರಗಳನ್ನು ಹೂಡುತ್ತಿದ್ದಾರೆ. ಅತ್ಯಂತ ಪ್ರಮುಖವಾಗಿ ರಾಜಕೀಯ ವಲಯದಲ್ಲಿ ಅತಿ ತೀವ್ರವಾಗಿ ತೀರ್ಮಾನಗಳನ್ನು ತೆಗೆದುಕೊಳ್ಳುವಂತಹ ಸ್ಥಾನಗಳನ್ನು ನೀಡದೆ ತಡೆಗಟ್ಟುತ್ತಿದ್ದಾರೆ. ಉನ್ನತ ಶಿಕ್ಷಣಕ್ಕೆ, ಅಧಿಕಾರ ಚಲಾಯಿಸುವಂತಹ ಉದ್ಯೋಗಗಳಿಗೆ ಪ್ರವೇಶಿಸಬಾರ ದೆಂದು, ಕೆಲವು ವಿಚಾರಗಳನ್ನು ಒಡ್ಡುತ್ತಾರೆ. ಉದಾ : ರೂಢಿಸಂಪ್ರದಾಯಗಳಿಂದ ಕೂಡಿದ ನಮ್ಮ ಸಮಾಜದಲ್ಲಿ ಹೆಂಗಸರು ಎಂತಹ ಶಿಕ್ಷಣ ಕಲಿಯಬೇಕು, ಮತ್ತು ಕಲಿಯಬಾರದು ಅನ್ನುವುದರಲ್ಲಿ ಆಕೆಯನ್ನು ವಂಚಿಸುತ್ತಾರೆ. ಅಂದರೆ ಸೈನಿಕವಲಯ, ಮತ್ತು ಪೋಲಿಸ್ ವಲಯಗಳಂತಹವುಗಳಿಂದ

ಅವರನ್ನು ದೂರವಿಡುತ್ತಾರೆ. ಏಕೆಂದರೆ ಅವಳು ಇಂತಹ ಸಂದರ್ಭದಲ್ಲಿ ಒಬ್ಬಂಟಿಯಾಗಿ ಹೋಗಬೇಕಾಗುತ್ತದೆ. ಮತ್ತು ಕೆಲವು ಅಪಾಯಗಳನ್ನು ಎದುರಿಸಬೇಕಾಗುತ್ತದೆ. ಪುರುಷ ವ್ಯವಸ್ಥೆಯಲ್ಲಿ ಮಹಿಳೆಯರು ಅಧಿಕಾರ ಚಲಾಯಿಸುವ ಸ್ಥಾನಗಳಿಗೆ ಹೋಗಲೇ ಬೇಕಾದರೆ ಅವರಿಗೆ ಯಾವುದೇ ರೀತಿಯ ತರಬೇತಿ ಸಹ ದೊರೆಯದಂತೆ ಮಾಡುತ್ತಾರೆ.

ಒಂದು ವೇಳೆ ಪುರುಷ ವ್ಯವಸ್ಥೆಯನ್ನು ತಿರಸ್ಕರಿಸಿ ಅಧಿಕರ ಚಲಾಯಿಸುವಂತಹ ಸ್ಥಾನಗಳಿಗೆ ಬಂದರೆ ಅವರು ಕೆಲಸ ನಿರ್ವಹಿಸುವಂತಹ ಜಾಗಗಳಲ್ಲೂ ಇನ್ನಷ್ಟು ಸಮಸ್ಯೆಗಳು ಉದ್ಭವಿಸುವ ಹಾಗೆ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ. ಆದುದರಿಂದ ಮಹಿಳೆಯರು ಇಂತಹ ಸ್ಥಳಗಳಿಗೆ ಪ್ರವೇಶಿಸಲು ಹಿಂಜರೆಯುತ್ತಾರೆ. ಉದಾ : ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರು ಕೆಲಸ ನಿಭಾಯಿಸಲು ಸಾಧ್ಯವಾಗುವುದಿಲ್ಲ. ಏಕೆಂದರೆ ಈ ಕ್ಷೇತ್ರವು ಸ್ಪರ್ಧಾತ್ಮಕವಾದಂತಹದ್ದು, ಮತ್ತು ಇದರಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬೇಕಾದರೆ ಬಹಳಷ್ಟು ಧೈರ್ಯ, ಸಾಹಸಗಳಿರಬೇಕಾಗುತ್ತದೆ. ಏಕೆಂದರೆ ಅಲ್ಲಿ ಪುರುಷ ಕುತಂತ್ರಗಳು ಅತಿಪ್ರಬಲವಾಗಿರುತ್ತವೆ. ಆದ್ದುದರಿಂದ ಈ ಕ್ಷೇತ್ರದಲ್ಲಿ ಮಹಿಳೆಯರು ಕುಂಟಿತಗೊಳ್ಳಬೇಕಾಗುತ್ತದೆ. ಈ ರೀತಿಯ ಮಾನಸಿಕ ಬೆದರಿಕೆಗಳನ್ನು ಮಹಿಳೆಯರ ಮೇಲೆ ಒಡ್ಡುತ್ತಾರೆ. ಈ ರೀತಿಯ ಕುರುಡು ಬೆದರಿಕೆಗಳು ಕುಟುಂಬದಿಂದಲೇ ಪ್ರಾರಂಭಗೊಳ್ಳುತ್ತವೆ. ಕುಟುಂಬ ವಲಯದಲ್ಲಿಯೂ ಸಹ ಮಹಿಳೆಯರನ್ನು ಅತಿಹೆಚ್ಚಾಗಿ ಸೇವವಲಯದಲ್ಲಿಯೇ ಇರಿಸಿರುವುದು ಕಂಡುಬರುತ್ತದೆ. ಒಂದು ವೇಳೆ ತೋರಿಕೆಗಾಗಿ ಅಥವಾ ನಾಮಕಾವಸ್ಥೆಗಾಗಿ ಅಧಿಕಾರ ಕೊಟ್ಟಂತೆ ಕಾಣುತ್ತದೆ. ಆದರೆ ಅದರ ದಬ್ಬಾಳಿಕೆ ಅಥವಾ ನಿರ್ಣಯ ತೆಗೆದುಕೊಳ್ಳುವುದೆಲ್ಲ ಪುರುಷರದೇ ಅಗಿರುತ್ತದೆ. ಉದಾ : ಕುಟುಂಬದಲ್ಲಿ ಗಂಡನ ಅಥವಾ ಹೆಂಡತಿಯ ಸಂಬಳ ಪೂರ್ತಿಯಾಗಿ ಹೆಂಡತಿಗೆ ಒಪ್ಪಿಸುತ್ತಾರೆ. ಅದಕ್ಕೆಲ್ಲ ಅಧಿಪತಿ ಅವಳೆ ಎನ್ನುವತರದಲ್ಲಿ ನಾಟಕವಾಡುತ್ತಾರೆ. ಆದರೆ ಆವ್ಯವಸ್ಥೆಯ ಸೂತ್ರದಾರ ಪುರುಷನೆ ಆಗಿರುತ್ತಾನೆ. ಕಾರಣಾಂತರಗಳಿಂದ ಮಹಿಳೆ ಧೈರ್ಯಮಾಡಿ ಆ ವಲಯದಲ್ಲಿ ಪ್ರವೇಶಿಸಿದರೂ ಸಹ ಅಲ್ಲಿ ಅನೇಕ ಕಷ್ಟಕೊತ್ತಲೆಗಳನ್ನು ತೋರಿಸಿ ಆ ವಲಯಗಳಲ್ಲಿ ಮಹಿಳೆ ಕೆಲಸ ನಿಭಾಯಿಸಲು ಆಗುವುದಿಲ್ಲ ಎನ್ನುವ ತರದಲ್ಲಿ ಸಮಸ್ಯೆಗಳನ್ನು ಸೃಷ್ಟಿಸುತ್ತಾರೆ.

ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಯರಿಗೆ ಎಲ್ಲಾ ವಲಯದಲ್ಲಿ ಸರಿಸಮಾನವಾದ ಹಕ್ಕುಗಳಿವೆ. ಮತ್ತು ಸಂವಿಧಾನಬದ್ದವಾಗಿ ಮಹಿಳೆಯರು ರಾಜಕೀದಲ್ಲಿ ಭಾಗವಹಿಸಬಹುದು ಎನ್ನುವ ಸಾಮಾಜಿಕ ಗ್ರಹಿಕೆ ಮತ್ತು ನಿರೀಕ್ಷೆಗಳು ಇದ್ದರೂ ಸಹ, ಅಷ್ಟು ಸುಲಭವಾಗಿ ರಾಜಕೀಯದಲ್ಲಿ ಪ್ರವೇಶಿಸಲು ಆಗುತ್ತಿಲ್ಲ, ಏಕೆಂದರೆ ಸಾಮಾಜಿಕ ಅಪಕಲ್ಪನೆಯಿಂದ ರಾಜಕೀಯದಲ್ಲಿ ಭಾಗವಹಿಸುವ ಮಹಿಳೆಯರು ಮತ್ತು ಮನೆಯ ಹೊರಗಡೆ ಉದ್ಯೋಗ ನಿಭಾಯಿಸಬೇಕಾದರೆ ಅವಳಮಾನ, ಶೀಲ, ಪಾತಿವ್ರತ್ಯ,

ಪತಿನಿಷ್ಠೆ ಈ ಎಲ್ಲವುಗಳು ಅವಳಿಂದ ತೊರೆದು ಹೋಗುತ್ತವೆ ಎನ್ನುವ ಸಂಶಯದಿಂದ ಅವಳನ್ನು ತಂದು ಗೊಂದಲಕ್ಕೆ ತಳ್ಳುತ್ತಾರೆ. ಆದ್ದರಿಂದ ಉದ್ಯೋಗ ಮಾಡುವ ಮಹಿಳೆಯರು ರಾತ್ರಿಯ ಸರದಿ ಉದ್ಯೋಗಕ್ಕೆ ಮತ್ತು ಒಬ್ಬೊಂಟಿಯಾಗಿ ನಡೆಯುವ ಉದ್ಯೋಗಗಳಿಗೆ ಮಹಿಳೆಯರು ಒಪ್ಪುವುದಿಲ್ಲ. ಏಕೆಂದರೆ ಪುರುಷ ಪ್ರಧಾನ ಸಮಾಜದಲ್ಲಿ ಅವಳ ಲೈಂಗಿಕತೆಯ ಶೀಲದ ಮೇಲೆ ತುಂಬಾ ಮೌಲ್ಯವನ್ನು ಹೇರಿ ಅವಳನ್ನು ನಿಯಂತ್ರಣದಲ್ಲಿ ಹಿಡಿಯುತ್ತಾರೆ. ಈ ರೀತಿಯ ಮೌಲ್ಯ ಹೆಂಗಸಿನ ಮೇಲೆ ಹೇರಿರುವುದರಿಂದ ಅವಳನ್ನು ಎಲ್ಲಾ ವಲಯಗಳಲ್ಲಿ ನಿಯಂತ್ರಣದಲ್ಲಿ ಇಡಲಾಗಿದೆ.

ಮಹಿಳೆಯರು ಈ ಮೇಲಿನ ಎಲ್ಲಾ ಸಮಸ್ಯೆಗಳನ್ನು ನಿಭಾಯಿಸಿಕೊಂಡು ಸಾರ್ವಜನಿಕ ಕ್ಷೇತ್ರಗಳಲ್ಲಿ ತೊಡಗಿಸಿಕೊಂಡರೆ ಶೀಲದ ಸುತ್ತಲಿರುವ ಸಮಸ್ಯೆಗಳು ಮಹಿಳೆಯರ ಆತ್ಮಗೌರವವನ್ನು ಕುಗ್ಗಿಸುತ್ತವೆ. ಅಂದರೆ ಅವಳು ಸಾಮಾಜಿಕವಾಗಿ ಮರ್ಯಾದೆಗಳನ್ನು ಕಳೆದುಕೊಳ್ಳುತ್ತಾಳೆ. ಮತ್ತು ಶೋಷಣೆಗೆ ಒಳಗಾಗಬೇಕಾಗುತ್ತದೆ ಎನ್ನುವ ಬೆದರಿಕೆಯನ್ನು ಒಡ್ಡಿ ಅವಳನ್ನು ಎಲ್ಲಾ ವಲಯಗಳಿಂದ ದೂರವಿಡಲು ಪ್ರಯತ್ನಿಸುತ್ತಾರೆ. ಹೀಗಾಗಿ ಸುಮಾರು ೫೫ ವರ್ಷಗಳಿಂದ ಪುರುಷ ರಾಜಕಾರಣಿಗಳು ಇದೇ ಕುತಂತ್ರವನ್ನು ಮಾಡುತ್ತಾ ಬಂದಿದ್ದರಿಂದ ಮಹಿಳೆಯರಿಗೆ ಸಂವಿಧಾನ ಬದ್ಧವಾಗಿ ದಕ್ಕಬೇಕಾದ ಹಕ್ಕುಗಳನ್ನು ದಕ್ಕಿಸಿಕೊಳ್ಳಲು ಆಗುತ್ತಿಲ್ಲ. ಅಥವಾ ರಾಜಕೀಯದಲ್ಲಿ ಪ್ರವೇಶಿಸುವುದಕ್ಕೆ ಆಗುತ್ತಿಲ್ಲ. ಏಕೆಂದರೆ ಪ್ರಬಲರಾದ ಪುರುಷ ರಾಜಕಾರಣಿಗಳು, ಎಲ್ಲಿ ಮಹಿಳೆಯರು ಬಂದು ತಮ್ಮ ಸ್ಥಾನಗಳನ್ನು ಕಿತ್ತುಕೊಂಡು ಬಿಡುತ್ತಾರೋ, ಅಥವಾ ಎಲ್ಲಿ ತಾವು ಸ್ಥಾನಗಳನ್ನು ಬಿಟ್ಟು ಕೊಡಬೇಕಾಗುತ್ತದೋ ಎನ್ನುವ ಭಯದಿಂದ ಮತ್ತು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುವುದಕ್ಕಾಗಿ ಮಹಿಳೆಯರನ್ನು ತಡೆಗಟ್ಟಲು ಪ್ರಯತ್ನಿಸುತ್ತಾರೆ.

ಆದರೆ ಇತ್ತೀಚಿನ ಮಹಿಳಾ ಚಳುವಳಿಗಳು ತಮ್ಮ ಬೇಡಿಕೆಗಳನ್ನು ಮತ್ತು ಅಹವಾಲುಗಳನ್ನು ಸಲ್ಲಿಸಿದೆ. ತಮ್ಮ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಒತ್ತಾಯವನ್ನು ಮಂಡಿಸುತ್ತವೆ. ಆದರೆ ಪುರುಷ ಪ್ರಧಾನ ವ್ಯವಸ್ಥೆ ಹಕ್ಕುಗಳನ್ನು ಬಿಟ್ಟುಕೊಡುವುದಕ್ಕೆ ಸಿದ್ಧವಿಲ್ಲ. ಮಹಿಳಾ ಹಕ್ಕು ಒತ್ತಾಯದ ಪ್ರತಿಭಟನೆ ಬಹುಗಂಭೀರವಾಗಿರುವುದರಿಂದ, ರಾಜಕೀಯ ವಲಯದಲ್ಲಿ ಸ್ಥಾನಗಳನ್ನು ನೀಡುವುದು ಅನಿವಾರ್ಯದ ಪ್ರಸಂಗವಾಗಿ ಬಿಡುತ್ತದೆ. ಆದರೂ ಸಹ ಪುರುಷ ಕುತಂತ್ರದಿಂದ ಅಲ್ಲಿಯೋ ಮೇಲಿನ ಹಂತದ ಸ್ಥಾನಗಳನ್ನು ಪುರುಷರು ಆಕ್ರಮಣ ಮಾಡಿಕೊಂಡು ಅತ್ಯಂತ ನಿಕೃಷ್ಟವಾದ ಅಥವಾ ಕೆಳಹಂತದ, ಎರಡನೇ ದರ್ಜೆಯ ಸ್ಥಾನಗಳನ್ನು ಮಹಿಳೆಯರಿಗೆ ಕಾಯ್ದಿರಿಸುತ್ತಾರೆ. ಇದನ್ನು ಅತ್ಯುತ್ತಮ ನಿದರ್ಶನವಾಗಿ ಪಂಚಾಯತ್ ರಾಜ್ ವ್ಯವಸ್ಥೆಯನ್ನು ಕಾಣಬಹುದಾಗಿದೆ. ಲೋಕಸಭೆಯಲ್ಲಿ ಮತ್ತು ರಾಜ್ಯಸಭೆಯಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಕಾಯ್ದಿರಿಸಬೇಕಾದರೆ ಮಹಿಳಾ ಮೀಸಲಾತಿಬೇಕೆಂದು ಮಹಿಳಾ ಚಳುವಳಿಗಳು ಒತ್ತಾಯಿಸುತ್ತಿವೆ. ಹಾಗೆ ಮೀಸಲಾತಿ ದೊರೆಯಬಾರದು ಎನ್ನುವ ಕುತಂತ್ರವನ್ನು ಪುರುಷ ವ್ಯವಸ್ಥೆ

ಮಾಡುತ್ತಿವೆ. ಹೀಗಾಗಿ ಮುಂದಿನ ಅಧ್ಯಯನದಲ್ಲಿ ನಿರ್ಣಾಯಾತ್ಮಕ ಅಧಿಕಾರದ ಸ್ಥಾನಗಳಲ್ಲಿ ಮಹಿಳೆಯರು ಬರಬೇಕಾದರೆ ಯಾವ ಬಗೆಯ ಯೋಜನೆಗಳು ಮತ್ತು ಚಳುವಳಿಗಳು ಇರಬೇಕು ಅನ್ನುವುದನ್ನು ಚರ್ಚಿಸುವುದರ ಮುಖಾಂತರ ಈ ಮೀಸಲಾತಿ ಪ್ರಕರಣವನ್ನು ಒಂದು ನಿದರ್ಶನವಾಗಿ ಇಟ್ಟುಕೊಂಡು ಅಧ್ಯಯನ ಮಾಡಲಾಗುತ್ತದೆ.

ಅಡಿಟಿಪ್ಪಣಿ

೧. ಮೂಲ: ಛಾಯಾಧಾತಾರ್, ಸರಸ್ವತೀ ರಿಸಬೂಡ್ (ಅನು), ಸ್ತ್ರೀಪುರಷರು, ಪು.೧೮೨

೨. ಡಾ.ಪ್ರೀತಿಶುಭಾಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪು.೭೫

೩. ಎನ್.ಗಾಯತ್ರಿ, ಮಹಿಳಾ ಚಳುವಳಿಯ ಮಜಲುಗಳು, ಪು.೩೩

೪. ಡಾ.ಪ್ರೀತಿಶುಭಾಚಂದ್ರ, ಪೂರ್ವೋಕ್ತ, ಪು.೩೧೧

೫. ಗೀತಾಕೃಷ್ಣಮೂರ್ತಿ, ಮಹಿಳೆ, ಕಾನೂನು ಮತ್ತು ರಾಜಕಾರಣ, ಪು.೧೪೩

ಅಧ್ಯಾಯ ೫

ಮಹಿಳಾ ಮೀಸಲಾತಿ

ಸ್ವಾತಂತ್ರ್ಯ ಪೂರ್ವದಿಂದಲೂ ರಾಜಕೀಯ ಕ್ಷೇತ್ರವನ್ನು ಗಮನಿಸುಸತ್ತಾ ಬಂದಾಗ ಚಾರಿತ್ರಿಕವಾಗಿ ವಿಧವೆಯರಾದ ರಾಣಿಯರು ಆಳ್ವಿಕೆಯನ್ನು ನಡೆಸಿರುವ ಕೆಲವು ಉದಹರಣೆಗಳನ್ನು ಬಿಟ್ಟರೆ ರಾಜಕೀಯ ಕ್ಷೇತ್ರವು ಸಾಮಾನ್ಯವಾಗಿ ಮಹಿಳೆಯರನ್ನು ದೂರ ಇರಿಸಿರುವುದು ಇಂದಿಗೂ ಕಂಡುಬರುತ್ತಿದೆ. ವಂಶಪಾರಂಪರಿಕವಾಗಿ ರಾಜಮನೆತನದ ಕುಟುಂಬಗಳೇ ರಾಜಕೀಯ ಕ್ಷೇತ್ರದಲ್ಲಿ ಆವರಿಸಿಕೊಂಡಾಗ ಜನ ಸಾಮಾನ್ಯರಿಗೆ ಅವಕಾಶಗಳು ದೊರಕದೇ ಇದ್ದಾಗ ಮಹಿಳೆಯರು ಭಾಗವಹಿಸುವುದು ಕನಸಿನ ಮಾತಾಗಿತ್ತು. ಆಧುನಿಕ ಪ್ರಜಾ ಪ್ರಭುತ್ವ ರಾಜಕೀಯ ವಿಕಾಸಗೊಂಡಂತೆ ರಾಜಕೀಯ ಕ್ಷೇತ್ರವು ಸಾರ್ವಜನಿಕ ಸ್ವತ್ತಾದ ನಂತರ ೧೯ನೇ ಶತಮಾನದಲ್ಲಿ ಮಹಿಳೆಯರು ಮೂಲಭೂತ ಹಕ್ಕುಗಳನ್ನು ಪಡೆಯುವಲ್ಲಿ ಚಳುವಳಿಗಳು ಆರಂಭವಾದವು. "ಪ್ರಥಮಬಾರಿಗೆ ೧೮೯೩ರಲ್ಲಿ ನ್ಯೂಜಿಲ್ಯಾಂಡ್‌ನಲ್ಲಿ, ನಂತರ ೧೯೦೨ರಲ್ಲಿ ಆಸ್ಟ್ರೇಲಿಯಾದಲ್ಲಿ ೧೯೧೮ರಲ್ಲಿ ಬ್ರಿಟನ್‌ನಲ್ಲಿ ಮತ್ತು ೧೯೨೦ರಲ್ಲಿ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಮಹಿಳೆಯರ ಹಕ್ಕುಗಳನ್ನು ಪಡೆದರು. ಭಾರತದಲ್ಲಿ ಮಹಿಳೆಯರ ಮತದಾನದ ಹಕ್ಕು ಚಳುವಳಿ ೧೯೧೭ರಲ್ಲಿ ಶುರುವಾಯಿತು. ಆದರೆ ಅದು ಸಂಪೂರ್ಣವಾಗಿ ದೊರೆತಿದ್ದು, ೧೯೫೦ರಲ್ಲಿ ಹೊಸ ಸಂವಿಧಾನ ಜಾರಿಗೆ ಬಂದ ಮೇಲೆ"[೧]

ಮಹಿಳಾ ಸಂಘಟನೆಗಳು ಪ್ರಾರಂಭಗೊಂಡಿನಿಂದಲು ತಮ್ಮ ಸಮಸ್ಯೆಗಳಿಗೆ ಪರಿಹಾರಗಳನ್ನು ಕಂಡುಕೊಳ್ಳುವ ಅಹವಾಲುಗಳನ್ನು ಒಡ್ಡಿಯೇ ಹೊರತು, ತಮಗೆ ದೊರೆಯಬೇಕಾದ ಹಕ್ಕುಗಳನ್ನು ಪಡೆದುಕೊಳ್ಳಲು ಸವಾಲುಗಳನ್ನು ಮಂಡಿಸಿರುವುದಿಲ್ಲ. ಕಾರಣವೆಂದರೆ ಪಿತೃಪ್ರಧಾನ ಸಮಾಜದಲ್ಲಿ ಮಹಿಳೆಯರ ಸುತ್ತಮುತ್ತಲು ಹಲವಾರು ಕಟ್ಟುಸಂಪ್ರದಾಯಗಳ ನಿಯಮಾವಳಿಗಳನ್ನು ಹೆಣೆದಿರುವುದು ಕಂಡುಬರುತ್ತವೆ. ಆದ್ದರಿಂದ ಈ ಎಲ್ಲ ನಿಯಮಾವಳಿಗಳನ್ನು ಮೀರಿ ಹೊರಬಂದರೆ ಎಲ್ಲಿ ತನ್ನ ಬದುಕಿಗೆ ಕುಂದುಂಟಾಗುವುದು ಎನ್ನುವ ಕಲ್ಪನೆಯಿಂದ ಬಹುಸಂಖ್ಯಾ ಮಹಿಳೆಯರು ಸಾರ್ವಜನಿಕ ಕ್ಷೇತ್ರಗಳಿಗೆ ಪ್ರವೇಶಿಸಲು ಅಂಜುತ್ತಾರೆ. ಮತ್ತು ಅಂತಹ ಸ್ಥಳಗಳಿಗೆ ಪ್ರವೇಶಿಸಲು ಹಿಂಜೆರೆಯುತ್ತಾರೆ. ಏಕೆಂದರೆ ಪುರುಷರು ಸೃಷ್ಟಿಸಿರುವ ಅಪಕಲ್ಪನೆಗಳು ಹೆಣ್ಣಿನ ಮನಸ್ಸಿನ ಮೇಲೆ ದೃಢವಾಗಿ ಮುದ್ರಿತಗೊಂಡಿವೆ. ಉದಾ : ವಿವಾಹದ ಸುತ್ತಮುತ್ತಲಿರುವ, ಶೀಲ, ಮಾನ, ಪಾತಿವ್ರತ್ಯ, ಈ ಎಲ್ಲವುಗಳ ಹೊಣೆ ಹೆಂಗಸಿನ ಮೇಲೆ ಇರುವುದರಿಂದ ಸಾರ್ವಜನಿಕ ಸ್ಥಳಗಳಲ್ಲಿ ಉದ್ಯೋಗ ಮಾಡಲು ಮತ್ತು ರಾಜಕೀಯ ಕ್ಷೇತ್ರದಲ್ಲಿ ಭಾಗವಹಿಸಲು ಮತ್ತು ಬೃಹತ್ ಪ್ರಮಾಣದಲ್ಲಿ ಹೋರಾಟಗಳನ್ನು ಮಾಡಲು ಹಿಂಜೆರೆಯುವಂತೆ ಪುರುಷ ಸಮಾಜದ ವ್ಯವಸ್ಥೆ ಸೃಷ್ಟಿಮಾಡಿದೆ.

ಹೀಗಾಗಿ ಸಂಪೂರ್ಣವಾಗಿ ಮಹಿಳೆಯರು ರಾಜಕೀಯದಲ್ಲಿ ಪ್ರವೇಶಿಸಲು ಅಡೆತಡೆಗಳು ಉಂಟಾಗುತ್ತಿವೆ. ಸ್ವತಂತ್ರ್ಯಪೂರ್ವದಿಂದ ಹಿಡಿದು ಇಂದಿನವರಿಗೆ ಯಾಕೆ ಅವಳು ಸಬಲಳಾಗಿಲ್ಲ. ಇನ್ನೂ ದುರ್ಬಲ ಸ್ಥಿತಿಯಲ್ಲಿಯೇ ಉಳಿದುಕೊಂಡಿದ್ದಾಳೆ. ಎನ್ನುವುದನ್ನು ಕೂಲಂಕುಶವಾಗಿ ಅಭ್ಯಸಿಸುವ ಇಂದಿನ ಮಹಿಳಾ ಚಳುವಳಿಗಳು ಅಹವಾಲುಗಳನ್ನು ಒಡ್ಡದೆ ತಮ್ಮ ಸವಾಲುಗಳನ್ನು ಮಂಡಿಸಿ ತಮ್ಮ ಹಕ್ಕುಗಳಿಗಾಗಿ ಹೋರಾಡುತ್ತಿವೆ. ಆದರೆ ೧೯೭೦ರ ಹಿಂದಿನ ಮಹಿಳಾ ಚಳುವಳಿಕಾರರು ತಮ್ಮ ಅಹವಾಲುಗಳನ್ನು ಸಲ್ಲಿಸಿ ಅವುಗಳಿಗೆ ತಕ್ಕಮಟ್ಟಿಗೆ ಪರಿಹಾರವನ್ನು ಕಂಡುಕೊಂಡಾಗ ಇದೇ ತಾವು ಜಯಿಸಿದ ಜಯ ಎಂದು ಸಂತೈಸಿಸುತ್ತಿದ್ದವು. ಆದ್ದರಿಂದ ಮಹಿಳೆಯರೆಲ್ಲರು ಸಬಲರಾಗದೆ ದುರ್ಬಲಸ್ಥಿತಿಯಲ್ಲಿಯೇ ಉಳಿದು ಕೊಂಡಿದ್ದರು.

ಇತ್ತೀಚಿನ ಮಹಿಳಾ ಚಳುವಳಿಕಾರರು ಬೇಡಿಕೆಯ ಹಂತದಿಂದ ಹಕ್ಕು ಒತ್ತಾಯದ ಹಂತಕ್ಕೆ ಬಂದಿರುವುದರಿಂದ, ನಮ್ಮ ಹಕ್ಕುಗಳು ನಮಗೆ ಸಲ್ಲಬೇಕು ಎನ್ನುವ ರೀತಿಯಲ್ಲಿ ಚಳುವಳಿಗಳನ್ನು ಮಾಡುತ್ತಿವೆ. ಇಂತಹ ಕ್ಲಿಷ್ಟ ಪರಿಸ್ಥಿತಿಯಲ್ಲಿ, ಪರೋಕ್ಷವಾಗಿ ರಾಜಕೀಯದಲ್ಲಿ ಪ್ರವೇಶ ಪಡೆದರೂ ಸಹ ಅವಳನ್ನು ಎರಡನೆಯ ದರ್ಜೆ ಸ್ಥಾನಗಳಲ್ಲಿ ತನ್ನ ಕಾರ್ಯ ನಿಭಾಯಿಸಲು ಒಪ್ಪಿಕೊಳ್ಳುವಂತೆ ಮಾಡುತ್ತಾರೆ. ನಮ್ಮ ದೇಶದ ಆಡಳಿತ ವ್ಯವಸ್ಥೆಯ ನಿರ್ಣಾಯಕ ಹಂತಗಳೆಂದರೆ, ರಾಜ್ಯ ಮಟ್ಟಕ್ಕೆ ವಿಧಾನಸಭೆ, ರಾಷ್ಟ್ರಮಟ್ಟದಲ್ಲಿ ಲೋಕಸಭೆ, ಇವುಗಳಿಗೆ ಮಹಿಳೆಯರನ್ನು ಪ್ರವೇಶಿಸದಂತೆ ತಡೆಗಟ್ಟುತ್ತಿದ್ದಾರೆ. ಏಕೆಂದರೆ ಮಹಿಳೆಯರು ನಿರ್ಣಾಯಕ ಹಂತಕ್ಕೆ ಬರಕೂಡದು ಮತ್ತು ಒಂದು ವೇಳೆ ಬಂದರೆ ಇದುವರೆಗೆ ಪ್ರಬಲವಾಗಿ ಬೇರೂರಿಕೊಂಡ ಪುರುಷರಾಜಕಾರಣಿಗಳು ತಮ್ಮ ಸ್ಥಾನಗಳನ್ನು ಬಿಟ್ಟುಕೊಡಬೇಕಾಗುತ್ತದೆ ಎನ್ನುವ ಆತಂಕ ಇಡೀ ಮೀಸಲಾತಿ ಪ್ರಕರಣವನ್ನೇ ಮುಂದೂಡುತ್ತಾ ಬರುತ್ತಿದ್ದಾರೆ. ಇಂತಹ ಕುತಂತ್ರ ಗಳನ್ನೇ ಮಾಡುತ್ತಾ ಬರುತ್ತಾ ಇದ್ದಾರೆ. ಹೀಗಾಗಿ ಮಹಿಳಾ ಸಮುದಾಯಗಳು ಸಬಲೀಕರಣವಾಗಬೇಕಾದರೆ, ನಿರ್ಣಾಯಕ ಸ್ಥಾನಗಳು ದಕ್ಕಬೇಕಾದರೆ, ಅಥವಾ ಜಾರಿಗೊಳಿಸುವಂತಹ ಹಂತ ದಕ್ಕಬೇಕಾದರೆ ಎಲ್ಲಾ ವಲಯಗಳಲ್ಲಿ ಮಹಿಳಾ ಮೀಸಲಾತಿ ಅತ್ಯವಶ್ಯಕವಾಗಿದೆ.

ಮೀಸಲಾತಿಯ ತತ್ವ ಪ್ರಮುಖವಾಗಿ ಮೂರು ಅಂಶಗಳನ್ನು ಒಳಗೊಂಡಿವೆ. ರಾಜಕೀಯ ಕ್ಷೇತ್ರದಲ್ಲಿ, ಲೋಕಸಭೆ ಮತ್ತು ವಿಧಾನಸಭಾ ಸ್ಥಾನಗಳಲ್ಲಿ ಮೀಸಲಾತಿ, ಸರಕಾರಿ ನೌಕರಿಯಲ್ಲಿ ಮೀಸಲಾತಿ ಮತ್ತು ಶೈಕ್ಷಣಿಕ ಕ್ಷೇತ್ರದಲ್ಲಿ ಮೀಸಲಾತಿ ಈ ಮೂರು ಅಂಶಗಳು ಒಂದೇ ಗುರಿಯ ಬೇರೆ ಬೇರೆ ಮುಖಗಳಾಗಿದ್ದರೂ ಸರ್ಕಾರಿ ನೌಕರಿಯಲ್ಲಿ ಮೀಸಲಾತಿ ಮತ್ತು ಶೈಕ್ಷಣಿಕ ಕ್ಷೇತ್ರದ ಮೀಸಲಾತಿಗಿಂತ ರಾಜಕೀಯ ಕ್ಷೇತ್ರದ ಮೀಸಲಾತಿಯು ಅತ್ಯಂತ ಚರ್ಚಾಸ್ಪದ ವಿಷಯವಾಗಿದೆ. ಏಕೆಂದರೆ ಭಾರತದೇಶದ ಸರ್ವಾಗೀಣ ಅಧಿಕಾರ ಚಲಾಯಿಸುವ ಮತ್ತು ಅಂತಿಮ ನಿರ್ಣಯಗಳನ್ನು ತೆಗೆದುಕೊಂಡು ಜಾರಿಗೊಳಿಸು

ವಂತಹ ಅಥವಾ ಶಕ್ತಿಸಾಮರ್ಥ್ಯವನ್ನು ಈ ವಲಯ ಪಡೆದುಕೊಂಡಿರುತ್ತವೆ. ಆದುದರಿಂದ ರಾಜಕೀಯ ಮೀಸಲಾತಿಯು ಅಷ್ಟು ಮಹತ್ವದ ಸ್ಥಾನವನ್ನು ಪಡೆದಿರುವುದರಿಂದ ಮಹಿಳಾ ಮೀಸಲಾತಿಯ ಮಸೂದೆಯನ್ನು ಮಂಡಿಸದೆ ಪ್ರತಿಸಲ ಅದನ್ನು ಮುಂದೂಡುತ್ತಾ ಬರುತ್ತಿದ್ದಾರೆ. ಈ ಮೀಸಲಾತಿಯಿಂದ ಸಮಾಜದಲ್ಲಿ ಮಹಿಳೆಯರಿಗೆ ಉತ್ತಮವಾದ ಸ್ಥಾನಮಾನ, ಘನತೆ, ಗೌರವ, ಪ್ರತಿಷ್ಠೆ ಮತ್ತು ಅಧಿಕಾರ ಚಲಾಯಿಸುವ ಹಕ್ಕನ್ನು ಪಡೆಯುತ್ತಾಳೆ.

ಮೀಸಲಾತಿಯಿಂದ ತಾವಿರುವ ಅಸಹಾಯಕ ಪರಿಸ್ಥಿತಿ ಪ್ರತಿಕೂಲವಾತಾವರಣದಿಂದಾಗಿ ಜಾತಿ, ಧರ್ಮ, ವರ್ಗ, ಜನಾಂಗ, ಪ್ರದೇಶ, ಲಿಂಗಭೇದಗಳಲ್ಲಿ ಕೆಳಸ್ಥರದಲ್ಲಿರುವುದರಿಂದ ಅಂತವರು ಮುಕ್ತ ಸ್ಪರ್ಧೆಯಲ್ಲಿ ಭಾಗವಹಿಸಲು ಸಾಧ್ಯವಾಗದ ಕೆಲವೊಂದು ನಿರ್ದಿಷ್ಟ ಗುಂಪುಗಳಿಗೆ ಮೀಸಲಾತಿಯ ಮೂಲಕ ಕನಿಷ್ಠ ಅವಕಾಶವನ್ನಾದರೂ ದಕ್ಕಿಸಿಕೊಳ್ಳಲು ಅವಕಾಶಗಳು ಕಲ್ಪಿಸುತ್ತಿವೆ. ಬಡವರು-ಬಲ್ಲಿದರು, ಮಾಲೀಕ-ಕಾರ್ಮಿಕ, ಮೇಲ್ಜಾತಿ-ಕೆಳಜಾತಿ, ಬಹುಸಂಖ್ಯಾತರು-ಅಲ್ಪಸಂಖ್ಯಾತರು, ಪುರುಷ-ಮಹಿಳೆ ಮುಂತಾದ ಶ್ರೇಣಿಕೃತಗೊಂಡ ಸಮಾಜದಲ್ಲಿ ಸ್ವಾತಂತ್ರ್ಯ, ಸಮಾನತೆ, ಭ್ರಾತೃತ್ವ ಬೆಳೆಸುವ ಸಾಧನವಾಗಿ ಮೀಸಲಾತಿ ಕಾರ್ಯನಿರ್ವಹಿಸುತ್ತದೆ. ಹಾಗೆಯೇ ಪ್ರಬಲ ಮತ್ತು ದುರ್ಬಲ ಎನ್ನುವ "ವಿಷಯ ಪರಿಸ್ಥಿತಿಯ ಕಾರಣದಿಂದಾಗಿ ಲಭ್ಯವಿರುವ ಅವಕಾಶಗಳನ್ನು ಬಳಸಿಕೊಳ್ಳಲು ಸಾಧ್ಯವಾಗದ ದುರ್ಬಲವರ್ಗದ ಜನರಿಗೆ ಅವಕಾಶಗಳು ಲಭ್ಯವಾಗುವಂತೆ, ದಕ್ಕುವಂತೆ ಮಾಡುವುದು, ಪ್ರಬಲರಿಗೆ ಇರುವ ಎಲ್ಲ ಅವಕಾಶಗಳನ್ನು ತಮಗೆ ದಕ್ಕಿಸಿಕೊಳ್ಳಲಾಗದಂತೆ ನೋಡಿಕೊಳ್ಳುವುದು ಮೀಸಲಾತಿಯ ಉದ್ದೇಶವಾಗಿದೆ."[೨]

ಸಮಾಜದಲ್ಲಿ ದುರ್ಬಲರೆನಿಸಿಕೊಂಡ ಮಹಿಳೆಯರು, ಮೀಸಲಾತಿಯಿಂದ ಸಾರ್ವಜನಿಕ ಕ್ಷೇತ್ರಗಳಲ್ಲಿ ಅಂದರೆ ಉದ್ಯೋಗ ಕ್ಷೇತ್ರಗಳಲ್ಲಿ ತಮಗೆ ಮೀಸಲಿರುವ ಸ್ಥಾನಗಳಲ್ಲಿ ಯಾವುದೇ ನಿರ್ಬಂಧನೆಯಿಲ್ಲದೆ ಆಸ್ಥಾನಗಳಲ್ಲಿ ತಮ್ಮನ್ನು ತೊಡಗಿಸಿಕೊಳ್ಳಬಹುದು. ಅಂದರೆ ಜಾತಿವಾರು ಮೀಸಲಾತಿ ಇದ್ದರೂ ಸಹ ಇನ್ನಷ್ಟು ಉಪಯುಕ್ತವಾಗುತ್ತದೆ. ಏಕೆಂದರೆ ಆರ್ಥಿಕವಾಗಿ ಶೋಷಣೆಗೊಂಡ ಕೆಳವರ್ಗದ ಮಹಿಳೆಯರು ಆರ್ಥಿಕವಾಗಿ ಪ್ರಬಲಗೊಂಡ ಮೇಲ್ ವರ್ಗದ ಕುಟುಂಬದ ಮಹಿಳೆಯರ ಜೊತೆ ಪೈಪೋಟಿ ಮಾಡಲು ಅಸಮರ್ಥಳಾದ ಕೆಳವರ್ಗದ ಮಹಿಳೆಯರು ಮುಕ್ತವಾಗಿ ಪ್ರವೇಶ ಪಡೆಯಲು ಅನುವಾಗುತ್ತದೆ. ಶೈಕ್ಷಣಿಕವಾಗಿಯೂ ಕೂಡ ಉನ್ನತ ಶಿಕ್ಷಣ ಪಡೆದುಕೊಳ್ಳಲು ಅಷ್ಟೇ ಉಪಯುಕ್ತವಾಗುತ್ತದೆ. ರಾಜಕೀಯ ಕ್ಷೇತ್ರಗಳಾದ ವಿಧಾನಸಭಾ ಮತ್ತು ಲೋಕಸಭೆಗಳಲ್ಲಿ, ಅಂತಿಮನಿರ್ಣಾಯಕ ಸ್ಥಾನಗಳನ್ನು ಪಡೆದುಕೊಳ್ಳಲು ಮತ್ತು ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳಲು ಅಥವಾ ಖಾಯಂ ಆಗಿ ಮಹಿಳೆಯರು ಸ್ಥಾನಗಳನ್ನು ಪಡೆದುಕೊಳ್ಳಲಿಕ್ಕೆ ಅಥವಾ ಆಯಾ ಕ್ಷೇತ್ರಗಳಲ್ಲಿ ಮಹಿಳೆಯರು ಕಾಣಿಸಿಕೊಳ್ಳಲು ಸಾಧ್ಯವಾಗುತ್ತದೆ. ಒಂದು ವೇಳೆ ಮೀಸಲಾತಿ ಕಡ್ಡಾಯವಾಗಿ ಇರದಿದ್ದಲ್ಲಿ ಮಹಿಳೆಯರಿಗೆ ರಾಜಕೀಯವಾಗಿ ನಿರ್ಣಾಯಕ

ಅಧಿಕಾರ, ಉನ್ನತ ಉದ್ಯೋಗಗಳನ್ನು ಪಡೆಯುವ ಹಕ್ಕು ಮತ್ತು ಉನ್ನತ ಶಿಕ್ಷಣದ ಅವಕಾಶಗಳು ಖಂಡಿತವಾಗಿಯು ದೊರೆಯುತ್ತಿಲ್ಲ ಎಂದು ನಿಚ್ಚಳವಾಗಿ ಹೇಳಬಹುದಾಗಿದೆ.

ಮೀಸಲಾತಿ ಪ್ರಕರಣವನ್ನು ಕೈಗೆತ್ತಿಕೊಂಡ ಮಹಿಳಾ ಚಳುವಳಿಕಾರರು, ಮಹಿಳೆಯು ರಾಜಕೀಯ ವಲಯದಲ್ಲಿ ಸಬಲೀಕರಣಗೊಳ್ಳಬೇಕು. ಅಂದಾಗ ಮಾತ್ರ ಮಹಿಳೆಯರು ನಿರ್ಣಾಯಕ, ಜಾರಿಗೊಳಿಸುವಂತ ಹಂತವನ್ನು ತಲುಪಬೇಕು ಎನ್ನುವ ಆಸೆ ಆಕಾಂಕ್ಷೆಗಳು, ಆಧುನಿಕರಣ ಬೆಳೆದಂತೆ ಹೆಚ್ಚಾಗಿ ಮಹಿಳೆ ಜಾಗೃತ ಸ್ಥಿತಿ ತಲುಪಲು ಸತತ ಪ್ರಯತ್ನಿಸುತ್ತಾಳೆ. ಹೀಗಾಗಿ ಇಂದಿನ ಮಹಿಳಾ ಚಳುವಳಿಗಳು ತಮ್ಮ ಬೇಡಿಕೆಗಳನ್ನು, ಅಹವಾಲುಗಳನ್ನು ಸಲ್ಲಿಸುವುದರ ಬದಲಾಗಿ ತಮಗೆ ದೊರೆಯಬೇಕಾದ ಹಕ್ಕುಗಳನ್ನು ತಮ್ಮದಾಗಿಸಿಕೊಳ್ಳುವುದಕ್ಕಾಗಿ ಒತ್ತಾಯಗಳನ್ನು ಮಂಡಿಸುತ್ತಿವೆ. ಆದ್ದರಿಂದ ಇದು ಪುರುಷ ರಾಜಕಾರಣಿಗಳಿಗೆ ನುಂಗಲಾಗದ ತುತ್ತಾಗಿದೆ. ಏಕೆಂದರೆ ಇದುವರೆಗೆ ಯಾವುದೇ ಒಂದು ಬೇಡಿಕೆಗೆ ಭ್ರಮೆಯ ರೂಪದಲ್ಲಿ ಯಾವುದೋ ಕೆಲವು ಸೌಲಭ್ಯಗಳನ್ನು ಒದಗಿಸುವುದರ ಮುಖಾಂತರ ಮಹಿಳಾ ಸಂಘಟನಕಾರರನ್ನು ಸುಮ್ಮನಾಗಿಸಬಹುದು ಎನ್ನುವುದು ಕನಸಿನ ಮಾತಾಗಿದೆ. ಆದ್ದರಿಂದ ಪರೋಕ್ಷವಾಗಿ ಅವರಿಗೆ ರಾಜಕೀಯದಲ್ಲಿ ಸ್ಥಾನಗಳನ್ನು ಕೊಡುತ್ತಿದ್ದಾರೆ. ಆದರೆ ಅವು ಎರಡನೆಯ ಹಂತದ ಸ್ಥಾನಗಳಾಗಿರುತ್ತವೆ. ಇದುವರೆಗೆ ಮಹಿಳೆಯರು ಬೇಡುವವರು, ಗಂಡಸರಾದವರು ಕೊಡುವವರು ಎನ್ನುವ ಚಿಂತನೆಯಿಂದ ಹೊರಬಂದಿಲ್ಲ. ಈ ಮಾತುಗಳನ್ನು ಮುಕ್ತವಾಗಿ ಹೇಳಲಾಗುವುದಿಲ್ಲ. ಆದರೆ ಮಹಿಳೆಯರಿಗೆ ಕೊಡುವಂತಹ ಸ್ಥಾನಗಳಲ್ಲಿಯೇ ಕಂಡುಬರುತ್ತಿವೆ. ಅಂದರೆ ಮಹಿಳೆಯರಿಗೆ ನೀಡಿದಂತಹ ಸ್ಥಾನಗಳಲ್ಲಿ ಯಾವುದೇ ರೀತಿಯ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ ಕಲ್ಪಿಸುವುದಿಲ್ಲ. ಮಹಿಳೆಯರ ಸ್ಥಾನಗಳಿಗಿಂತ ಮೇಲಿರುವ ಪುರುಷ ಪ್ರಧಾನರು ಎಲ್ಲ ನಿರ್ಣಾಯಕ ಸ್ಥಾನಗಳನ್ನು ಆಕ್ರಮಣ ಮಾಡಿಕೊಂಡು ತಮ್ಮದೇ ಅಂತಿಮ ನಿರ್ಣಯ ತೀರ್ಮಾನಗಳನ್ನು ತೆಗೆದುಕೊಳ್ಳುತ್ತಾರೆ. ಒಟ್ಟಾರೆಯಾಗಿ ಹೇಳುವುದಾದರೆ, ಸ್ತ್ರೀಯರಿಗೆ ಮೀಸಲಿರಿಸಿರುವ ಸ್ಥಾನಗಳ ಮೇಲೊಬ್ಬ ಪುರುಷ ಅಧಿಕಾರಿ ಇದ್ದೇ ಇರುತ್ತಾನೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆ ಸಣ್ಣ ಪುಟ್ಟ ತೀರ್ಮಾನಗಳನ್ನು ತೆಗೆದುಕೊಳ್ಳಬಹುದಷ್ಟೆ. ಇದಕ್ಕೆಲ್ಲ ಪ್ರಮುಖವಾಗಿ ಪುರುಷ ರಾಜಕಾರಣೀಯ ಕುತಂತ್ರ ಬಳಸುತ್ತಾ ಇದ್ದಾರೆ.

ಈ ರೀತಿಯ ಪುರಷ ವ್ಯವಸ್ಥೆಯ ಕುತಂತ್ರಗಳು ಎಲ್ಲ ವಲಯಗಳಲ್ಲಿ ಕಾಣಬಹುದಾಗಿದೆ. ಕುಟುಂಬ ವಲಯದಲ್ಲಿ ಗೃಹಿಣಿಗೆ ಅಧಿಕಾರ ಕೊಟ್ಟಂತೆ ಮಾಡುತ್ತಾರೆ. ಆದರೆ ಅವಳು ಯಾವುದೇ ನಿರ್ಣಯ ತೆಗೆದುಕೊಳ್ಳುವಲ್ಲಿ ಕಾಣೆಯಾಗುತ್ತಾಳೆ. ಅಂದರೆ ಪುರುಷನೇ ಎಲ್ಲ ನಿರ್ಣಾಯಗಳನ್ನು ತೆಗೆದುಕೊಳ್ಳುತ್ತಾನೆ. ರಾಜಕಾರಣದಲ್ಲಿಯೂ ಸಹ ಮಹಿಳೆಯರನ್ನು ಎರಡನೇ ದರ್ಜೆಯ ಪ್ರಜೆಯನ್ನಾಗಿ ಯಾವ ರೀತಿ ಕಾಣುತ್ತಾರೆ ಎನ್ನುವುದನ್ನು ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಕಾಣಬಹುದಾಗಿದೆ.

ಗಾಂಧಿ ಕಲ್ಪನೆಯಲ್ಲಿ ಪಂಚಾಯತ್‌ರಾಜ್ ವ್ಯವಸ್ಥೆಯು ಅತ್ಯುತ್ಕೃಷ್ಟವಾದುದ್ದಾಗಿದೆ. ಏಕೆಂದರೆ ರಾಜಕೀಯವಾಗಿ, ಪ್ರಜಾಪ್ರಭುತ್ವಾವಾದಿ ವಿಕೇಂದ್ರಿಕರಣದ ಮೂಲಕ ಪ್ರತಿ ಹಳ್ಳಿಗೂ ಸ್ವರಾಜ್ಯ, ಸ್ವಾತಂತ್ರ್ಯ, ಸ್ವಾಯತ್ತತೆಯನ್ನು ನೀಡುವುದು ಬಹುಮುಖ್ಯವಾದ ಉದ್ದೇಶವಾಗಿದೆ. ಪಂಚಾಯತ್ ವ್ಯವಸ್ಥೆಯು ತನ್ನನ್ನು ತಾನು ಆಳಿಕೊಳ್ಳುವುದು. ಆ ಗ್ರಾಮಗಳ ಅಭಿವೃದ್ಧಿಗೆ ಅನುಗುಣವಾಗಿ ಯೋಜನೆಗಳನ್ನು ಹಮ್ಮಿಕೊಳ್ಳುವುದು. ಆಯಾ ಗ್ರಾಮದ ಸ್ಥಳೀಯ ಸಮಸ್ಯೆಗಳನ್ನು ತಾವೇ ಸ್ವಯಂ ಆಗಿ ಪಾಲ್ಗೊಂಡು ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳುವುದು. ಪ್ರತಿಯೊಂದು ಗ್ರಾಮವು ದೇಶದ ಒಂದು ಅವಿಭಾಜ್ಯ ಅಂಗ. ಪ್ರತಿಯೊಂದು ಗ್ರಾಮಿಕನಿಗೂ ಸ್ವಾತಂತ್ರ್ಯವಿದೆ ಎಂಬ ಭಾವನೆಗಳನ್ನು ಪ್ರತಿಯೊಬ್ಬ ಹಳ್ಳಿಗನಲ್ಲಿ ಕುದುರಿಸುವುದು ಈ ಪಂಚಾಯತ್ ಆಡಳಿತದ ಧ್ಯೇಯೋದ್ದೇಶವಾಗಿದೆ.

ಪಂಚಾಯತ್ ಆಡಳಿತದ ಉದ್ದೇಶ ಗ್ರಾಮದೇಳ್ಗೆಯಾಗಿದೆ. ಗ್ರಾಮ ರಾಜ್ಯದಿಂದ ರಾಮರಾಜ್ಯವನ್ನು ಕಟ್ಟುವ ಕನಸು ಮಹಾತ್ಮ ಗಾಂಧೀಜಿಯವರ ಹಂಬಲವಾಗಿತ್ತು. ಗ್ರಾಮಸಭೆಯಿಂದ, ವಿಧಾನಸಭೆಗೆ ಅರಿದು ಲೋಕಸಭೆಗೆ ಆಡಳಿತ ಮುಂದೊರೆದರೆ, ಆಡಳಿತದ ಅಡಿಪಾಯ ಭದ್ರಗೊಳ್ಳುತ್ತದೆ. ಅಧಿಕಾರವು ದೇಶದ ರಾಜಧಾನಿಯಲ್ಲಿ ಕೇಂದ್ರಿಕೃತಗೊಳ್ಳದೆ, ರಾಜ್ಯದ ರಾಜಧಾನಿಗಳಲ್ಲಿ ಹೆಪ್ಪುಗಟ್ಟದೆ ದೇಶದ ಪ್ರತಿಹಳ್ಳಿಗಳಿಗೂ ಹಂಚಿಕೆಯಾಗಬೇಕಾಗಿದೆ. ಗ್ರಾಮದ ಜನತೆಯೇ ಸರಕಾರದ ಕಡೆ ಹೋಗುವುದಿಲ್ಲ. ಸರ್ಕಾರವೇ ಜನತೆಯ ಕಡೆ ನಾಗಲೋಟದಲ್ಲಿ ಬರಬೇಕಾಗಿದೆ. ರಾಷ್ಟ್ರಕ್ಕೆ ಲೋಕಸಭೆ, ರಾಜಕ್ಕೆ ವಿಧಾನಸಭೆ ಇದ್ದಂತೆ. ಗ್ರಾಮಕ್ಕೆ ಗ್ರಾಮಸಭೆ ಇರುವುದು. ಪ್ರತಿಗ್ರಾಮವು ತನ್ನ ಗ್ರಾಮದ ಅಭಿವೃದ್ಧಿಯನ್ನು ತನ್ನ ಗ್ರಾಮಸಭೆಯ ಮುಖಾಂತರ ಮಾಡಿಕೊಳ್ಳಬೇಕು. ತನ್ನ ಕಾಲ ಮೇಲೆ ತಾನು ನಿಲ್ಲಬೇಕು. ತನ್ನ ಏಳ್ಗೆ ತನ್ನ ಕೈಯಲ್ಲಿಯೇ ಇದೆ ಎನ್ನುವುದು ಗಾಂಧೀಯವರ ತತ್ವವಾಗಿದೆ. "ಅಧಿಕಾರ ವಿಕೇಂದ್ರಿಕರಣವು ಹೆಚ್ಚಾದಂತೆ ಪ್ರಜಾಪ್ರಭುತ್ವವು ಸಹ ಹೆಚ್ಚು ಮೆರಗನ್ನು ಪಡೆಯುವುದು ಎಂದು ಹೆರಾಲ್ಡ್ ಜೆ.ಲಾಸ್ಕಿಯವರು ಅಭಿಪ್ರಾಯ ಪಟ್ಟಿದ್ದಾರೆ."[೪]

ಗಾಂಧಿ ಕಲ್ಪನೆಯ ಅರ್ಥದಲ್ಲಿ ಅಧಿಕಾರವಿಕೇಂದ್ರಿಕರಣಗೊಳ್ಳುವುದೆಂದರೆ ಮೇಲಿಂದ ಕೆಳಗೆ ವರ್ಗೀಕೃತವಾಗಬೇಕು. ಅಂದರೆ ರಾಷ್ಟ್ರದ ಲೋಕಸಭೆಯಿಂದ ಹಿಡಿದು ಗ್ರಾಮಸಭೆಯವರೆಗೆ ಆಯಾ ಪ್ರಮಾಣದಲ್ಲಿ ಅಧಿಕಾರ ವಿಕೇಂದ್ರಿಕರಣಗೊಳ್ಳಬೇಕು. ಅಂದಾಗ ಮಾತ್ರ ಸ್ಥಳೀಯ ಅಗತ್ಯಗಳು, ಸಮಸ್ಯೆಗಳು, ಪ್ರಶ್ನೆಗಳು ಏನೆಲ್ಲಾ ಇವೆಯಲ್ಲ ಅವೆಲ್ಲವೂ ಸ್ಥಳೀಯವಾಗಿಯೇ ನಿವಾರಣೆಗೊಳ್ಳುವ ಹಾಗೆ ಇರಬೇಕು. ಏಕೆಂದರೆ ಒಂದು ಗ್ರಾಮದ ಸ್ವಚ್ಛತಾ ಕಾರ್ಯಕ್ರಮದ ಬಗ್ಗೆ, ಶಿಕ್ಷಣಕೇಂದ್ರಗಳು ಅಭಿವೃದ್ಧಿ ಕಾರ್ಯಕ್ರಮ, ಗ್ರಾಮದಲ್ಲಿ ಆರೋಗ್ಯ ಕೇಂದ್ರಗಳನ್ನು ಸ್ಥಾಪಿಸುವ ಯೋಜನೆ, ಹಾಗೆ ಒಂದು ರೋಡ್ ಹಾಕಬೇಕಾದರೂ ಸಹ ಕೇಂದ್ರ ಸರಕಾರದ ಅನುಮತಿ ಪಡೆದುಕೊಂಡು ಮಾಡಬೇಕಾದರೆ ಬಹುಸಮಯ

ಮತ್ತು ಸಾಕಷ್ಟು ಹಣ ವ್ಯಯವಾಗುತ್ತದೆ. ಆದರೆ ಸ್ಥಳೀಯ ಸಮಸ್ಯೆಗಳು ಗ್ರಾಮಮಟ್ಟದಲ್ಲಿಯೇ ತೀರ್ಮಾನಿಸುವ ಅಥವಾ ನಿರ್ಣಯತೆಗೆದುಕೊಳ್ಳುವ ಅಧಿಕಾರ ಪಂಚಾಯತ್ ವ್ಯವಸ್ಥೆಗೆ ಇದ್ದರೆ ಸಮಯ ಮತ್ತು ಹಣದ ವೆಚ್ಚವು ಉಳಿತಾಯ ಆಗುವುದರ ಜೊತೆಗೆ ಕೆಲಸಗಳು ಅತಿಶೀಘ್ರವಾಗಿ ನೆರವೇರುತ್ತವೆ. ಈ ಎಲ್ಲಾ ಕಲ್ಪನೆಗಳಿಂದ ಪಂಚಾಯತ್ ರಾಜ್ ವ್ಯವಸ್ಥೆ ಅಭಿವೃದ್ಧಿಗೊಳ್ಳಬೇಕು ಎನ್ನುವುದರಿಂದ ಅತ್ಯುತ್ಕೃಷ್ಟವಾಗಿದೆ.

ಕ್ರಿ.ಪೂ.೧೨೦೦ರ ಋಗ್ವೇದ ಕಾಲದಿಂದಲೂ ೬೦೦ A.D.ವರೆಗೆ ಹಲವಾರು ದಾಖಲೆಗಳಲ್ಲಿ ಆಗ ಆ ಗ್ರಾಮದ ಕಾರ್ಯಕಾರಿ ಸಮಿತಿಗಳಲ್ಲಿ ಹೆಂಗಸರನ್ನು ಮಹತ್ತರಾಧಿಕಾರಣಿಯರು ಎಂದು ನೇಮಿಸುತ್ತಿದ್ದುದರ ಉಲ್ಲೇಖಗಳಿವೆ."[೫] ಮೌರ್ಯರ ಆಡಳಿತದಲ್ಲಿ ಗ್ರಾಮಪಂಚಾಯಿತಿಗಳು ಹೆಚ್ಚು ಸ್ವಯತ್ತತೆಯನ್ನು ಪಡೆದಿದ್ದವು. ಅಂದರೆ ಕೇಂದ್ರಾಡಳಿತವು ಗ್ರಾಮಾಡಳಿತದಲ್ಲಿ ಕೈಹಾಕುತ್ತಿರಲಿಲ್ಲ. ಗ್ರಾಮದ ಅಭಿವೃದ್ಧಿಯ ಯೋಜನೆಗಳನ್ನು ಗ್ರಾಮೀಕರೆ ನಿರ್ಣಾಯಿಸಿಕೊಳ್ಳುತ್ತಿದ್ದರು ಹಾಗೆ ತಮ್ಮ ಸಮಸ್ಯೆಗಳಿಗೆ ತಾವೇ ಪರಿಹಾರವನ್ನು ಕಂಡುಕೊಳ್ಳುತ್ತಿದ್ದರು. "ಗುಪ್ತರ ಕಾಲವು ಭಾರತದ ಇತಿಹಾಸದಲ್ಲಿ ಸುವರ್ಣಕಾಲ ವೆನಿಸಿತ್ತು. ಏಕೆಂದರೆ ಆ ಕಾಲದಲ್ಲಿ ಗ್ರಾಮಾಡಳಿತದಿಂದ ರಾಜ್ಯಾಡಳಿತವರೆಗೆ ಸುವ್ಯವಸ್ಥೆಯಾಗಿ ಆಡಳಿತ ವಿಕೇಂದ್ರಿಕರಣಗೊಂಡಿತ್ತು. ಆದ್ದರಿಂದ ೬ ರಿಂದ ೯ನೇಯ ಶತಮಾನದವರೆಗೆ ಪಂಚಾಯತ್‌ಗಳು ಜೀವಂತ ಸಂಸ್ಥೆಗಳಾಗಿದ್ದವು.[೬] ಎನ್ನುವ ದಾಖಲೆಗಳು ಕಂಡುಬರುತ್ತವೆ. ಅಖಂಡ ಭಾರತದಲ್ಲಿ ರಾಜಕಾರಣದ ಚರಿತ್ರೆಯಲ್ಲಿ ಎಲ್ಲಾ ಮಹಿಳೆಯರನ್ನು ಕಡೆಗಣಿಸಿಲ್ಲ ಎನ್ನುವುದನ್ನು ಈ ಸಂದರ್ಭದಲ್ಲಿ ನಾವು ಕಾಣಬಹುದಾಗಿದೆ.

ಆದರೆ ೨೧ನೇ ಶತಮಾನದ ಆಧುನಿಕ ರಾಜಕೀಯ ಪರಿಸರದಲ್ಲಿ ಮಹಿಳೆಯರನ್ನು ಅಧಿಕಾರದೊಳಗೆ ಪ್ರವೇಶಿಸಿಕೊಳ್ಳಲು ಹಲವಾರು ಸಮಸ್ಯೆಗಳನ್ನು ಹುಟ್ಟು ಹಾಕುತ್ತಾರೆ. ಪುರುಷ ರಾಜಕಾರಣಿಗಳು ತನ್ನ ಅಧಿಕಾರದ ಸ್ಥಾನಗಳನ್ನು ಉಳಿಸಿಕೊಳ್ಳುವುದಕ್ಕಾಗಿ ಅಥವಾ ಭದ್ರಪಡಿಸಿಕೊಳ್ಳುವುದಕ್ಕಾಗಿ ಹಲವಾರು ಕುತಂತ್ರಗಳನ್ನು ಒಡ್ಡುತ್ತಾ, ಸಾಮಾಜಿಕವಾಗಿ ಹಲವಾರು ಭೀತಿಗಳನ್ನು ಹುಟ್ಟಿಸುತ್ತಾ ಅವಳನ್ನು ರಾಜಕೀಯ ರಂಗಕ್ಕೆ ಪ್ರವೇಶಿಸದಂತೆ ತಡೆಗಟ್ಟಲು ಪ್ರಯತ್ನಿಸುತ್ತಾರೆ. ಆದರೆ ಮಹಿಳೆಯರು ಹಕ್ಕು ಒತ್ತಾಯಕ್ಕಾಗಿ ಬೃಹತ್ ಪ್ರಮಾಣದಲ್ಲಿ ಚಳುವಳಿಗಳನ್ನು ಹಮ್ಮಿಕೊಂಡಾಗ ಅನಿವಾರ್ಯವಾಗಿ ಕೆಳ ಹಂತದ ನಿರ್ಣಾಯಕ ಸ್ಥಾನಗಳನ್ನು ಮೀಸಲಿಡುವ ತರದಲ್ಲಿ ಮಾಡುತ್ತಾರೆ. ಇದಕ್ಕೆ ಅತ್ಯುತ್ತಮ ನಿದರ್ಶನವಾಗಿ ಪಂಚಾಯತ್ ರಾಜ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಅಧ್ಯಕ್ಷೆ ಮತ್ತು ಉಪಾಧ್ಯಕ್ಷ ಸ್ಥಾನಗಳನ್ನು ಕಾಯ್ದಿರಿಸುವಂತೆ ಮಾಡಿರುತ್ತಾರೆ. ಆದರೆ ಅವಳು ಯಾವುದೇ ಕಾರ್ಯವನ್ನು ಸ್ವತಂತ್ರವಾಗಿ ಮಾಡಲು ಮತ್ತು ಸ್ವತಃ ನಿರ್ಣಯಗಳನ್ನು ತೆಗೆದುಕೊಳ್ಳಲು ಆಗದೇ ಇರುವಂತಹ ವಾತಾವರಣವನ್ನು

ಸೃಷ್ಟಿಸುತ್ತಾರೆ. ಆ ಹಳ್ಳಿಯ ಗೌಡನೋ, ಪಾಟೀಲನೋ, ಮೇಲ್ವರ್ಗದ, ಜಾತಿಯ ಪುರುಷನೊ ಆ ಗ್ರಾಮದ ಸರ್ವಾಂಗೀಣ ಜನಬೆಂಬಲವನ್ನು ತಮ್ಮ ನಿಯಂತ್ರಣದಲ್ಲಿ ಇರುವಂತಹ ವಾತಾವರಣ ಸೃಷ್ಟಿಮಾಡಿರುವುದರಿಂದ, ಪಂಚಾಯಿತಿಯ ಸಣ್ಣಪುಟ್ಟ ನಿರ್ಣಯಗಳನ್ನು ತೆಗೆದುಕೊಳ್ಳುವ ಹಕ್ಕು ಕೂಡ ಅವಳಿಗೆ ಇಲ್ಲದಂತೆ ಮಾಡಿರುತ್ತಾರ. ಉದಾ : ಬಾವಿ ತೊಡಿಸುವಂತಹ, ಮತ್ತು ಗ್ರಾಮ ಸ್ವಚ್ಛತಾ ಕಾರ್ಯಕ್ರಮಗಳಂತಹ ಸಣ್ಣಪುಟ್ಟ ನಿರ್ಣಯಗಳನ್ನು ಸಹ ತನ್ನ ಮೇಲಿರುವ ಪುರುಷ ರಾಜಕಾರಣಿಗಳ ಅನುಮತಿ ಪಡೆದುಕೊಳ್ಳಬೇಕಾಗುತ್ತದೆ.

ಇಡೀ ಪುರುಷ ಪ್ರಧಾನ ಸಮಾಜ ವ್ಯವಸ್ಥೆಯೇ, ಹೆಂಗಸು ಸ್ವತಃ ನಿರ್ಣಯತೆಗೆದುಕೊಂಡು ಕೆಲಸ ಮಾಡಲು ಆಗದೇ ಇರುವ ತರದಲ್ಲಿ ಕುತಂತ್ರಗಳನ್ನು ಒಡ್ಡುತ್ತಾರೆ. ಕುಟುಂಬವಲಯದಿಂದ ಮೊದಲು ಗೊಂಡು, ಶೈಕ್ಷಣಿಕ, ಆರ್ಥಿಕ, ಔದ್ಯೋಗಿಕ ಹಾಗೂ ರಾಜಕೀಯ ವಲಯಗಳಲ್ಲಿಯೂ ಕೂಡ ತನ್ನ ಗಂಡನಿಂದ ಮೊದಲುಗೊಂಡು ಸಮಾಜದ ಉನ್ನತ ವರ್ಗ ಪುರುಷರು ಮತ್ತು ಕುಟುಂಬದ ಇತರ ಸದಸ್ಯರು ಸಹ ಅವಳು ತನ್ನ ಅಧಿಕಾರವನ್ನು ಸಂಪೂರ್ಣವಾಗಿ ನಡೆಸಿಕೊಂಡು ಹೋಗುವುದಕ್ಕೆ ಸಾಧ್ಯವಾಗದ ರೀತಿಯಲ್ಲಿ ನೋಡಿಕೊಳ್ಳುತ್ತಾರೆ. ಉದಾ : ಕುಟುಂಬದಲ್ಲಿ ಹೆಂಗಸರನ್ನು ಎಲ್ಲ ಕೆಲಸ ಕಾರ್ಯಗಳಲ್ಲಿ ಭಾಗಿಯಾಗುವಂತೆ ಮಾಡುತ್ತಾರೆ. ಈ ಸಮಯಕ್ಕೆ ಹೆಂಗಸು ತನಗೆ ಸಹ ನಿರ್ಣಯ ತೆಗೆದುಕೊಳ್ಳುವ ಅಧಿಕಾರ ನೀಡಿದ್ದಾರೇನೋ ಎನ್ನುವ ತರಕಂಡುಬರುತ್ತದೆ. ಆದರೆ ಆಕೆಯು ಸ್ವಯಂ ಆಗಿ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳಲು ಆಸ್ಪದವಿಲ್ಲದಂತೆ ಮಾಡುತ್ತಾರೆ. ಇದಕ್ಕೆಲ್ಲ ಮೇಲಾಧಿಕಾರಿಯ ಅಂದರೆ ಗಂಡನ ಅಥವಾ ಮಾವನ ಅನುಮತಿ ಬೇಕೆ ಬೇಕಾಗುತ್ತದೆ. ಒಂದು ಚಿಕ್ಕ ಪಾತ್ರೆಯನ್ನು ಅಥವಾ ದಿನನಿತ್ಯದ ಅಹಾರಕ್ಕೆ ಬೇಕಾಗುವಂತಹ ಕಾಯಿ ಪಲ್ಲೆಯನ್ನು ಖರೀದಿಸಬೇಕಾದರೂ ಆ ಕುಟುಂಬದ ಯಜಮಾನನ ಅನುಮತಿ ಬೇಕಾಗುತ್ತದೆ. ಕುಟುಂಬ ವಲಯದಿಂದ ಶುರುವಾದ ಈ ರೀತಿಯ ಅತಂತ್ರಸ್ಥಿತಿ ಸಮಾಜದ ಎಲ್ಲ ವಲಯಗಳಲ್ಲಿಯೂ ಆವರಿಸಿಕೊಂಡಿದೆ. ಪುರುಷ ಪ್ರಧಾನ ಸಮಾಜ ವ್ಯವಸ್ಥೆಯಲ್ಲಿ ಕೆಲವಾರು ಅಂಶಗಳನ್ನು ವಂಶಪಾರಂಪರಿಕವಾಗಿ ಅನುಸರಿಸುತ್ತಾ ಬರುತ್ತಿರುವುದು ಇಂದಿಗೂ ಜೀವಂತವಾಗಿವೆ. ಹೀಗಾಗಿ ಮಹಿಳೆಯರು ಯಾವುದೇ ಕ್ಷೇತ್ರದಲ್ಲಿ ನಿರ್ಣಾಯಕ ಅಥವಾ ಅಧಿಕಾರ ಚಲಾಯಿಸುವ ಸ್ಥಳಗಳಿಂದ ವಂಚಿತಳಾಗಿದ್ದಾಳೆ. ಮಹಿಳಾ ಸಂಘಟಿತರ ಬೃಹತ್ ಪ್ರಮಾಣದ ಚಳುವಳಿಗಳಿಂದಾದರೂ ಪಂಚಾಯತ್‌ರಾಜ್ ವ್ಯವಸ್ಥೆಯಲ್ಲಿ ಸ್ವಲ್ಪಮಟ್ಟಿಗಾದರೂ ಮಹಿಳೆಯರಿಗೆ ಸ್ಥಾನಗಳು ದೊರೆತಿವೆ. ಆದರೆ ಅವಳು ಪಡೆಯುತ್ತಿರುವ ಅಧ್ಯಕ್ಷ, ಉಪಾಧ್ಯಕ್ಷರ ಸ್ಥಾನಗಳ ಅಧಿಕಾರವನ್ನು ತಾನೆ ಚಲಾಯಿಸದೆ ಅದನ್ನು ಗಂಡಸರಿಗೆ ಒಪ್ಪಿಸುವುದು ಕೆಲವಾರು ಕಡೆ ಕಂಡುಬರುತ್ತಿವೆ.

ಸಮಾಜ ವ್ಯವಸ್ಥೆಯಲ್ಲಿ ಗಂಡಸರು ದೈಹಿಕವಾಗಿ, ಮಾನಸಿಕವಾಗಿ ಬುದ್ಧಿವಂತಿಕೆಯಲ್ಲಿ ಶಕ್ತಿಸಾಮರ್ಥ್ಯ ವುಳ್ಳವರು, ಹೆಂಗಸರು, ದೈಹಿಕವಾಗಿ ಮೃಧು, ನಾಜೂಕು, ಶಕ್ತಿಹೀನರು ಹೀಗೆ ಬೇರೆ ಬೇರೆ ಅಪಕಲ್ಪನೆ

ಗಳನ್ನು ಸೃಷ್ಟಿಸಿಕೊಂಡ ಪುರುಷ ಪ್ರಧಾನರು ಅವಳಿಗೆ ಹಕ್ಕು ಚಲಾಯಿಸಲು ಆಗುವುದಿಲ್ಲ ಎನ್ನುವ ಸುಳ್ಳು ನೆಪಗಳ ಒತ್ತಡದಿಂದ ಅವಳ ಅಧಿಕಾರವನ್ನು ಅಣ್ಣತಮ್ಮಂದಿರೋ, ಗಂಡನೋ ಅಥವಾ ಮಾವನೋ ಅಧಿಕಾರವನ್ನು ತನ್ನ ವಶಮಾಡಿಕೊಳ್ಳುತ್ತಾನೆ. ವಂಶಪಾರಂಪರಿಕವಾಗಿ ರಾಜಕೀಯ ಮಾಡುತ್ತಾ ಬಂದ ಕುಟುಂಬಗಳು ಮಹಿಳಾ ಮೀಸಲಾತಿಯಿಂದ ಪುರುಷರ ಸ್ಥಾನಗಳು ಕಾಣೆಯಾಗುವ ಅಥವಾ ತಪ್ಪಿಹೋಗುವ ಸಂದರ್ಭದಲ್ಲಿ ಆ ಸ್ಥಾನವನ್ನು ದಕ್ಕಿಸಿಕೊಳ್ಳುವುದಕ್ಕಾಗಿ ಆ ಕುಟುಂಬದ ಹೆಂಗಸರನ್ನು ಕೇವಲ ನಾಮಕಾವಸ್ಥೆಗಾಗಿ ನಿಲ್ಲಿಸಿ ಸ್ಥಾನವನ್ನು ಪಡೆದುಕೊಳ್ಳುತ್ತಾರೆ. ಹೀಗಾಗಿ ಅಧಿಕಾರ ಚಲಾಯಿಸುವುದು, ನಿರ್ಣಯಗಳನ್ನು ತೆಗೆದುಕೊಳ್ಳುವುದು, ಹಾಗೂ ಯೋಜನೆಗಳನ್ನು ಜಾರಿಗೊಳಿಸುವ ಹಕ್ಕು ಪುರುಷನದೇ ಆಗಿರುತ್ತದೆ. ಇಲ್ಲಿ ಮಹಿಳೆಯರಿಗೆ ದೊರೆತ ಹಕ್ಕನ್ನು ಚಲಾಯಿಸುವ ಮುಕ್ತ ವಾತಾವರಣ ಇರೋದಿಲ್ಲ. ಒಂದು ವೇಳೆ ಅಧಿಕಾರದ ಗದ್ದುಗೆ ಹೇರಿದ ಮಹಿಳೆ ಹಕ್ಕನ್ನು ಚಲಾಯಿಸಲು ಮುನ್ನುಗಿದರೆ, ಅವಳು ಕೌಟುಂಬಿಕ ಸಮಸ್ಯೆಗಳಿಂದ ಹಿಡಿದು ಸಾರ್ವಜನಿಕವಾಗಿ ಎಲ್ಲ ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಉದಾ: ಊರಿನ ಜನರ ಜೊತೆ, ಮೇಲ್ವರ್ಗದ ಗೌಡ, ಪಾಟೀಲರ ಜೊತೆ ಆಗುವ ಸಂಘರ್ಷಗಳನ್ನು ಎದುರಿಸ ಬೇಕಾಗುತ್ತದೆ. ಹಾಗೆ ಶೀಲದ ಸುತ್ತಲಿರುವ ಅನೇಕ ವೈಯಕ್ತಿಕ ಸಮಸ್ಯೆಗಳನ್ನು ಎದುರಿಸ ಬೇಕಾಗುತ್ತದೆ. ಮಹಿಳೆಯರ ಸ್ಥಾನಗಳನ್ನು ಹಕ್ಕು ಒತ್ತಾಯಿದಿಂದ ಪಡೆದುಕೊಳ್ಳುವುದರಿಂದ ಈ ಎಲ್ಲ ತೊಂದರೆಗಳನ್ನು ಅನುಭವಿಸಬೇಕಾಗುತ್ತದೆ. ಪುರುಷ ರಾಜಕಾರಣಿಗಳು ಮಹಿಳೆಯರಿಗೆ ಸರಿಯಾದ ಸ್ಥಾನಮಾನಗಳನ್ನು ನೀಡಲಾಗಿದೆ ಎನ್ನುತ್ತಾರೆ. ಮನಃಪೂರ್ವಕವಾಗಿ ಸರಿಸಮಾನ ಸ್ಥಾನಗಳು ನೀಡಿದ್ದರೆ ಈ ರೀತಿಯ ಅಡೆತಡೆಗಳು ಕಂಡಿತವಾಗಿಯೂ ಬರುತ್ತಿರಲಿಲ್ಲ. ಮಹಿಳೆಯರಿಗೆ ಮೀಸಲಾತಿ ಎನ್ನುವುದು ನಾಮಕಾವಸ್ಥೆಗೆ ಕೊಟ್ಟಂತೆ ಕಂಡುಬರುತ್ತದೆ.

ಭಾರತ ಸಂವಿಧಾನದಲ್ಲಿ ಸಮಾಜದ ಎಲ್ಲಾ ಪ್ರಜೆಗಳಿಗೆ ಸಮಾನ ಹಕ್ಕುಗಳನ್ನು ನೀಡಲಾಗಿದೆ ಮತ್ತು ಸಮಾನ ರಕ್ಷಣೆಯನ್ನು ಕೊಡುತ್ತಿದೆ. ಜಾತಿ, ಧರ್ಮ, ವರ್ಣ, ಜನಾಂಗ, ಪ್ರದೇಶ, ಲಿಂಗಭೇದದ ಆಧಾರದ ಮೇಲೆ ಯಾರ ವಿರುದ್ಧವು ತಾರತಮ್ಯದ ಧೋರಣೆಯನ್ನು ತೋರಬಾರದೆಂಧು ಸಂವಿಧಾನದಲ್ಲಿ ಸ್ಪಷ್ಟೀಕರಿಸಿದರು, ಪುರುಷ ರಾಜಕಾರಣಿಗಳು ಕುತಂತ್ರದಿಂದ ಮಹಿಳೆಯರ ಮೂಲಭೂತ ಹಕ್ಕುಗಳನ್ನು ತಮ್ಮದಾಗಿಸಿಕೊಂಡು ಅವಳನ್ನು ಸಾಮಾಜಿಕವಾಗಿ, ಕೌಟುಂಬಿಕವಾಗಿ, ಆರ್ಥಿಕವಾಗಿ ಮತ್ತು ರಾಜಕೀಯವಾಗಿಯೂ ಅಬಲೆಯನ್ನಾಗಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ಮಹಿಳೆಯರಿಗೆ ಕಾಯ್ದೆ ಕಾನೂನುಗಳ ಅನುಗುಣವಾಗಿ ಸಮಾನ ಹಕ್ಕುಗಳನ್ನು ಅವಕಾಶಗಳನ್ನು ಕೊಟ್ಟರೂ, ಅವರಿಗೆ ತಾವಿರುವ ಅಸಹಾಯಕ ಪರಿಸ್ಥಿತಿಯಿಂದಾಗಿ ಅವುಗಳನ್ನು ಉಪಯೋಗಿಸಿಕೊಳ್ಳಲು ಆಗುತ್ತಿಲ್ಲ ಎನ್ನುವುದು ಪುರುಷ ಕಲ್ಪನೆಯು ಸತ್ಯವಾಗುವಂತೆ ಮಾಡುತ್ತಾರೆ. ಈ ಅಸಮತೋಲನೆಯನ್ನು ಹೋಗಲಾಡಿಸುವುದಕ್ಕಾದರೂ

ಅಥವಾ ಮಹಿಳೆಯರು ಎಲ್ಲ ವಲಯಗಳಲ್ಲಿ ತಮ್ಮ ಸ್ಥಾನಗಳನ್ನು ಭದ್ರಪಡಿಸಿಕೊಳ್ಳುವುದಕ್ಕೆ ಅಥವಾ ಸಮಾಜದಲ್ಲಿ ಸ್ತ್ರೀ ಪುರುಷರ ಮಧ್ಯೆ ಉಂಟಾಗಿರುವ ಅಸಮತೋಲನವನ್ನು ಸರಿಪಡಿಸಿಕೊಳ್ಳುವುದಕ್ಕಾಗಿ 'ಮೀಸಲಾತಿ' ಅತ್ಯವಶ್ಯಕವಾಗಿದೆ.

ರಾಜಕೀಯ ವಲಯದಲ್ಲಿ ಮಹಿಳೆಯರು ಸ್ಪರ್ಧಿಸಬೇಕಾದರೆ ಸಾಮಾಜಿಕವಾಗಿ ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ರಾಜಕೀಯ ಕ್ಷೇತ್ರಗಳಲ್ಲಿ ಚುನಾವಣೆ ಎಂದರೆ ಹಣ, ಹೆಂಡ, ಗೂಂಡಾಗಿರಿ ಎನ್ನುವ ಅರ್ಥದಲ್ಲಿ ಕಂಡುಬರುತ್ತದೆ. ಇವು ಪುರುಷ ಪ್ರಧಾನ ರಾಜಕಾರಣಿಗಳಿಂದ ಬೆಳೆದುಕೊಂಡು ಬಂದಂತಹ ಹವ್ಯಾಸಗಳಾಗಿವೆ. ಮಾತೇ ಬಂಡವಾಳವಾಗಿ ಬಳಸಿಕೊಂಡು ಪ್ರಜೆಗಳನ್ನು ಆಕರ್ಷಣೆಗೆ ಒಳಗಾಗಿಸಿ ತಮ್ಮ ಅಧೀನದಲ್ಲಿ ಇರಿಸಿಕೊಳ್ಳುವುದಕ್ಕಾಗಿ ಈ ಮೇಲಿನ ಎಲ್ಲ ಅಂಶಗಳನ್ನು ಅಸ್ತ್ರಗಳಾಗಿ ಬಳಸಿಕೊಂಡು ಅಧಿಕಾರದ ಪಟ್ಟವನ್ನು ಅತಿ ಸುಲಭವಾಗಿ ದಕ್ಕಿಸಿಕೊಳ್ಳುತ್ತಾರೆ. ಆದರೆ ಇಂಥ ಚುನಾವಣೆಗಳಲ್ಲಿ ಮಹಿಳೆಯರು ಸ್ಪರ್ಧಿಸಲು ಹಿಂಜರೆಯುತ್ತಾರೆ. ಅಥವಾ ಸ್ಪರ್ಧಿಸಲಾರರು ಕೂಡ. ಏಕೆಂದರೆ ಸಮಾಜದಲ್ಲಿ ಮೃಧು ಸ್ವಭಾವದವಳೆಂದರೆ ಹೆಣ್ಣೆ ಎಂದು ಒಪ್ಪಿಸುತ್ತಾ ಬಂದಿರುವ ಪುರುಷ ಪ್ರಧಾನ ಕುಟುಂಬದಲ್ಲಿ ಕೇವಲ ನಾಲ್ಕು ಗೋಡೆಗಳ ಮಧ್ಯೆ ತನ್ನ ಸಾಮ್ರಾಜ್ಯ ಕಟ್ಟಿಕೊಂಡಿರುವುದರಿಂದ, ಹೊರಗಿನ ಪ್ರಪಂಚದ ಗೂಂಡಾಗಿರಿಗೆ ಬಹಳ ಅಂಜುತ್ತಾಳೆ. ಆದ್ದರಿಂದ ರಾಜಕೀಯ ರಂಗಕ್ಕೆ ಪ್ರವೇಶಿಸಲು ಹೆದರುತ್ತಾಳೆ. ಮಹಿಳೆಯರು ರಾಜಕೀಯದಲ್ಲಿ ಅತಿಹೆಚ್ಚಿನ ಸಂಖ್ಯೆಯಲ್ಲಿ ಕಂಡುಬರಬೇಕಾದರೆ, ಪುರುಷ ಪ್ರಧಾನ ದಬ್ಬಾಳಿಕೆಯನ್ನು ದಮನಗೊಳಿಸಬೇಕು. ಮನೆಯ ಹೊರಗಿನ ಪ್ರಪಂಚಕ್ಕೆ ಬಂದು ತಮಗೆ ದೊರೆಯಬೇಕಾದ ಹಕ್ಕುಗಳನ್ನು ದಕ್ಕಿಸಿಕೊಳ್ಳಬೇಕು. ಶಿಕ್ಷಣಕ್ಕೆ ವಿಶೇಷ ಪ್ರಾಶಸ್ತ್ಯವನ್ನು ನೀಡಿ ಗೂಂಡಾಗಿರಿಯನ್ನು ಕೊನೆಗಾಣಿಸಿದಾಗ ಮಾತ್ರ ಸಾಮಾನ್ಯ ಮಹಿಳೆಯು ರಾಜಕೀಯದಲ್ಲಿ ಭಾಗವಹಿಸ ಬಹುದಾಗಿದೆ. ಸಮಾಜದಲ್ಲಿ ಈ ಎಲ್ಲಾವುಗಳು ಕೊನೆಗಾಣುವುದು ಅಷ್ಟು ಸುಲಭದ ಮಾತಲ್ಲ. ಆದ್ದರಿಂದ ಮಹಿಳೆ ರಾಜಕೀಯದಲ್ಲಿ ನಿರ್ಭಯವಾಗಿ ಭಾಗವಹಿಸಿಬೇಕಾದರೆ ಮೀಸಲಾತಿ ಅತ್ಯವಶ್ಯಕ ವಾಗುತ್ತದೆ.

ರಾಜಕೀಯದಲ್ಲಿ 'ಮಹಿಳಾ ಮೀಸಲಾತಿಯ' ಪ್ರಶ್ನೆ ಎತ್ತಿರುವುದು ಇಂದು ನಿನ್ನೆಯದಲ್ಲ. ಇದಕ್ಕೆ ಬಹುಕಾಲದ ಇತಿಹಾಸವೇ ಇದೆ. ಸ್ವಾತಂತ್ರ್ಯ ಪೂರ್ವದ ರಾಷ್ಟ್ರೀಯ ಚಳುವಳಿಯ ಹಂತದಲ್ಲಿಯೇ ರಾಜಕೀಯ ಪ್ರಶ್ನೆಯಾಗಿರುವುದನ್ನು ನಾವು ಇತಿಹಾಸದ ಪುಟಗಳಲ್ಲಿ ಗಮನಿಸಬಹುದಾಗಿದೆ. ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮಹಿಳೆಯರು ಮಹತ್ತರವಾದ ಪಾತ್ರವನ್ನು ವಹಿಸಿದ್ದರು. ಅವರಿಗೆ ದೇಶದ ರಾಜಕೀಯ ಭವಿಷ್ಯವನ್ನು ರೂಪಿಸುವುದರಲ್ಲಿ ಯಾವ ಸ್ಥಾನವನ್ನು ನೀಡಿರಲಿಲ್ಲ, ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸುವಂತೆ ಮಹಿಳೆಯರನ್ನು ಹುರಿದುಂಬಿಸಿದ ಮಹಾತ್ಮ ಗಾಂಧೀಜಿಯವರೂ ಕೂಡ

ಸ್ವಾತಂತ್ರ್ಯ ದೊರೆತ ನಂತರ ಸಕ್ರಿಯ ರಾಜಕೀಯದಲ್ಲಿ ಮಹಿಳೆಯರು ಭಾಗವಹಿಸಬೇಕೆಂಬ ನಿಲುವನ್ನು ತಳೆದಿರುವುದಿಲ್ಲ. ಈ ರೀತಿಯ ಪುರುಷ ಚಿಂತನೆಗಳು ತಮ್ಮ ಅರಿವಿಗೆ ಬಾರದಂತೆ ಕ್ರಿಯಾಶೀಲತೆಯಲ್ಲಿ ತೊಡಗಿಕೊಂಡಿರುತ್ತವೆ. ಸ್ವಾತಂತ್ರ್ಯ ಪೂರ್ವದಿಂದಲೂ ಬೆಳೆದುಕೊಂಡು ಬಂದ ಲಿಂಗ ಅಸಮನತೆಗಳು ಇಂದು ಸಹ ಜೀವಂತವಾಗಿರುವುದರಿಂದ ಸಮಾಜದಲ್ಲಿ ಮಹಿಳೆಯರು ಯಾವುದೇ ವಲಯದಲ್ಲಿ ಅಧಿಕ ಸಂಖ್ಯೆಯಲ್ಲಿ ನಿರ್ಣಾಯಕ ಹಂತದಲ್ಲಿರುವುದು ಕಂಡುಬರುವುದಿಲ್ಲ. ಹೀಗಾಗಿ ಆಸ್ಥಾನಗಳನ್ನು ಪಡೆದುಕೊಳ್ಳುವುದಕ್ಕಾಗಿ ಮಹಿಳಾ ಸಂಘಟನೆಗಳು ಹಕ್ಕು ಒತ್ತಾಯವನ್ನು ಮಂಡಿಸಿದರು. ರಾಜಕೀಯದಲ್ಲಿ ಮಹಿಳೆ ಭಾಗವಹಿಸಬೇಕಾದರೆ ಮೀಸಲಾತಿ ಅಗತ್ಯ ಈ ಮೂಲಕ ಸಮಾನತೆಯತ್ತ ಹೆಜ್ಜೆಯಿಡುವ ಕಲ್ಪನೆ ೧೯೫೭ರಿಂದಲೇ ಪ್ರಾರಂಭವಾಗಿದೆ.

೧೯೫೭ರ ಜನವರಿಯಲ್ಲಿ ಸ್ಥಳೀಯ ಸಂಸ್ಥೆಗಳು ಬಲಪಡಿಸಲು ರಚಿತವಾದ ಬಲವಂತರಾಯ್ ಸಮಿತಿ ಮಹಿಳೆಯರಿಗೆ ಮೀಸಲಾತಿಯನ್ನು ನೀಡುವ ಅಗತ್ಯವನ್ನು ಮೊದಲು ಒತ್ತಿಹೇಳಿತು. ಈ ಸಮಿತಿಯಲ್ಲಿ ಮಂಡಿಸಿರುವ ಅಂಶವೆಂದರೆ ಪ್ರತಿಪಂಚಾಯಿತಿಗೂ ಇಬ್ಬರು ಮಹಿಳೆಯರನ್ನು ನಾಮಕರಣಮಾಡಿ ಕೊಳ್ಳಬೇಕೆಂದು ಸೂಚಿಸುತ್ತದೆ. ಈ ವರದಿಯನ್ನು ಉತ್ತರಪ್ರದೇಶವನ್ನು ಬಿಟ್ಟರೆ ಮಿಕ್ಕೆಲ್ಲಾ ರಾಜ್ಯಗಳು ಒಪ್ಪಿಕೊಂಡಿರುತ್ತವೆ. ೧೯೭೪ರಲ್ಲಿ ಮಹಿಳೆಯರ ಸ್ಥಾನಮಾನಗಳ ಪರಿಶೀಲನೆಗೆ ರಚಿಸಿದ ಸಮಿತಿ ಕೂಡ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ೩೦ % ಮೀಸಲಾತಿ ನೀಡಬೇಕೆಂದು ಶಿಪಾರಸ್ಸು ಮಾಡಿತು. ೧೯೭೮ರಲ್ಲಿ ಆಶೋಕಮೆಹ್ತ ಕಮಿಟಿ ಪಂಚಾಯತ್ ವ್ಯವಸ್ಥೆಯನ್ನು ಕುರಿತು ತನ್ನ ವರದಿ ಸಲ್ಲಿಸಿತು. ಈ ವರದಿಯು ಸಹ ಮಹಿಳೆಯರಿಗೆ ರಾಜಕೀಯದಲ್ಲಿ ಪ್ರಾತಿನಿಧ್ಯ ನೀಡುವ ಕುರಿತು ಒತ್ತಾಯಿಸಿತು.

೧೯೭೪ರ ಮಹಿಳೆಯರ ಸ್ಥಾನಮಾನ ಕುರಿತ ವರದಿಯಲ್ಲಿ ಸ್ಥಳೀಯ ಸಂಸ್ಥೆಗಳಲ್ಲಿ ಮಹಿಳೆಯರಿಗೆ ೩೦ % ಮೀಸಲಾತಿ ನೀಡಬೇಕೆಂದು ಶಿಫಾರಸ್ಸು ಮಾಡಿದೆ ಇದರ ವಿರುದ್ಧವಾಗಿ "ಪುಲ್‌ರೇನು ಮಹಾ ಹಾಗೂ ಮಣಿಬೇನ್ ತಾರಾರವರು" ಹಲವಾರು ಪ್ರಶ್ನೆಗಳನ್ನು ಎತ್ತುತ್ತಾ ಮಹಿಳೆಯರಿಗೆ ಮೀಸಲಾತಿಯನ್ನು ವಿರೋಧಿಸುತ್ತಾರೆ. ಮೀಸಲಾತಿಯಿಂದ ಮಹಿಳೆಯರು ಪುರುಷರಿಗೆ ಸಮಾನವಾಗಿ ಸ್ಪರ್ಧಿಸುವುದನ್ನು ಬಿಟ್ಟು, ಅವಳು ದುರ್ಬಲಳು, ಪರಾವಲಂಬಿ, ಸಮಸ್ಯೆಗಳನ್ನು ಎದುರಿಸುವಲ್ಲಿ ಶಕ್ತಿಹೀನಳು ಎನ್ನುವ ಅಂಶಗಳನ್ನು ಬಲಪಡಿಸಿದಂತಾಗುತ್ತದೆ ಎಂದು ವಿರೋಧಿಸುತ್ತಾರೆ. ಸಮಾಜದ ಎಲ್ಲ ವರ್ಗದ ಸ್ತ್ರೀಯರು ಪುರುಷರಿಗೆ ಸರಿಸಮಾನವಾದ ಸ್ಥಾನಗಳನ್ನು ತಲುಪುವ ಶಕ್ತಿ ಸಾಮರ್ಥ್ಯಗಳು ಎಲ್ಲಾ ಮಹಿಳೆಯರಲ್ಲಿ ಬೆಳೆಯಬೇಕು ಮತ್ತು ಆ ಗುರಿಯನ್ನ ತಲುಪುವ ಛಲ ಮಹಿಳೆಯರಲ್ಲಿ ಹುಟ್ಟಬೇಕು, ಪ್ರತ್ಯೇಕ ಮೀಸಲಾತಿಯಿಂದ ಮಹಿಳೆಯರನ್ನು ಇನ್ನಷ್ಟು ದುರ್ಬಲ ಸ್ಥಿತಿಗೆ ತಳ್ಳಿದಂತಾಗುತ್ತದೆ. ಹೀಗಾಗಿ ಮಹಿಳೆಯರು ಸ್ವಯಂ ಶಕ್ತಿಯಿಂದ ಹಾಗೂ ಸಾಮರ್ಥ್ಯದಿಂದ ಮುಂದೆ ಬರಬೇಕೆ ಹೊರತು

ಮೀಸಲಾತಿಯಿಂದ ಅಲ್ಲ. ಮೀಸಲಾತಿ ತಾತ್ಕಾಲಿಕವೆಂದು ಭಾವಿಸಿದರೂ ಇದು ಮೇಲ್ವರ್ಗ ಮತ್ತು ಮೇಲ್ಜಾತಿಯ ಮಹಿಳೆಯರ ಪರವಾಗಿದೆ. ಇದರಿಂದ ಉನ್ನತ ವರ್ಗ, ಮಧ್ಯಮ ವರ್ಗ ಮತ್ತು ಕೆಳವರ್ಗದ ಹೆಂಗಸರ ಮಧ್ಯೆ ಅಸಮಾನತೆಯನ್ನು ಮುಂದುವರಿಸುತ್ತದೆ. ಆದ್ದರಿಂದ ಮೀಸಲಾತಿಗೆ ಬದಲಾಗಿ ಆಸ್ತಿಯ ಹಕ್ಕುಗಳ ಪ್ರಜ್ಞೆ ಮೂಡಿಸುವುದು, ರಾಜಕೀಯದಲ್ಲಿ ಭಾಗವಹಿಸುವಂತೆ ಪ್ರೇರೇಪಿಸುವಂತೆ ಮಾಡವುದು ಒಂದು ರೀತಿಯ ನಿದರ್ಶನವಾಗುತ್ತದೆ ಎಂದು ಸಾರುತ್ತಾರೆ.

ಮಹಿಳಾ ಅಧ್ಯಯನ ಕೇಂದ್ರದ ಮಾಜಿ ನಿರ್ದೇಶಕಿ ಶ್ರೀಮತಿ ರಾಮೇಶ್ವರಿವರ್ಮ ಅವರು ರಾಜಕೀಯದಲ್ಲಿ ಮಹಿಳೆಯರ ಸಂಖ್ಯೆ ಅತ್ಯಂತ ಕಡಿಮೆ ಇರಲು ಪಿತೃ ಪ್ರಧಾನ ವ್ಯವಸ್ಥೆ ಕಾರಣವಾಗಿರುವುದರಿಂದ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ. ಆದ್ದುದರಿಂದ ಮಹಿಳೆಯರಿಗೆ ಮೀಸಲಾತಿ ಅತ್ಯಗತ್ಯ. ರೈಲ್ವೆ ಸಲಹಾ ಮಂಡಳಿಯ ಸದಸ್ಯೆಯಾಗಿರುವ 'ಶ್ರೀಮತಿ ಶಶಿಕಲಾ ನಾಗರಾಜ್' ಅವರು ಸಾರ್ವಜನಿಕವಾಗಿ ಹಾಗೂ ತನ್ನ ಸಹೋದ್ಯೋಗಿಗಳಿಂದ ಎದುರಿಸಿದ ಸಮಸ್ಯೆಗಳನ್ನು ವಿವರಿಸುತ್ತಾ ಮತ್ತು ರಾಜಕೀಯದಲ್ಲಿ ನಡೆಯುವ ಪುರುಷ ಕುತಂತ್ರಗಳಿಂದ ಮಹಿಳೆ ಶೋಷಣೆಗೆ ಒಳಗಾಗುತ್ತಿದ್ದಾಳೆ ಎನ್ನುವುದನ್ನು ಮನಮುಟ್ಟುವಂತೆ ವಿವರಿಸಿ, ಮಹಿಳೆಯರಿಗೆ ಮೀಸಲಾತಿಯ ಅವಶ್ಯಕತೆಯ ಬಗ್ಗೆ ಒತ್ತಿಹೇಳುತ್ತಾರೆ. ಶ್ರೀಮತಿ ಶಾಂತಕುಮಾರಿ, ಹಿರಿಯ ಪತ್ರಕರ್ತೆ ಹಾಗೂ ರಾಜಕಾರಣಿ, ಶ್ರೀ.ಎ.ರಾಮಣ್ಣ ಮೈಸೂರು ವಿಶ್ವವಿದ್ಯಾಲಯದ ಜನಪದ ವಿಭಾಗದಲ್ಲಿ ಪ್ರಾಧ್ಯಪಕರಾಗಿರುವ ಡಾ.ಹಿ.ಶಿ.ರಾಮಚಂದ್ರೇಗೌಡರು ಮೀಸಲಾತಿ ಪರವಾಗಿ ಧ್ವನಿ ಎತ್ತಿದರು.[೭] ಏಕೆಂದರೆ ಸಂಪ್ರದಾಯಿಕವಾಗಿ ಬೆಳೆದುಕೊಂಡು ಬಂದಿರುವ ಪಿತೃಪ್ರಧಾನ ಕುಟುಂಬಗಳಲ್ಲಿ ಮಹಿಳೆಯರನ್ನು ಯಾವುದೇ ನಿರ್ಣಾಯಕ ಸ್ಥಾನಗಳಲ್ಲಿ ಇರಲು/ಕೂಡಿಸಲು ಒಪ್ಪುವುದಿಲ್ಲ. ಆಕೆಯು ಪ್ರತಿಯೊಂದು ರಂಗದಲ್ಲಿ ದಬ್ಬಾಳಿಕೆಗೆ ಒಳಗಾಗುತ್ತಾಳೆ. ಮೂಲಭೂತ ಹಕ್ಕುಗಳನ್ನು ದಕ್ಕಿಸಿಕೊಳ್ಳುವಲ್ಲಿ ವಿಫಲಳಾಗುತ್ತಿದ್ದಾಳೆ. ಆದ್ದುದರಿಂದ ಮೊದಲನೆಯ ಅಧಿವೇಶನದಲ್ಲಿ ಈ ಎಲ್ಲ ಹಕ್ಕುಗಳನ್ನು ಪಡೆದುಕೊಳ್ಳುವುದಕ್ಕಾಗಿ ಪ್ರತ್ಯೇಖವಾಗಿ ಮಹಿಳಾ ಮೀಸಲಾತಿ ಬೇಕೆಬೇಕೆಂದು ವಾದಿಸುತ್ತಾರೆ.

ಎರಡನೆಯ ಅಧಿವೇಶನ ವಿಚಾರ ಮಂಡನೆಗೆ ಮೀಸಲಾಗಿದ್ದು, ಮೊದಲಿಗೆ ಮೈಸೂರಿನ ಪ್ರಸಿದ್ಧ ವಕೀಲರು ಹಾಗೂ ಜಿಲ್ಲಾ ಮಹಿಳಾ ಸಹಕಾರ ಬ್ಯಾಂಕಿನ ಅಧ್ಯಕ್ಷರಾದ ಬಿ.ರಾಧ ತಮ್ಮ ವಿಚಾರಗಳನ್ನು ಮಂಡಿಸಿದರು. ತಮ್ಮ ರಾಜಕೀಯ ಜೀವನದ ಅನುಭವಗಳನ್ನು ಹೇಳುತ್ತಾ ಇದುವರೆಗೆ ಶೇ.೧೧ರಷ್ಟು ಮಹಿಳೆಯರು ಲೋಕಸಭೆಯಲ್ಲಿ ಪ್ರತಿನಿಧಿಸಿಲ್ಲ, ಇದಕ್ಕೆಲ್ಲ ಮುಖ್ಯಕಾರಣವೆಂದರೆ ಈಗಿರುವ ಚುನಾವಣ ವ್ಯವಸ್ಥೆ ಸರಿಯಿಲ್ಲ. ಇದರಲ್ಲಿ ಕೆಲವು ಸುಧಾರಣೆಗಳನ್ನು ತಂದರೆ ಮಹಿಳೆಯರು ರಾಜಕೀಯದಲ್ಲಿ ಬರಲು ಸಾಧ್ಯ.

ಇಂದು ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸುವುದು ಅತ್ಯವಶ್ಯಕವಾಗಿದೆ. ಹೀಗಾಗಿ ಹೆಂಗಸರು, ಗಂಡಸರ ಸರಿಸಮಾನವಾಗಿ ರಾಜಕೀಯದಲ್ಲಿ ಭಾಗವಹಿಸಬೇಕಾದರೆ ಮೀಸಲಾತಿ ಬೇಕಾಗುತ್ತದೆ ಎಂದು ಪುರುಷ ರಾಜಕಾರಣಿಗಳ ವಿರುದ್ಧ ಧ್ವನಿ ಎತ್ತುತ್ತಾರೆ. ಮತ್ತೊಬ್ಬ ವಕೀಲೆ ಹಾಗೂ ರಾಜಕಾರಣಿ ಶ್ರೀಮತಿ ವಿ.'ಮೈಥಿಲಿ' ಅವರು ಮಹಿಳೆಯರು ಈಗಿರುವ ಕುತಂತ್ರ ಹಾಗೂ ಪ್ರೋತ್ಸಾಹರಹಿತವಾದ ಪರಿಸರದ ಪ್ರಭಾವದಿಂದ ಮಹಿಳೆಯರು ಅಬಲೆಯರು ಎಂಬ ಭಾವನೆ ಮೂಡಿದೆ. ಈ ಪರಿಸರದಲ್ಲಿ ಗಂಡಿನ ಅಹಂಭಾವವು ಹೆಚ್ಚಾಗಿ ಮಹಿಳೆಯರು ಮುಂದೊರೆಯುವಲ್ಲಿ ಅಡ್ಡಗಾಲಾಕುತ್ತಿವೆ. ಹೀಗಾಗಿ ಮಹಿಳೆಯರು ಎಲ್ಲ ವಲಯಗಳಲ್ಲಿ ಅತಿ ಹೆಚ್ಚಿನ ಪ್ರಮಾಣದಲ್ಲಿ ಕಂಡುಬರಬೇಕಾದರೆ ಮೀಸಲಾತಿ ಅತಿ ಅವಶ್ಯಕ ಎನ್ನುತ್ತಾರೆ.

ಪಂಚಾಯತ್ ವ್ಯವಸ್ಥೆಯಲ್ಲಿ ಮಹಿಳೆಯರಿಗೆ ಶಾಸನಬದ್ಧ ಮೀಸಲಾತಿ ನೀಡುವ ಪ್ರಯತ್ನ ಮೊದಲು ನಡೆದದ್ದು ಕರ್ನಾಟಕದ ಜನತಾ ಪಕ್ಷ ಸರಕಾರದಿಂದ ೧೯೮೩ರಲ್ಲಿ ಕಾಯ್ದೆ ತಿದ್ದುಪಡಿ ತಂದ ಸರ್ಕಾರ ಶೇಕಡ ೨೫ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಕಡ್ಡಾಯ ಮಾಡಿತು. ಆದರೆ ಇದನ್ನು ೧೯೮೭ರಲ್ಲಿ ಪಂಚಾಯತ್ ಚುನಾವಣೆಯಲ್ಲಿ ಜಾರಿಗೆ ತರಲಾಯಿತು. ಈ ಸಲಹೆಯನ್ನು ರಾಜೀವಗಾಂಧಿ ಸರ್ಕಾರದಲ್ಲಿ ಪಂಚಾಯತ್‌ರಾಜ್ ಬಿಲ್‌ನಲ್ಲಿ ಮತ್ತೆ ಸೂಚಿಸಲಾಯಿತು. ಹೀಗಾಗಿ ೧೯೮೮ರಲ್ಲಿ ಮಹಿಳೆಯರಿಗಾಗಿ ತಯರಾದ 'ರಾಷ್ಟ್ರೀಯ ದೃಷ್ಟಿಕೋನ ಯೋಜನೆ' ಸಹ ಪಂಚಾಯತಿಯಿಂದ ಲೋಕಸಭೆಯವರಿಗೆ ೧/೩ ಭಾಗ ಮಹಿಳಾ ಮೀಸಲಾತಿಯನ್ನು ಎತ್ತಿಹಿಡಿಯಲಾಯಿತು.[೮]

೧೯೯೦ರಲ್ಲಿ ಶರತ್ ಪವಾರ್ ಸರ್ಕಾರವು ಮಹಾರಾಷ್ಟ್ರದಲ್ಲಿ ೩೦ ಮೀಸಲಾತಿಯನ್ನು ಮುನ್ಸಿಪಲ್ ಕಾರ್ಪೋರೇಷನ್, ಮುನ್ಸಿಪಾಲ್ ಕೌನ್ಸಿಲ್, ಜಿಲ್ಲಾ ಪರಿಷತ್, ಗ್ರಾಮಪಂಚಾಯಿತಿಗಳಲ್ಲಿ ನೀಡುವುದಾಗಿ ಘೋಷಿಸಿತು. ಪಶ್ಚಿಮ ಬಂಗಾಳದ ವಾಮರಂಗ ಸರ್ಕಾರವು ೧೯೯೨ರಲ್ಲಿ ನಡೆಸಿದ ಪಂಚಾಯತ್ ಚುನಾವಣೆಯಲ್ಲಿ ಮೂರನೇ ಒಂದು ಭಾಗ ಮೀಸಲಾತಿಯನ್ನು ಜಾರಿಗೊಳಿಸಿತು. ಸಂವಿಧಾನದ ೭೩ ಹಾಗೂ ೭೪ನೇ ತಿದ್ದುಪಡಿಯು ಅಂಗೀಕಾರದಿಂದ ಮಹಿಳೇಯರಿಗೆ ಪಂಚಾಯತ್‌ರಾಜ್ ವ್ಯವಸ್ಥೆಗಳಲ್ಲಿ ಮೀಸಲಾತಿ ದೊರೆತ್ತಿದ್ದರಿಂದ ಹತ್ತು ಲಕ್ಷಕ್ಕೂ ಹೆಚ್ಚು ಮಹಿಳೆಯರು ದೇಶದ ರಾಜಕೀಯ ರಂಗದಲ್ಲಿ ಕಾರ್ಯನಿರ್ವಹಿಸುತ್ತಿದ್ದರು.

ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡಬೇಕೆನ್ನುವ ಅಭಿಪ್ರಾಯ ಇಂದು ನಿನ್ನೆಯದಲ್ಲ, ೧೯೫೭ರಲ್ಲಿ ಕಾಂಗ್ರೆಸ್ ಪಕ್ಷ ಶೇಕಡ ೧೫ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ನೀಡುವುದಾಗಿ ಘೋಷಣೆ ಮಾಡಿತ್ತು. ಆದರೆ ಇಂದಿಗೂ ಆ ಘೋಷಣೆ ಘೋಷಣೆಯಾಗಿಯೇ ಉಳಿದುಕೊಂಡಿದೆ. ೧೯೮೮ರಲ್ಲಿ ಲೋಕಸಭಾ ಚುನಾವಣೆಗಳಲ್ಲಿ ಸ್ಪರ್ಧಿಸಿದ ೧೪,೨೭೪ ಅಭ್ಯಾರ್ಥಿಗಳಲ್ಲಿ

ಕೇವಲ ೪೭೭ ಮಹಿಳೆಯರು ಇದ್ದರು. ಅವರಲ್ಲಿ ಎರಡು-ಮೂರು ಪಟ್ಟು ಪಕ್ಷೇತರ ಅಭ್ಯಾರ್ಥಿಗಳೇ ಇದ್ದರೆ ಹೊರತು ಯಾವ ಪಕ್ಷವು ಮಹಿಳೆಯರಿಗೆ ಬೆಂಬಲ ತೋರಿರಲಿಲ್ಲ. ಇದೇ ಚುನಾವಣೆಯಲ್ಲಿ ವಿವಿಧ ಪಕ್ಷಗಳ ಬೆಂಬಲವನ್ನು ಪಡೆದು ಸ್ಪರ್ಧಿಸಿದ ಮಹಿಳಾ ಅಭ್ಯಾರ್ಥಿಗಳ ಸಂಖ್ಯೆ ಹೀಗಿದೆ.

ಪಕ್ಷ	ಸ್ಪರ್ಧಿಸಿದ ಒಟ್ಟು ಅಭ್ಯರ್ಥಿಗಳು	ಮಹಿಳಾ ಅಭ್ಯರ್ಥಿಗಳು
ಕಾಂಗ್ರೇಸ್ (ಐ)	೫೩೦	೪೯
ಬಿ.ಜೆ.ಪಿ	೪೭೭	೨೩
ಸಿಪಿಐ(ಎಂ)	೭೭	೦೫
ಸಿಪಿಐ	೪೩	೦೪
ಜನತಾದಳ	೨೨೦	೧೧

ಪ್ರತಿಪಕ್ಷವು ಚುನಾವಣೆಯ ಸಮಯದಲ್ಲಿ ಮಹಿಳೆಯರಿಗೆ ಶೇಕಡ ೩೩ರಷ್ಟು ಮೀಸಲಾತಿಯನ್ನು ನೀಡುವುದಾಗಿ ವೇದಿಕೆಯ ಮೇಲೆ ದೊಡ್ಡದಾಗಿ ಘೋಷಿಸಿ ತನ್ನ ಸ್ತ್ರೀಪರ ಕಾಳಜಿಯನ್ನು ಚುನಾವಣಾ ಸಮಯದಲ್ಲಿ ಪ್ರದರ್ಶಿಸುತ್ತಾರೆ. ಆದರೆ ಆ ಹೇಳಿಕೆಯನ್ನು ಕಾರ್ಯರೂಪಕ್ಕೆ ತರುವ ಸಂದರ್ಭ ಒದಗಿ ಬಂದಾಗ ಯಾವುದೋ ಒಂದು ಕುಂಟುನೆಪವನ್ನು ಮುಂದಿಟ್ಟುಕೊಂಡು ತಾನು ಆ ಜವಬ್ದಾರಿಯಿಂದ ನಾಜುಕಾಗಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಾನೆ. ಈ ರೀತಿಯ ಎಲ್ಲಾ ಕುಂಟುನೆಪಗಳನ್ನು ಸೂಕ್ಷ್ಮವಾಗಿ ಗಮನಿಸಿದಾಗ ಮಹಿಳೆಯರಿಗೆ ಸ್ಥಾನಮಾನಗಳನ್ನು ದೊರಕಿಸುವಲ್ಲಿ ಎಷ್ಟರ ಮಟ್ಟಿಗೆ ಆಸಕ್ತಿ ಇದೆ ಎಂಬುದಕ್ಕೆ ಸಾಕ್ಷಿಯಾಗುತ್ತದೆ. ಒಂದು ವೇಳೆ ಹೇಳಿಕೆಯ ಪ್ರಕಾರ ಶೇಕಡ ೩೩ರಷ್ಟು ಮೀಸಲಾತಿಯ ಮಸೂದೆಯನ್ನು ಅಂಗೀಕರಿಸಿದರೆ ಸುಮಾರು ೧೮೧ ಜನ ಹೆಂಗಸರು ಅಧಿಕಾರದ ಸ್ಥಾನಗಳನ್ನು ಆಕ್ರಮಿಸಿಕೊಳ್ಳುತ್ತಾರೆ. ಹೀಗಾಗಿ ಮೇಲ್ಮಟ್ಟದ ಅಧಿಕಾರದ ಸ್ಥಾನಗಳಿಂದ ಪುರುಷರು ವಂಚಿತರಾಗಬೇಕಾಗುತ್ತದೆ ಎಂಬ ಆತಂಕದಿಂದ ರಾಜಕೀಯ ಪಕ್ಷದ ಧುರೀಣರೆಲ್ಲರೂ ಈ ಮಸೂದೆಯನ್ನು ಅಂಗೀಕಾರವಾಗದಂತೆ ನೋಡಿಕೊಳ್ಳುತ್ತಾರೆ. ಉದಾ : ಲೋಕಸಭೆಯಲ್ಲಿ ಮಂಡಿಸಿರುವ ಮಸೂದೆಯಂತೆ ಲೋಕಸಭೆ ಮತ್ತು ರಾಜ್ಯದ ವಿಧಾನಸಭೆಗಳ ಒಟ್ಟು ಚುನಾಯಿತ ಸ್ಥಾನಗಳಲ್ಲಿ ೩೩ ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು ಇದರಲ್ಲಿ ಸಂವಿಧಾನಾತ್ಮಕವಾಗಿ, ಪರಿಶಿಷ್ಟ ಜಾತಿ, ಪಂಗಡಗಳ, ಮೀಸಲಾತಿ ಸ್ಥಾನಗಳಲ್ಲಿ ಮಹಿಳೆಯರಿಗೆ ಕೊಡಬೇಕಾದ ೩೩ ಸ್ಥಾನಗಳು ಒಳಗೊಂಡಿವೆ. ಈ ೩೩ ಸ್ಥಾನಗಳಲ್ಲಿ ಹಿಂದುಳಿದ ವರ್ಗದವರಿಗೆ ಹಂಚಬೇಕೆ ಅಥವಾ ಅವರಿಗೆ ಪುನಃ ಮೀಸಲಾತಿಯನ್ನು ಕಲ್ಪಿಸಬೇಕೆ ಎನ್ನುವುದು ಈಗಿನ ಪ್ರಶ್ನೆಯಾಗಿದೆ. ಇಂತಹ ಬಗೆಹರಿಯಲಾರದ ಪ್ರಶ್ನೆಗಳನ್ನು ಎತ್ತಿ ಮಸೂದೆಯು ಯಶಸ್ವಿ ಕಾಣದ ಹಾಗೆ

ಮಾಡಲು ಹಲವಾರು ರೀತಿಯ ಗೊಂದಲಗಳನ್ನು ಸೃಷ್ಟಿಸುತ್ತಾರೆ. ಹೀಗಾಗಿ ಲೋಕಸಭೆಯಲ್ಲಿ ಮೀಸಲಾತಿಯ ಮಂಡನೆಯನ್ನು ಪ್ರತಿಸಲವೂ ಮುಂದೂಡುತ್ತಾ ಬರುತ್ತಿದ್ದಾರೆ.

ಕೇಂದ್ರ ಹಾಗೂ ರಾಜ್ಯದಲ್ಲಿನ ಪ್ರಜಾಸತ್ತಾತ್ಮಕ ಸಂಸ್ಥೆಗಳಲ್ಲಿ ಮಹಿಳೆಯರಿಗೆ ಮೀಸಲಾತಿ ನೀಡುವ ವಿಷಯವು ಬಹಳ ದೀರ್ಘಕಾಲದಿಂದಲೂ ರಾಷ್ಟ್ರದ ಗಮನವನ್ನು ಸೆಳೆಯುತ್ತಿದೆ. ಮಹಿಳೆಯರಿಗೆ ಆಶ್ವಾಸನೆ ಇತ್ತ ಸಂಯುಕ್ತರಂಗ ಸರ್ಕಾರವು ಸಂವಿಧಾನಾತ್ಮಕ ಮಸೂದೆ(೮೧ನೇ ತಿದ್ದುಪಡಿ)ಯನ್ನು ಮಂಡಿಸುವ ಧೈರ್ಯದ ನಿಲುವನ್ನು ತೆಗೆದುಕೊಂಡಿತು. ಜಂಟಿ ಆಯ್ಕೆ ಸಮಿತಿಯ ಪರಿಶೀಲನೆಯ ನಂತರ ಮಸೂದೆಯ ಪಾರ್ಲಿಮೆಂಟಿನ ಒಪ್ಪಿಗೆಗಾಗಿ ಇನ್ನೂ ಕಾಯುತ್ತಿದೆ. ಅಂದರೆ ಪಾರ್ಲಿಮೆಂಟಿನ ಪ್ರತಿ ಅಧಿವೇಶನದಲ್ಲಿ ಮಹಿಳಾ ಮೀಸಲಾತಿಯ ಮಸೂದೆಯನ್ನು ಮಂಡನೆ ಮಾಡಲಾರದೆ ಅದನ್ನು ಇಂದು ನಾಳೆ ಎಂದು ಮುಂದೂಡುತ್ತಿರುವುದನ್ನು ಮಾರ್ಚ್ ೮, ೨೦೦೩ರವರೆಗೆ ಕಾಣಬಹುದಾಗಿದೆ. ಪುರುಷ ರಾಜಕಾರಣಿಗಳು ಎಲ್ಲಿ ತಮ್ಮಿಂದ ಅಧಿಕಾರದ ಗದ್ದುಗೆ ಪಲಾಯನಗೊಳ್ಳುತ್ತವೋ ಎನ್ನುವ ಭಯದಿಂದ ಮೀಸಲಾತಿಯ ಮಸೂದೆಯನ್ನು ಮಂಡಿಸಲಾರದೆ ಯಾವುದೋ ಸುಳ್ಳುನೆಪಗಳನ್ನು ಹೇಳುತ್ತಾ ಮುಂದೂಡುತ್ತಾ ಬರುತ್ತಿದ್ದಾರೆ.

ಮಹಿಳಾ ಮೀಸಲಾತಿ ಮಸೂದೆಯ ಮುಖ್ಯಾಂಶಗಳು

- ರಾಜ್ಯ ವಿಧಾನಸಭೆಗಳಲ್ಲಿ ಹಾಗೂ ಲೋಕಸಭೆಯಲ್ಲಿ ಪ್ರತಿಶತ ೩೩ರಷ್ಟು ಸ್ಥಾನಗಳನ್ನು ಮಹಿಳೆಯರಿಗೆ ಮೀಸಲಿಡಬೇಕು.
- ಒಟ್ಟು ಮೀಸಲಾತಿಯಲ್ಲಿ ೧/೩ ಭಾಗವನ್ನು ಪರಿಶಿಷ್ಟಜಾತಿ ಮತ್ತು ಪರಿಶಿಷ್ಟ ಪಂಗಡದ ಮಹಿಳೆಯರಿಗೆ ಮೀಸಲಿಡಬೇಕು
- ಈ ಮಸೂದೆಯನ್ನು ಅಂಗೀಕರಿಸಿದ ಸಂದರ್ಭದಲ್ಲಿ ಚಾಲ್ತಿಯಲ್ಲಿರುವ ಲೋಕಸಭೆ ಅಥವಾ ವಿಧಾನಸಭೆಗಳ ಅವಧಿ ಮುಗಿದ ನಂತರ ಮುಂದಿನ ಅವಧಿಗೆ ಚುನಾಯಿತವಾಗುವ ಸಭೆಗಳಿಗೆ ಈ ಮಸೂದೆ ಅನ್ವಯವಾಗುತ್ತದೆ.
- ಮಹಿಳೆಯರಿಗೆ ಮೀಸಲಿಡುವ ೧೮೧ ಲೋಕಸಭೆ ಕ್ಷೇತ್ರಗಳನ್ನು ಪ್ರತಿ ಚುನಾವಣೆಯಲ್ಲಿ ಲಾಟರಿ ಮೂಲಕ ಆಯ್ಕೆ ಮಾಡಬೇಕು.
- ಪರಿಶಿಷ್ಟ ಜಾತಿ ಮತ್ತು ವರ್ಗದವರಿಗೆ ಮೂರಕ್ಕಿಂತಲೂ ಕಡಿಮೆ ಸ್ಥಾನಗಳನ್ನು ಮೀಸಲಿಟ್ಟಿರುವ ರಾಜ್ಯಗಳು ಹಾಗೂ ಕೇಂದ್ರಾಡಳಿತದ ಪ್ರದೇಶಗಳಿಗೆ ಮಸೂದೆ ಅನ್ವಯಿಸುವುದಿಲ್ಲ. ಅದರಂತೆ ಈ ಮಸೂದೆ ಪ್ರಸ್ತುತ ೧೦ ರಾಜ್ಯಗಳು ಹಾಗೂ ಕೇಂದ್ರಾಡಳಿತ ಪ್ರದೇಶಗಳಿಗೆ ಅನ್ವಯಿಸುವುದಿಲ್ಲ.

ಮೀಸಲಾತಿಯಿಂದ ಮಹಿಳೆಯರಿಗೆ ದೊರಕುವ ೧೮೧ ಲೋಕಸಭಾ ಸ್ಥಾನಗಳಲ್ಲಿ ಒಂದು ಭಾಗವನ್ನು ಪರಿಶಿಷ್ಟ ಜಾತಿ, ಪಂಗಡದ ಮಹಿಳೆಯರಿಗೆ ಮೀಸಲಿಡಲಾಗುತ್ತದೆ. ಹಾಗೆಯೇ ಹಿಂದುಳಿದ ವರ್ಗದ ಮಹಿಳೆಯರಿಗೂ ಈ ಪ್ರಮಾಣದ ಮೀಸಲಾತಿಯನ್ನು ಕಲ್ಪಿಸಬೇಕೆನ್ನುವ ಬೇಡಿಕೆಯನ್ನು ಮುಂದಿಡುತ್ತಾರೆ. ಈ ರೀತಿಯ ಕಾಕತಾಳಿಯ ಸಮಸ್ಯೆಗಳನ್ನು ಒಡ್ಡುತ್ತಾ ಮೀಸಲಾತಿ ಪ್ರಕರಣವನ್ನು ಮುಂದೂಡುತ್ತಾರೆ. ಮೀಸಲಾತಿಯಿಂದ ಮೇಲ್ವರ್ಗದ, ಶ್ರೀಮಂತ ಕುಟುಂಬದ ಮಹಿಳೆಯರು ಮತ್ತು ರಾಜಕಾರಣಿಗಳ ಕುಟುಂಬದ ಮಹಿಳೆಯರು ಮಾತ್ರ ಈ ಮೀಸಲಾತಿಯ ಉಪಯೋಗವನ್ನು ಪಡೆದುಕೊಳ್ಳುತ್ತಾರೆ. ಹೀಗಾಗಿ ಸಮಾಜದಲ್ಲಿ ದುರ್ಬಲ ಎನಿಸಿಕೊಂಡ ಮಹಿಳೆಯರನ್ನು ಇನ್ನಷ್ಟು ದುರ್ಬಲಗೊಳಿಸಿದಂತಾಗುತ್ತದೆ ಎಂದು ಕೆಲವರು ವಿರೋಧಿಸುತ್ತಾರೆ.

ಲೋಕಸಭೆಯಲ್ಲಿ ೧೮೧ ಸ್ಥಾನಗಳನ್ನು ಮೀಸಲಿಡುವಾಗ 'ಲಾಟರಿಪದ್ಧತಿ' ಸಲಹೆಗೂ ವಿರೋಧ ವ್ಯಕ್ತವಾಗುತ್ತದೆ. ಏಕೆಂದರೆ ಲಾಟರಿ ಮೂಲಕ ಸ್ಥಾನಗಳನ್ನು ನಿರ್ಧರಿಸುವುದರಿಂದ ಆ ಕ್ಷೇತ್ರದ ಅಭಿವೃದ್ಧಿ ವಿಚಾರದಲ್ಲಿ ನಿರಾಸಕ್ತಳಾಗುತ್ತಾಳೆ. ಲಾಟರಿ ಮೂಲಕ ಮೀಸಲಾತಿ ಕ್ಷೇತ್ರಗಳಿಗೆ ಆಯ್ಕೆ ಮಾಡುವುದರಿಂದ ಆ ಕ್ಷೇತ್ರದ ಮತದಾರರು ಆಕೆಯನ್ನು ಪ್ರಶ್ನಿಸುವ ಅಧಿಕಾರವೇ ಇಲ್ಲದಂತಾಗುತ್ತದೆ ಎಂಬ ಟೀಕೆಗಳು ಹಲವಾರು ರೀತಿಯಲ್ಲಿ ಕಂಡುಬರುತ್ತವೆ. ಹೀಗಾಗಿ ಪರಿಶಿಷ್ಟರ ಮೀಸಲಾತಿಯಲ್ಲಿ ಇರುವಂತೆ ರಾಜಕೀಯ ಕ್ಷೇತ್ರಗಳ ಮೀಸಲಾತಿಯನ್ನು ಇಂತಿಷ್ಟು ಸಮಯದವರೆಗೆ ಮೀಸಲಿಡುವುದು ಸೂಕ್ತ ಎನ್ನುವ ಧ್ವನಿ ಕೇಳಿಬರುತ್ತವೆ.

ಮಹಿಳೆಯರಿಗೆ ಪಂಚಾಯತ್ ಮಟ್ಟದಲ್ಲಿ ಕಾರ್ಯನಿರ್ವಹಿಸುವುದು ಅತಿಸುಲಭ. ಆದರೆ ರಾಜ್ಯ ಮತ್ತು ರಾಷ್ಟ್ರ ಮಟ್ಟದ ರಾಜಕೀಯ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸಲು ಆಗುವುದಿಲ್ಲ. ರಾಜ್ಯ ಮತ್ತು ರಾಷ್ಟ್ರಮಟ್ಟದಲ್ಲಿ ಕಾರ್ಯನಿರ್ವಹಿಸಬೇಕಾದರೆ ಅವರಿಗೆ ವಿಶೇಷ ಬೌದ್ಧಿಕ ಮಟ್ಟ ಮತ್ತು ಕೌಶಲ್ಯದ ಜೊತೆ ಮಾತಿನ ಚಾತುರ್ಯತೆ ಇರಬೇಕೆಂದು ಮೀಸಲಾತಿಯ ವಿರೋಧಿಗಳು ಪ್ರತಿಪಾದಿಸುತ್ತಾರೆ. ಆದರೆ ಮೊದಲ ಬಾರಿಗೆ ರಾಜಕೀಯಕ್ಕೆ ಪ್ರವೇಶಿಸಿದ ಪುರುಷರಿಗೆ ಸಂಬಂಧಿಸಿದಂತೆ ಕೇಳಿಬರುವುದಿಲ್ಲ. ಬುದ್ಧಿವಂತಿಕೆ ಎನ್ನುವುದು ಯಾರಿಗೆ ಹುಟ್ಟಿನಿಂದ ಬಂದಿದ್ದಲ್ಲ. ಅದನ್ನು ಅನುಭವ, ಅಭ್ಯಾಸ, ಶ್ರಮ ಪೂರ್ವಕ ಪ್ರಯತ್ನದಿಂದ ಮತ್ತು ತರಬೇತಿಯಿಂದ ಎಂತಹ ಮಂದಬುದ್ಧಿಯವರು ಕೂಡ ಆ ಎಲ್ಲ ಅಂಶಗಳನ್ನು ಪಡೆಯಲು ಸಾಧ್ಯವಾಗುತ್ತದೆ ಎಂದು ಮಹಿಳಾ ಸಂಘಟನಾಕಾರರು, ಚಳುವಳಿಕಾರರು, ಪುರುಷ ರಾಜಕಾರಣಿಗಳನ್ನು ಕಡೆಗಣಿಸುತ್ತಾರೆ.

ಚುನಾವಣೆಯಲ್ಲಿ ಮಹಿಳೆಯರಿಗೆ ಸ್ಥಾನಗಳನ್ನು ಮೀಸಲಿಡುವುದಕ್ಕಿಂತ ರಾಜಕೀಯ ಪಕ್ಷಗಳೇ ತಾವು ನೀಡುವ ಟಿಕೇಟುಗಳಲ್ಲಿ ಸ್ವಲ್ಪಭಾಗವನ್ನು ಮಹಿಳೆಯರಿಗೆ ಕಡ್ಡಾಯ ಮಾಡುವುದು ಸೂಕ್ತ ಎಂದು ಕೆಲವು

ರಾಜಕಾರಣಿಗಳು ಅಭಿಪ್ರಾಯಪಡುತ್ತಾರೆ. ಮಹಿಳೆಯರ ಸ್ಥಾನಮಾನದ ಸುಧಾರಣೆಯ ಬಗ್ಗೆ ಬಹುವಾಗಿ ಮಾತನಾಡಿವ ರಾಜಕೀಯ ಪಕ್ಷಗಳು ಹನ್ನೆರಡನೆಯ ಲೋಕಸಭಾ ಚುನಾವಣೆಯಲ್ಲಿ ಟಿಕೇಟ್ ನೀಡಿರುವುದು ಕೇವಲ ಬೆರಳೆಣಿಕೆಯಷ್ಟು ಮಾತ್ರ ಕಂಡುಬರುತ್ತವೆ. ಇಲ್ಲಿ ಮುಖ್ಯವಾಗಿ ಗಮನಿಸಬೇಕಾದುದ್ದು ಏನೆಂದರೆ, ಟಿಕೇಟ್ ನೀಡುವುದು ಕಡ್ಡಾಯ ಮಾಡಿದರೆ ಆ ಕ್ಷೇತ್ರದಲ್ಲಿ ಮಹಿಳೆ ಆಯ್ಕೆಯಾಗಿ ಬರುವುದು ಅಷ್ಟು ಖಚಿತವಾಗಿರುವುದಿಲ್ಲ. ಅವಳ ವಿರುದ್ಧ ಸ್ಪರ್ಧಿಸುವ ಬೇರೆ ಪಕ್ಷದ ಪುರುಷ ಅಭ್ಯಾರ್ಥಿ ಆ ಕ್ಷೇತ್ರದಲ್ಲಿ ಗೆದ್ದು ಬರುವ ಸಂಭವಗಳು ಉಂಟು. ಹೀಗಾಗಿ ಕೆಲವು ಕ್ಷೇತ್ರಗಳನ್ನು ಮಹಿಳೆಯರಿಗೆ ಮೀಸಲಾಗಿಟ್ಟರೆ ಯಾವ ಪಕ್ಷದವರೇ ಆಗಲಿ ಆ ಕ್ಷೇತ್ರದಲ್ಲಿ ಮಹಿಳೆಯರೇ ಆಯ್ಕೆಯಾಗುತ್ತಾರೆ.

ಮಹಿಳೆಯರು ಸಮಾನತೆ ಕೇಳುವಾಗ ಮೀಸಲಾತಿ ಕೇಳುವುದು ವಿಪರ್ಯಾಸ ಎಂದು ಅನೇಕರು ವಾದಿಸುತ್ತಾರೆ. ಆದರೆ ಮೀಸಲಾತಿ ಎನ್ನುವುದು ಸಮಾನತೆಯನ್ನು ಸಾಧಿಸುವಲ್ಲಿ ಇಡುವ ಒಂದು ಹೆಜ್ಜೆ ಮಾತ್ರ. ಮಹಿಳೆಯರಿಗೆ ಮೀಸಲಾತಿ ಕೊಡುವುದರಿಂದ ಸ್ತ್ರೀ-ಪುರುಷರ ಮಧ್ಯೆ ಬೆಳೆದಿರುವ ಅಸಮಾನತೆ ಸ್ವಲ್ಪಮಟ್ಟಿಗಾದರೂ ಕಡಿಮೆಯಾಗಿ, ಸಾಮಾಜಿಕ, ಕೌಟುಂಬಿಕ, ಆರ್ಥಿಕ ಹಾಗೂ ರಾಜಕೀಯ ವಲಯಗಳಲ್ಲಿ ಪ್ರವೇಶಿಸಲು ಮತ್ತು ನಿರ್ಣಾಯಕ ಸ್ಥಾನಗಳನ್ನು ತಮ್ಮದಾಗಿಸಿಕೊಳ್ಳಲು ಅನುವಾಗುತ್ತದೆ.

ಸ್ವಾತಂತ್ರ್ಯ ಭಾರತದಲ್ಲಿ ಪ್ರಜಾಪ್ರಭುತ್ವ ಮಹಿಳೆಯರನ್ನು ಶೋಷಣೆ ಮಾಡುತ್ತ ಮತ್ತು ಪುರುಷರನ್ನು ಪೋಷಿಸುವ ಸಂಪ್ರದಾಯ ಹೊಂದಿದೆ. ರಾಜಕೀಯ ಕ್ಷೇತ್ರದಲ್ಲಿ ಮಹಿಳೆಯರ ಪ್ರತಿನಿಧಿತ್ವ ತೀರಾ ಕಡಿಮೆ ಎನ್ನುವುದರ ಬಗ್ಗೆ ಸಂಶಯವೇ ಇಲ್ಲ. ಮಹಿಳೆಯರಿಗೆ ರಾಜ್ಯ ಮಂತ್ರಿಗಳಾಗಿ ಸ್ಥಾನ ಕೊಡಲಾಗುತ್ತದೆಯೇ ಹೊರತು ಕ್ಯಾಬಿನೆಟ್ ಮಂತ್ರಿಯದಲ್ಲ. ಪಾರ್ಲಿಮೆಂಟ್ ನಲ್ಲಿ ಮಹಿಳೇಯರ ಸಂಖ್ಯೆ ಇಳಿತವಾಗಿರುವುದನ್ನು ಅಥವಾ ತೀರಾ ಮಂದಗತಿಯಲ್ಲಿ ಸಾಗಿ ಬರುತ್ತಿರುವುದನ್ನು ಕಳೆದ ಹನ್ನೆರಡು ಲೋಕಸಭಾ ಚುನಾವಣೆಗಳಲ್ಲಿ ಮಹಿಳೆಯರು ರಾಜಕೀಯದಲ್ಲಿ ಪಾಲ್ಗೊಳ್ಳುವಿಕೆಯನ್ನು ಕಾಣಬಹುದಾಗಿದೆ.[೮]

ವರ್ಷ	ಒಟ್ಟುಸ್ಥಾನಗಳು	ಮಹಿಳಾ ಸದಸ್ಯರು	ಮಹಿಳಾ ಸದಸ್ಯರ ಶೇಕಡವಾರು
೧೯೫೨	೪೯೯	೨೨	೪.೪
೧೯೫೭	೫೦೦	೨೭	೫.೪
೧೯೬೨	೫೦೩	೩೪	೬.೭
೧೯೬೭	೫೨೩	೩೧	೫.೯
೧೯೭೧	೫೨೧	೨೨	೪.೨
೧೯೭೭	೫೪೪	೧೯	೩.೪
೧೯೮೦	೫೪೪	೨೮	೫.೧
೧೯೮೪	೫೪೪	೪೪	೮.೧
೧೯೮೯	೫೧೭	೨೭	೫.೨
೧೯೯೧	೫೪೪	೩೯	೭.೪
೧೯೯೬	೫೪೩	೩೬	೬.೬
೧೯೯೮	೫೪೩	೪೩	೮.೦

ಈ ಮೇಲಿನ ಅಂಕಿ ಅಂಶಗಳನ್ನು ಬೇರೆ ದೇಶಗಳಿಗೆ ಹೋಲಿಸಿ ನೋಡಿದರೆ ಇದೇ ಆಶಾದಾಯಕವಾಗಿದೆ. ಸ್ವಿಡನ್ ದೇಶದಲ್ಲಿ ಶೇಕಡ ೪೦.೪ರಷ್ಟು ಮಹಿಳೆಯರು ರಾಜಕೀಯದಲ್ಲಿ ಭಾಗವಹಿಸಿರುವುದನ್ನು ಬಿಟ್ಟರೆ ವಿಶ್ವದಾದ್ಯಂತ ಇದು ಶೇಕಡ ೧೦ಕ್ಕಿಂತ ಕಡಿಮೆಯೇ ಇದೆ. "ಬಹುಮುನ್ನಡೆದ ದೇಶಗಳೆನಿಸಿಕೊಂಡ ಅಮೇರಿಕಾ ಸಂಯುಕ್ತ ಸಂಸ್ಥಾನಗಳಲ್ಲಿ ಶೇಕಡ ೬.೪ರಷ್ಟು, ಯುನೈಟೇಡ್ ಕಿಂಗ್ ಡಮ್ ನಲ್ಲಿ ಶೇಕಡ ೬.೩ರಷ್ಟು, ಪ್ರಾನ್ಸ್ ನಲ್ಲಿ ೫.೭ರಷ್ಟು ಮಹಿಳೆಯರ ಪ್ರತಿನಿಧ್ಯ ಎಂಬುದನ್ನು ಕಂಡರೆ, ಭಾರತದಲ್ಲಿ ಇದು ೧೯೯೮ರ ಲೋಕಸಭಾ ಚುನಾವಣೆಯಲ್ಲಿ ಮಹಿಳೆಯರು ಶೇಕಡ ೮.೦ರಷ್ಟು ಪ್ರಾತಿನಿಧ್ಯ ಪಡೆದಿರುವುದು ರೋಮಾಂಚಕವೆನಿಸುತ್ತದೆ."[೯]

೧೯೯೭ರಲ್ಲ ಪ್ರಧಾನ ಮಂತ್ರಿ ಐ.ಕೆ.ಗುಜ್ರಾಲ ಅವರು ಮಸೂದೆ ಮಂಡಿಸಲು ಯತ್ನಿಸಿದಾಗ ಅವರದೇ ಪಕ್ಷದ ಸಹೋದ್ಯೋಗಿ ಮಸೂದೆ ಮಂಡನೆಗೆ ಅವಕಾಶಕೊಡಲಿಲ್ಲ. ಮತ್ತೊಮ್ಮ ಪ್ರಧಾನಿ 'ವಾಜಪೇಯಿ' ಅವರ ಸರ್ಕಾರ ಮಸೂದೆ ಮಂಡಿಸಲು ಯತ್ನಿಸಿದಾಗ, ಇಡೀ ದೇಶ ವಿಶ್ವದ ಮುಂದೆ ತಲೆ ತಗ್ಗಿಸುವಂತಹ ಗಲಾಟೆಯನ್ನು ಕೆಲವು ಸದಸ್ಯರು ಮಾಡಿದರು. ಈ ಹಂತದಲ್ಲಿಯೇ ಈ ಮಸೂದೆಯನ್ನು ಹಿಂದುಳಿದ ವರ್ಗ ಹಾಗೂ ಅಲ್ಪ ಸಂಖ್ಯಾತ ವರ್ಗಗಳ ಮಹಿಳೆಯರಿಗೂ ಮೀಸಲಾತಿ ಕಲ್ಪಿಸಬೇಕೆಂದರೆ, ಅದಕ್ಕೂ ಮೊದಲು ಸಂವಿಧಾನ ತಿದ್ದುಪಡಿಯಾಗುತ್ತದೆ. ಅದು ಸಾಕಷ್ಟು ಸಮಯ ಹಿಡಿಯುವ ಕೆಲಸವಾದ್ದರಿಂದ

ಅಲ್ಲಿಯವರೆಗೆ ಮೀಸಲಾತಿ ಮಸೂದೆಯನ್ನು ತಡೆಹಿಡಿಯಬಹುದು ಎನ್ನುವುದು ಹಲವು ಪುರುಷರ ಕುತಂತ್ರವಾಗಿತ್ತು.

ಮಸೂದೆಯ ಮಂಡನೆಗೆ ಇಷ್ಟೊಂದು ಚರ್ಚೆ, ವಿರೋಧ, ಗಲಭೆಗಳು ನಡೆಯುತ್ತದೆ. ಆಕಸ್ಮಾತ್ ಈ ಮಸೂದೆ ಜಾರಿಗೆ ಬಂದರೆ ಭಾರತದ ಸಾಮಾಜಿಕ ವ್ಯವಸ್ಥೆಯಲ್ಲಿ ಕ್ರಾಂತಿಕಾರಕ ಬದಲಾವಣೆ ಆಗುತ್ತದೆ ಎನ್ನುವುದು ಸ್ಪಷ್ಟವಾಗುತ್ತದೆ. ರಾಷ್ಟ್ರಪತಿ ಕೆ.ಆರ್.ನಾರಾಯಣ ಅವರಿಂದ ಹಿಡಿದು ದೇಶದ ಎಲ್ಲಾ ಚಿಂತಕರು, ಮುತ್ಸದ್ದಿಗಳು, ಹಲವು ಪಕ್ಷಗಳು ಹಾಗೂ ಬಹುಪಾಲು ಮುದ್ರಣ ಮಾಧ್ಯಮ ಮಸೂದೆಯ ಪರವಾಗಿದ್ದರೂ ಮಸೂದೆ ಮಾತ್ರ ಜಾರಿಗೆ ಬರುತ್ತಿಲ್ಲ ಎಂದರೆ ಮಹಿಳೆಯರು ಯಾರನ್ನು ನಂಬಬೇಕು ಎನ್ನುವುದು ಅರ್ಥವಾಗದ ಸಂಗತಿಯಾಗಿದೆ.

ಸರಕಾರಿ ಬಸ್ಸುಗಳಲ್ಲಿ ಮಕ್ಕಳನ್ನು ಹಾಕಿಕೊಂಡು ಜೋಲಾಡುತ್ತಾ, ವಾಲಾಡುತ್ತಾ ಹೆಣ್ಣುಮಕ್ಕಳು ನಿಂತಿರುವಾಗ ಮಹಿಳೆಯರಿಗೆ ಮೀಸಲಾಗಿರುವ ಆಸನಗಳಲ್ಲಿ ಕುಳಿತು ತಮಾಷೆ ನೋಡುವ ಈ ಜನ ಬಸ್ಸಿನಲ್ಲಿಯೇ ಮೀಸಲಾದ ಮಹಿಳೆಯರ ಆಸನಗಳನ್ನು ಮಹಿಳೆಯರಿಗೆ ಬಿಟ್ಟುಕೊಡದ ಈ ಮಹಾನುಭಾವರು ಅವರ ಭದ್ರಕೋಟೆಯಾದ ರಾಜಕೀಯ ಅಧಿಕಾರವನ್ನು ಅವರು ಸ್ತ್ರೀಯರೊಂದಿಗೆ ಹಂಚಿಕೊಳ್ಳಬೇಕಾಗಿ ಬಂದಾಗ ಸಂಕಟವಾಗುತ್ತದೆ. ಹೀಗಾಗಿ ಯಾವ ಮಂತ್ರಿಯೂ ಮಸೂದೆ ಮಂಡನೆಯ ಬಗ್ಗೆ ಮಾತೇ ಎತ್ತಿರುವುದು ಕಂಡುಬರುವುದಿಲ್ಲ. ಒಂದು ವೇಳೆ ಮಸೂದೆ ಮಂಡಿಸಲು ಸದನದ ಅನುಮತಿ ಕೋರುತ್ತೇನೆ ಎಂದು ಮಂತ್ರಿಗಳು ಹೇಳಿದರೆ ಅದು ದಾಖಲಾಗುತ್ತಿತ್ತು. ಒಬ್ಬ ಮಹಿಳೆ ಸಭಾಧ್ಯಕ್ಷರ ಪೀಠದಲ್ಲಿ ಇದ್ದಿದ್ದರೆ ಈ ಮಸೂದೆ ಮಂಡನೆಯಾಗುತ್ತಿತ್ತು ಎಂದು ಹೇಳಬಹುದಾಗಿದೆ.

"ಮಹಿಳೆಯರಿಗೆ ಅಧಿಕಾರ ನೀಡುವುದಕ್ಕೆ ಮೊದಲು ವಿವಿಧ ಜಾತಿ ಪಂಗಡಗಳಿಗೆ ಮಿಸಲಾತಿ ನೀಡಬೇಕೆಂದು ಷರತ್ತು ಹಾಕುವುದು ಪುರುಷ ಪ್ರಾಧಾನ್ಯತೆಯ ನೀಚತನವಲ್ಲದೆ ಮತ್ತೇನು?"

-ಇ.ಎಂ.ಎಸ್ .ನಂಬೂದಿರಿಪಾದ್

ಫ್ರಂಟ್ ಲೈನ್ ಪತ್ರಿಕೆಯಲ್ಲಿ

"ರಾಜಕೀಯರಂಗಕ್ಕೆ ಹೆಚ್ಚು ಮಹಿಳೆಯರು ಬಂದಾಕ್ಷಣ ಅದು ರಾಜಕೀಯವನ್ನು ಶುದ್ಧಗೊಳಿಸುತ್ತದೆ ಎನ್ನುವುದಕ್ಕೆ ಸಾಧ್ಯವಿಲ್ಲ. ರಾಜಕೀಯ ಶುದ್ಧತೆ ಎನ್ನುವುದು ವ್ಯಕ್ತಿಯ ರಾಜಕೀಯ ಮೌಲ್ಯವನ್ನು ಆಧರಿಸಿರುತ್ತದೆ."

'ಮಾಲಿನಿ ಭಟ್ಟಾಚಾರ್ಯ

ಸಂಸತ್ ಸದಸ್ಯೆ(ಸಿ.ಪಿ.ಎಂ)

ಮಸೂದೆ ವಿರೋಧಿಗಳು

- ಮಹಿಳೆಯರಿಗಾಗಿ ಕಾಯ್ದೆಯೊಂದನ್ನು ರೂಪಿಸುವ ಬದಲು ನಿಧಾನವಾಗಿ ಪುರುಷರ ಮನೋಭಾವನೆಯನ್ನು ಬದಲಿಸುವ ಪ್ರಯತ್ನವನ್ನು ಮಾಡುವುದು ಒಳ್ಳೆಯದು - ಸರ್ಪೋಟ್ದಾರ್, ಶಿವಸೇನೆ.
- ಇದು ಅನಪೇಕ್ಷಣೀಯ ಅನಗತ್ಯ ಮಸೂದೆ - **ಬನತ್ ವಾಲ, ಮುಸ್ಲಿಂ ಲೀಗ್**
- ಈಗಾಗಲೇ ಇಷ್ಟೊಂದು ಗಲಾಟೆ ಮಾಡುತ್ತಿರುವ ಮಹಿಳೆಯರು ಸಂಖ್ಯೆಯಲ್ಲಿ ಇನ್ನೂ ಹೆಚ್ಚಾದರೆ ಎಷ್ಟೊಂದು ಗಲಾಟೆ ಮಾಡಬಹುದು - **ರಾಜೇಶ್ ಪೈಲಟ್, ಕಾಂಗ್ರೆಸ್.ಐ**

ಲಿಂಗ ತಾರತಮ್ಯ ಇದೆ ಎನ್ನುವುದನ್ನು ಒಪ್ಪುತ್ತೇನೆ. ಆದರೆ ಅನೇಕ ಮಹಿಳೆಯರು ಸಾರ್ವಜನಿಕ ಜೀವನ ಪ್ರವೇಶಿಸಲು ಇಚ್ಛಿಸುವುದಿಲ್ಲ. ಹಾಗೊಂದು ವೇಳೆ ಅವರು ಸಾರ್ವಜನಿಕ ಜೀವನಕ್ಕೆ ಬಂದರೆ ಕೌಟುಂಬಿಕ ಜೀವನಕ್ಕೆ ಧಕ್ಕೆಯಾಗುತ್ತದೆ.

ಸೈಯದ್ ಶಂಕಾಬುದ್ದಿನ್, ಮುಸ್ಲಿಂ ಲೀಗ್

ಮಸೂದೆಯನ್ನು ಜಾರಿಗೆ ತರುವುದು ಮತ್ತು ಲೋಕಸಭೆಯಲ್ಲಿ ಆಡಳಿತ ನೋಡಿಕೊಳ್ಳುವುದು ಅಡಿಗೆ ಮನೆಯಲ್ಲಿ ದೋಸೆ ಮಾಡಿದಷ್ಟು ಸುಲಭವಲ್ಲ.

- ಔಟ್‌ಲುಕ್ ವರದಿ

ಮಹಿಳಾ ಮೀಸಲಾತಿ ಶೇಕಡ ೩೩ ರಷ್ಟೇ ಏಕ?

ಲೋಕಸಭೆ ಹಾಗೂ ವಿಧಾನಸಭೆಯ ಸ್ಥಾನಗಳಲ್ಲಿ ಶೇ.೩೩ರಷ್ಟನೇ ಮೀಸಲಾಗಿಟ್ಟಿರುವುದು ಯಾವ ಮಾನದಂಡವೆಂಬುದು ಅರ್ಥೈಸಲಾಗದಂತಾಗಿದೆ. ಇದು ೩೩ ಕ್ಕಿಂತ ಹೆಚ್ಚು ಅಥವಾ ಕಡಿಮೆಯಾಗಬಹುದಿತ್ತು. ಇಲ್ಲವೆ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರಿಗೆ ಅನುಗುಣವಾಗಿ ಮೀಸಲಾತಿ ಪ್ರಕರಣವನ್ನು ೪೯ಕ್ಕೆ ಅಥವಾ ೪೫ಕ್ಕೆ ನಿಗಧಿ ಪಡಿಸಬಹುದಾಗಿತ್ತು. ಇದರ ಪರಿಣಾಮವನ್ನು ಕೂಡ ಅವಲೋಕಸಿದಾಗ ಮಹಿಳೆಯರಿಗೆ ೩೩ರ ಮೀಸಲಾತಿಯನ್ನು ನೀಡಿರುವುದನ್ನು ನೋಡಿದಾಗ ಅವರ ಪ್ರಾತಿನಿಧ್ಯ ೩೩ಕ್ಕೆ ನಿಂತುಬಿಡುವ ಸಾಧ್ಯತೆಗಳೇ ಹೆಚ್ಚು. ಏಕೆಂದರೆ ಯಾವ ಪಕ್ಷಗಳೂ ನಿಗಧಿಪಡಿಸಿರುವುದಕ್ಕಿಂತ ಹೆಚ್ಚಿನ ಮಹಿಳಾ ಅಭ್ಯಾರ್ಥಿಗಳನ್ನು ಚುನಾವಣೆಗೆ ನಿಲ್ಲಿಸುವುದಿಲ್ಲ. ಆದರೆ ನೇಪಾಳ, ಫಿಲಿಫೈನ್ಸ್ ಮತ್ತು ಹಿಂದಿನ ಸೋವಿಯತ್ ಒಕ್ಕೂಟಗಳಲ್ಲಿ ಮಹಿಳೆಯರಿಗೆ ನಿಗಧಿಪಡಿಸಿದ ಮೀಸಲಾತಿ ನೀಡಿದ್ದಾಗೂ ರಾಜಕೀಯದಲ್ಲಿ ಮಹಿಳೆಯರ ಭಾಗವಹಿಸುವಿಕೆಯಿಂದ ಹೆಚ್ಚಿನ ಯಶಸ್ಸು ಕಂಡಿಲ್ಲವೆಂಬುದು ವಿಪರ್ಯಾಸದ ಸಂಗತಿಯಾಗಿದೆ.

ರಾಜಕೀಯದಲ್ಲಿ ಮೀಸಲಾತಿ ನೀಡುವಷ್ಟರಿಂದಲೇ ಮಹಿಳೆಯರ ಸಂಕಷ್ಟಗಳು ದೂರವಾಗುವುದಿಲ್ಲ. ಆದರೆ ಸ್ತ್ರೀ-ಪುರುಷರ ಸಮಾನತೆಯ ಸಾಧನೆಯ ಹಾದಿಯಲ್ಲಿ ಇದು ಒಂದು ಮೈಲುಗಲ್ಲಾಗುತ್ತದೆ. ಸಂವಿಧಾನದಲ್ಲಿ ಕೊಡು ಮಾಡಿರುವ ಸಮಾನತೆಯ ಹಕ್ಕನ್ನು ಸ್ಥಾಪಿಸುವ ದಿಕ್ಕಿನಲ್ಲಿ ಜಾರಿಗೊಂಡ ಕಾನೂನುಗಳ ಪೈಕಿ ಇದು ಪ್ರಮುಖವಾಗುತ್ತದೆ.

ಇದುವರೆಗೆ ನಡೆದುಕೊಂಡು ಬಂದಿರುವಂತೆ ಈಗಲೂ ಮಾನವ ನಾಗರೀಕತೆಯು ಪುರುಷ ಪ್ರಧಾನವಾದುದೇ ಆಗಿದೆ. ಸ್ತ್ರೀಯರು ವಹಿಸುತ್ತಿರುವ ಪಾತ್ರದ ಬಗ್ಗೆ ಈಗ ಮೊದಲಿಗಿಂತಲು ಹೆಚ್ಚಿನ ಅರಿವು ಮೂಡಿರಬಹುದಾದರೂ ಅದರಿಂದಾಗಿ ಸಮಾನತೆಯ ಅವಶ್ಯಕತೆ ಇದೆ ಎಂಬ ತಿಳಿವು ಮೂಡಿದೆ ಎನ್ನುವಂತಿಲ್ಲ. ಸಮಾನ ಹಕ್ಕುಗಳನ್ನು ಮತ್ತು ಅವಕಾಶಗಳನ್ನು ನೀಡಿದ ಮಾತ್ರಕ್ಕೆ ಸ್ತ್ರೀಯರು ಪುರುಷರಿಗೆ ಸಮಾನರಾಗುತ್ತಾರೆ ಎಂದು ಹೇಳಲಾಗದು. ಉದಾ : ಅಮೇರಿಕಾದಲ್ಲಾಗಲಿ, ಭಾರತ, ಪ್ರಾನ್ಸ್, ಜರ್ಮನಿ, ಜಪಾನ್, ರಷ್ಯ ಇವುಗಳಲ್ಲಿ ಇದುವರೆಗೆ ಯಾವೊಬ್ಬ ಮಹಿಳೆಯೂ ದೇಶದ ಅಧ್ಯಕ್ಷ ಪದವಿಯನ್ನು ಅಲಂಕರಿಸಿಲ್ಲ. ರಾಜಕೀಯ ಕ್ಷೇತ್ರ, ಪತ್ರಿಕೋದ್ಯಮದಕ್ಷೇತ್ರ, ನ್ಯಾಯಾಂಗದ ಕ್ಷೇತ್ರ, ಸಂಶೋಧನಾ ಕ್ಷೇತ್ರ, ವೈಜ್ಞಾನಿಕಾ ಕ್ಷೇತ್ರ, ಸೈನಿಕ ಕ್ಷೇತ್ರ ಮತ್ತು ಸಾಹಿತ್ಯದ ಕ್ಷೇತ್ರಗಳಲ್ಲಿ ಸ್ತ್ರೀಯರೂ ಸಮಾನಾ ಅವಕಾಶಗಳ ಹೊರತಾಗಿಯೂ ಪುರುಷರಿಗೆ ಎಂದಿಗೂ ಸರಿಸಾಟಿಯಾಗಿಲ್ಲದಿರುವುದು ಒಂದು ವ್ಯವಸ್ಥೆಯ ದೋಷವಾಗಿದೆ.

ಮಹಿಳೆಯರು ಶೇಕಡ ೩೩ರಷ್ಟು ಮೀಸಲಾತಿಯನ್ನು ಕೇಳಿದಾಗ ಪುರುಷ ರಾಜಕಾರಣಿಗಳು ಮತ್ತು ಪಿತೃಪ್ರಧಾನ ಸಮಾಜ ವ್ಯವಸ್ಥೆ ಮಹಿಳೆಯರನ್ನು ಅಪಹಾಸ್ಯಗೈದಿರುವುದು ತಿಳಿದುಬರುತ್ತದೆ. ಏಕೆಂದರೆ ಒಟ್ಟು ಜನಸಂಖ್ಯೆಯಲ್ಲಿ ಅರ್ಧದಷ್ಟಿರುವ ಮಹಿಳೆಯರು ಶೇಕಡ ೫೦ರಷ್ಟೋ ಅಥವಾ ೪೫ ರಿಂದ ೪೯ರವರೆ ಮೀಸಲಾತಿಯನ್ನು ಕೇಳುವುದನ್ನು ಬಿಟ್ಟು ಕೇವಲ ೩೩ ಮೀಸಲಾತಿಯನ್ನು ಕೇಳುತ್ತಿದ್ದಾರೆ ಎಂದು ನಗೆಪಾಟಲು ಮಾಡುತ್ತಿದ್ದಾರೆ. ಆಡಳಿತ ರಂಗದಲ್ಲಿ ಯಾವುದೇ ಒಂದು ನಿರ್ಣಯ ತೆಗೆದು ಕೊಳ್ಳಬೇಕಾದರೆ ೧/೩ರಷ್ಟು ಬೆಂಬಲವನ್ನು ತೋರಿದಾಗ ಮಾತ್ರ ಆ ನಿರ್ಣಯಗಳು ಜಾರಿಗೆ ಬರುತ್ತವೆ. ಇಲ್ಲವೆಂದರೆ ಅವುಗಳನ್ನು ಮುಂದೂಡುವ ಸಂಭವ ಅತಿಹೆಚ್ಚಾಗಿರುತ್ತದೆ. ಹೀಗಾಗಿ ಪುರುಷ ರಾಜಕಾರಣಿಗಳ ಅಂತಿಮ ನಿರ್ಣಯಗಳನ್ನು ಕುಂಟಿತಗೊಳಿಸಲು ಮಹಿಳೆಯರು ೩೩ ಸ್ಥಾನಗಳನ್ನು ಪಡೆದುಕೊಳ್ಳಲು ಮುಂದಾಗುತ್ತಿದ್ದರೆ. ಲೋಕಸಭೆಯಲ್ಲಾಗಲಿ, ವಿಧಾನಸಭೆಯಲ್ಲಾಗಲಿ ಯಾವುದೇ ಕಾಯ್ದೆಯನ್ನು ಜಾರಿಗೊಳಿಸುವಲ್ಲಿ, ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಮತ್ತು ಯೋಜನೆಗಳನ್ನು ಕಾರ್ಯರೂಪಕ್ಕೆ ತರಬೇಕಾದರೂ ಸಹ ಮೀಸಲಿರಿಸಿರುವ ಸ್ಥಾನಗಳ ಬೆಂಬಲ ಬೇಕೆಬೇಕಾಗುತ್ತದೆ. ಆದ್ದುದರಿಂದ ಮಹಿಳೆಯರು ರಾಜಕೀಯದಲ್ಲಿ ಪಾದಾರ್ಪಣೆ ಮಾಡುವತನಕ ಶೇಕಡ ೩೩ರಷ್ಟಾದರೂ ಮೊದಲು

ದೊರೆಯಲಿ ನಂತರ ಪುರುಷರ ಸರಿಸಮಾನವಾಗಿ ಸ್ಥಾನಗಳನ್ನು ದಕ್ಕಿಸಿಕೊಳ್ಳಬಹುದು ಎಂದು ಮಹಿಳಾ ಸಂಘಟನೆಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುತ್ತವೆ.

ಲೋಕಸಭೆಯಲ್ಲಿ, ವಿಧಾನಸಭೆಯಲ್ಲಿ ಹಾಗೂ ಗ್ರಾಮಸಭೆಯಲ್ಲಿಯೂ ಸಹ ಯಾವುದೇ ಮಸೂದೆ ಮಂಡನೆಯಾಗಬೇಕಾದರೆ ೧/೩ರಷ್ಟು ಬೆಂಬಲ ತೋರಬೇಕಾಗುತ್ತದೆ. ಆದರೆ ಅದು ಕೂಡ ಲೋಕಸಭೆ ಮತ್ತು ರಾಜ್ಯಸಭೆಗಳಲ್ಲಿ ಮಹಿಳಾ ಸದಸ್ಯರ ಸಂಖ್ಯೆ ಬಹುಕಡಿಮೆ ಇರುವುದರಿಂದ ಅವರ ಪ್ರತಿಭಟನೆಯ ಧ್ವನಿ ಪುರುಷರಾಜಕಾರಣಿಗಳಿಗೆ ತಟ್ಟುತ್ತಿಲ್ಲ. ಈ ಕ್ಷೇತ್ರದ ಪುರುಷ ರಾಜಕಾರಣಿಗಳ ಬಣ್ಣದ ಮಾತಿಗೆ ಮರುಳಾದ ಮಹಿಳಾ ಸದಸ್ಯರು ಕೂಡ ಮಹಿಳೆಯರ ಸಮಸ್ಯೆಗಳ ಪರವಾಗಿ ಧ್ವನಿ ಎತ್ತದೇ ಇರುವುದು ಕಾಣಬಹುದಾಗಿದೆ. ಇಂತಹ ಪರಿಸ್ಥಿತಿಯಲ್ಲಿ ಮೀಸಲಾತಿಯಂತಹ ಮಸೂದೆಯು ಮಂಡನೆಯಾಗುವುದು ಅಥವಾ ಕಾಯ್ದೆ ಜಾರಿಗೊಳ್ಳುವುದು ಕಷ್ಟಕರವಾಗುತ್ತದೆ.

ಅಡಿಟಿಪ್ಪಣಿಗಳು

೧. ಮಹಿಳಾ ಅಧ್ಯಯನ, ಉತ್ತಾರಾಯಣ ಸಂಚಿಕೆ, ಜನವರಿ ೧೯೯೯, ಪು.೯೩

೨. ಹೇಮಲತಾ ಮಹಿಷಿ, ಇಪ್ಪತ್ತೊಂದನೇಯ ಶತಮಾನದತ್ತ ಮಹಿಳೆ, ಪು.೩೫

೩. ವಸಂತ ಪಾಟೀಲ, ಪಂಚಾಯತ ಆಡಳಿತ : ಸಾಧಕ ಬಾಧಕಗಳು, ಪು.೩೫

೪. ಮಹಿಳಾ ಅಧ್ಯಯನ, ಉತ್ತರಾಯಣ ಸಂಚಿಕೆ, ಜನವರಿ ೧೯೯೯, ಪು.೮೪

೫. ವಸಂತ ಪಾಟೀಲ, ಪೂರ್ವೋಕ್ತ ಪು.೨೫

೬. ಮಾನಸ, ಮಾಸಪತ್ರಿಕೆ, ೧೯೯೭ ಪೆಬ್ರುವರಿ/ಮಾರ್ಚ್, ಪು.೨೫

೭. ಅದೇ, ಪು.೩-೪

೮. ಆರ್.ಪೂರ್ಣಿಮಾ, ರಾಜಕೀಯದಲ್ಲಿ ಮಹಿಳೆ: ಮೀಸಲಾತಿಯ ಅಗತ್ಯ, ಪು.೧೬

೯. ಮೂಲ : ಜೆರಾಲ್ಡಿನ್ ಫೋರ್ಬ್ಸ್, ಡಾ.ಎಚ್.ಎಸ್.ಶ್ರೀಮತಿ(ಅನು), ಆಧುನಿಕ ಭಾರತದಲ್ಲಿ ಮಹಿಳೆ, ಪು.೩೪೭

೧೦. ಮಹಿಳಾ ಅಧ್ಯಯನ ವಿಶೇಷ ಸಂಚಿಕೆ, ಪು.೮೪

ಉಪಸಂಹಾರ

ಸ್ವಾತಂತ್ರ್ಯದ ನಂತರ ಮಹಿಳೆಯರ ಆರ್ಥಿಕ ಅಭಿವೃದ್ಧಿಗಾಗಿ ಮತ್ತು ಮಹಿಳೆ ಸಬಲೀಕರಣಕೊಳ್ಳುವುದಕ್ಕೆ ಪಂಚವಾರ್ಷಿಕ ಯೋಜನೆಗಳಲ್ಲಿ ಹಲವಾರು ಯೋಜನೆಗಳನ್ನು ಹಮ್ಮಿಕೊಂಡಿರುವುದನ್ನು ಕಾಣಬಹುದಾಗಿದೆ. ಮೊದಲನೆಯ ಪಂಚವಾರ್ಷಿಕ ಯೋಜನೆಯಲ್ಲಿ ತಾಯಿ ಮಕ್ಕಳ ಆರೋಗ್ಯದ ಕಡೆ ಅತಿಹೆಚ್ಚಿನ ಗಮನವಹಿಸಿರುವುದು ಗಮನಾರ್ಹವಾಗಿದೆ. ಆದರೆ ಇದರಿಂದ ಎಲ್ಲಾ ಗ್ರಾಮದ ಮಹಿಳೆಯರು ಪ್ರಯೋಜನ ಪಡೆದುಕೊಡಿದ್ದಾರೆ ಎಂದು ಹೇಳಲು ಸ್ವಲ್ಪ ಹಿಂಜರಿಯಬೇಕಾಗುತ್ತದೆ. ಏಕೆಂದರೆ ಇಂದೂ ಕೂಡ ಹಲವಾರು ಗ್ರಾಮಗಳಲ್ಲಿ ಆರೋಗ್ಯ ಕೇಂದ್ರಗಳು ಅಸ್ಥವಸ್ಥವಾಗಿರುವುದು ದಿನನಿತ್ಯದ ಪತ್ರಿಕೆಗಳ ವರದಿಯಲ್ಲಿ ಕಾಣಬಹುದಾಗಿದೆ. ಆದರೂ ಸಹ ಇಂತಹ ಯೋಜನೆಯಿಂದ ಉಪಯುಕ್ತವಾಗಿಲ್ಲ ಎಂದು ಹೇಳುವುದು ಅಸಮಂಜಸವಾಗುತ್ತದೆ. ಈ ಯೋಜನೆಗಳಿಂದ ಕೆಲವಾರು ಮಹಿಳೆಯರಾದರೂ ಪ್ರಯೋಜನೆ ಪಡೆದಿದ್ದಾರೆ. ಹಾಗೆಯೇ ಎರಡು ಮತ್ತು ಮೂರನೆಯ ಪಂಚಾವಾರ್ಷಿಕ ಯೋಜನೆಗಳಲ್ಲಿ ಬಾಲಕೀಯರ ಶಿಕ್ಷಣ ಮತ್ತು ವಯಸ್ಕ ಹೆಣ್ಣು ಮಕ್ಕಳಿಗೆ ಶಿಕ್ಷಣ ಕೊಡುವುದರ ಜೊತೆಗೆ, ಅನಾಥ ಹೆಂಗಸರನ್ನು ನೋಡಿಕೊಳ್ಳುವುದಕ್ಕಾಗಿ ಹಾಗೂ ಅವರಿಗೆ ಪುನರ್‌ವಸತಿ ನಿರ್ಮಿಸಿ ಕೊಡುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿತ್ತು. ಇಂತಹ ಯೋಜನೆಗಳಿಂದ ದಿಕ್ಕಿಲ್ಲದ ಮತ್ತು ಪೂರ್ತಿ ಹಸಿವಿನಿಂದ ನರಳುವಂತಹ ಕುಟುಂಬಗಳಿಗೆ ಹಸಿವು ನೀಗಿಸಿಕೊಳ್ಳುವುದಕ್ಕಾಗಿ ಮತ್ತು ಅವರು ಜೀವಿಸಲು, ವಾಸಮಾಡಲು ಅಲ್ಪಪ್ರಮಾಣದ ಗೃಹಗಳನ್ನು ನಿರ್ಮಿಸಿ ಕೊಡುವುದರಿಂದ ಅವರೇನು ಅವರೇನು ಅಧಿಕಾರದ ಗದ್ದುಗೆ ಹೇರಲು ಆಗಲಿಲ್ಲ. ಮತ್ತು ಯಾವುದೇ ನಿರ್ಣಯ ತೆಗೆದುಕೊಳ್ಳುವಂತಹ ಸ್ಥಳಗಳಿಗೆ ಪ್ರವೇಶಿಸಲು ಅನುಮೋದನೆ ನೀಡಲಿಲ್ಲ. ಕೇವಲ ಔದಾರ್ಯದ ರೀತಿಯಲ್ಲಿ ಕಣ್ಣೀರು ಸುರಿಸಿದರೇ ಹೊರೆತು, ಹೃದಯ ಪೂರ್ವಕವಾಗಿ ಬಡತನದ ಬಲಿಯಿಂದ ಮೇಲೆತ್ತಲು ಶ್ರಮಿಸುತ್ತಿಲ್ಲ.

ಐದನೆಯ ಪಂಚವಾರ್ಷಿಕ ಯೋಜನೆಯಲ್ಲಿ ಮಹಿಳೆಯರಿಗಾಗಿ ಬೃಹತ್ ಪ್ರಮಾಣದಲ್ಲಿ ತರಬೇತಿ ಕೇಂದ್ರಗಳನ್ನು ಶುರುಮಾಡಿದರು. ಆದರೆ ಇವು ಪುರುಷ ಸೃಷ್ಟಿಯ ತರಬೇತಿ ಕಾರ್ಯಕ್ರಮಗಳಾಗಿರುವುದರಿಂದ ಪುರುಷರಿಗೆ ಉಪಯುಕ್ತವಾಗುವಂತಹ ಮತ್ತು ಪುರುಷ ಪ್ರಧಾನ ಕುಟುಂಬಗಳ ಕಲ್ಯಾಣವನ್ನು ಕಾಯ್ದು ಕೊಂಡು ಬರುವಂತಹ ತರಬೇತಿಗಳಾದ ಗೃಹವಾರ್ತೆ, ಶಿಶುಪಾಲನೆ, ಪೌಷ್ಠಿಕ ಆಹಾರದ ತಯಾರಿಕೆ, ಆರೋಗ್ಯದ ನಿರ್ವಹಣೆ ಮನೆಯ ಖರ್ಚುವೆಚ್ಚಗಳ ನಿರ್ವಹಣೆಯಂತಹ ಹಲವಾರು ರೀತಿಯ ತರಬೇತಿಗಳನ್ನು ಮಹಿಳೆಯರಿಗೆ ನೀಡುತ್ತಿದ್ದವು. ಇಂತವುಗಳಿಂದ ಮಹಿಳೆ ಆರ್ಥಿಕವಾಗಿ ಸಬಲಳಾಗಲು, ಉನ್ನತ ಹುದ್ದೆ ಪಡೆಯಲು ಅಥವಾ ಯಾವುದೇ ತರಬೇತಿ ಕೇಂದ್ರಗಳನ್ನು ಪ್ರಾರಂಭಿಸಿಕೊಳ್ಳಲು ಉಪಯುಕ್ತವಾಗಲಾರ ದಂತವುಗಳಾಗಿವೆ.

ಹೀಗಾಗಿ ಮುಂದಿನ ಪಂಚವಾರ್ಷಿಕ ಯೋಜನೆಯ ಆರಂಭಗೊಳ್ಳುವ ಸಮಯಕ್ಕಾಗಲೇ ಮಹಿಳಾ ಚಳುವಳಿಗಳು ಅತ್ಯಂತ ಕ್ರಿಯಾಶೀಲವಾಗಿದ್ದವು. ಹೀಗಾಗಿ ಮಹಿಳೆಯರು ಆರ್ಥಿಕವಾಗಿ ಹಾಗೂ ಅಧಿಕಾರದ ಸ್ಥಾನಗಳನ್ನು ಪಡೆದುಕೊಳ್ಳುವುದಕ್ಕಾಗಿ ಶ್ರಮಿಸುತ್ತಿದ್ದರು. ಜೊತೆಗೆ ಪಂಚವಾರ್ಷಿಕ ಯೋಜನೆಗಳಿಂದ ಮಹಿಳೆಯರು ಸಬಲರಾಗುವುದಕ್ಕೆ ಹಾಗೂ ಆರ್ಥಿಕ ಅಭಿವೃದ್ಧಿ ಸಾಧಿಸುವುದಕ್ಕಾಗಿ IRDP, DWCRA, TRYSEM ಇನ್ನು ಮುಂತಾದವುಗಳು ಗ್ರಾಮೀಣ ಮಹಿಳೆಯರ ಆರ್ಥಿಕ ಅಭಿವೃದ್ಧಿ ಸಾಧಿಸುವುದಕ್ಕಾಗಿ ಸಣ್ಣಪುಟ್ಟ ಉದ್ದಿಮೆಗಳನ್ನು ಪ್ರಾರಂಭಿಸಿಕೊಳ್ಳಲು ತರಬೇತಿಗಳನ್ನು ನೀಡಿದವು. ತರಬೇತಿ ಪಡೆದ ನಂತರ ಸಣ್ಣಪುಟ್ಟ ಉದ್ದಿಮೆಗಳನ್ನು ಶುರುಮಾಡಿಕೊಳ್ಳುವುದಕ್ಕಾಗಿ NREP, RLEGP, ಜವಾಹರ್ ರೋಜ್‌ಗಾರ್ ಯೋಜನೆ, ಶ್ರಮಶಕ್ತಿ ಉದ್ಯೋಗ ಭರವಸೆ ಯೋಜನೆ, ಸ್ತ್ರೀಶಕ್ತಿ ಯೋಜನೆ, ಮನೆಬೆಳಕು, ಉದ್ಯೋಗಿನಿ, ಸಂಯುಕ್ತಸಾಲ ಯೋಜನೆ ಇನ್ನು ಮುಂತಾದ ಆರ್ಥಿಕ ಅಭಿವೃದ್ಧಿ ಯೋಜನೆಗಳು ಉಪುಯಕ್ತವಾಗಿಲ್ಲ ಅನ್ನುವುದಕ್ಕಿಂತ ಬದಲಾಗಿ ಸ್ವಲ್ಪಮಟ್ಟಿಗಾದರೂ ಉಪಯುಕ್ತವಾಗುತ್ತಿವೆ. ಏಕೆಂದರೆ ದಿನನಿತ್ಯದ ಆಹಾರಕ್ಕೆ ಪರದಾಡುತ್ತಿರುವ ಮಹಿಳೆಯರು ಇಂತಹ ಯೋಜನೆಗಳ ಉಪಯುಕ್ತ ಪಡೆದುಕೊಂಡು ಅವರು ದಿನನಿತ್ಯದ ಆಹಾರವನ್ನಾದರೂ ಪಡೆದುಕೊಂಡು ತಮ್ಮ ಹಸಿದ ಹೊಟ್ಟೆಯನ್ನಾದರೂ ತುಂಬಿಸಿಕೊಳ್ಳಲು ಉಪಯುಕ್ತವಾಗುತ್ತಿವೆ. ಇವು ಹಸಿದ ಹೊಟ್ಟೆಯನ್ನು ತುಂಬಿಸುವಂತಹ ಯೋಜನೆಗಳಾಗಿರುವುದರಿಂದ ಆರ್ಥಿಕವಾಗಿ ಸಬಲಗೊಳ್ಳಲು ಮತ್ತು ತಮ್ಮ ಆತ್ಮಪ್ರಜ್ಞೆಯನ್ನು ಜಾಗೃತಗೊಳಿಸುವಲ್ಲಿ ಕುಂಟಿತರಾಗುತ್ತಾರೆ.

ಯಾವುದೇ ಅಭಿವೃದ್ಧಿ ಕಾರ್ಯಕ್ರಮವು ಸಬಲೀಕರಣ ಕಾರ್ಯಕ್ರಮವೆನಿಸಿಕೊಳ್ಳಬೇಕಾದರೆ ಅಲ್ಲಿ ಆತ್ಮಪ್ರಜ್ಞೆಯನ್ನು ಜಾಗೃತಗೊಳಿಸುವ ಸಂಗತಿ ಇರಬೇಕು. ಸರಕಾರಕ್ಕೆ ಪ್ರತಿಯಾಗಿ ಘರ್ಷಣೆಯ ನೆಲೆಯನ್ನು ಗುರುತಿಸುವ ಕೆಲಸ ಇರಬೇಕು. ದಮನಕ್ಕೆ ಒಳಗಾದವರಿಗೂ ಹಿತಾಸಕ್ತಿಗಳಿಸುತ್ತವೆ ಎಂಬ ನಂಬುಗೆ ಒಡಮೂಡಬೇಕು. ಈ ಮೂರು ಸಂಗತಿಗಳು ಸರಕಾರಿ ಯೋಜನೆಗಳಲ್ಲಿ ಇದ್ದಾಗ ಮಾತ್ರ ಮಹಿಳೆ ಖಂಡಿತವಾಗಿಯೂ ಸಬಲೀಕರಣಗೊಳ್ಳುತ್ತಾಳೆ. ಆದರೆ ಇಂತಹ ಸಂಗತಿಗಳನ್ನು ಕಣ್ಮರೆಯಾಗಿಸಿ ಕೇವಲ ದಾನದ ರೂಪದಲ್ಲಿ ಅಷ್ಟು ಇಷ್ಟು ಸಹಾಯ ಧನವನ್ನು ನೀಡಿದರೆ ಮಹಿಳೆ ಸಬಲಳಾಗಲು ಅಸಾಧ್ಯದ ಮಾತಾಗುತ್ತದೆ. ಈ ಯೋಜನೆಗಳಿಂದ ಮಹಿಳೆಯರು ಆರ್ಥಿಕವಾಗಿ ಸಬಲಳಾಗಿದ್ದಾರೆ ಎಂದಾಕ್ಷಣ ಆಕೆಯು ನಿರ್ಣಾಯಕ ಸ್ಥಾನಗಳಲ್ಲಿ ನಿಂತು ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ ಅವಳಿಗೆ ದೊರೆತಿದೆ ಎಂದು ಹೇಳಲು ಆಗದು. ಏಕೆಂದರೆ ಇಂದು ಎಷ್ಟೋ ಆಗರ್ಭಶ್ರೀಮಂತಿಕೆಯಿಂದ ಕೂಡಿದ ಕುಟುಂಬಗಳಲ್ಲಿ ಎಲ್ಲಾ ಸಂಪತ್ತು ಮಹಿಳೆಯ ಸುತ್ತಮುತ್ತ ಆವರಿಸಿಕೊಂಡಿರುತ್ತದೆ. ಆದರೆ ಆಕೆಗೆ ಯಾವುದೇ ನಿರ್ಣಯ ತೆಗೆದುಕೊಳ್ಳುವ ಸಾಮರ್ಥ್ಯ ಇರದ ಹಾಗೆ ಪುರುಷ ಪ್ರಧಾನ ವ್ಯವಸ್ಥೆ ಕಾಯ್ದುಕೊಂಡು ಬರುತ್ತಿದೆ. ಅಂದಾಗ ನಿರ್ಣಯ ತೆಗೆದುಕೊಳ್ಳುವುದು ದೂರದ ಮಾತಾಗುತ್ತದೆ.

ಸರ್ಕಾರಿ ಯೋಜನೆಗಳ ಮೂಲಕ ಮಹಿಳೆಯರು ಶಿಕ್ಷಣ ಪಡೆದು ಬುದ್ಧಿವಂತರಾಗುತ್ತಾರೆ. ಹಾಗೆ ಸಾರ್ವಜನಿಕ ಕ್ಷೇತ್ರದಲ್ಲಿ ಉದ್ಯೋಗವನ್ನು ಪಡೆದು ಹಣಗಳಿಸುವ ಸಾಮರ್ಥ್ಯ ಅವಳಲ್ಲಿ ಬೆಳೆಯುತ್ತದೆ. ಆದರೆ ಅವಳು ಯಾವುದೇ ಕ್ಷೇತ್ರದಲ್ಲಿ ಅಧಿಕಾರ ಚಲಾಯಿಸುವಂತಹ, ನಿರ್ಣಯಗಳನ್ನು ತೆಗೆದುಕೊಳ್ಳು ವಂತಹ ಹಾಗೂ ಯೋಜನೆಗಳನ್ನು ಜಾರಿಗೊಳಿಸುವಂತಹ ಅಧಿಕಾರಗಳನ್ನು ಹೆಂಗಸರಿಗೆ ದೊರೆಯದ ಹಾಗೆ ಪುರುಷ ರಾಜಕಾರಣಿಗಳು ಕಾಯ್ದುಕೊಂಡು ಬರುತ್ತಾರೆ. ಮಹಿಳೆ ಕೇವಲ ಆರ್ಥಿಕವಾಗಿ ಸಬಲ ಗೊಂಡರೆ ತನ್ನ ಎಲ್ಲ ಸಮಸ್ಯೆಗಳು ಪರಿಹಾರಗೊಳ್ಳುವುದಿಲ್ಲ. ಏಕೆಂದರೆ ಸಮಾಜದಲ್ಲಿ ತನ್ನ ಸುತ್ತಲಿರುವ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬೇಕಾದರೆ ಅಧಿಕಾರದ ಗದ್ದುಗೆಯನ್ನು ಏರುವುದು ಅತಿಮುಖ್ಯ ವಾಗುತ್ತದೆ. ಎಲ್ಲಾ ಕ್ಷೇತ್ರಗಳಲ್ಲಿ ಅಧಿಕಾರ ಚಲಾಯಿಸುವಂತಹ ಸ್ಥಾನಗಳಲ್ಲಿ ಮಹಿಳೆಯರು ಕಾಣಿಸಿಕೊಳ್ಳ ಬೇಕಾದರೆ ಅಥವಾ ತಮಗೆ ದೊರೆಯಬೇಕಾದ ಸ್ಥಾನಗಳನ್ನು ಪಡೆದುಕೊಳ್ಳುವುದಕ್ಕಾಗಿ ಮೀಸಲಾತಿಯು ಉಪಯುಕ್ತವಾಗುತ್ತದೆ.

ಪುರುಷ ಪ್ರಧಾನ ವ್ಯವಸ್ಥೆಯಲ್ಲಿ ಅಳವಡಿಸಿಕೊಂಡ, ರೂಢಿ ಸಂಪ್ರದಾಯವಾಗಿ ಬೆಳೆದುಕೊಂಡು ಬಂದಂತಹ ಎಲ್ಲಾ ಪುರುಷ ಕುತಂತ್ರಗಳನ್ನು ಮಹಿಳಾ ಸಂಘಟಕರು ಅರಿತುಕೊಂಡು ಅಧಿಕಾರ ಚಲಾಯಿಸುವ ಮತ್ತು ನಿರ್ಣಾಯಕ ಹಂತಗಳನ್ನು ತಲುಪುವ ಅಥವಾ ಯೋಜನೆಗಳನ್ನು ಜಾರಿಗೊಳಿಸುವಂತ, ಹಕ್ಕು ಚಲಾಯಿಸುವಂತಹ ಸ್ಥಾನಗಳಲ್ಲಿ ಮಹಿಳೆಯರು ಕಾಣಿಸಿಕೊಳ್ಳಬೇಕಾದರೆ ಮಹಿಳಾ ಸಂಘಟನಾಕಾರರು, ಮಹಿಳಾ ಚಳುವಳಿಕಾರರು ಮತ್ತು ಮಹಿಳಾ ಅಭಿವೃದ್ಧಿ ಸಂಘ ಸಂಸ್ಥೆಗಳು ಪುರುಷ ರಾಜಕಾರಣಿಗಳ ವಿರುದ್ಧ ಪ್ರತಿಭಟಿಸಿ ಹಕ್ಕು ಒತ್ತಾಯಕ್ಕಾಗಿ ಮುಷ್ಕರಗಳನ್ನು ಹೂಡುವುದು ಅನಿವಾರ್ಯದ ಸಂಗತಿಯಾಗುತ್ತದೆ. ಹಕ್ಕು ಒತ್ತಾಯದ ಒತ್ತಡಗಳಿಂದ ಮೀಸಲಾತಿಯ ಮಂಡನೆಯು ಅಧಿವೇಶನದಲ್ಲಿ ಅನುಮೋದನೆ ಪಡೆದರೆ ಸಂಪೂರ್ಣವಾಗಿ ಅಧಿಕಾರ ದೊರೆಯುತ್ತದೆ ಎನ್ನುವುದು ಕನಸಿನ ಮಾತಾಗುತ್ತದೆ. ಒಂದು ವೇಳೆ ಕನಸು ನನಸಾದರೂ ಸಹ ಪಿತೃಪ್ರಧಾನ ಕುಟುಂಬಗಳಲ್ಲಿ ಮಹಿಳೆಯರು ಹಲವಾರು ಸಮಸ್ಯೆಗಳನ್ನು ಎದುರಿಸಬೇಕಾಗುತ್ತದೆ. ಮೀಸಲಾತಿಯಿಂದ ಕೌಟುಂಬಿಕ, ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವಲಯಗಳಲ್ಲಿ ಸ್ಥಾನಗಳನ್ನು ಗಿಟ್ಟಿಸಿಕೊಳ್ಳಬಹುದು. ಆದರೆ ಪ್ರತಿಯೊಬ್ಬ ಹೆಂಗಸು ಈ ಸಮಾನತೆಯ ಹಕ್ಕುಗಳನ್ನು ಪಡೆಯುವಲ್ಲಿ ವಿಫಲಗೊಳ್ಳುತ್ತಾಳೆ. ಆದರೂ ಕೂಡ ಮಹಿಳೆ ಅಧಿಕಾರದ ಸ್ಥಾನಗಳಲ್ಲಿ ಬೆರಳೆಣಿಕೆಯಷ್ಟು ಆದರೂ ಕಂಡುಬರಬೇಕಾದರೆ ಮೀಸಲಾತಿ ಅತ್ಯವಶ್ಯಕವಾಗಿದೆ. ಆದರೆ ಎಲ್ಲ ರಂಗದಲ್ಲಿ ಮೀಸಲಾತಿಯೇ ಅವಶ್ಯಕವಲ್ಲ. ಆಯಾವಲಯಕ್ಕೆ ಪ್ರವೇಶ ಪಡೆಯಲು ಅಥವಾ ಪಾದಾರ್ಪಣೆ ಮಾಡಲು ಒಂದು ಹೆಜ್ಜೆ ಮಾತ್ರ.

ಕುಟುಂಬದ ಸಮಸ್ಯೆಗಳನ್ನು ಆ ಕುಟುಂಬದ ಸದಸ್ಯರಾದ ಗಂಡ ಹಂಡತಿ ಕೂಡಿ ಸಮಸ್ಯೆಗಳ ಪರಿಹಾರಕ್ಕೆ ಪರಸ್ಪರ ಆಲೋಚಿಸಿ, ಮುಖಾಮುಖಿಯಾಗಿ ಅವಲೋಕಿಸಿ ಅವುಗಳ ಪರಿಹಾರಕ್ಕೆ ಒಮ್ಮತವಾಗಿ ನಿರ್ಣಯಗಳನ್ನು ತೆಗೆದುಕೊಂಡಾಗ ಮಾತ್ರ ಸಬಲಳೆನಿಸಿಕೊಳ್ಳುತ್ತಾಳೆ. ಉದಾ. ಒಪ್ಪತ್ತಿನ ಊಟಕ್ಕೆ ಇಲ್ಲದ ಸಮಯದಲ್ಲಿ ಹೇಗೆ ಮಾಡಬೇಕು ಎನ್ನುವ ನಿರ್ಣಯ ತೆಗೆದುಕೊಳ್ಳುವ ಹಕ್ಕು ಅವಳಲ್ಲಿ ಇರಬೇಕು. ಜೀವನದ ಕಷ್ಟ ಸುಖಗಳನ್ನು ಹಂಚಿಕೊಳ್ಳುವಲ್ಲಿ ತಮಗೆ ಎದುರಾದ ಕಷ್ಟಗಳನ್ನು ಎದುರಿಸುವಲ್ಲಿ ಗಂಡಸು, ಹೆಂಗಸು ಎನ್ನುವ ಲಿಂಗ ತಾರತಮ್ಯವನ್ನು ಎತ್ತಿ ತೋರದೆ ಆ ಸಮಸ್ಯೆಯನ್ನು ಸಮಪಾಲಾಗಿ ಹಂಚಿಕೊಂಡು ಎದುರಿಸಿದಾಗ ಮಾತ್ರ ಸಬಲೀಕರಣಗೊಂಡಂತೆ.

ಮಹಿಳೆ ಸಬಲೀಕರಣಗೊಂಡಾಗ ಅವಳ ಸುತ್ತ ಆವರಿಸಿಕೊಂಡ ಅಧಿಕಾರದ ನಿರ್ಬಂಧನೆಗಳನ್ನು ಕಿತ್ತೊಗೆದು ಅವಳಿಗೆ ದಕ್ಕಬೇಕಾದ ಸ್ಥಾನಗಳನ್ನು, ಹಕ್ಕುಗಳನ್ನು ದಕ್ಕಿಸಿಕೊಂಡಾಗ, ತನ್ನಷ್ಟಕ್ಕೆ ತಾನೆ ಆ ಸ್ಥಾನಗಳನ್ನು ಪಡೆದುಕೊಳ್ಳುವಲ್ಲಿ ಸಮರ್ಥಳಾಗುತ್ತಾಳೆ. ಮಹಿಳೆಯರಿಗೆ ಎಲ್ಲಿಯವರಿಗೆ ಅಧಿಕಾರ ಸಂರಚನೆಯಲ್ಲಿ ಪ್ರವೇಶ ಮತ್ತು ನೆಲೆ ದೊರೆಯುವುದಿಲ್ಲವೋ ಅಲ್ಲಿಯವರಿಗೆ ಕಾನೂನಿನ ಮೂಲಕ ದೊರೆತ ಇತರ ಮೂಲಭೂತ ಹಕ್ಕುಗಳು ಇದ್ದರೂ ಸಹ ಅವರ ಸ್ಥಾನಗಳು ಕೆಳಸ್ಥರದಲ್ಲಿರುತ್ತವೆ. ಮಹಿಳೆ ಸಬಲೀಕರಣಗೊಂಡಾಗ ಸಮಾಜದ ಅಸಮತೋಲನಗಳು ನೆಲಸಮಗೊಂಡು ಸಮಾನ ನೆಲೆಗಳು ತನ್ನಷ್ಟಕ್ಕೆ ತಾನೆ ದೊರೆಯುತ್ತವೆ. ಸಬಲೀಕರಣ ಎನ್ನುವುದು ಕೇವಲ ಯೋಜನೆಗಳ ಮೂಲಕ ಜಾರಿಗೊಳಿಸಿ, ದಿನನಿತ್ಯದ ಪತ್ರಿಕೆಗಳಲ್ಲಿ ಮತ್ತು ಕಪ್ಪು ಹಲಗೆಯ ಮೇಲೆ ಬರೆಯಿಸುವುದಲ್ಲ. ಅದನ್ನು ವಾಸ್ತವ ರೂಪಕ್ಕೆ ತರುವುದು ಅತಿಮುಖ್ಯವಾಗಿದೆ.

ಸಾಮಾಜಿಕ ಸಂಬಂಧಗಳಲ್ಲಿ ಮಹಿಳೆಯರು ಸ್ವಯಂ ನಿರ್ಣಯ ತೆಗೆದುಕೊಳ್ಳುವಂತಾಗಬೇಕು. ಅಂದರೆ ಮಹಿಳೆಯರಿಗೆ ಅಧಿಕಾರದ ಸ್ಥಾನಗಳು ಬೇಕು. ಉತ್ತಮ ಶಿಕ್ಷಣ ದೊರೆಯಬೇಕು. ಉದ್ಯೋಗದ ಅವಕಾಶಗಳು ಪುರುಷ ಸರಿಸಮಾನವಾಗಿ ಪಡೆದುಕೊಳ್ಳಬೇಕು. ಇವುಗಳನ್ನು ಮಹಿಳೆಯರು ಸಂಪೂರ್ಣವಾಗಿ ಪಡೆದುಕೊಂಡಾಗ ಮಹಿಳೆಯರು ತಮ್ಮದೇ ಅಧಿಕಾರವನ್ನು ಚಲಾಯಿಸಲು ಮತ್ತು ಕುಟುಂಬದಲ್ಲಿ ಯಾವುದೇ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿಯೂ ಯಶಸ್ವಿಯಾಗುತ್ತಾರೆ. ಕುಟುಂಬದ ಎಲ್ಲ ಸುಖ ದುಃಖಗಳನ್ನು ಹಂಚಿಕೊಳ್ಳುವಲ್ಲಿ ಪರಿಹರಾಗಳನ್ನು ಕಂಡುಕೊಳ್ಳುವಲ್ಲಿ, ನಿರ್ಣಯಗಳನ್ನು ತೆಗೆದುಕೊಳ್ಳಲು ಸಮರ್ಥಳಾದಾಗ ಮಾತ್ರ ಮಹಿಳೆ ಸಬಲಳೆನಿಸಿಕೊಳ್ಳುತ್ತಾಳೆ.

ಮಹಿಳೆಯರು ಸಾಮಾಜಿಕ, ಆರ್ಥಿಕ ಹಾಗೂ ರಾಜಕೀಯ ವಲಯಗಳಲ್ಲಿ ಸಕ್ರಿಯವಾಗಿ ಭಾಗವಹಿಸಬೇಕಾದರೆ ಅಥವಾ ಅಧಿಕಾರದ ಸ್ಥಾನಗಳನ್ನು ಪಡೆದುಕೊಳ್ಳಬೇಕಾಗದರೆ ಮೀಸಲಾತಿಯ ಅನಿವಾರ್ಯವಾಗುತ್ತದೆ. ಇದುವರೆಗೆ ಕೇವಲ ಪುರುಷನಿಗೆ ಮಾತ್ರ ಸೀಮಿತವಾಗಿರುವ ರಾಜಕೀಯ

ಕ್ಷೇತ್ರದಲ್ಲಿ ಮಹಿಳೆ ಸಮಾನಪಾಲು ಪಡೆಯಬೇಕಾಗುತ್ತದೆ. ಅಂದಾಗ ಮಾತ್ರ ಈ ಪುರುಷ ರಾಜಕಾರಣಿಗಳ ಕುತಂತ್ರಗಳ ಹುಟ್ಟು ಅಡಗಿಸಲು ಅನುವಾಗುತ್ತದೆ. ಮಹಿಳೆ ಕೇವಲ ಕೌಟುಂಬಿಕ ವಲಯದಲ್ಲಿ ಮಾತ್ರ ನಿರ್ಣಾಯಕ ಸ್ಥಾನಗಳನ್ನು ದಕ್ಕಿಸಿಕೊಂಡರೆ ಅವಳು ಸಬಲಳೆನಿಸಿಕೊಳ್ಳುವುದಿಲ್ಲ. ಏಕೆಂದರೆ ಇದು ಕೇವಲ ಅಡಿಗೆ ಮನೆಗೆ ಮಾತ್ರ ಸೀಮಿತವಾಗುತ್ತದೆಯೇ ಹೊರತು ಸಾರ್ವಜನಿಕ ಕ್ಷೇತ್ರಕ್ಕೆ ಅನ್ವಯಿಸುವುದಿಲ್ಲ. ಆದುದರಿಂದ ಮಹಿಳೆಯರು ಸಾರ್ವಜನಿಕ ಸ್ಥಳಗಳಲ್ಲಿ ಅಧಿಕಾರ ಚಲಾಯಿಸುವ, ಯೋಜನೆಗಳನ್ನು ರೂಪಿಸುವ, ನಿರ್ಣಯಗಳನ್ನು ತೆಗೆದುಕೊಳ್ಳುವ ಕಾಯ್ದೆಗಳನ್ನು ಪಾಸು ಮಾಡುವಲ್ಲಿ ಹಾಗೂ ದೇಶದಲ್ಲಿ ಆಗುವ ಅನಾಹುತಗಳಿಗೆ ಪರಿಹಾರ ಕಂಡುಕೊಳ್ಳುವಲ್ಲಿ ಮಹಿಳೆ ಪುರುಷರ ಸರಿಸಮಾನ ವಾಗಿ ಭಾಗವಹಿಸಿದಾಗ ಮಾತ್ರ ಸದ್ಯದಲ್ಲಿ ಜಾರಿಯಲ್ಲಿರುವ ದುಷ್ಟ ರಾಜಕಾರಣಿಗಳ ಸರಕಾರದ ದುರಾಡಳಿತದ ದುರ್ವ್ಯವಸ್ಥೆಯನ್ನು ಸಂಪೂರ್ಣವಾಗಿ ಕಿತ್ತೆಸೆದು ತಮ್ಮದೇ ಆದ ರೀತಿಯಲ್ಲಿ ಸಾರ್ವಜನಿಕರಿಗೆ ಅನೂಕೂಲವಾಗುವಂತಹ ಆಡಳಿತವನ್ನು ಸೃಷ್ಟಿಸುವಲ್ಲಿ ಯಶಸ್ವಿಯದಾಗ ಮಾತ್ರ ಮಹಿಳೆ ಸಂಪೂರ್ಣವಾಗಿ ಸಬಲಳೆನಿಸಿಕೊಳ್ಳುತ್ತಾಳೆ.

ಮಹಿಳೆ ಸಬಲಳೆನಿಸಿಕೊಳ್ಳಬೇಕಾದರೆ ಸಾರ್ವಜನಿಕ ಕ್ಷೇತ್ರಗಳಲ್ಲಿ ನಿರ್ಭಯವಾಗಿ ಭಾಗವಹಿಸಿ ತಮಗೆ ದಕ್ಕಬೇಕಾದ ಮೂಲಭೂತ ಹಕ್ಕುಗಳನ್ನು ಪಡೆದುಕೊಳ್ಳಲು ಮತ್ತು ಬೇಡಿಕೆಯ ಹಂತದಿಂದ ಮುಕ್ತಿ ಪಡೆಯಲು ಸಾರ್ವಜನಿಕ ಸಭೆಗಳಲ್ಲಿ ಪುರುಷರ ಸರಿಸಮಾನವಾಗಿ ಭಾಗವಹಿಸಲು ಹಾಗೂ ಮಹಿಳೆ ಸರ್ವಾಂಗಿಣ ಅಭಿವೃದ್ಧಿಗೊಳ್ಳಬೇಕಾಗಿದರೆ, ಸಬಲೀಕರಣಗೊಳ್ಳಬೇಕಾದರೆ, ಸಮಾನ ಹೆಜ್ಜೆಯನ್ನಿಡಬೇಕಾದರೆ ನಿರ್ಣಯಗಳನ್ನು ತೆಗೆದುಕೊಳ್ಳುವಲ್ಲಿ ಸರಿಸಮಾನ ಹಕ್ಕನ್ನು ಪಡೆಯಬೇಕಾದರೆ ಮಹಿಳಾ ಮೀಸಲಾತಿಯು ಅವಶ್ಯಕವಾಗಿದೆ. ಈ ಮೀಸಲಾತಿಯು ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಮಂಡನೆಯಾಗಬೇಕಾಗಿದೆ. ಈ ಮಹಿಳಾ ಮೀಸಲಾತಿಯು ಮಂಡನೆಯಾಗಬೇಕಾದರೆ ಇಂದೂ ಕೂಡ ಮಹಿಳಾ ಚಳುವಳಿಗಳು ಬೃಹತ್ ಪ್ರಮಾಣದಲ್ಲಿ ಹೋರಾಟಗಳನ್ನು ಮಾಡುವುದು ಅನಿವಾರ್ಯವಾಗಿದೆ.

ಆಧಾರ ಗ್ರಂಥಗಳು

೧. ಪ್ರೀತಿ ಶುಭಚಂದ್ರ, ಮಹಿಳಾ ಅಧ್ಯಯನದ ತಾತ್ವಿಕ ನೆಲೆಗಳು ಮತ್ತು ಮಹಿಳಾ ಚಳುವಳಿಗಳು, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೨. ಇಂದಿರಾ ಆರ್., ಮಹಿಳೆ ಸಮಾಜ ಮತ್ತು ಸಂಸ್ಕೃತಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೨

೩. ಶ್ರೀಮತಿ ಎಚ್.ಎಸ್. (ಅನು), ಆಧುನಿಕ ಭಾರತದಲ್ಲಿ ಮಹಿಳೆ, ಮೂಲ : ಜೆರಾಲ್ಡಿನ್ ಫೋರ್ಬ್ಸ್, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೪. ಚಂದ್ರಶೇಖರ ಟಿ.ಆರ್., ಮಹಿಳೆ : ಆರ್ಥಿಕತೆ ಮತ್ತು ಅಭಿವೃದ್ಧಿ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೫. ಗೀತಾ ಕೃಷ್ಣಮೂರ್ತಿ, ಮಹಿಳೆ, ಕಾನೂನು ಮತ್ತು ರಾಜಕಾರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೨೦೦೧

೬. ಶಂಕರ್ ರಾವ್ ಚ.ನ., ಭಾರತೀಯ ಸಮಾಜ, ಜೈ ಭಾರತ ಪ್ರಕಾಶನ, ಮಂಗಳೂರು, ೨೦೦೦

೭. ಶ್ರೀಮತಿ ಎಚ್.ಎಸ್.(ಸಂ), ಕನ್ನಡ ಮಹಿಳೆ ಮತ್ತು ಸ್ವಾತಂತ್ರ್ಯ ಹೋರಾಟ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೮. ಹೇಮಲತಾ ಮಹಿಷಿ, ಇಪ್ಪತ್ತೊಂದನೆಯ ಶತಮಾನದ ಮಹಿಳೆ, ಕಾನೂನು, ಸಮಾಜ ಮತ್ತು ಮಹಿಳೆ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೯

೯. ಮೊಗಳ್ಳಿ ಗಣೇಶ, ದಲಿತರು ಮತ್ತು ಜಾಗತೀಕರಣ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೧೦. ಶಕುಂತಲಾ ಸಿದ್ದರಾಮದುರಗಿ, ಆಧುನಿಕ ಕನ್ನಡದಲ್ಲಿ ಮಹಿಳಾ ಸಾಹಿತ್ಯ, ಉಜ್ವಲ ಪ್ರಕಾಶನ, ೧೯೯೯

೧೧. ನಾಗರಾಜ್ ಟಿ., ಸಾಮಾಜಿಕ ಚಳುವಳಿಗಳು, ಚೇತನ ಬುಕ್‌ಹೌಸ್, ಬೆಂಗಳೂರು, ೧೯೯೯

೧೨. ಗಾಯತ್ರಿ ಎನ್. ಮಹಿಳಾ ಚಳುವಳಿಯ ಮಜಲುಗಳು, ನವಕರ್ನಾಟಕ ಪ್ರಕಾಶನ, ಬೆಂಗಳೂರು, ೧೯೯೮

೧೩. ಪೂರ್ಣಿಮಾ ಆರ್., ರಾಜಕೀಯದಲ್ಲಿ ಮಹಿಳೇಮೀಸಲಾತಿ ಅಗತ್ಯ, ಜನವದಿ ಮಹಿಳಾ ಸಂಘಟನೆ, ವಿಕಾಸ ಹ್ಯಾಮಿಲಿಟನ್ ಕಟ್ಟಡ, ಮಂಗಳೂರು, ೧೯೯೭

೧೪. ವಿಜಯಾದಬ್ಬೆ, ನಾರಿ : ದಾರಿ-ದಿಗಂತ, ರಚನಾ ಪ್ರಕಾಶನ, ಮೈಸೂರು, ೧೯೯೭

೧೫. ಭೈರಪ್ಪ ಕೆ., ಭಾರತೀಯ ಸಮಾಜ, ಕೇಂಬ್ರಿಡ್ಜ್ ಪಬ್ಲಿಷಿಂಗ್ ಕಂಪನಿ, ಬೆಂಗಳೂರು, ೧೯೯೭

೧೬. ಷೇಕ್ ಅಲಿ ಬಿ.(ಸಂ), ಕರ್ನಾಟಕ ಚರಿತ್ರೆ ಸಂ.೨, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೭

೧೭. ಹನುಮಂತು(ಅನು), ಗ್ರಾಮಸಭೆಗೆ ಅಧಿಕಾರ ಏಕೆ?, ಜನ ಪ್ರಕಾಶನ, ಬೆಂಗಳೂರು, ೧೯೯೬

೧೮. ಇಂದಿರಾ ಆರ್., ಸ್ತ್ರೀವಾದಿ ದಿಕ್ಸೂಚಿ, ಸಮತಾ ಅಧ್ಯಯನ ಕೇಂದ್ರ, ಮೈಸೂರು, ೧೯೯೫

೧೯. ಸುಮಿತ್ರಬಾಯಿ ಬಿ.ಎನ್.(ಸಂ), ಸ್ತ್ರೀವಾದಿ ಪ್ರವೇಶಿಕೆ, ಕರ್ನಾಟಕ ಲೇಖಕಿಯರ ಸಂಘ, ಚಾಮರಾಜಪೇಟೆ, ಬೆಂಗಳೂರು, ೧೯೯೫

೨೦. ನಟರಾಜ ಪಿ., ವಿಕಾಸ ಮನೋವಿಜ್ಞಾನ, ಶ್ರೀನಿವಾಸ ಪಬ್ಲಿಕೇಷನ್, ವಾಣಿವಿಲಾಸಪುರಂ, ಮೈಸೂರು, ೧೯೯೩

೨೧. ಸರಸ್ವತೀ ರಿಸಬೂಡ(ಅನು), ಸ್ತ್ರೀ ಪುರುಷ, ಮೂಲ: ಛಾಯಾದಾತರ್, ಇಳಾ ಪ್ರಕಾಶನ, ಚಾಮರಾಜ ಪೇಟೆ, ಬೆಂಗಳೂರು, ೧೯೯೨

೨೨. ಬರಗೂರು ರಾಮಚಂದ್ರಪ್ಪ(ಪ್ರ.ಸಂ), ವಿಚಾರ ಸಾಹಿತ್ಯ, ಕರ್ನಾಟಕ ಸಾಹಿತ್ಯ ಅಕಾಡೆಮಿ, ನೃಪತುಂಗ ರಸ್ತೆ, ಬೆಂಗಳೂರು, ೧೯೯೨

೨೩. ಚೆನ್ನಕ್ಕ ಎಲಿಗಾರ, ಶಾಸನಗಳಲ್ಲಿ ಕರ್ನಾಟಕದ ಸ್ತ್ರೀ ಸಮಾಜ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೯೦

೨೪. ವಸಂತ ಪಾಟೀಲ, ಪಂಚಾಯತ ಆಡಳಿತ ಸಾಧಕ ಬಾದಕಗಳು, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, ೧೯೮೮

೨೫. ಶ್ರೀನಿವಾಸಮೂರ್ತಿ ಎ.ಪಿ., ಭಾರತದ ಸ್ವಾತಂತ್ರ್ಯ ಚಳುವಳಿ(೧೮೫೭-೧೯೪೭), ಅಭ್ಯುದಯ ಪ್ರಕಾಶನ ಬೆಂಗಳೂರು, ೧೯೮೭

೨೬. ಮುಳಗುಂದ ಚ.ವಿ.(ಪ್ರ.ಸಂ), ಮಾತೋಶ್ರೀ, ಮಾತೋಶ್ರೀ ಪ್ರಕಾಶನ, ಮುದ್ದೇಬಿಹಾಳ, ೧೯೮೬

೨೭. ಚಕ್ರಕೋಡಿ ಈಶ್ವರಶಾಸ್ತ್ರೀ(ಅನು), ಮನುಸ್ಮೃತಿ, ಸಮಾಜ ಪುಸ್ತಕಾಲಯ, ಶಿವಾಜಿ ಬೀದಿ, ಧಾರವಾಡ, ೧೯೮೨

೨೮. ಲೆನಿನ್, ಮಹಿಳೆಯರ ವಿಮೋಚನೆಯ ಕುರಿತು, ಪ್ರಗತಿ ಪ್ರಕಾಶನ, ಮಾಸ್ಕೋ, ೧೯೮೦

೨೯. ಶಿವಣ್ಣ ಆರ್.ಜಿ. ಆಧುನಿಕ ಯುರೋಪಿನ ಇತಿಹಾಸ ಪರಿಚಯ(೧೪೫೩-೧೯೪೫), ಪುಷ್ಪಗಿರಿ ಪ್ರಕಾಶನ, ಸರಸ್ವತಿಪುರಂ, ಮೈಸೂರು, ೧೯೭೫

೩೦. ಸೂರ್ಯನಾಥ ಕಾಮತ್(ಸಂ), ಸ್ವಾತಂತ್ರ್ಯ ಸಂಗ್ರಾಮದ ಸ್ಮೃತಿಗಳು, ಸಂ.೧, ಗೀತಾಬುಕ್ ಹೌಸ್, ನ್ಯೂ ಸ್ಟ್ಯಾಚ್ಯು ಸರ್ಕಲ್, ಮೈಸೂರು, ೧೯೭೪

೩೧. ಶ್ರೀಕಂಠಯ್ಯ ಬಿ.ಎಂ.(ಸಂ), ರಾಜನೀತಿ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, ೧೯೪೦

೧೫. ಶ್ರೀಮತಿ ಎಚ್.ಎಸ್.(ಸಂ), 'ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಿತಿಗತಿಗಳು' ಮಹಿಳಾ ಅಧ್ಯಯನ, ಸಂಪುಟ ೧, ಸಂಚಿಕೆ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

ಲೇಖನಗಳು

೧. ಸರಸ್ವತಿ ಚಿಮ್ಮಲಗಿ, 'ಮಹಿಳೆ ಮತ್ತು ಹೋರಾಟ' ಊರ್ಧ್ವಮುಖಿ, ವಿನಯ ಪ್ರಿಂಟರ್ಸ್, ಬೆಂಗಳೂರು, ೨೦೦೧

೨. ಲಲಿತಾನಾಯಕ್ ಬಿ.ಟಿ., 'ಮಹಿಳೆ ಮತ್ತು ಆಡಳಿತ', ಊರ್ಧ್ವಮುಖಿ, ವಿನಯ ಪ್ರಿಂಟರ್ಸ್, ಬೆಂಗಳೂರು, ೨೦೦೧

೩. ಶ್ರೀಮತಿ ಎಚ್.ಎಸ್.(ಸಂ), ಮಹಿಳಾ ಅಧ್ಯಯನ, ವಿಶೇಷ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೪. ಸರಸ್ವತಿ ಚಿಮ್ಮಲಗಿ ಪೂಜಾರ(ಸಂ), ಯುಗದರ್ಶಿನಿ, ಸಂ.೧, ಸಂಚಿಕೆ ೫, ನಿಸರ್ಗ ಪ್ರಿಂಟರ್ಸ್, ಗುಲಬರ್ಗಾ, ೨೦೦೦

೫. ಶ್ರೀಮತಿ ಎಚ್.ಎಸ್. 'ಭಾರತೀಯ ಮಹಿಳೆಯರ ಬದಲಾಗುತ್ತಿರುವ ಸ್ಥಿತಿಗತಿಗಳು', ಮಹಿಳಾ ಅಧ್ಯಯನ, ಉತ್ತರಾಯಣ ಸಂಚಿಕೆ, ಸಂ.೧, ಸಂಚಿಕ ೧, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೬. ಶ್ರೀಮತಿ ಎಚ್.ಎಸ್.(ಸಂ) ಮಹಿಳಾ ಅಧ್ಯಯನ, ಉತ್ತರಾಯಣ ಸಂಚಿಕೆ, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ, ೧೯೯೯

೭. ಮಾನಸ ತಿಂಗಳ ಪತ್ರಿಕೆ, ಸೆಪ್ಟೆಂಬರ್ ೧೯೯೯

ಫೆಬ್ರವರಿ-ಮಾರ್ಚ್ ೧೯೯೭

ಆಗಸ್ಟ್ ೧೯೯೭

೮. ದಿಕ್ಸೂಚಿ ಏಪ್ರಿಲ್ ೧೯೯೮

ಮಾರ್ಚ್ ೧೯೯೭

೯. ಅಚಲ ತಿಂಗಳ ಪತ್ರಿಕೆ, ಜೂನ್ ೨೦೦೧

ಸಂ.೧೩, ಸಂಚಿಕೆ ೫೪, ಜನವರಿ ೧೯೯೯

ಸಂ.೧೩, ಸಂಚಿಕೆ ೫೪, ನವೆಂಬರ್ ೧೯೯೯

ಸಂ.೧೩, ಸಂಚಿಕೆ ೦೩, ಜುಲೈ ೧೯೯೮

ಸಂ.೧೨, ಸಂಚಿಕೆ ೦೬, ಜನವರಿ ೧೯೯೮

ಸಂ.೧೨, ಸಂಚಿಕೆ ೦೫ ನವೆಂಬರ್ ೧೯೯೭

ಸಂ.೧೨, ಸಂಚಿಕೆ ೩-೪ ಜುಲೈ/ಸೆಪ್ಟೆಂಬರ್ ೧೯೯೭

ಸಂ.೧೨, ಸಂಚಿಕೆ ೧, ಮಾರ್ಚ್ ೧೯೯೭

ಪ್ರಕಾಶಕರು, ಜಾಗೃತಿ ಮಹಿಳಾ ಅಧ್ಯಯನ ಕೇಂದ್ರ, ಬೆಂಗಳೂರು

10. MANUSHI

1. Mukesh Dalal, 'Women's Reservation: Another Aprroach- Sept/Oct, 2002
2. Madukishwar, 'Women' Marginal Role in Politics, Nov/Dec, 1996
3. Renuka Viswanthan, 'Getting Women in to Business, Jul/Aug, 1996
4. Werner Menski, Widow's Right to property, Jul/Aug, 1995
5. Renuka Viswanthan, 'Power, Poverty and Poison, May/Jun 1994

೧೧. ದಿನಪತ್ರಿಕೆಗಳು

ಉದಯವಾಣಿ ಮಹಿಳಾ ಸಂಪದ ೧ ಮಾರ್ಚ್ ೨೦೦೩

೧೫ ಫೆಬ್ರವರಿ ೨೦೦೩

೧ ಫೆಬ್ರವರಿ ೨೦೦೩

೧೧ ಜನವರಿ ೨೦೦೩

೮ ಏಪ್ರಿಲ್ ೨೦೦೦

೪ ಏಪ್ರಿಲ್ ೨೦೦೦

ವಿಜಯ ಕರ್ನಾಟಕ ಮಹಿಳಾ ವಿಜಯ	೧೨	ಡಿಸೆಂಬರ್	೨೦೦೩
	೨೦	ಫೆಬ್ರವರಿ	೨೦೦೧
	೨	ಜನವರಿ	೨೦೦೧
ಸಂಯುಕ್ತ ಕರ್ನಾಟಕ ಸಾಪ್ತಾಹಿಕ ಸೌರಭ	೨೬	ಮೇ	೨೦೦೨
	೧೯	ಮೇ	೨೦೦೨
	೩೦	ಮಾರ್ಚ್	೨೦೦೨
	೯	ಸೆಪ್ಟೆಂಬರ್	೨೦೦೧
	೫	ಮಾರ್ಚ್	೨೦೦೦